ಕರ್ನಾಟಕ ವಿಧಾನ ಪರಿಷತ್ತು
144ನೇ ಅಧಿವೇಶನ

ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ. ಶಶೀಲ್. ಜಿ.ನಮೋಶಿ (ಶಿಕ್ಷಕರ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1592
ಉತ್ತರಿಸುವ ದಿನಾಂಕ : 24.09.2021

ಕ್ರ ಸಂ	ಪ್ರಶ್ನೆಗಳು	ಉತ್ತರ
ಅ)	ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ವಿರೂಪಾಕ್ಷಿಪುರ ಪಂಚಾಯತಿಯ 2014 ರಿಂದ 2021ರ ಆಗಸ್ಟ್ ರವರೆಗೆ ಆಡಿಟ್ ವರದಿ ಏನು: (ವಿವರ ನೀಡುವುದು)	ಸದರಿ ವಿರೂಪಾಕ್ಷಿಪುರ ಗ್ರಾಮ ಪಂಚಾಯತಿಯ 2014-15 ನೇ ಸಾಲಿನಿಂದ 2019-2020ನೇ ಸಾಲಿನವರೆಗಿನ ಆಡಿಟ್ ವರದಿಗಳನ್ನು ಈ ಕೆಳಗಿನ ಅನುಬಂಧಗಳಂತೆ ಲಗತ್ತಿಸಿದೆ. 2014-15 - ಅನುಬಂಧ-1 2015-16- ಅನುಬಂಧ-2 2016-17 - ಅನುಬಂಧ-3 2017-18 - ಅನುಬಂಧ-4 2018-19 - ಅನುಬಂಧ-5 2019-20 - ಅನುಬಂಧ-6 2020-21 - ಲೆಕ್ಕ ಪರಿಶೋಧನೆ ಆಗಿರುವುದಿಲ್ಲ.
ಆ)	ಆಡಿಟ್ ವರದಿಯಲ್ಲಿ ಆಕ್ಷೇಪಣೆ ಮತ್ತು ವಸೂಲಾತಿಗೆ ಸೂಚಿಸಿದ ಮೊತ್ತವೆಷ್ಟು? (ವರ್ಷವಾರು ವಿವರ ನೀಡುವುದು)	ಸದರಿ ವಿರೂಪಾಕ್ಷಿಪುರ ಗ್ರಾಮ ಪಂಚಾಯತಿಯ ಆಡಿಟ್ ವರದಿಯಲ್ಲಿ ಆಕ್ಷೇಪಣೆ ಮತ್ತು ವಸೂಲಾತಿಗೆ ಸೂಚಿಸಿದ ಮೊತ್ತದ ವಿವರಗಳನ್ನು ಅನುಬಂಧ-7 ರಲ್ಲಿ ಲಗತ್ತಿಸಿದೆ.
ಇ)	2014 ರಿಂದ 2021ರ ಆಗಸ್ಟ್ ರವರೆಗೆ ಎಷ್ಟು ಗ್ರಾಮಸಭೆ ನಡೆಸಲಾಗಿದೆ: ಗ್ರಾಮಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳೇನು: (ವಿವರ ನೀಡುವುದು)	2014 ರಿಂದ 2021ರ ಆಗಸ್ಟ್ ರವರೆಗೆ 16 ಗ್ರಾಮ ಸಭೆಗಳನ್ನು ನಡೆಸಲಾಗಿದೆ. ಸದರಿ ಗ್ರಾಮ ಸಭೆಗಳಲ್ಲಿ ತೆಗೆದುಕೊಂಡ ಪ್ರಮುಖ ನಿರ್ಣಯಗಳ ವಿವರಗಳನ್ನು ಅನುಬಂಧ-8 ರಲ್ಲಿ ಲಗತ್ತಿಸಿದೆ.
ಈ)	2014 ರಿಂದ ಇಲ್ಲಿಯವರೆಗೆ ಸ್ವಂತ ಸಂಪನ್ಮೂಲದಿಂದ ಸಂಗ್ರಹವಾಗಿರುವ ಮೊತ್ತವೆಷ್ಟು: ಹಾಗೂ ಸದರಿ ಮೊತ್ತವನ್ನು ವೆಚ್ಚ ಮಾಡಲಾಗಿದೆಯೇ: (ಕಾಮಗಾರಿ ವಿವರ/ಖರೀದಿ ಮಾಡಿದ ಸಾಮಗ್ರಿಗಳ ದಾಖಲೆಗಳೊಂದಿಗೆ ಸಂಪೂರ್ಣ ವಿವರ ನೀಡುವುದು)	2014-15 ನೇ ಸಾಲಿನಿಂದ ಇಲ್ಲಿಯವರೆಗೆ ರೂ.7639791/- ಸಂಗ್ರಹವಾಗಿದ್ದು. ರೂ. 7534196/- ಗಳನ್ನು ವೆಚ್ಚಮಾಡಲಾಗಿದೆ. ಕಾಮಗಾರಿ ವಿವರಗಳನ್ನು ಅನುಬಂಧ-9 ರಲ್ಲಿ ಹಾಗೂ ಖರೀದಿ ಮಾಡಿದ ಸಾಮಗ್ರಿಗಳ ದಾಖಲೆಗಳ ವಿವರಗಳನ್ನು ಅನುಬಂಧ-9(ಅ) ರಲ್ಲಿ ಲಗತ್ತಿಸಿದೆ.
ಉ)	14 ಮತ್ತು 15ನೇ ಹಣಕಾಸು ಆಯೋಗದಡಿಯಲ್ಲಿ ಸದರಿ ಪಂಚಾಯತಿಯ ಪರಿಶಿಷ್ಟ ಜಾತಿ/ಪಂಗಡದ ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿಟ್ಟ ಅನುದಾನವೆಷ್ಟು: ಸದರಿ ಅನುದಾನವನ್ನು ಯಾವ ಕಾಮಗಾರಿಗೆ ಬಳಸಲಾಗಿದೆ? (ವಿವರ ನೀಡುವುದು)	14 ಮತ್ತು 15ನೇ ಹಣಕಾಸು ಆಯೋಗದಡಿಯಲ್ಲಿ ಸದರಿ ಪಂಚಾಯತಿಯ ಪರಿಶಿಷ್ಟ ಜಾತಿ/ಪಂಗಡದ ಅಭಿವೃದ್ಧಿ ಕಾಮಗಾರಿಗಳಿಗೆ ರೂ.4681567/-ಗಳ ಅನುದಾನ ಮೀಸಲಿಡಲಾಗಿದ್ದು, ಸದರಿ ಅನುದಾನವನ್ನು ಬಳಸಿದ ಕಾಮಗಾರಿಗಳ ವಿವರಗಳನ್ನು ಅನುಬಂಧ-10 ರಲ್ಲಿ ಲಗತ್ತಿಸಿದೆ.

ಸಂಖ್ಯೆ: ಗ್ರಾಅಪ 20 ಎಎಆರ್ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಅನುಬಂಧ-2

ಅವಲೋಕನ ರಹಿತ ಅಭಿಪ್ರಾಯ

ರಾಮನಗರ ಜಿಲ್ಲೆಯ _ಚನ್ನಪಟ್ಟಣ_ ತಾಲ್ಲೂಕಿನ _ತಿರುಮಲೆ_____
ಗ್ರಾಮಪಂಚಾಯಿತಿಯ 2013-14 ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳ ಟೀಕೆ ಟಿಪ್ಪಣಿಗಳು.

1. ನಗದು ಪುಸ್ತಕ, ಜರ್ನಲ್ ನಮೂದು ಪುಸ್ತಕ, ಲೆಡ್ಜರ್ ಲೆಕ್ಕಗಳು ಹಾಗೂ ಟ್ರಯಲ್ ಬ್ಯಾಲೆನ್ಸ್ ಗಳಲ್ಲಿನ ವಹಿವಾಟುಗಳು ಲೆಕ್ಕಗಳ ನಿರ್ವಹಣೆ ಕುರಿತು ಟೀಕೆ ಟಿಪ್ಪಣಿಗಳು. (ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು/ಕಾರ್ಯದರ್ಶಿ ಇವರುಗಳು ನೀಡಿರುವ ವಿತ್ತೀಯ ತಂಖ್ತೆಗಳನ್ನು ಏಕನಮೂನೆ ನಗದುಪುಸ್ತಕ, ಬ್ಯಾಂಕ್ ಪಾಸ್ ಶೀಟ್ ಇತ್ಯಾದಿ ಮಾಹಿತಿಗಳೊಂದಿಗೆ ಪರಿಶೀಲಿಸಲಾಗಿದೆ.)

   (ಅ) ನಗದು ಪುಸ್ತಕವನ್ನು (ನಿಗಧಿತ ನಮೂನೆ 49 ರಲ್ಲಿ ನಿಯಮ 104ರಂತೆ ನಿರ್ವಹಿಸಿರುವುದಿಲ್ಲ(Double entry system of accounting)

   (ಆ) ಜರ್ನಲ್ ವೋಚರ್ ಹಾಗೂ ಲೆಡ್ಜರ್ ಲೆಕ್ಕಗಳನ್ನು ನಮೂನೆ 51,52 ರಲ್ಲಿ ನಿರ್ವಹಿಸಿರುವುದಿಲ್ಲ.

   (ಇ) ಟ್ರಯಲ್ ಬ್ಯಾಲೆನ್ಸ್‌ನ್ನು ಪ್ರಾಯೋಗಿಕ ಸಮತೋಲನಾ ಪಟ್ಟಿಯನ್ನು ನಮೂನೆ-54 ನಿಯಮ 108 ಉಪನಿಯಮ 3 ರಲ್ಲಿ ನೀಡಿರುವುದಿಲ್ಲ.

2. ವಿತ್ತ ನಿರೂಪಣಾ ತಃಖ್ತೆಗಳಲ್ಲಿ ಗಮನಿಸಲಾದ ನ್ಯೂನತೆಗಳು.

   (ಅ) ನಮೂನೆ 53ರಲ್ಲಿ ನಿಯಮ 108ರಂತೆ ಸ್ವೀಕೃತಿ ಮತ್ತು ಪಾವತಿ ಲೆಕ್ಕವನ್ನು ಲೆಕ್ಕ ತನಿಖೆಗೆ ನೀಡಿದ್ದು ತಾಳೆಯಾಗಿರುತ್ತದೆ.

   (ಆ) ನಮೂನೆ 55 ನಿಯಮ 109ರ ಪ್ರಕಾರ ಆದಾಯ ಮತ್ತು ವೆಚ್ಚದ ಲೆಕ್ಕವನ್ನು ಲೆಕ್ಕ ತನಿಖೆಗೆ ನೀಡಿದ್ದು ತಾಳೇಯಾಗಿರುತ್ತದೆ.

   (ಇ) ನಮೂನೆ 56 ನಿಯಮ 109(4) ರಂತೆ ಸಮತೋಲನ ಪಟ್ಟಿಯನ್ನು ನೀಡಿದ್ದು ಲೆಕ್ಕ ತನಿಖೆಗೆ ತಾಳೆಯಾಗಿರುತ್ತದೆ.

3. ವಿತ್ತೀಯ ತಃಖ್ತೆಗಳನ್ನು ಚಾರ್ಟರ್ಡ್ ಅಕೌಂಟಂಟರಿಂದ ಪ್ರಮಾಣೀಕರಿಸಿದ ವಿತ್ತೀಯ ತಃಖ್ತೆಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿರುವುದಿಲ್ಲ.

ಲೆಕ್ಕ ಪರಿಶೋಧಕರು/
ಲೆಕ್ಕಪರಿಶೋಧನಾಧಿಕಾರಿ ಹೆಸರು
ಸ್ಥಳ _ರಾಮನಗರ_
ದಿನಾಂಕ_________

ಅವಲೋಕನದೊಂದಿಗೆ ವಾರ್ಷಿಕ ಲೆಕ್ಕಗಳ ಪ್ರಮಾಣೀಕರಣ

ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ವಿರೂಪಾಕ್ಷಿಪುರ ಗ್ರಾಮ ಪಂಚಾಯಿತಿಯ 2013-14 ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ಮೇರೆಗೆ ಹಾಗೂ ವಿತ್ತ ನಿರೂಪಣಾ ತಃಖ್ತೆಗಳ ಪರಿಶೋಧನೆ ಬಗ್ಗೆ ಮಹಾಲೇಖಪಾಲರು ಅನುಸರಿಸುವ ಲೆಕ್ಕಪರಿಶೋಧನಾ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು, ರಾಜ್ಯ ಲೆಕ್ಕಪತ್ರ ಇಲಾಖೆಯ ನಿಯಂತ್ರಕರ ಸೂಚನೆ ಮೇರೆಗೆ ಪರೀಕ್ಷಿಸಲಾಗಿದೆ.

1. ಲೆಕ್ಕ ಪರಿಶೋಧನೆಯ ಉದೇಶಕ್ಕೆ ಅವಶ್ಯಕವಾಗಿ ಬೇಕಾದ ಎಲ್ಲಾ ಮಾಹಿತಿ ಹಾಗೂ ವಿವರಣೆಗಳನ್ನು ನನ್ನ ತಿಳುವಳಿಕೆ ಮತ್ತು ನಂಬಿಕೆಗೆ ತಕ್ಕಂತೆ ಪಡೆದಿರುತ್ತೇನೆ.

2. ಲೆಕ್ಕ ಪರಿಶೋಧನೆಯ ಅಭಿಪ್ರಾಯದಲ್ಲಿ, ಕಾಯ್ದೆ,ನಿಯಮಾವಳಿ ಹಾಗೂ ಲೆಕ್ಕ ಪರಿಶೋಧನಾ ಕೈಪಿಡಿ ಮಾರ್ಗದರ್ಶಿ ಪ್ರಕಾರ, ಪರಿವೀಕ್ಷಣೆಯಿಂದ ಕಂಡುಬಂದಂತೆ, ಇದಕ್ಕೆ ಲಗತ್ತಿಸಿದ ವಾರ್ಷಿಕ ಲೆಕ್ಕಗಳನ್ನು ಕುರಿತು ಟೀಕೆ ಟಿಪ್ಪಣಿಗಳು ಎಂಬ ಅನುಬಂಧದಲ್ಲಿ ನಮೂನೆ ಮಾದರಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ ಸೂಚಿಸಲಾದ ಲೋಪದೋಷಗಳು ಹಾಗೂ ನ್ಯೂನತೆಗಳನ್ನು ಹೊರತುಪಡಿಸಿ, ಗ್ರಾಮಪಂಚಾಯಿತಿಯು ಸಮರ್ಪಕ ಲೆಕ್ಕಪತ್ರ ಪುಸ್ತಕಗಳನ್ನು ನಿರ್ವಹಿಸಬೇಕಾಗಿರುತ್ತದೆ.

3. ವರದಿಯಲ್ಲಿ ಪ್ರಸ್ತಾಪಿಸಲಾದ ಗ್ರಾಮ ಪಂಚಾಯಿತಿಯ ಸಮತೋಲನಾ ಪಟ್ಟಿ, ಆದಾಯ ಮತ್ತು ವೆಚ್ಚದ ತಃಖ್ತೆ, ಹಾಗೂ ಸ್ವೀಕೃತಿ ಮತ್ತು ಪಾವತಿ ತಃಖ್ತೆಗಳು ಲೆಕ್ಕ ಪುಸ್ತಕಗಳೊಂದಿಗೆ ಟೀಕೆ ಟಿಪ್ಪಣಿಗಳಲ್ಲಿ ದಾಖಲಿಸಲಾದ ಅವಲೋಕನಗಳಿಗೆ ಒಳಪಟ್ಟಂತೆ ತಾಳೆಯಾಗುತ್ತವೆ.

4. ಟೀಕೆ ಟಿಪ್ಪಣಿಗಳಲ್ಲಿ ದಾಖಲಿಸಿದ ಅವಲೋಕನಗಳಿಗೆ ಒಳಪಟ್ಟಂತೆ ವಿತ್ತ ನಿರೂಪಣಾ ತಃಖ್ತೆಗಳು ಗ್ರಾಮ ಪಂಚಾಯಿತಿಯ ವಿದ್ಯಮಾನಗಳ ನೈಜ ಮತ್ತು ನ್ಯಾಯೋಚಿತ ನೋಟವನ್ನು ಒದಗಿಸುತ್ತಿಲ್ಲ. ಅನುಬಂಧ-2ನ್ನು ಲಗತ್ತಿಸಿದೆ.

ಕರ್ನಾಟಕ ಪಂಚಾಯತ್ ರಾಜ್ ಗ್ರಾಮಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಾಮಾವಳಿಗಳು 2006ರ ನಿಯಮ ಅಧ್ಯಾಯ 2 ರ ಪ್ರಕಾರ ಗ್ರಾಮಪಂಚಾಯಿತಿಯು ಲೆಕ್ಕಪತ್ರಗಳನ್ನು ನಿರ್ವಹಿಸದೇ ಇರುವ ಕಾರಣ, ಈ ವರದಿಯ ಕಂಡಿಕೆ 01 ರಿಂದ 40 ರವರೆಗೆ ವಿಶದಪಡಿಸುವಂತೆ ನನ್ನ ಅಭಿಪ್ರಾಯದ ಪ್ರಕಾರ, ಕೇಂದ್ರ ರಾಜ್ಯ ಸರ್ಕಾರದ, ಜಿಪಂ/ತಾ.ಪಂ/ಗ್ರಾ.ಪಂ/ಯಾವ ಉದ್ದೇಶಕ್ಕಾಗಿ ಬಳಸಲು ಅವಕಾಶ ನೀಡಿತ್ತೋ, ಸದರಿ ಉದ್ದೇಶಕ್ಕಾಗಿಯೇ ಹಣ ಬಳಕೆಯಾಗಿದೆ ಎಂದು ಧೃಢೀಕರಿಸಲು ಲೆಕ್ಕ ಪರಿಶೋಧನೆಯಲ್ಲಿ ಸಾಧ್ಯವಾಗುತ್ತಿಲ್ಲ ಕಾರಣ 2013-14 ರ ಸ್ವೀಕೃತಿ ಪಾವತಿ ತಃಖ್ತೆಗಳನ್ನು ಸರಿಯಾಗಿರುವುದಿಲ್ಲ. ಈ ರೀತಿಯಾಗಿ ಮಾಸಿಕ, ತ್ರೈಮಾಸಿಕ ಹಾಗೂ ವಾರ್ಷಿಕ ಲೆಕ್ಕ ಪತ್ರಗಳನ್ನು ಲೆಕ್ಕ ತನಿಖೆಗೆ ಸಲ್ಲಿಸದೆ ಇರುವ ಕಾರಣ ಆದಾಯ ಮತ್ತು ವೆಚ್ಚದ, ಸ್ವೀಕೃತಿ ಮತ್ತು ಪಾವತಿಯ ಸತ್ಯಾಪನೆಯನ್ನು ಧೃಢೀಕರಿಸಲು ಸಾಧ್ಯವಾಗುತ್ತಿಲ್ಲ.

ವಿವರಣಾ ಪಟ್ಟಿ ಮತ್ತು ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಧೃಢೀಕೃತ ಮಾಹಿತಿಗಳನ್ನು ಪಡೆದು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಅಲ್ಲದೆ ಸಾಮಾಜಿಕ ಲೆಕ್ಕ ಪರಿಶೋಧನೆಯ ವರದಿಗಳನ್ನು ಸಹ ಲೆಕ್ಕ ಪರಿಶೋಧನೆಯ ಸಂದರ್ಭದಲ್ಲಿ/ಪುನರ್ ಅವಲೋಕನದ ಸಂದರ್ಭದಲ್ಲಾಗಲೀ ಒದಗಿಸಿರುವುದಿಲ್ಲ.

ಈ ಎಲ್ಲಾ ಕಾರಣಗಳಿಂದ ಇರುವ ಕಾರಣ ಆದಾಯ ಮತ್ತು ವೆಚ್ಚದ, ಸ್ವೀಕೃತಿ ಮತ್ತು ಪಾವತಿಯ ಸತ್ಯಾಪನೆಯನ್ನು ಧೃಢೀಕರಿಸಲು ಸಾಧ್ಯವಾಗುತ್ತಿಲ್ಲ.

15	2008-09			15801		1261	
16	2009-10			37819		5324	
17	2010-11			51714		1854	
18	2011-12			80784		125158	
19	2012-13			136950		2053	
	ಒಟ್ಟು			**1010064**		**200039**	

ಕರ್ನಾಟಕ ಪಂಚಾಯಿತ್ ರಾಜ್ ಕಾಯ್ದೆ 1993ರ ಸೆಕ್ಷನ್ 246(6)ರ ಪ್ರಕಾರ ಗ್ರಾಮ ಪಂಚಾಯಿತಿಯು ಹಿಂದಿನ ಲೆಕ್ಕ ತನಿಖಾ ವರದಿಗಳಿಗೆ ಉತ್ತರಿಸಲು ಕೈಗೊಂಡ ಕ್ರಮದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ವಸೂಲಾತಿ/ ಆಕ್ಷೇಪಣೆಗಳನ್ನು ನಿಗಧಿತ ನಮೂನೆಗಳಲ್ಲಿನ ವಹಿಯಲ್ಲಿ ನಿರ್ವಹಿಸಿರುವುದಿಲ್ಲ ಮತ್ತು ಅನುಪಾಲನಾ ವರದಿಗಳನ್ನು ಸಹ ಸಲ್ಲಿಸದೆ ಇರುವುದು ಕಂಡುಬಂದಿರುತ್ತದೆ.

2013-14ನೇ ಸಾಲಿನ ವರ್ಷಾಂತ್ಯಕ್ಕೆ ಕರ್ನಾಟಕ ಪಂಚಾಯಿತ್ ರಾಜ್ ಅಧಿನಿಯಮ 1993ರ ಸೆಕ್ಷನ್ 246(7)ರ ಪ್ರಕಾರ ಹಿಂದಿನ ಸಾಲಿನ ಲೆಕ್ಕ ತನಿಖಾ ವರದಿಗಳ ಕಂಡಿಕೆಗಳಂತೆ ತೀರುವಳಿಗೊಂಡ ಕಂಡಿಕೆಗಳ ವಿವರ ಈ ಕೆಳಕಂಡಂತಿದ್ದು, ಕರ್ನಾಟಕ ಪಂಚಾಯಿತ್ ರಾಜ್ ಅಧಿನಿಯಮ 1993 ರ ಸೆಕ್ಷನ್ 246(8)ರ ಪ್ರಕಾರ ಕಾರ್ಯನಿರ್ವಾಹಕ ಅಧಿಕಾರಿಗಳು ಋಣಭಾರ ಹೊರಿಸಿದ ಮತ್ತು ತೀರುವಳಿಗೊಂಡ ಪ್ರಕರಣಗಳ ವಿವರಗಳು ಲೆಕ್ಕ ಪರಿಶೋಧನೆಗೆ ಒದಗಿಸಿರುವುದಿಲ್ಲ.

ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿಗಳು ಕರ್ನಾಟಕ ಪಂಚಾಯಿತ್ ರಾಜ್ ಕಾಯ್ದೆ 1993 ರ ಸೆಕ್ಷನ್ 246(6) ಮತ್ತು (8), (9) ರಂತೆ ಸೂಕ್ತ ಕ್ರಮಕೈಗೊಳ್ಳಲು ಲೆಕ್ಕ ಪರಿಶೋಧನೆಯು ಸೂಚಿಸಿದೆ.

31.03.2014 ಸಾಲಿನ ಅಂತ್ಯಕ್ಕೆ ತೀರುವಳಿಗೆ ಬಾಕಿ ಇರುವ ಹಾಗೂ ತೀರುವಳಿಗೊಂಡ ಕಂಡಿಕೆಗಳ ವಿವರಗಳು ಈ ಕೆಳಗಿನಂತಿವೆ.

ವಿವರ	ಒಟ್ಟು ಪ್ಯಾರಾಗಳು	ಆಕ್ಷೇಪಣೆ		ವಸೂಲಾತಿ		ಮೌಲ್ಯವಿಲ್ಲದ ಇತರೆ ಕಂಡಿಕೆಗಳ
		ಕಂಡಿಕೆಗಳು	ಮೊಬಲಗು ರೂ.	ಕಂಡಿಕೆಗಳು	ಮೊಬಲಗು ರೂ.	
ಆರಂಭದ ಶಿಲ್ಕು			1010064		200039	
2013-14ನೇ ಸಾಲಿನಲ್ಲಿ ಸೇರ್ಪಡೆ			101551		4844	
ಒಟ್ಟು			1111615		204883	
2013-14ನೇ ತೀರುವಳಿ			0		0	
ದಿನಾಂಕ:31.3.2014ಕ್ಕೆ ಅಂತಿಮ ಶಿಲ್ಕು			1111615		204883	

5) **ಭೌತಿಕ ಪರಿಶೀಲನಾ ಪ್ರಗತಿಯ ವಿವರ**

ಗ್ರಾಮ ಪಂಚಾಯಿತಿಯ ಲೆಕ್ಕ ಪತ್ರಗಳ ಪರಿಶೀಲಾನ ಪ್ರಾರಂಭಿಕ ದಿನಾಂಕ: ರಂದು, ನಗದು ಮತ್ತು ನಗದು ರೂಪದ ಪ್ರಮುಖ ದಾಖಲೆಗಳನ್ನು ಭೌತಿಕವಾಗಿ ಪರಿಶೀಲಿಸಿದ ಪ್ರಗತಿಯ ವಿವರ ಇಂತಿದೆ.

ಕ್ರ.ಸಂ	ಭೌತಿಕವಾಗಿ ಪರಿಶೀಲಿಸಿದ ದಾಖಲೆ	ಪರಿಶೀಲನಾ ವಿವರ	ಷರಾ
1	ಪಂಚಾಯಿತಿಯ ನಗದು ಶುಲ್ಕ	ಮಾಹಿತಿ ಲಭ್ಯವಿರುವುದಿಲ್ಲಾ	
2	ಅಂಚೆ ಚೀಟಿಗಳ ಮುಖಬೆಲೆ ಶುಲ್ಕ		
3	ಉಪಯೋಗಿಸದ ದಿನಗೂಲಿ ಪಟ್ಟಿಗಳು		
4	ಉಪಯೋಗಿಸದ ಅಳತೆ ಪುಸ್ತಕಗಳು		
5	ಹೂಡಿಕೆಯ ಹುಂಡಿಗಳ ಶಿಲ್ಕಿನ ಮೊತ್ತ		
6	ಉಪಯೋಗಿಸದ ರಶೀತಿ ಪುಸ್ತಕಗಳ ದಾಸ್ತಾನು ಶಿಲ್ಕು		

6) ಆರ್ಥಿಕ ಪರಿಸ್ಥಿತಿ

2013-14ನೇ ಸಾಲಿನ ಗ್ರಾಮ ಪಂಚಾಯಿತಿಯ ನಿಧಿಯ ಮತ್ತು ವಿವಿಧ ಯೋಜನೆಗಳ ಆರ್ಥಿಕ ಪರಿಸ್ಥಿತಿಯ ಕ್ರೋಢೀಕೃತ ವಿವರಗಳು ಇಂತಿವೆ. ವರ್ಗ-1 & 13ನೇ ಹಣಕಾಸು ನರೇಗಾ ಯೋಜನೆ ಹೊರತುಪಡಿಸಿ ಉಳಿದ ಯೋಜನೆಗಳ ಅಂಕಿ ಅಂಶಗಳನ್ನು ಆರ್ಥಿಕ ಪರಿಸ್ಥಿತಿಗೆ ಮಾತ್ರ ಪರಿಗಣಿಸಿದೆ.

ವಿವರಗಳು	ಗ್ರಾಮಪಂಚಾಯಿತಿಯ ನಿಧಿಗಳು	ಯೋಜನಾ ನಿಧಿಗಳು	ಒಟ್ಟು
1-4-2013ಕ್ಕೆ ಪ್ರಾರಂಭಿಕ ಶಿಲ್ಕು	835827	701767	1537594
2013-14ರಲ್ಲಿ ಜಮಾ	2924956	728286	3653242
ಒಟ್ಟು	3760783	1430053	5190836
2013-14ರಲ್ಲಿ ಖರ್ಚು	3443965	812670	4256635
31.3.2014ಕ್ಕೆ ಅಂತಿಮ ಶಿಲ್ಕು	316818	617383	934201
ಖಜಾನೆ / ಬ್ಯಾಂಕುಗಳಂತೆ ಅಂತಿಮ ಶಿಲ್ಕು	316818	617383	934201
ವ್ಯತ್ಯಾಸ			

ಗ್ರಾಮಪಂಚಾಯಿತಿಯ ನಿಧಿಯ ಮತ್ತು ವಿವಿಧ ಯೋಜನೆಗಳ ಖಾತೆವಾರು ಆರ್ಥಿಕ ಪರಿಸ್ಥಿತಿಯ ವಿವರಗಳನ್ನು ಅನುಬಂಧ - 1 ರಲ್ಲಿ ಲಗತ್ತಿಸಲಾಗಿದೆ. ಹಾಗೂ ತಪಾಸಣೆಯ ಅಂತಿಮ ಶಿಲ್ಕಿಗೆ ಖಜಾನೆ / ಬ್ಯಾಂಕುಗಳ ಖಾತೆವಾರು ಶಿಲ್ಕಿನೊಂದಿಗೆ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 105ರಂತೆ ಲೆಕ್ಕ ಸಮನ್ವಯಗೊಳಿಸಿರುವ ವಿವರಗಳು ಇರುವುದಿಲ್ಲ. ವರ್ಗ-1, 13ನೇ ಹಣಕಾಸು ಹಾಗು ಕುಡಿಯುವ ನೀರಿನ ಡಿ.ಸಿ.ಬಿಲ್ ವಹಿ ಹಾಗೂ ಬ್ಯಾಂಕ್ ದಾಖಲಾತಿ ಆಧಾರದಂತೆ ವೆಚ್ಚಕ್ಕೆ ಪರಿಶೀಲಿಸಿದೆ ಇತರೆ ಯೋಜನೆಯಗಳ ಅಂಕಿಅಂಶಗಳನ್ನು ಆರ್ಥಿಕ ಪರಿಸ್ಥಿತಿಗೆ ಪರಿಗಣಿಸಿದೆ.

ದಿನಾಂಕ:-31-03-2013ರ ಅಂತ್ಯಕ್ಕೆ ಉಳಿದಿರುವ ಅಖೈರು ಶಿಲ್ಕಿನ ಬಗ್ಗೆ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 105ರ ಅನ್ವಯ ಗ್ರಾಮ ಪಂಚಾಯಿತಿ ನಿಧಿಯ ದುರುಪಯೋಗ ಅಥವಾ ಅವ್ಯವಹಾರವನ್ನು ಪತ್ತೆ ಹಚ್ಚಲು ಜಮಾ ಮತ್ತು ಖರ್ಚುಗಳ ತಪ್ಪು ವರ್ಗೀಕರಣವನ್ನು ಸರಿಪಡಿಸಲು ಪ್ರತಿ ತಿಂಗಳ ಕೊನೆಯಲ್ಲಿ ಖಜಾನೆ/ಬ್ಯಾಂಕಿನಲ್ಲಿರುವ ಶಿಲ್ಕುನೊಂದಿಗೆ ನಗದು ಪುಸ್ತಕದಲ್ಲಿನ ಶಿಲ್ಕುನ್ನು ಲೆಕ್ಕ ಸಮನ್ವಯಗೊಳಿಸಿ, ನಗದು ಪುಸ್ತಕದಲ್ಲಿ ದಾಖಲಿಸದಿರುವುದು ಕಂಡುಬಂದಿದ್ದು, ಈ ಬಗ್ಗೆ ಕ್ರಮವಹಿಸಲು ಸೂಚಿಸಿದೆ.

7) ಆಯವ್ಯಯದ ಅನುಮೋದನೆ ಕುರಿತು :

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 241ರನ್ವಯ ಹಾಗೂ ನಿಯಮಗಳು 2006ರ ನಿಯಮ 11 ಮತ್ತು 12ರ ಪ್ರಕಾರ 2012-13ನೇ ಸಾಲಿಗೆ ನಮೂನೆ 1 ಮತ್ತು ಅದರ ಉಪನಮೂನೆಗಳಲ್ಲಿ ಆಯವ್ಯಯದ ಅಂದಾಜುಗಳನ್ನು ತಯಾರಿಸಿ, ಅವು ಅನುಮೋದನೆಗೊಂಡಿರುವ ಬಗ್ಗೆ ದಾಖಲೆಗಳನ್ನು ತಪಾಸಣೆಯ ಗಮನಕ್ಕೆ ತಂದಿರುವುದಿಲ್ಲ.

ಆಯವ್ಯಯದ ಮಾಹಿತಿಗಳಿಲ್ಲದಿರುವುದರಿಂದ ನಿರೀಕ್ಷಿತ ಜಮೆಗಳು ಹಾಗು ಖರ್ಚಿನ ವಿವರಗಳನ್ನು ವಾಸ್ತವಿಕ ಗುರಿಸಾಧನೆಯೊಡನೆ ಪರಿಶೀಲಿಸಲಾಗಿರುವುದಿಲ್ಲ. ಆದುದರಿಂದ ಮೇಲ್ಕಂಡ ಪ್ರಕರಣ ಮತ್ತು ನಿಯಮಗಳನುಸಾರ ನಿಗದಿತ ಅವಧಿಯೊಳಗೆ ಆಯವ್ಯಯದ ಪಟ್ಟಿಗೆ ಅನುಮೋದನೆ ಪಡೆದು ಜಮಾ ಖರ್ಚುಗಳ ನಿರ್ವಹಣೆಯನ್ನು ಪಾಲಿಸಲು ಸೂಚಿಸಲಾಗಿದೆ. ಅದರಂತೆ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 15ರಂತೆ, ಆಯವ್ಯಯ ನಿಯಂತ್ರಣ ರಿಜಿಸ್ಟರನ್ನು ನಮೂನೆ 2ರಲ್ಲಿ ನಿರ್ವಹಿಸಿ, ಆಯವ್ಯಯದಲ್ಲಿನ ವಾಸ್ತವಿಕ ಹಂಚಿಕೆಗಳನ್ನು ಮೀರದಂತೆ ವೆಚ್ಚಗಳನ್ನು ಭರಿಸಲು ಸೂಚಿಸಲಾಗಿದೆ.

ಅಲ್ಲದೆ, ಸರ್ಕಾರಿ ಅಧಿಸೂಚನೆ ಸಂಖ್ಯೆ:ಗ್ರಾಅಪ/2/ಎಎಫ್‌ಎನ್(2)/2006/2008/2012 ದಿನಾಂಕ:15.5.2013ರಲ್ಲಿ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು)(ತಿದ್ದುಪಡಿ) ನಿಯಮಗಳು. 1913ರಲ್ಲಿ ನಿಯಮ 20 ಹಾಗು ನಮೂನೆ-1, 1-ಎ, 1-ಬಿ, 1-ಸಿ, 3, 3-ಎ, 49, 51, 52, 53, 55, 56, 57 ಗಳನ್ನು ಪರಿಷ್ಕರಿಸಿದ್ದು, ಅದರಂತೆ ಆಯವ್ಯಯ ಹಾಗು ಇತರೆ ನಮೂನೆಗಳಲ್ಲಿ ಲೆಕ್ಕಪತ್ರಗಳನ್ನು ಗ್ರಾಮಪಂಚಾಯಿತಿಯಲ್ಲಿ ತಪ್ಪದೆ ಪಾಲಿಸುವುದು.

ಹಾಗೆಯೇ ಕಳೆದ ವರ್ಷದಿಂದ ಮಾದರಿ ಲೆಕ್ಕ ಪದ್ಧತಿಯಡಿಯಲ್ಲಿ ನಮೂನೆ-1 ರಿಂದ 8 ಗಳನ್ನು ಭರ್ತಿ ಮಾಡಿ, ಜಿಲ್ಲಾ ಪಂಚಾಯಿತಿಗಳಿಗೆ ಅದನ್ನು ಸಲ್ಲಿಸಿ ಪ್ರತಿಯನ್ನು ಕಛೇರಿಯಲ್ಲಿ ಪಾಲಿಸಬೇಕಾಗಿದೆ. ಇದರಿಂದಾಗಿ ಎಲ್ಲಾ ವಿಧದ ರಾಜಸ್ವ ವೆಚ್ಚ ಸ್ವೀಕೃತವಾದ ವಿವರ, ಆಸ್ತಿಗಳು ವಿವರ, ತೆರಿಗೆ ಬೇಡಿಕೆ ಹಾಗು ಬಾಕಿ, ಖರೀದಿಗಳು ಹಾಗೂ ಇತರೆ ಮಾಹಿತಿಗಳು ವಿವರಗಳು ದಾಖಲಿಸಲ್ಪಡುತ್ತದೆ ಇದನ್ನು ತಪ್ಪದೆ ನಿರ್ವಹಿಸಿ ಲೆಕ್ಕ ತನಿಖೆಗೆ ನೀಡುವುದು.

ನಿಯಮ 112ರಂತೆ ಸ್ವೀಕೃತವಾದ ವಾರ್ಷಿಕ ಲೆಕ್ಕಗಳು ಹಾಗೂ ಹಣಕಾಸಿನ ತಃಖ್ತೆಗಳನ್ನು ಆಧರಿಸಿಯೆ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಬೇಕಾಗಿರುತ್ತದೆ. ಆದರೆ ಇಂತಹ ವಾರ್ಷಿಕ ಲೆಕ್ಕಪತ್ರಗಳು, ಈ ಗ್ರಾಮ ಪಂಚಾಯಿತಿಯಿಂದ ಈವರೆಗು ಬಂದಿರುವುದಿಲ್ಲ/ಲೆಕ್ಕ ತನಿಖಾ ವೇಳೆಯಲ್ಲು ಸಾದರಪಡಿಸಿಲ್ಲ ಆದಕಾರಣ ವಾರ್ಷಿಕ ಲೆಕ್ಕಗಳನ್ನು ಈವರೆಗೆ ಈ ಕಛೇರಿಯಿಂದ ಪ್ರಮಾಣೀಕರಿಸಿರುವುದಿಲ್ಲ.

9) ಅನುದಾನ ವಹಿ ಬಗ್ಗೆ:

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 206, ಮತ್ತು 208ರಂತೆ ಗ್ರಾಮಪಂಚಾಯಿತಿಗಳಿಗೆ ಕ್ರಮವಾಗಿ ವಿದ್ಯುತ್ ಚಾರ್ಜು ಭರಿಸಲು, ನೀರು ನಿರ್ವಹಣಾ ವೆಚ್ಚ ಹಾಗೂ ಇತರೆ ನಿರ್ವಹಣಾ ಅನುದಾನಗಳನ್ನು ಮತ್ತು ಇತರ ಉದ್ದೇಶಗಳಿಗಾಗಿ ವಿವೇಚನಾತ್ಮಕ ಅನುದಾನಗಳನ್ನು ನೀಡುತ್ತಿದ್ದು ಅವುಗಳನ್ನು ಪಡೆದ ಬಗ್ಗೆ ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಾವಳಿ 2006ರ ನಿಯಮ 99ರನ್ವಯ ನಮೂನೆ 45ರಲ್ಲಿ ಅನುದಾನ ವಹಿಯನ್ನು ನಿರ್ವಹಿಸಿರುವುದಿಲ್ಲ. ಇದರಿಂದ 2013-14ನೇ ಸಾಲಿನಲ್ಲಿ ಬಿಡುಗಡೆಗೊಂಡಿರುವ ಅನುದಾನಗಳ ವಿವರ ಹಾಗೂ ಅವುಗಳ ಹೊಂದಾಣಿಕೆ ಬಗ್ಗೆ ನಿಖರತೆಯಿರುವುದಿಲ್ಲ.

[illegible] ನಿಗಧಿತ ನಮೂನೆಯಲ್ಲಿ ಅನುದಾನದ ವಹಿ ನಿರ್ವಹಿಸಿ, ವರ್ಷದ ಕೊನೆಯಲ್ಲಿ ಅನುದಾನದ ಆರಂಭ ಶಿಲ್ಕು, ಸ್ವೀಕರಿಸಿದ ಅನುದಾನಗಳು, ವರ್ಷದ ಅವಧಿಯಲ್ಲಿ ಬಳಸಿಕೊಂಡ ಅನುದಾನಗಳು ಮತ್ತು ವರ್ಷಾಂತ್ಯದ ಶಿಲ್ಕುಗಳನ್ನು ಸೂಚಿಸುವ ಘೋಷ್ವಾರೆ ದೃಢೀಕರಿಸಿ, ನಮೂನೆ 46ರಲ್ಲಿ ಬಳಕೆ ಪ್ರಮಾಣ ಪತ್ರಗಳನ್ನು ಅನುದಾನದ ಷರತ್ತು ನಿಬಂಧನೆಗಳಲ್ಲಿ ಸೂಚಿಸಿರುವಂತೆ ಕಾರ್ಯದರ್ಶಿಯ ಸಕ್ಷಮ ಪ್ರಾಧಿಕಾರಗಳಿಗೆ ಸಲ್ಲಿಸಲು ಸೂಚಿಸಲಾಗಿದೆ. ಹಾಗಿದ್ದರೂ, ತಪಾಸಣೆಗೆ ಹಾಜರಪಡಿಸಿದ ದಾಖಲೆ ಪತ್ರಗಳ ಪರಿಶೀಲನೆಯಲ್ಲಿ ಈ ಕೆಳಕಂಡ ಅನುದಾನಗಳು ಗ್ರಾಮಪಂಚಾಯಿತಿ ನಿಧಿಗಳಿಗೆ ಹೊಂದಾಣಿಕೆಯಾಗಿರುವುದು ಕಂಡುಬಂದಿದೆ.

ಕ್ರ. ಸಂ	ಅನುದಾನದ ವಿವರ	ಅನುದಾನ
1	ಶಾಸನಬದ್ಧ ಅನುದಾನ	300000
2	13ನೇ ಹಣಕಾಸು	1605028
3.	ಕು.ನೀ.ಯೋ	22497
4	ಶೌಚಾಲಯ	597500
6	ಐಎವೈ(ಇಂದಿರಾ ಆವಾಜ್)	80000
7	ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ	20000
	ಒಟ್ಟು	2625025

10) **ವರ್ಗೀಕೃತ ಜಮಾ ಖರ್ಚಿನ ವಿವರದ ಪಟ್ಟಿ :**

ಮಾಸಿಕ ಮತ್ತು ಅರ್ಧವಾರ್ಷಿಕ ವರ್ಗೀಕೃತ ಲೆಕ್ಕಪತ್ರಗಳನ್ನು (ಜಮಾ ಖರ್ಚಿನ ತಃಖ್ತೆ) ಕರ್ನಾಟಕ ರಾಜ್ ನಿಯಮಾವಳಿ 2006 ರ ನಿಯಮ 108 ಹಾಗು 108(2)ರ ಪ್ರಕಾರ, ನಮೂನೆ 53ರಲ್ಲಿ ನಿರ್ವಹಿಸಿ, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಸಹಾಯಕ ನಿಯಂತ್ರಕರು ಇವರಿಗೆ ಪರಿಶೀಲನೆಗಾಗಿ ಸಲ್ಲಿಸಿರುವುದಿಲ್ಲ. ಇವುಗಳ ಕ್ರೂಢೀಕರಣೆಯಿಲ್ಲದೆ, ವಾರ್ಷಿಕ ವರ್ಗೀಕೃತ ಜಮಾ ಖರ್ಚುಗಳ ವಾಸ್ತವಿಕತೆಯನ್ನು ಪರಿಶೀಲಿಸಲು ಕಷ್ಟಕರವಾಗಿದ್ದು, ನಿರ್ವಹಿಸಿದ ಮಾಹಿತಿಯನ್ನು ತಪಾಸಣೆಯ ಗಮನಕ್ಕೆ ತರಲು ಸೂಚಿಸಲಾಗಿದೆ. ಅಂತೆಯೆ ನಿಯಮ 109ರ ನಮೂನೆ-55ರಲ್ಲಿ ಆದಾಯ ವೆಚ್ಚಗಳ ಲೆಕ್ಕವನ್ನು (ದ್ವಿ ನಮೂದು ಪದ್ಧತಿ) ಪಾಲಿಸಿ ಸಾದರಪಡಿಸಿಲ್ಲ. ಇದನ್ನು ಕೂಡಲೆ ಮಾಡಿ ಒದಗಿಸುವುದು.

ಹಾಗಿದ್ದರೂ, ತಪಾಸಣೆಗೆ ಹಾಜರುಪಡಿಸಿದ ದಾಖಲೆ ಪತ್ರಗಳ ಪರಿಶೀಲನೆಯಲ್ಲಿ ಕಂಡುಬಂದ ಮಾಹಿತಿಗಳನ್ನಾಧರಿಸಿದ 2013-14ನೇ ಸಾಲಿನ ವರ್ಗೀಕೃತ ಜಮಾ ಖರ್ಚಿನ ವಿವರದ ಪಟ್ಟಿಯನ್ನು ಅನುಬಂಧ -1 ರಲ್ಲಿ ಲಗತ್ತಿಸಲಾಗಿದೆ.

11) **ಗ್ರಾಮಪಂಚಾಯಿತಿ ನಿಧಿಯ ಸಾಮಾನ್ಯ ಆದಾಯ ಮತ್ತು ಸಾಮಾನ್ಯ ವೆಚ್ಚಗಳ ಬಗ್ಗೆ:**

ಗ್ರಾಮ ಪಂಚಾಯಿತಿ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ವಿವಿಧ ಯೋಜನೆಗಳ ಜಮಾ ಮತ್ತು ಪಾವತಿ ವಿವರಗಳನ್ನು ಹೊರತುಪಡಿಸಿ, ಸ್ವಆದಾಯ ಹಾಗೂ ಸೆಕ್ಷನ್ 206 ಮತ್ತು 208ರಡಿ ಸ್ವೀಕೃತಿಯಾಗಿರುವ ಎಲ್ಲಾ ಅನುದಾನ / ನೀರು ನಿರ್ವಹಣೆ ಅನುದಾನಗಳ ವಾರ್ಷಿಕ ಜಮೆ ಮತ್ತು ವೆಚ್ಚಗಳ ವಿವರವನ್ನು ಹಿಂದಿನ ಎರಡು ವರ್ಷಗಳ ಸಾಮಾನ್ಯ ಆದಾಯ ಮತ್ತು ಸಾಮಾನ್ಯ ವೆಚ್ಚಗಳೊಂದಿಗೆ ತಾಳೆಮಾಡಲಾಗಿ ಸರಾಸರಿ ಆದಾಯ ಮತ್ತು ವೆಚ್ಚಗಳ ವಿವರ ಈ ಕೆಳಕಂಡಂತೆ ಇರುವುದು ಕಂಡುಬಂದಿದೆ

ಕ್ರ.ಸಂ	ವಾರ್ಷಿಕ	ಸಾಮಾನ್ಯ ಆದಾಯ ರೂ.	ಸಾಮಾನ್ಯ ವೆಚ್ಚ ರೂ.
1	2011-12	2072501	1827817
2	2012-13	2857387	2614050
3	2013-14	2924956	3443965
	ಒಟ್ಟು	7854844	7885832
	ಸರಾಸರಿ	2618281.333	2628611

12) ನಗದು ಪುಸ್ತಕದ ಬಗ್ಗೆ:-

ಗ್ರಾಮ ಪಂಚಾಯಿತಿಯು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ ಲೆಕ್ಕ ಪತ್ರಗಳು ಮತ್ತು ಬಜೆಟ್) ನಿಯಮಗಳು 2006ರ ನಿಯಮ 104ರ ಪ್ರಕಾರ ನಮೂನೆ-49ರಲ್ಲಿ ಸಾಮಾನ್ಯ ನಗದು ಪುಸ್ತಕ ನಿರ್ವಹಿಸಿರುತ್ತಾರೆ. ಮೇಲ್ಕಾಣಿಸಿದ ನಿಯಮಗಳ 105ನೇ ನಿಯಮದ ಪ್ರಕಾರ ಲೆಕ್ಕ ಸಮನ್ವಯಗೊಳಿಸಿ, ಸಾಮಾನ್ಯ ನಗದು ವಹಿಯಲ್ಲಿ ವಿವರ ದಾಖಲಿಸಿ ದೃಢೀಕರಿಸಿರುತ್ತಾರೆ/ದೃಢೀಕರಿಸಿರುವುದಿಲ್ಲಾ.

13) ಋಣ ಶೀರ್ಷಿಕೆಗಳು:

ಅ) ಹೂಡಿಕೆಗಳು ಹಾಗು ಠೇವಣಿಗಳು:

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 95ರ ಪ್ರಕಾರ ನಮೂನೆ 41 ರಲ್ಲಿ ಹೂಡಿಕೆ ವಹಿಯನ್ನು ಹಾಗೆಯೆ ಠೇವಣಿಗಳ ಬಗ್ಗೆ ದಾಖಲೆಗಳನ್ನು ನಮೂನೆ-47ರಲ್ಲಿ ನಿರ್ವಹಿಸಬೇಕಾಗಿರುತ್ತದ ನಿಯಮ 100ರನ್ವಯ ಇಂದಿನವರೆಗೂ ನಿರ್ವಹಣೆ ಮಾಡದಿರುವುದರಿಂದ ನಿಯಮಾನುಸಾರ ನಿರ್ವಹಿಸಲು ಸೂಚಿಸಿದೆ.

ಆ) ಮುಂಗಡಗಳು:-

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 98ರ ಪ್ರಕಾರ ನಮೂನೆ 44 ರಲ್ಲಿ ಮುಂಗಡಗಳ ವಹಿ ನಿರ್ವಹಿಸಬೇಕಿರುತ್ತದೆ. ಆದರೆ ಈವರೆಗು ಈ ವಹಿಯನ್ನು ನಿರ್ವಹಿಸಿರುವುದಿಲ್ಲ. ನಿಯಮಾನುಸಾರ ನಿರ್ವಹಿಸಲು ಸೂಚಿಸಿದೆ.

ಇ.(I) ಇ.ಎಂ.ಡಿ. ಠೇವಣಿಗಳು:-

2013-14 ನೇ ಸಾಲಿನ ಜಮೆ ವಿವರಗಳ ಪ್ರಕಾರ ಇ.ಎಂ.ಡಿ ಠೇವಣಿಗಳ ವಿವರ ಇರುವುದಿಲ್ಲ.

ಇ. (II) ಭದ್ರತಾ ಠೇವಣಿಗಳ ಡಿ.ಸಿ.ಬಿ. ಬಗ್ಗೆ :

ಗುತ್ತಿಗೆದಾರರ ಕಾಮಗಾರಿಗಳ ಬಿಲ್ಲುಗಳಲ್ಲಿ ಕಟಾವಣೆ ಮಾಡಿರುವ ಭದ್ರತಾ ಠೇವಣಿಗಳ ದಾಖಲೆಗಾಗಿ ನಮೂನೆ 41ರಲ್ಲಿ ಪ್ರತ್ಯೇಕವಾಗಿ ವಹಿ ನಿರ್ವಹಿಸಬೇಕಿರುತ್ತದೆ. ಹಾಗೂ ಈ ಬಗ್ಗೆ ಸರ್ಕಾರವು ಕಾಲಕಾಲಕ್ಕೆ ವಿಧಿಸುವ ದರಗಳನ್ವಯ ಕಟಾವಣೆ ಮಾಡಬೇಕು.

(ಈ) ಸಾಲದ ಬಗ್ಗೆ

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 96 ರ ಪ್ರಕಾರ ನಮೂನೆ 42 ರಲ್ಲಿ ಸಾಲಗಳ ವಹಿಯನ್ನು ನಿರ್ವಹಿಸಬೇಕಿರುತ್ತದೆ. ಆದರೆ ಈವರೆಗು ನಿರ್ವಹಿಸಿರುವುದಿಲ್ಲ. ಇದನ್ನು ತಪ್ಪದೆ ನಿರ್ವಹಿಸಲು ಸೂಚಿಸಿದೆ. ಲಭ್ಯ ಮಾಹಿತಿ ಪ್ರಕಾರ ಪಂಚಾಯತ್ ರಾಜ್ ಕಾಯ್ದೆ 1993ರ ಪ್ರಕರಣ 214ರ ಪ್ರಕಾರ ಪಡೆದಿರುವ ಸಾಲದ ವಿವರ ಇರುವುದಿಲ್ಲ.

14) ಮಾಸಿಕ ಮತ್ತು ತ್ರೈಮಾಸಿಕ ಲೆಕ್ಕಪತ್ರಗಳು:-

ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು ನಿಯಮಗಳು 2006ರ ನಿಯಮ 108 ರ ಪ್ರಕಾರ ಕಾರ್ಯದರ್ಶಿಯು ಪ್ರತಿ ತಿಂಗಳ ಸ್ವೀಕೃತಿ ಮತ್ತು ಪಾವತಿ ವಿವರಣಾ ಪಟ್ಟಿಯನ್ನು ನಮೂನೆ 53 ರಲ್ಲಿ ಹಾಗೂ ಪ್ರಾಯೋಗಿಕ ಆರ್ಥಿಕ ಸ್ಥಿತಿಗತಿ ಪಟ್ಟಿಯನ್ನು ನಮೂನೆ 54ರಲ್ಲಿ ಪ್ರತಿ ಮಾಹೆಯ 20ನೇ ತಾರೀಖಿನೊಳಗಾಗಿ ಗ್ರಾಮ ಪಂಚಾಯಿತಿ ಸಭೆಗೆ ಮಂಡಿಸಿ, ಅನುಮೋಧನೆ ಪಡೆದ ಪಟ್ಟಿಗಳನ್ನು ಜಿಲ್ಲಾ ಪಂಚಾಯಿತಿ ಹಾಗೂ ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಛೇರಿಗಳಿಗೆ ಪರಿಶೀಲನೆಗಾಗಿ ಸಲ್ಲಿಸಬೇಕಿರುತ್ತದೆ. ಈ ರೀತಿ ಮಾಸಿಕ ಮತ್ತು ತ್ರೈಮಾಸಿಕ ಲೆಕ್ಕಗಳನ್ನು ಸಕ್ಷಮ ಪ್ರಾಧಿಕಾರಗಳು ಪರಿಶೀಲನೆ ಮಾಡಿ ಕಂಡು ಬಂದಿರುವ ಲೋಪದೋಷಗಳನ್ನು ಸರಿಪಡಿಸಿ ಕೊಳ್ಳುವಂತೆ ಮಾರ್ಗದರ್ಶನ ನೀಡುವ ಸಂಭವ ಮತ್ತು ಅವಕಾಶಗಳು ಇರುತ್ತದೆ.

15) ವಾರ್ಷಿಕ ಲೆಕ್ಕಪತ್ರಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸದಿರುವುದು:

ಪಂಚಾಯತ್ ರಾಜ್ ಅಧಿನಿಯಮ 243 ಉಪಪ್ರಕರಣ (3) ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 109 ರ ಪ್ರಕಾರ ಮುಂದುವರಿದ ವರ್ಷದ ಜೂನ್ 30ರೊಳಗೆ ಪಿ.ಡಿ.ಓ/ಕಾರ್ಯದರ್ಶಿಗಳು ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸಿ ಗ್ರಾಮ ಪಂಚಾಯಿತಿಯ ಅನುಮೋದನೆ ಪಡೆದು, ಅನುಮೋದಿತ ಪ್ರತಿಗಳನ್ನು ಆಯಾ ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಧಿಕಾರಿಗಳಿಗೆ ಮತ್ತು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲದ ಸಹಾಯಕ ನಿಯಂತ್ರಕರಿಗೆ ಸಲ್ಲಿಸಬೇಕಿರುತ್ತದೆ ಆದರೆ ಈ ಕ್ರಮವು ಆಗಿರುವುದಿಲ್ಲ. ಆದ ಪ್ರಯುಕ್ತ ಇನ್ನು ಮುಂದೆ ನಮೂನೆ 53 ರಲ್ಲಿ ಸ್ವೀಕೃತಿ ಮತ್ತು ಪಾವತಿ ವಿವರಗಳ ಪಟ್ಟಿಯನ್ನು ನಮೂನೆ-55ರಲ್ಲಿ ಆದಾಯ ಮತ್ತು ವೆಚ್ಚಗಳ ಪಟ್ಟಿಯನ್ನು ಹಾಗೂ ನಮೂನೆ -56ರಲ್ಲಿ ಸಮತೋಲನ ಪಟ್ಟಿಗಳನ್ನು ಮತ್ತು ನಮೂನೆ-54ರಲ್ಲಿ ಟ್ರಯಲ್ ಬ್ಯಾಲೆನ್ಸ್ ಪಟ್ಟಿ ಒಳಗೊಂಡಂತೆ ವಾರ್ಷಿಕ ಲೆಕ್ಕಪತ್ರಗಳನ್ನು ಸಕ್ಷಮ ಪ್ರಾಧಿಕಾರಗಳಿಗೆ ಹಾಗೂ ವರ್ತುಲ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದೆ. ಈ ರೀತಿಯಾಗಿ ಮಾಸಿಕ, ತ್ರೈಮಾಸಿಕ ಹಾಗೂ ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕ ತನಿಖೆಗೆ ಸಲ್ಲಿಸದೇ ಇರುವ ಕಾರಣ ಆದಾಯ ಮತ್ತು ವೆಚ್ಚದ ಸ್ವೀಕೃತಿ ಮತ್ತು ಪಾವತಿಯ ಸತ್ಯಾಪನೆಯನ್ನು ಧೃಢೀಕರಿಸಲು ಸಾಧ್ಯವಾಗುತ್ತಿಲ್ಲ. ವಿತ್ತೀಯ ವಿವರಣಾ ಪಟ್ಟಿಗಳು ಚಾರ್ಟರ್ಡ್ ಅಕೌಂಟೆಂಟ್ಸ್‌ರವರಿಂದ ಧೃಢೀಕರಿಸದೆ ಇರುವುದರಿಂದ ಲೆಕ್ಕಗಳ ಸತ್ಯಾಪನೆಯನ್ನು ಧೃಢೀಕರಿಸಲು ಸಾಧ್ಯವಾಗಿರುವುದಿಲ್ಲ. ಈ ಕ್ರಮವನ್ನು ಮಾಡಿ ಲೆಕ್ಕ ತನಿಖೆಗೆ ಧೃಢಿಕರಣಕ್ಕಾಗಿ ಕಳುಹಿಸಲು ಸೂಚಿಸಲಾಗಿದೆ.

16) ರಶೀತಿ ಪುಸ್ತಕಗಳ [illegible] ದಾಸ್ತಾನು ಬಗ್ಗೆ

1. ರಶೀತಿ ಪುಸ್ತಕಗಳ ದಾಸ್ತಾನು ವಹಿ:-

ರಶೀತಿ ಪುಸ್ತಕಗಳ ದಾಸ್ತಾನವಹಿಯನ್ನು ಪರಿಶೀಲಿಸಲಾಗಿ ಕೆಳಕಂಡ ಅಂಶಗಳು ಕಂಡುಬಂದಿವೆ.

(ಅ) ದಾಸ್ತಾನು ವಹಿಯನ್ನು ಹಿಂದಿನ ಪದ್ಧತಿಯಲ್ಲಿ ನಿರ್ವಹಿಸಿದ್ದು, ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಬಜೆಟ್) ನಿಯಮಗಳು ೨೦೦೬ರ ನಿಯಮ ೨೧ರನ್ವಯ ನಮೂನೆ ೫ರಲ್ಲಿ ನಿರ್ವಹಿಸಲು ಸೂಚಿಸಲಾಗಿದೆ.

(ಆ) ನಿಯಮ ೧೯ರಂತೆ ನಮೂನೆ ೩ರಲ್ಲಿ ಮುದ್ರಿಸಿದ ರಶೀತಿ ಪುಸ್ತಕಗಳನ್ನು ಉಪಯೋಗಿಸಲು ಸೂಚಿಸಲಾಗಿದೆ. ಆದರೆ ೨೦೧೩-೧೪ರಲ್ಲಿ ನಿಗಧಿತ ನಮೂನೆಯಲ್ಲಿ ನಿರ್ವಹಿಸಿರುವುದು ಕಂಡುಬಂದಿರುತ್ತದೆ.

ಉಪಯೋಗಿಸಿದ ರಶೀತಿ ಪುಸ್ತಕಗಳಲ್ಲಿ ೨೦೧೧-೧೨ನೇ ಸಾಲಿನಲ್ಲಿ ಭಾಗಶಃ ಉಪಯೋಗಿಸಿದ ರಶೀತಿ ಪುಸ್ತಕಗಳ ವಿವರ

ರಶೀತಿ ಪುಸ್ತಕದ ಸಂಖ್ಯೆ	ರಶೀತಿಸಂಖ್ಯೆ ದಿನಾಂಕದವರೆಗೆ
2105	105238/29-03-14
2102	105095/24/03/14
1964	98173/25-03-14

2. **ದಿನವಹಿ ವಸೂಲಾತಿ ಪುಸ್ತಕದ ಬಗ್ಗೆ:-**

ಕರ್ನಾಟಕ ಪಂಚಾಯಿತ್ ರಾಜ್ (ಗ್ರಾಮ ಪಂಚಾಯಿತಿ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 24ರ ಅನ್ವಯ ನಮೂನೆ 7ರಲ್ಲಿ ದಿನವಹಿ ಪುಸ್ತಕವನ್ನು ನಿರ್ವಹಿಸಬೇಕಾಗಿರುತ್ತದೆ. 2013-2014ನೇ ಸಾಲಿನಲ್ಲಿ ನಿಗಧಿತ ನಮೂನೆಯಲ್ಲಿ ದಿನವಹಿ ಪುಸ್ತಕವನ್ನು ನಿರ್ವಹಿಸಿರುವುದು ಕಂಡುಬಂದಿರುತ್ತದೆ.

೩. ಪ್ರಸಕ್ತ ಸಾಲಿನಲ್ಲಿ ಉಪಯೋಗಿಸಿದ ರಶೀತಿ ಪುಸ್ತಕಗಳ ದಾಸ್ತಾನು ವಿವರಗಳು ಇಂತಿವೆ.

1-4-೨೦೧೩ರಲ್ಲಿನ ಪ್ರಾರಂಭಿಕ ಶಿಲ್ಕು : ೦

೨೦೧೩-೧೪ರಲ್ಲಿ ಸ್ವೀಕೃತಿ : ೩೮

ಒಟ್ಟು ಪುಸ್ತಕಗಳು : ೩೮

೨೦೧೩-೧೪ನೇ ಸಾಲಿನಲ್ಲಿ ಉಪಯೋಗಿಸಿ-ರುವ ರಶೀತಿ ಪುಸ್ತಕಗಳು: ೩೨

೩೧.೩.೨೦೧೪ರಲ್ಲಿ ಅಖೈರು ಶಿಲ್ಕು : ೦೬(೨೧೦೫-೨೧೧೦)

೧೭) ಗ್ರಾಮ ಪಂಚಾಯಿತಿಯ ತೆರಿಗೆಗಳ ವಸೂಲಿ ಮತ್ತು ನಿಧಿಗೆ ಜಮಾ ಬಗ್ಗೆ:-

೧. ಗ್ರಾಮ ಪಂಚಾಯಿತಿಯ ತೆರಿಗೆಗಳ ವಸೂಲಿ ಮತ್ತು ನಿಧಿಗೆ ಜಮಾ ವಿವರದ ತಃಖ್ತೆ:

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು ೨೦೦೬ರ ನಿಯಮ ೧೯ರಂತೆ ತೆರಿಗೆಗಳ ವಸೂಲಾತಿಯ ವಿವರ ಹಾಗೂ ನಿಯಮ ೨೫ರನ್ವಯ ವಸೂಲಾತಿಯಾದ ತೆರಿಗೆಗಳ ಬಾಬ್ತು ಗ್ರಾಮ ಪಂಚಾಯಿತಿ ನಿಧಿಗೆ ಜಮಾ ಮಾಡಿರುವ ವಿವರಗಳ ತಃಖ್ತೆ ಇಂತಿದೆ.

ಮಾಹೆಯ ವಿವರ	ಪಂಚಾಯಿತಿಯ ನಿಧಿ ಮೂಲಗಳಿಂದ ವಸೂಲಿಸಿದ ತೆರಿಗೆಯ ಮೊತ್ತ ರೂ.	2012-13ರಲ್ಲಿ ಮಾಹೆಯಲ್ಲಿ ಜಮಾ ಮೊತ್ತ ರೂ.	ವ್ಯತ್ಯಾಸದ ವಿವರ	
			ಹೆಚ್ಚು ಜಮಾ ರೂ.	ಕಡಿಮೆ ಜಮಾ ರೂ.
ಏಪ್ರಿಲ್ 2013	24633	24525		108
ಮೇ 2013	58925	59424	499	
ಜೂನ್ 2013	127516	123595		3921
ಜುಲೈ 2013	93917	86065		7852
ಆಗಸ್ಟ್ 2013	76196	78900	2704	
ಸೆಪ್ಟೆಂಬರ್ 2013	68559	62500		6059
ಆಕ್ಟೋಬರ್ 2013	70769	52716		18053
ನವೆಂಬರ್ 2013	58307	87757	29450	
ಡಿಸೆಂಬರ್ 2013	107094	96184		10910
ಜನವರಿ 2014	60291	70015	9724	
ಫೆಬ್ರವರಿ 2014	61035	58066		2969
ಮಾರ್ಚ್ 2014	73824	81210	7386	
ಕಡಿಮೆ ಇರಸಾಲು	98359	98359	0	0
ಒಟ್ಟು	979425	979316	49763	49872
ಕಡಿಮೆ ಇರಸಾಲು ಬಾಬ್ತು	109		-109	

ಮೇಲ್ಕಂಡ ವಿವರಗಳನ್ನು ಪರಿಶೀಲಿಸಲಾಗಿ ಕೆಳಕಂಡ ಅಂಶಗಳು ಕಂಡುಬಂದಿದೆ.

ಮೇಲ್ಕಂಡ ವಿವರದ ತಃಖ್ತೆಯಿಂದ, ವಸೂಲಿಸಿದ ತೆರಿಗೆಗಳ ಮೊಬಲಗನ್ನು ವಿಳಂಬವಾಗಿ ಗ್ರಾಮ ಪಂಚಾಯಿತಿ ನಿಧಿಗೆ ಜಮಾ ಮಾಡಿರುವುದರಿಂದ ಈ ಮುಂದೆ ವಸೂಲಿಸಿದ ತೆರಿಗೆಗಳನ್ನು ವಸೂಲಿಸಿದ ದಿನ ಅಥವಾ ಮಾರನೇ ದಿನಕ್ಕೆ ಪೂರ್ಣವಾಗಿ ಜಮಾ ಮಾಡಲು ಸೂಚಿಸಲಾಗಿದೆ. ಶೇ.100 ರಷ್ಟು ದಿನವಹಿಯನ್ನು ಕೆಂಪು ಶಾಯಿಯಲ್ಲಿ ಪರಿಶೀಲಿಸುವುದು ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯವರು ಅಥವಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಕರ್ತವ್ಯವಾಗಿರುತ್ತದೆ.

18) ಆಸ್ತಿ - ಹೊಣೆಗಾರಿಕೆಗಳ ವಿವರ:

ದಿನಾಂಕ:-31-3-2014ರ ಅಂತ್ಯಕ್ಕೆ ಗ್ರಾಮ ಪಂಚಾಯಿತಿಯು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 69ಅನ್ವಯ ಈ ಕೆಳಕಂಡ ರಿಜಿಸ್ಟರ್‌ಗಳಲ್ಲಿ ನಿರ್ವಹಿಸಿರುವುದಿಲ್ಲ.

1) ಭೂದಾಖಲಾತಿ ರಿಜಿಸ್ಟರ್ - ನಮೂನೆ -30

2) ಕಟ್ಟಡ ಮತ್ತು ಇತರೆ ಮೂಲಭೂತ ಸೌಕರ್ಯಗಳಾದ ರಸ್ತೆ, ಸೇತುವೆ ಅಡಿಗಾಲುವೆ ಇತ್ಯಾದಿ ನಮೂನೆ-31

3) ಪೀಠೋಪಕರಣ, ಯಂತ್ರೋಪಕರಣ ಹಾಗೂ ಇತರೆ ಸಾಮಗ್ರಿ ನಮೂನೆ

ಗ್ರಾಮ ಪಂಚಾಯಿತಿಯ ಲಭ್ಯವಿರುವ ಅಂಕಿ ಅಂಶಗಳ ಪ್ರಕಾರ ಆಸ್ತಿ - ಹೊಣೆಗಾರಿಕೆ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ಆರ್ಥಿಕ ಆಸ್ತಿಗಳ ವಿವರ	ಮೊತ್ತ ರೂ.	ಕ್ರ. ಸಂ.	ಹೊಣೆಗಾರಿಕೆಗಳ ವಿವರ	ಮೊತ್ತ ರೂ.
1	ಆಸ್ತಿಗಳು-ಸ್ವಂತ ನಿಧಿಯಿಂದ	547933	1	ಉಪಕರಗಳ ಬಾಬ್ತು	523520
2	ಆಸ್ತಿಗಳ-ಯೋಜನೆಗಳ ನಿಧಿಯಿಂದ	–	2	ತೆರಿಗೆಗಳ ಬಾಬ್ತು	71046
3	ಠೇವಣಿ/ಸಾಲ/ಮುಂಗಡ ಇ.ಎಂ.ಡಿ ಎಫ್ ಎಸ್.ಡಿ	–	3	ಆಡಿಟ್ ಶುಲ್ಕ	9000
4	ಬ್ಯಾಂಕ್ ಶಿಲ್ಕು	934201	4	ಬಾಕಿಯಿರುವ ವೆಚ್ಚಗಳು	–
5	ಆಸ್ತಿಗಿಂತ ಹೊಣೆಗಾರಿಕೆ ಹೆಚ್ಚಿರುವುದು		5	ಠೇವಣಿಗಳು/ಮುಂಗಡ	–
			6	ಸರ್ಕಾರಿ ತೆರಿಗೆಗಳ ಬಾಬ್ತು	–
			7	ಹೊಣೆಗಾರಿಕೆಗಿಂತ ಆಸ್ತಿ ಹೆಚ್ಚಿರುವುದು	878568
	ಒಟ್ಟು	**1482134**		**ಒಟ್ಟು**	**1482134**

19) ತೆರಿಗೆಗಳ ಬೇಡಿಕೆ ವಸೂಲಿ ಮತ್ತು ಬಾಕಿಗಳ ವಿವರಗಳು:

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮಗಳ ಅನ್ವಯ ಈ ಕೆಳಕಂಡ ರಿಜಿಸ್ಟರುಗಳಲ್ಲಿ ನಿರ್ವಹಿಸಬೇಕಾಗಿರುತ್ತದೆ.

(ಈ ಕೆಳಕಂಡವುಗಳನ್ನು ಕಂಡಿಕೆಯಲ್ಲಿ ತರುವುದು)

ಕ್ರ.ಸಂ.	ವಿವರ	ನಿಯಮ	ನಮೂನೆ
1	ಭೂಮಿ ಮತ್ತು ಕಟ್ಟಡ ತೆರಿಗೆ	30	11
2	ವಾಹನ ತೆರಿಗೆಗಳು	31	12
3	ಜಾಹಿರಾತು ತೆರಿಗೆ	32	13
4	ನೀರಿನ ದರಗಳು	33	14
5	ಆದಾಯತರುವ ಆಸ್ತಿಗಳು	34	15
6	ಲೈಸೆನ್ಸ್ ನೀಡಿಕೆ	35	16
7	ಮನರಂಜನೆ ತೆರಿಗೆ	36	17
8	ದನಗಳ ದೊಡ್ಡಿ	37	18

2013-14ನೇ ಸಾಲಿನಲ್ಲಿ ಈ ಮೇಲ್ಕಂಡ ಯಾವುದೇ ರಿಜಿಸ್ಟರನ್ನು ನಿಯಮ ರೀತ್ಯಾ ನಿರ್ವಹಿಸದೆ ಇರುವುದು ಕಂಡುಬಂದಿದೆ.

ಆದರೂ ಕೂಡ ಗ್ರಾಮ ಪಂಚಾಯಿತಿಯಲ್ಲಿ ನಿರ್ವಹಿಸಿರುವ ಬೇಡಿಕೆ ಪಟ್ಟಿಯನ್ನು ಒಂದು ಬಿಳಿ ಹಾಳೆಯಲ್ಲಿ ಲಭ್ಯವಿರುವ ಮಾಹಿತಿಗಳನ್ನು ಆಧರಿಸಿ ತಯಾರಿಸಲಾದ ಬೇಡಿಕೆ, ವಸೂಲಾತಿ ಮತ್ತು ಬಾಕಿ ವಿವರಗಳು ಇಂತಿವೆ.

ಕ್ರಸಂ	ವಿವರಗಳು	ಪ್ರಾರಂಭಿಕ ಶೀಲ್ಕು	ಬೇಡಿಕೆ 2013-14	ಒಟ್ಟು	ವಸೂಲಾತಿ	ಬಾಕಿ
1	ಭೂಮಿ ಮತ್ತು ಕಟ್ಟಡ ತೆರಿಗೆ	390438	183726	574164	444700	129464
2	ನೀರಿನ ದರಗಳು	49907	218793	268700	256000	12700
3	ದೀಪದ ತೆರಿಗೆ	318454	213373	531827	126058	405769
4	ಆದಾಯ ತರುವ ಆಸ್ತಿಗಳು	0		0		0
	ಒಟ್ಟು	758799	615892	1374691	826758	547933

[illegible] ಪರಿಶೀಲಿಸಲಾಗಿ, ಕಂದಾಯ ದರಗಳನ್ನು ಮತ್ತು ಫೀ[illegible]ಗಳು ವಸೂಲಾಗದೆ ಇರುವುದು ಕಂಡುಬಂದಿದ್ದು, ಕರ್ನಾಟಕ ಪಂಚಾಯಿತ್ ರಾಜ್ ಅಧಿನಿಯಮ 1993ರ ಪ್ರಕರಣ 200 ಮತ್ತು ಉಪ ಪ್ರಕರಣಗಳನ್ವಯ ಕ್ರಮವಾಗಿ ಆದಾಯವನ್ನು ವಸೂಲಿಸಿ ಗ್ರಾಮ ಪಂಚಾಯಿತಿ ನಿಧಿಗೆ ಜಮೆ ಮಾಡಲು ಸೂಚಿಸಿದೆ.

೨೦)ಉಪಕರಗಳನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡದಿರುವ ಬಗ್ಗೆ:

ಪ್ರಸಕ್ತ ಸಾಲಿನಲ್ಲಿ ವಸೂಲಿಯಾದ ತೆರಿಗೆಗಳ ಮೇಲೆ ಸರ್ಕಾರಕ್ಕೆ ಜಮಾ ಮಾಡಬೇಕಾದ ಉಪಕರಗಳ ವಿವರ ಈ ಕೆಳಕಂಡಂತೆ ಇರುತ್ತದೆ.

(ಮನೆ ಮತ್ತು ನಿವೇಶನ ಒಟ್ಟು ವಸೂಲಿಸಿದ ಮೊತ್ತ ರೂ.				444700	134	3318.65672
ಕ್ರ	ವಿವರಗಳು	ಆರೋಗ್ಯಕರ	ವಿದ್ಯಾಕರ	ಗ್ರಂಥಾಲಯಕರ	ಭಿಕ್ಷುಕರ ಕರ	ಒಟ್ಟು
		15	10	6	3	34
1	2013–14 ನೇ ಸಾಲಿನಲ್ಲಿ ವಸೂಲಿ	49780	33187	19912	9956	112834
2	ಶೇ.10 (ಗ್ರಾ.ಪಂ.ನಿಧಿಗೆ) ಶುಲ್ಕ ಕಳೆದಿರುವುದು.	4978	3319	1991	996	11283
3	2013–14ರಲ್ಲಿನ ಸರ್ಕಾರಕ್ಕೆ ಪಾವತಿಸಬೇಕಾದ ನಿವ್ವಳ ವಸೂಲಿ	44802	29868	17921	8960	101551
4	ಪ್ರಾರಂಭ ಶಿಲ್ಕು 31–3–13ಕ್ಕೆ	193668	129309	75517	23475	421969
5	ಒಟ್ಟು	238470	159177	93438	32435	523520
6	2013–14 ನೇ ಸಾಲಿನಲ್ಲಿ ಜಮೆ	0	0	0	0	0

ದಿನಾಂಕ:31-03-2014 ರ ಅಂತ್ಯಕ್ಕೆ, ಜಮಾ ಮಾಡದೇ ಉಳಿದಿರುವ ಉಪಕರಗಳ ಮೊತ್ತ 523520/-ಗಳನ್ನು ಗ್ರಾಮ ಪಂಚಾಯಿತಿ ನಿಧಿಯಿಂದ ಡ್ರಾ ಮಾಡಿ ಸರ್ಕಾರದ ಆಯಾ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡಲು ಗ್ರಾಮ ಪಂಚಾಯಿತಿ ಆಡಳಿತ ವರ್ಗಕ್ಕೆ ಸೂಚಿಸಿದೆ. ಅಲ್ಲಿಯವರೆಗೂ ಪ್ರಸಕ್ತ ಸಾಲಿನ ಮೊತ್ತ ರೂ101551 /- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

೨೧) ಆದಾಯ ತರುವ ಆಸ್ತಿ/ಮೂಲಗಳ ವಹಿ/ದಾಖಲೆ ಪಾಲಿಸುದಿಕೆ:

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು ೨೦೦೬ ನಿಯಮ ೩೪ರ ಅನ್ವಯ ನಿಗಧಿತ ನಮೂನೆ ೧೫ರಲ್ಲಿ ಆದಾಯ ಸೃಷ್ಠಿ ಆಸ್ತಿಗಳ ವಿವರ ಮತ್ತು ವಸೂಲಾತಿ ವಿವರದ ವಹಿಯನ್ನು ನಿರ್ವಹಿಸಬೇಕಿರುತ್ತದೆ. ಪ್ರಯುಕ್ತ ನಿಯಮಾನುಸಾರ ನಿರ್ವಹಿಸಲು ಸೂಚಿಸಿದೆ. ಮುಖ್ಯವಾದ ಈ ದಾಖಲೆ/ವಹಿ ಪಾಲಿಸದಿದ್ದಲ್ಲಿ ಬೇಡಿಕೆ-ಬಾಕಿಗಳ ವಿವರ ಪಾರದರ್ಶಕವಾಗಿರದೆ, ವಸೂಲಾಗಬಹುದಾದ ಆದಾಯ ಹಾಗು ಬಾಕಿಗಳು ವಸೂಲಾಗದೆ ಹೋಗುವ ಸಂಭವವಿರುತ್ತದೆ. ಹಾಗೆಯೆ ಪಂಚಾಯ್ತಿ ಆಸ್ತಿಗಳ ಒಟ್ಟಾರೆ ಚಿತ್ರಣ ಲಭ್ಯವಾಗದೆ ಹೋಗುತ್ತದೆ.

೨೨)ಹರಾಜ್ ಪ್ರಕರಣಗಳ ಬಗ್ಗೆ:

೨೦೦೬ ರ ಕರ್ನಾಟಕ ಪಂಚಾಯತ್ ರಾಜ್ ಲೆಕ್ಕ ಪತ್ರ ನಿಯಮಗಳ ನಿಯಮ ೩೪ ರನ್ವಯ ಗ್ರಾಮ ಪಂಚಾಯಿತಿಯ ಆದಾಯ ಮೂಲಗಳಲ್ಲಿ ಹರಾಜ್ ಮೂಲಕ ವಿಲೇಮಾಡುವುದು ಪ್ರಮುಖ ಅಂಶವಾಗಿರುತ್ತದೆ. ಸದರಿಯನ್ವಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆಗಳು/ ಹುಣಸೆ/ ಮಾವಿನ ಮತ್ತು ಇತರೆ ಫಲಗಳು, ಮರಳು ಕಲ್ಲು ಸಾಗಾಣಿಕೆ, ಹುಲ್ಲುಗಾವಲು, ಅನುಪಯುಕ್ತ ಸಾಮಗ್ರಿಗಳು, ಇತ್ಯಾದಿಯಾಗಿ ವಾರ್ಷಿಕಾವಧಿಗೆ ಹರಾಜ್ ಮಾಡಿರುವುದು ಕಂಡು ಬಂದಿಲ್ಲ ಸದರಿಯನ್ವಯ ೨೦೧೩-೧೪ನೇ ಸಾಲಿನ ಹರಾಜ್ ಮೂಲಕ ವಿಲೇಮಾಡಿರುವ ವಿವರ ಇರುವುದಿಲ್ಲ.

25) ಸಾದಿಲ್ವಾರು ವೆಚ್ಚಗಳು

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1994ರ ನಿಯಮ–3ರಲ್ಲಿ (ಗ್ರಾಮ ಪಂಚಾಯಿತಿ ನಿಧಿಗಳನ್ನು ಬಳಸುವುದು) ಗ್ರಾಮ ಪಂಚಾಯಿತಿ ನಿಧಿಯಿಂದ ವಹಿಸಬೇಕಾದ ವೆಚ್ಚಗಳಿಗೆ ಮಿತಿಯನ್ನು ನಿಧಿಸಲಾಗಿದ್ದ ಕೂಡ್ಡಲರು ಗ್ರಾಮ ಪಂಚಾಯಿತಿಯ ಅಧಿಕಾರ ವ್ಯಾಪ್ತಿಯನ್ನು ಮೀರಿ ವೆಚ್ಚ ಮಾಡಿರುವುದು ಹಾಗೂ ಹೆಚ್ಚುವರಿ ವೆಚ್ಚಕ್ಕೆ ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯಿತಿಗಳ ಪೂರ್ವ ಮಂಜೂರಾತಿ ಪಡೆಯದಿರುವುದು ಕೂಡಾ ಕಂಡುಬಂದಿರುತ್ತದೆ. ನಿಯಮಗಳ ಮಿತಿಯನ್ನು ಉಲ್ಲಂಘಿಸಿ ಖರ್ಚು ಮಾಡಿರುವುದಕ್ಕೆ ಸಂಬಂಧಪಟ್ಟ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯವರು ಸೂಕ್ತ ಸಮಜಾಷಿಯನ್ನು ಕೇಳಲಾಗಿದೆ ಹಾಗೂ ಹೆಚ್ಚುವರಿ ಮಾಡಲಾದ ಖರ್ಚಿಗೆ ಗ್ರಾಮ ಪಂಚಾಯಿತಿ ಹಾಗೂ ಸಕ್ಷಮ ಪ್ರಾಧಿಕಾರಗಳಿಂದ ಘಟನೋತ್ತರ ಮಂಜೂರಾತಿ ಪಡೆಯಲು ಸೂಚಿಸಿದೆ ಹಾಗೂ ಇನ್ನು ಮುಂದೆ ನಿಯಮಾವಳಿಗಳ ಅನ್ವಯ ವೆಚ್ಚ ಮಾಡಲು ಸೂಚಿಸಿದೆ.

ಈ ಕೆಳಕಂಡ ವಹಿಗಳನ್ನು ತಪ್ಪದೆ ನಿರ್ವಹಿಸಲು ತಿಳಿಸಿದೆ.

1) ಅಂಚೆ ವೆಚ್ಚಗಳು (ನಿಯಮ 64)
2) ದೂರವಾಣಿ (ನಿಯಮ 65)
3) ಲೇಖನ ಸಾಮಗ್ರಿ (ನಿಯಮ 66)
4) ಮುದ್ರಣ (ನಿಯಮ 66)
5) ಪೀಠೋಪಕರಣ ಅಥವಾ ಸಾಧನ ಸಾಮಗ್ರಿ (ನಿಯಮ 68)

ಭಾಗ–4
ವಿವಿಧ ಯೋಜನೆಗಳ ಅನುಷ್ಠಾನದ ವಿವರ

26) ಕಾಮಗಾರಿಗಳ ನಿರ್ವಹಣೆಯನ್ನು ಕುರಿತು:–

13ನೇ ಹಣಕಾಸು ಅನುದಾನದ ಮೊಬಲಗಿನಿಂದ 2012–2013ನೇ ಸಾಲಿನಲ್ಲಿ ನಿರ್ವಹಿಸಿದ ಕಾಮಗಾರಿಗಳು ಮತ್ತು ಖರ್ಚಿನ ವಿವರಗಳಲ್ಲಿ ಈ ಕೆಳಕಂಡ ನ್ಯೂನತೆಗಳನ್ನು ಅಳವಡಿಸಿಕೊಳ್ಳಲು ಸೂಚಿಸಿದೆ.

1) ಕಾಮಗಾರಿಗಳನ್ನು ನಿಯಮ 81ರನ್ವಯ ಟೆಂಡರು/ತುಂಡು ಕಾಮಗಾರಿ ಮೇಲೆ ಗುತ್ತಿಗೆದಾರರಿಗೆ ವಹಿಸುವಲ್ಲಿ ಸ್ಪರ್ಧಾತ್ಮಕ ಕಡಿಮೆ ದರ ನಿಗಧಿಪಡಿಸಿರುವುದನ್ನು ರುಜುವಾತುಪಡಿಸುವ ಕಾಮಗಾರಿಗಳ ನಿರ್ವಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಮತ್ತು ನಿಯಮಾವಳಿ 2000ರ ಪ್ರಕಾರ ನಿಯಮ ಪಾಲಿಸಿದ ಬಗ್ಗೆ ದಾಖಲೆಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಿರುವುದಿಲ್ಲ.
2) ಕರ್ನಾಟಕ ಪಂಚಾಯಿತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 91ರಂತೆ ನಮೂನೆ 39ರಲ್ಲಿ ಕಾಮಗಾರಿ ರಿಜಿಸ್ಟರು ನಿರ್ವಹಿಸಿ ತಪಾಸಣೆಗೆ ಹಾಜರುಪಡಿಸಿರುವುದಿಲ್ಲ.
3) ನಿಯಮ 89ರಂತೆ ಗುತ್ತಿಗೆದಾರರಿಂದ ಪಡೆದ ಭದ್ರತಾ ಠೇವಣಿ ಪಡೆಯುವ ಬಗ್ಗೆ ಮಾಹಿತಿ ಅಲಭ್ಯ.
4) ಕರ್ನಾಟಕ ಪಂಚಾಯಿತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮ 86ರಂತೆ ಅಳತೆ ಪುನರ್ ಪರಿಶೀಲನೆ ಮಾಡಿಸಿರುವುದಿಲ್ಲ.ಅಳತೆ ಪುನರ್ ಪರಿಶೀಲನೆ ಮಾಡಿಸಿ ಪಾವತಿಸುವುದು.
5) ಸದರಿ ಯೋಜನೆಯಲ್ಲಿ ನಿರ್ವಹಿಸಿದ ಕಾಮಗಾರಿಗಳಿಗೆ 3 ಹಂತದಲ್ಲಿ ಫೋಟೋಗಳನ್ನು ತೆಗೆಯುವುದು.

2013-14 ನೇ ಸಾಲಿನಲ್ಲಿ ವರ್ಗ-1ರ ನಿಧಿಯಿಂದ ನಿರ್ವಹಿಸಿದ ಕಾಮಗಾರಿ ಬಿಲ್ಲುಗಳಿಗೆ ಈ ಕೆಳಕಂಡ ನ್ಯೂನತೆಗಳನ್ನು ಅಳವಡಿಸಿಕೊಳ್ಳಲು ಸೂಚಿಸಿದೆ.

1) ಅನುಬಂಧದಲ್ಲಿ ವಿವರಿಸಿರುವ ಕಾಮಗಾರಿಗಳ ನಿರ್ವಹಣೆಗೆ ಕ್ರಿಯಾ ಯೋಜನೆಯ ಮೂಲಕ ಅನುಮೋದನೆ ಪಡೆದ ಬಗ್ಗೆ ಮಾಹಿತಿಗಳಿರುವುದಿಲ್ಲ.
2) ಅಂದಾಜುವಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಪಡೆದ ಬಗೆಗಿನ ದೃಢೀಕರಣಗಳಿರುವುದಿಲ್ಲ.
3) ಮತ್ತೊಮ್ಮೆ ಪಾವತಿಯಾಗುವ ಸಂದರ್ಭಗಳನ್ನು ತಡೆಹಿಡಿಯಲು ಅವಕಾಶವಾಗುವಂತೆ ನಿಯಮ 91ರಂತೆ ನಮೂನೆ 39ರಲ್ಲಿ ಕಾಮಗಾರಿ ರಿಜಿಸ್ಟರನ್ನು ನಿರ್ವಹಿಸಿರುವುದಿಲ್ಲ.
4) ನಿಯಮ 83ರನ್ವಯ ನಮೂನೆ -36ರಲ್ಲಿ ಕಾಮಗಾರಿ ಆದೇಶವನ್ನು ನೀಡದ ಹೊರತು ಕಾಮಗಾರಿಯನ್ನು ಕೈಗೊಳ್ಳಬಾರದು.

5)ಕರ್ನಾಟಕ ಪಂಚಾಯಿತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮ 86ರಂತೆ ಅಳತೆ ಪುನರ್ ಪರಿಶೀಲನೆ ಮಾಡಿಸಿರುವುದಿಲ್ಲ.ಅಳತೆ ಪುನರ್ ಪರಿಶೀಲನೆ ಮಾಡಿಸಿ ಪಾವತಿಸುವುದು.

5) ಕರ್ನಾಟಕ ಪಂಚಾಯಿತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮ 86ರಂತೆ ಅಳತೆ ಪುನರ್ ಪರಿಶೀಲನೆ ಮಾಡಿಸಿರುವುದಿಲ್ಲ.

6)ಸದರಿ ಯೋಜನೆಯಲ್ಲಿ ನಿರ್ವಹಿಸಿದ ಕಾಮಗಾರಿಗಳಿಗೆ 3 ಹಂತದಲ್ಲಿ ಫೋಟೋಗಳನ್ನು ತೆಗೆಯುವುದು.

ಮೇಲ್ಕಂಡ ನ್ಯೂನತೆಗಳನ್ನು ಸರಿಪಡಿಸಿದ ಮಾಹಿತಿಯನ್ನು ತಪಾಸಣೆಯ ಗಮನಕ್ಕೆ ತರಲು ಸೂಚಿಸಲಾಗಿದೆ.

28) <u>ಇಂದಿರಾ ಆವಾಜ್ ಯೋಜನೆ :-</u>

ಗ್ರಾಮವಾಸಿ ಬಡಜನರಿಗೆ ವಸತಿ ಸೌಕರ್ಯಕ್ಕಾಗಿ ಸಹಾಯಧನದೊಡನೆ ಪ್ರೋತ್ಸಾಹಿಸಲು ಮತ್ತು ಗುಡಿಸಲು ರಹಿತ ಗ್ರಾಮಗಳಾಗಿ ಪರಿವರ್ತಿಸಲು, ಸರ್ಕಾರದ ಸುತ್ತೋಲೆ ಆರ್‌ಡಿಪಿ 14 ಐಎವೈ 99 ದಿನಾಂಕ:-11-1-2000 ಮತ್ತು ದಿ:-5-5-2000ರ ಸರ್ಕಾರದ ಆದೇಶ ಗ್ರಾಅಪ/47/ಐಎವೈ/2000 ರಂತೆ ಕೆಳಕಂಡ ವಿವರಗಳಂತೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ.

ಆರ್ಥಿಕ ಪರಿಸ್ಥಿತಿ:-

ನಗದು ಪುಸ್ತಕವನ್ನು ನಿರ್ವಹಣೆಯ ವಿವರಗಳು ಹಾಗೂ ಬ್ಯಾಂಕ್ ಪಾಸ್ ಪುಸ್ತಕದ ನಮೂದುವಿನ ವಿವರಗಳನ್ನು ಪರಿಗಣಿಸಿದ 2013-14ನೇ ಸಾಲಿನ ಆರ್ಥಿಕ ಪರಿಸ್ಥಿತಿಯ ವಿವರಗಳು ಕೆಳಕಂಡಂತಿದೆ.

1-4-2013 ರ ಪ್ರಾರಂಭಿಕ ಶಿಲ್ಕು	276073
2013-14ರಲ್ಲಿ ಜಮಾ	90612
ಒಟ್ಟು ರೂ.	366685
2013-14ರಲ್ಲಿನ ಖರ್ಚು	165680
31-3-14ರ ಅಂತ್ಯಕ್ಕೆ ಶಿಲ್ಕು	201005
ಬ್ಯಾಂಕಿನಂತೆ ಶಿಲ್ಕು	201005
ವ್ಯತ್ಯಾಸ	

ಯೋಜನೆ ಅನುಷ್ಠಾನದಲ್ಲಿನ ಪ್ರಮುಖ ನ್ಯೂನತೆಗಳು:-

ಈ ಉಪ ಯೋಜನೆಯ ಕಾರ್ಯಾನುಷ್ಠಾನದಲ್ಲಿ ಕಂಡುಬಂದ ನ್ಯೂನತೆಗಳು ಇಂತಿವೆ.

1) ಪಕ್ಕಾ ಮನೆಗಳ ನಿರ್ಮಾಣಕ್ಕಾಗಿ ಪಾವತಿಸಿದ ಮೊಬಲಗನ್ನು ಹೊಂದಾಣಿಕೆ ಮಾಡಿದ ಫಲಾನುಭವಿಯ ಬ್ಯಾಂಕ್ ಖಾತೆಗಳ ಮಾಹಿತಿ ಮತ್ತು ನಿರ್ಮಾಣದ ಕನಿಷ್ಟ 2.25 ಚದರದ ಮನೆ ವಿಸ್ತೀರ್ಣ ಮತ್ತು ಹೆಚ್ಚಿನ ವಿಸ್ತೀರ್ಣದ ಆರ್‌ಸಿಸಿ ಮನೆ ನಿರ್ಮಿಸಿಲ್ಲವೆಂಬ ಬಗ್ಗೆ ದೃಢೀಕರಣಗಳಿರುವುದಿಲ್ಲ.

2) ಕೇಂದ್ರ ಪುರಸ್ಕೃತ ಈ ಉಪಯೋಜನೆಗೆ ಆಯ್ಕೆ ಮಾಡಲಾದ ಫಲಾನುಭವಿಯ ಹೆಸರಿನಲ್ಲಿ ಅಥವಾ ಅವರ ಕುಟುಂಬ ಸದಸ್ಯರ ಹೆಸರಲ್ಲಿ ಮನೆ ಇರುವುದಿಲ್ಲ ಮತ್ತು ಈ ಯೋಜನಾ ಸೌಲಭ್ಯ ಹೊರತುಪಡಿಸಿ ಬೇರೆ ಯಾವ ಯೋಜನೆಯಡಿ, ಮನೆ ನಿರ್ಮಾಣಕ್ಕಾಗಿ, ಮನೆ ಪರಿವರ್ತನೆ, ಅಥವಾ ಶೌಚಾಲಯ ಸೌಲಭ್ಯ ಪಡೆಯದಿರುವುದರ ಬಗ್ಗೆ ದೃಢೀಕರಿಸಿಲ್ಲ.

3) ನಿಕಟ ಪೂರ್ವದಿಂದ ಕಾರ್ಯಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಸಹಾಯ ಪಡೆದು ಅಭಿವೃದ್ಧಿ ಪಡೆದ ಫಲಾನುಭವಿಗಳ ಗ್ರಾಮವಾರು, ಕುಳವರು, ಮಾಸ್ಟರ್ ಮಾಹಿತಿ ದಾಖಲಿಸಿದ ವಹಿ ನಿರ್ವಹಿಸಿ, ಗ್ರಾಮಾಭಿವೃದ್ಧಿಯಲ್ಲಿ ಸಾಧಿಸಿದ ಗುರಿಯನ್ನು ದಾಖಲಿಸಿದ ಮಾಹಿತಿ ವಿಸ್ತಾರಗೊಂಡಿರುವುದನ್ನು ತಪಾಸಣೆ ಗಮನಕ್ಕೆ ತಂದಿರುವುದಿಲ್ಲ.

4) ಸದರಿ ಯೋಜನೆಯ ಮಾರ್ಗ ಸೂಚಿಯಂತೆ ಬಿಡುಗಡೆ ಮಾಡಿರುವ ಅನುದಾನವನ್ನು ನಿಗಧಿತ ಅವಧಿಯೊಳಗೆ ವೆಚ್ಚ ಭರಿಸಿ ಸದರಿ ಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಫಲಾನುಭವಿಗಳಿಗೆ ಅನುಕೂಲವಾಗುವಂತೆ ಕಾರ್ಯ ನಿರ್ವಹಿಸುವಂತೆ ಸೂಚಿಸಿದೆ.

ಮೇಲ್ಕಂಡ ಅಂಶಗಳನ್ನು ಪರಿಗಣಿಸಿ, ಮಾಹಿತಿಗಳ ಕ್ರೋಢೀಕರಣೆ ಮತ್ತು ದಾಖಲೆ ಪತ್ರಗಳ ನಿರ್ವಹಣೆಯನ್ನು ಅಭಿವೃದ್ಧಿಪಡಿಸಲು ಸೂಚಿಸಲಾಗಿದೆ. ಆದುದರಿಂದ ಈ ಅವಧಿಯಲ್ಲಿ ಆಗಿರುವ ವೆಚ್ಚವನ್ನು ಲೆಕ್ಕ ಪರಿಶೋಧನೆಯಲ್ಲಿ ದೃಢಿಕರಿಸಲು ಸಾಧ್ಯವಾಗುತ್ತಿಲ್ಲ. ಇದನ್ನು ಮುಂದಿನ ಲೆಕ್ಕ ತನಿಖೆ ವೇಳೆಗಾದರಿ ಸಾದರಪಡಿಸುವುದು.

29) <u>ನಿರ್ಮಾಲ್ ಬಾರತ್ ಆಬಿಯನ :- (ಎಸ್.ಜಿ.ಎನ್.ವೈ)</u>

ಸಂಪೂರ್ಣ ಸ್ವಚ್ಚತಾ ಅಂದೋಲನ ಯೋಜನೆಯು ಗ್ರಾಮ ನೈರ್ಮಲ್ಯದಿಂದ ಜನರ ಆರೋಗ್ಯ ವೃದ್ಧಿಪಡಿಸಿ ಜೀವನ ಮಟ್ಟ ಮತ್ತು ಸ್ವಚ್ಚತೆಯನ್ನು ಕಾಯ್ದುಕೊಳ್ಳಲು, ವೈಯುಕ್ತಿಕ ಶೌಚಾಲಯ, ಅಂಗನವಾಡಿ ಮತ್ತು ಸರ್ಕಾರಿ ಶಾಲೆಗಳಲ್ಲಿ ಶೌಚಾಲಯಗಳ ನಿರ್ಮಾಣ ಮಾಡಿ ಹಳ್ಳಿಯ ಜನರ ಆರೋಗ್ಯ ಕಾಪಾಡುವ ಗುರಿಯಾಗಿದ್ದು ಈ ಪಂಚಾಯಿತಿಯಲ್ಲಿ ಯೋಜನಾ ಅನುಷ್ಠಾನಗೊಳಿಸಲು ಅನುಸರಿಸಿದ ವ್ಯವಸ್ಥೆಯ ವಿವರ ಹಾಗೂ ಖರ್ಚಿನ ವಿವರಗಳು ಇಂತಿವೆ.

<u>ಆರ್ಥಿಕ ಪರಿಸ್ಥಿತಿ:-</u>

ಗ್ರಾಮ ಪಂಚಾಯಿತಿಯಲ್ಲಿ ನಿಯಮಾನುಸಾರ ನಗದು ಪುಸ್ತಕವನ್ನು ನಿರ್ವಹಿಸಿರುತ್ತಾರೆ. ಈ ನಿಧಿಯನ್ನು ಪ್ರತ್ಯೂಕ ಕಾತೆ ನಿರ್ವಹಿಸಲಾಗಿದ್ದು ಖಾತೆಯಲ್ಲಿ ದಾಖಲಿಸಿರುವ ಬ್ಯಾಂಕ್ ಪಾಸ್ ಪುಸ್ತಕದ ಮಾಹಿತಿ ಹಾಗೂ ಧನಾಧೇಶಗಳ ಕೌಂಟರ್ ಫಾಯಿಲ್‌ಗಳನ್ನಾಧರಿಸಿ 2013-2014ನೇ ಸಾಲಿನ ಆರ್ಥಿಕ ಪರಿಸ್ಥಿತಿಯ ವಿವರಗಳು ಕೆಳಕಂಡಂತಿವೆ.

1-4-2013ರ ಪ್ರಾರಂಭಿಕ ಶಿಲ್ಕು	20715
2013-14ರಲ್ಲಿ ಜಮಾ	600762
ಒಟ್ಟು ರೂ.	621477
2013-14ರಲ್ಲಿನ ಖರ್ಚು	616990
31-3-2014ರ ಅಂತ್ಯಕ್ಕೆ ಶಿಲ್ಕು	4487
ಬ್ಯಾಂಕಿನಂತೆ ಶಿಲ್ಕು	4487
ವ್ಯತ್ಯಾಸ	--

[illegible] ಸ್ವಚ್ಛತಾ ಆಂದೋಲನ ಯೋಜನೆಯು ಗ್ರಾಮ ನೈರ್ಮಲ್ಯದಿಂದ ಜನರ ಆರೋಗ್ಯ ವೃದ್ಧಿಪಡಿಸಿ ಜೀವನ ಮಟ್ಟ ಮತ್ತು ಸ್ವಚ್ಛತೆಯನ್ನು ಕಾಯ್ದುಕೊಳ್ಳಲು, ವೈಯುಕ್ತಿಕ ಶೌಚಾಲಯ, ಅಂಗನವಾಡಿ ಮತ್ತು ಸರ್ಕಾರಿ ಶಾಲೆಗಳಲ್ಲಿ ಶೌಚಾಲಯಗಳ ನಿರ್ಮಾಣ ಮಾಡಿ ಹಳ್ಳಿಯ ಜನರ ಆರೋಗ್ಯ ಕಾಪಾಡುವ ಮತ್ತು ಗ್ರಾಮ ಸ್ವಚ್ಛತೆಯನ್ನು ಕಾಪಾಡುವ ಗುರಿಯಾಗಿದ್ದು ಈ ಪಂಚಾಯಿತಿಯಲ್ಲಿ ಯೋಜನಾ ಅನುಷ್ಠಾನಗೊಳಿಸಲು ಅನುಸರಿಸಿದ ವ್ಯವಸ್ಥೆಯ ವಿವರ ತಿಳಿದು ಬಂದಿಲ್ಲ.

ಸಾಮಾನ್ಯ ನ್ಯೂನ್ಯತೆಗಳು:-

1)ಸದರಿ ಯೋಜನೆಗೆ ಆಯ್ಕೆ ಮಾಡಲಾದ ಫಲಾನುಭವಿಯ ಹೆಸರಿನಲ್ಲಿ ಅಥವಾ ಅವರ ಕುಟುಂಬ ಸದಸ್ಯರ ಹೆಸರಲ್ಲಿ ಮತ್ತು ಈ ಯೋಜನಾ ಸೌಲಭ್ಯ ಹೊರತುಪಡಿಸಿ ಬೇರೆ ಯಾವ ಯೋಜನೆಯಡಿ ಶೌಚಾಲಯ ಸೌಲಭ್ಯ ಪಡೆಯದಿರುವುದರ ಬಗ್ಗೆ ದೃಢೀಕರಿಸಿಲ್ಲ.
2)ಸದರಿ ಯೋಜನೆಗೆ ಆಯ್ಕೆ ಮಾಡಲಾದ ಫಲಾನುಭವಿಯು ಬಿ.ಪಿ.ಎಲ್. ಪಡಿತರ ಚೀಟಿದಾರರು ಎಂಬ ಬಗ್ಗೆ ದೃಢೀಕರಿಸಿರುವುದಿಲ್ಲ.
3)ಸದರಿ ಯೋಜನೆಗೆ ಆಯ್ಕೆ ಮಾಡಲಾದ ಫಲಾನುಭವಿಯು ಸಣ್ಣ ಭೂ ಹಿಡುವಳಿದಾರ ಎಂಬ ಬಗ್ಗೆ ದೃಢೀಕರಣ ಪತ್ರ ಪಡೆದಿರುವುದಿಲ್ಲ.

30)ರಾಜೀವ್ ಗಾಂಧಿ ಗ್ರಾಮೀಣ ವಸತಿ ಯೋಜನೆ:

ಈ ಹಿಂದೆ ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ಮನೆ ನಿರ್ಮಿಸಿಕೊಳ್ಳಲು ಮತ್ತು ದುರಸ್ತಿಗೊಳಿಸಲು ಸಹಾಯ ಧನವನ್ನು ನೀಡುತ್ತಿದ್ದ ಯೋಜನೆಗಳನ್ನು ರಾಜೀವ್‌ಗಾಂಧಿ ಗ್ರಾಮೀಣ ವಸತಿ ಯೋಜನೆಯಡಿ ಮುಂದುವರೆಸಿರುವುದು ಕಂಡುಬಂದಿದೆ ಸದರಿಯೋಜನೆಯಡಿ ಸ್ವಂತ ಜಾಗ ಇರುವಂತಹ ವಸತಿಹೀನರ ಫಲಾನುಭವಿಗಳನ್ನು ಆಯ್ಕೆಮಾಡಿ ಗ್ರಾಮಪಂಚಾಯಿತಿ ನಡವಳಿ ಮೂಲಕ ಸಕ್ಷಮ ಪ್ರಾಧಿಕಾರಗಳಿಂದ ಅನುಮೋಧನೆ ಪಡೆದು ಪ್ರತಿಮನೆ ನಿರ್ಮಾಣಕ್ಕೆ ರೂ. /- ಗಳನ್ನು 4 ಕಂತುಗಳಲ್ಲಿ ನೀಡುತ್ತಿರುವುದು ಪರಿಶೀಲನೆಯಿಂದ ಕಂಡು ಬಂದಿದೆ ಈ ಬಗ್ಗೆ ಹಣಕಾಸು ವಹಿವಾಟುವನ್ನು ಪ್ರತ್ಯೇಕ ಬ್ಯಾಂಕ್ ಖಾತೆಯಲ್ಲಿ ನಿರ್ವಹಿಸಲಾಗಿದ್ದು 2013-14ನೇ ಸಾಲಿನ ಆರ್ಥಿಕ ಪರಿಸ್ಥಿತಿ ಘೋಷವಾರೆ ಈ ಕೆಳಕಂಡಂತೆ ಇರುವುದು. ಜಿಲ್ಲಾ ಪಂಚಾಯಿತಿಯ ಅನುಮೋದಿತ ಫಲಾನುಭವಿಗಳ ಪಟ್ಟಿಯೊಂದಿಗೆ ಕಡತಗಳನ್ನು ಹಾಜರುಪಡಿಸದ ಕಾರಣ ವೆಚ್ಚವನ್ನು ಪರಿಶೀಲಿಸಿರುವುದಿಲ್ಲ.

ಪ್ರಾರಂಭಿಕ ಶಿಲ್ಕು ರೂ.	371834
ಸ್ವೀಕೃತಿಗಳು ಅ) ಅನುದಾನ ರೂ. ಆ) ಖಾತೆಯ ಬಡ್ಡಿ ರೂ. ಇ) ಇತರೆ ಜಮೆ ರೂ.	- 15153
ಒಟ್ಟು ರೂ.	386987
2013-14ರ ವೆಚ್ಚ ರೂ.	30000
31-03-2013ಕ್ಕೆ ಶಿಲ್ಕು ರೂ. ಬ್ಯಾಂಕ್ ಖಾತೆಯ ಶಿಲ್ಕು ರೂ.	356987

3) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005ರ 4ನೇ ಪ್ರಕರಣದಡಿ, ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ. ಗ್ರಾಅಪ/41/ರಾಗ್ರಾಉ/06 ದಿನಾಂಕ 1-2-2007 ರಲ್ಲಿ ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ರಾಮನಗರ ಜಿಲ್ಲೆಯಲ್ಲಿ ದಿನಾಂಕ 1-4-2008ರಿಂದ ಕಾಯ್ದೆಯನ್ವಯ ಅನುಷ್ಠಾನ ಗೊಳಿಸಲಾಗಿದೆ. ರಾಜ್ಯದ ಅಧಿಸೂಚಿತ ಜಿಲ್ಲೆಗಳಲ್ಲಿ ಸ್ವಯಂ ಪ್ರೇರಣೆಯಿಂದ ಅರ್ಜಿ ಸಲ್ಲಿಸುವ ಮೂಲಕ ಅಕುಶಲ ದೈಹಿಕ ಕೆಲಸ ಬಯಸುವ ಗ್ರಾಮೀಣ ಪ್ರದೇಶದ ವಯಸ್ಕ ಸದಸ್ಯರ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ಮಟ್ಟದಲ್ಲಿ ಕನಿಷ್ಠ 100 ದಿನಗಳ ಖಾತರಿ ಉದ್ಯೋಗವನ್ನು ಒದಗಿಸಿ ಅವರ ಜೀವನಕ್ಕೆ ಭದ್ರತೆ ಒದಗಿಸುವುದು ಹಾಗೂ ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸುವುದು ಮತ್ತು ಗ್ರಾಮೀಣ ಬಡವರ ಜೀವನೋಪಾಯದ ಸಂಪನ್ಮೂಲ ಆಧಾರಗಳನ್ನು ಬಲಪಡಿಸುವುದು ಮುಖ್ಯ ಉದ್ದೇಶವಾಗಿದೆ. ಸದರಿ ಅಧಿಸೂಚನೆಯ ಕಂಡಿಕೆ (19) ರಂತೆ ಗ್ರಾ.ಮ ಪಂಚಾಯಿತಿಗಳಿಗೆ ಸರ್ಕಾರ ಬಿಡುಗಡೆ ಮಾಡುವ ಅನುದಾನವನ್ನು ನಿಯಮಾನುಸಾರ ಹಾಗೂ ಸಮರ್ಪಕವಾಗಿ ಬಳಕೆ ಮಾಡಿರುವುದರ ಬಗ್ಗೆ ಶಾಸನಬದ್ಧ ಅಧಿಕಾರಿಯಾಗಿ ಲೆಕ್ಕ ಪರಿಶೋಧನೆ ಕೈಗೊಳ್ಳಲಾಗಿದೆ.

ಪೀಠಿಕೆ:- ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005ರ ಪ್ರಕರಣ (4)ರ ಉಪಪ್ರಕರಣ (1)ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ಗ್ರಾಮೀಣ ಪ್ರದೇಶಗಳ ಕುಟುಂಬಗಳಿಗೆ ಖಾತರಿ ಉದ್ಯೋಗ ಒದಗಿಸಲು, ಕರ್ನಾಟಕ ಸರ್ಕಾರ ಅಧಿಸೂಚನೆಯನ್ನು ಹೊರಡಿಸಿ " ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ □□ಯನ್ನು ಜಾರಿಗೆ ತಂದಿದೆ.

ಉದ್ದೇಶ:- 1) ಅಧಿಸೂಚಿತ ಜಿಲ್ಲೆಗಳಲ್ಲಿ ಸ್ವಯಂ ಪ್ರೇರಣೆಯಿಂದ ಅರ್ಜಿ ಸಲ್ಲಿಸುವ ಮೂಲಕ ಅಕುಶಲ ದೈಹಿಕ ಕೆಲಸ ಬಯಸುವ ಗ್ರಾಮೀಣ ಪ್ರದೇಶದ ವಯಸ್ಕ ಸದಸ್ಯರ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ ನೂರು ದಿನಗಳ ಖಾತರಿ ಉದ್ಯೋಗವನ್ನು ಒದಗಿಸಿ, ಅವರ ಜೀವನಕ್ಕೆ ಭದ್ರತೆ ಒದಗಿಸುವುದು.

2) ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸುವುದು ಮತ್ತು ಗ್ರಾಮೀಣ ಬಡವರ ಜೀವನೋಪಾಯದ ಸಂಪನ್ಮೂಲ ಆಧಾರವನ್ನು ಬಲಪಡಿಸುವುದು.

<u>ಲೆಕ್ಕ ಪರಿಶೋಧನೆ:-</u>

ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿನ ಲೆಕ್ಕ ಪತ್ರಗಳ ಲೆಕ್ಕ ಪರಿಸೋಧನೆಯನ್ನು (ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ) ಕ.ಗ್ರಾ.ಉ.ಖಾ ಯೋಜನೆ ಕೈಪಿಡಿ ಕಂಡಿಕೆ 19ರಲ್ಲಿ ತಿಳಿಸಿರುವ ರೀತ್ಯಾ ಕೈಗೊಂಡಿದ್ದು, ಅಭಿಪ್ರಾಯ ಮಂಡಿಸಿದೆ.

ಆರ್ಥಿಕ ಪರಿಸ್ಥಿತಿ:-

2013-14ನೇ ಸಾಲಿಗೆ ನಿಯಮಾನುಸಾರ ನಗದು ಪುಸ್ತಕವನ್ನು ನಿರ್ವಹಿಸಿರುವ ಮತ್ತು ಈ ನಿಧಿಯ ಬ್ಯಾಂಕ್ ಖಾತೆಯಲ್ಲಿ ದಾಖಲಿಸಿರುವ ಮಾಹಿತಿ ಹಾಗೂ ಧನಾದೇಶಗಳ ಕೌಂಟರ್ ಫಾಯಿಲ್‌ಗಳಲ್ಲಿ ನಮೂದಿಸಿರುವ ಮೊಬಲಗುಗಳ ಮಾಹಿತಿಗಳನ್ನಾಧರಿಸಿ, ಆರ್ಥಿಕ ಪರಿಸ್ಥಿತಿಯ ವಿವರಗಳು ಕೆಳಕಂಡಂತಿವೆ.

2013ನೇ ಸಾಲಿನಲ್ಲಿ ಸದರಿ ಯೋಜನೆಯಡಿಯಲ್ಲಿ ಎಫ್.ಟಿ.ಓ ಮೂಲಕ ಹಣ ವರ್ಗಾವಣೆಯ ಮೂಲಕ ಸರಬರಾಜುದಾರರಿಗೆ ಹಾಗೂ ಕೂಲಿ ಕಾರ್ಮಿಕರಿಗೆ ಹಣ ವರ್ಗಾವಣೆಯಾಗಿದ್ದು ಸದರಿ ವರ್ಗಾವಣೆಯ ಅನುಗುಣವಾಗಿ ಕಾಮಗಾರಿ ವಿವರಣೆ ಪಾವತಿ ವಿವರಣೆ ಹಾಗೂ ಐ.ಎಂ.ಎಸ್ ಸಂಖ್ಯೆಯನ್ನು ನಗದು ವಹಿಯಲ್ಲಿ ನಮೂದಿಸಿರುವುದಿಲ್ಲಾವದ್ದುದ್ದರಿಂದ ಸದರಿ ಯೋಜನೆಯಡಿಯಲ್ಲಿನ ವೆಚ್ಚದ ಸತ್ಯತೆಯ ಬಗ್ಗೆ ಲೆಕ್ಕ ಪರಿಶೋಧನೆಯಲ್ಲಿ ದೃಢೀಕರಿಸಲು ಸಾಧ್ಯವಾಗಿರುವುದಿಲ್ಲಾ

	ಬ್ಯಾಕ್ ಖಾತೆ	FTO Trensver
1-4-2012 ರ ಪ್ರಾರಂಭಿಕ ಶಿಲ್ಕು	1149	
2013-14ರಲ್ಲಿ ಜಮಾ	21759	5167447
ಒಟ್ಟು ರೂ.	22908	
2013-14ರಲ್ಲಿನ ಖರ್ಚು	-	5167447
31-3-2013ರ ಅಂತ್ಯಕ್ಕೆ ಶಿಲ್ಕು	22908	
ಬ್ಯಾಂಕಿನಂತೆ ಶಿಲ್ಕು		
ವ್ಯತ್ಯಾಸ		

<u>ಕಾಮಗಾರಿಗಳ ನಿರ್ವಹಣೆಯಲ್ಲಿ ಗಮನಿಸಿದ ಸಾಮಾನ್ಯ ನ್ಯೂನತೆಗಳು:-</u>

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ರಾ.ಗ್ರಾ.ಉ.ಖಾ ಯೋಜನೆ ಲೆಕ್ಕ ಪತ್ರಗಳನ್ನು ಲೆಕ್ಕ ಪರಿಶೋಧನೆ ಮಾಡುವಾಗ ಈ ಕೆಳಗಿನ ನ್ಯೂನತೆಗಳು ಗಮನಕ್ಕೆ ಬಂದಿರುತ್ತದೆ.

1. ನೋಂದಣಿ ಮತ್ತು ಉದ್ಯೋಗ ಚೀಟಿ ವಿತರಣೆ ಬಗ್ಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕೈಪಿಡಿ ಕಂಡಿಕೆ 9 ಮತ್ತು 10ರಲ್ಲಿ ಸೂಚಿಸಿರುವಂತೆ ವಿವರಣೆ ಮಾಡಿರುವ ನಮೂನೆ-1 ರಿಂದ ನಮೂನೆ 7ರ ತನಕ ದಾಖಲಾತಿಗಳನ್ನು ಪರಿಶೀಲನೆಗೆ ಒದಗಿಸಿಲ್ಲ.
2. ಕಾಮಗಾರಿ ಬಿಲ್ಲುಗಳಲ್ಲಿ ನಮೂನೆ 6,8 ಮತ್ತು 9 ಮಾತ್ರ ಲಭ್ಯವಿರುತ್ತದೆ.
3. ನಮೂನೆ-1ರಲ್ಲಿ ಸ್ವಯಂ ಪ್ರೇರಣೆಯಿಂದ ಕೆಲಸಕ್ಕಾಗಿ ಅರ್ಜಿ ಸಲ್ಲಿಸುವ ಅಕುಶಲ ಕೂಲಿ ಕಾರ್ಮಿಕರಲ್ಲಿ ಕೆಲವರು ಅಕ್ಷರಸ್ತರು ಹಾಗೂ ಕೆಲವರು ಅನಕ್ಷರಸ್ತರು ಇದ್ದಾಗ್ಯೂ ಇವರಿಗೆ ಕೂಲಿ ಕೆಲಸಕ್ಕಾಗಿ ಆದೇಶ ನೀಡಿ 8ನ್ನು ವಿತರಿಸಿದಾಗ ಕಾಮಗಾರಿಗಳನ್ನು ನಿರ್ವಹಿಸಿದ ಬಳಿಕ ಎನ್‌ಎಂಆರ್‌ಗಳಲ್ಲಿ ಕಾಮಗಾರಿ ನಿರ್ವಹಿಸಲು ನಿಯೋಜನೆಗೊಂಡ ಕೂಲಿ ಕಾರ್ಮಿಕರಲ್ಲಿ ಕೆಲವರೂ ಸಹಿ ನೀಡಿದ್ದು ಮತ್ತೆ ಕೆಲವರು ಹೆಬ್ಬೆಟ್ಟು ಗುರುತು ಹಾಕಿರುವುದು ಗಮನಕ್ಕೆ ಬಂದಿದೆ. ನಮೂನೆ-1ನ್ನು ಪರಿಶೀಲನೆಗೆ ಒದಗಿಸಿಲ್ಲದ ಕಾರಣ, ಎನ್‌ಎಂಆರ್‌ಗಳಲ್ಲಿ ಇದನ್ನು ಪರಿಶೀಲಿಸಲು ಸಾಧ್ಯವಾಗಿಲ್ಲ.
4. ಎನ್‌ಎಂಆರ್‌ಗಳಲ್ಲಿ ಹೆಬ್ಬೆಟ್ಟು ಗುರುತು ಹಾಕಿದ ಬಹುತೇಕ ಪ್ರಕರಣಗಳಲ್ಲಿ ಅದನ್ನು ಕಾರ್ಯದರ್ಶಿಗಳಿಂದಾಗಲೀ/ಅಧ್ಯಕ್ಷರಿಂದಾಗಲೀ ದೃಢೀಕರಿಸಿರುವುದಿಲ್ಲ.
5. ರಾ.ಗ್ರಾ.ಉ.ಖಾ.ಯೋಜನೆ ಕೈಪಿಡಿ ಕಂಡಿಕೆ 12ರಲ್ಲಿ ತಿಳಿಸಿದಂತೆ, ಗಿಡನೆಡುವ ಕಾಮಗಾರಿಗಳಿಗೆ ಹೆಚ್ಚಿನ ಮೊತ್ತವನ್ನು ವಿನಿಯೋಗಿಸುವ ದೃಷ್ಟಿಯಿಂದ ಪ್ರತಿಗ್ರಾಮ ಪಂಚಾಯಿತಿಯಲ್ಲಿ ಒಂದು ಆರ್ಥಿಕ ವರ್ಷದಲ್ಲಿ ಪ್ರತಿ ಗ್ರಾಮ ಪಂಚಾಯಿತಿಯು ವಿನಿಯೋಗಿಸತಕ್ಕದ್ದು, ರಸ್ತೆಗಳನ್ನು ಕೊನೆಯ ಆದ್ಯತೆಯಾಗಿ ಒಟ್ಟು ಮೊತ್ತದ ಶೇ.10ಕ್ಕಿಂತ ಕಡಿಮೆ ಮೊತ್ತದಲ್ಲಿ ತೆಗೆದುಕೊಳ್ಳಬೇಕು ಎಂದು ಸೂಚನೆಯಿದ್ದಾಗ್ಯೂ ಇದನ್ನು ಪಾಲಿಸಿಲ್ಲ.
6. ರಾ.ಗ್ರಾ.ಉ.ಖಾ.ಯೋ.ಕೈಪಿಡಿಯ ಕಂಡಿಕೆ 22ರಲ್ಲಿ ತಿಳಿಸಿದಂತೆ, ಈ ಯೋಜನೆಯಡಿಯ,100%ರಷ್ಟು ಕಾಮಗಾರಿಗಳನ್ನು ತಾಲ್ಲೂಕು ಮಟ್ಟದ ಅಧಿಕಾರಿಗಳೂ ಕನಿಷ್ಟ ಶೇ.2%ರಷ್ಟು ಕಾಮಗಾರಿಗಳನ್ನು ರಾಜ್ಯ ಮಟ್ಟದ ಅಧಿಕಾರಿಗಳು ತಪಾಸಣೆ ಮಾಡಬೇಕು ಎಂದೂ ತಿಳಿಸಿದ್ದರೂ ಈ ಬಗ್ಗೆ ತಪಾಸಣೆ ಮಡಿದ ಬಗ್ಗೆ ಮಾಹಿತಿ ಲಭ್ಯವಿಲ್ಲ.
7. ರಾ.ಗ್ರಾ.ಉ.ಖಾ.ಯೋಜನೆ ಕೈಪಿಡಿ ಅನುಬಂಧ-3ರಲ್ಲಿ ತಿಳಿಸಿದಂತೆ, ಕಾರ್ಯನಿರ್ವಹಣಾ ಇಲಾಖೆ (ಲೈನ್ ಡಿಪಾರ್ಟ್‌ಮೆಂಟ್ಸ್) ಗಳಿಂದ ಕಾಮಗಾರಿಗಳನ್ನು ನಿರ್ವಹಿಸಿದ ಬಗ್ಗೆ ಕಾಮಗಾರಿಗಳ ಅಳತೆ ಪುನಃ ಪರಿಶೀಲನೆ ಮಾಡಿದ ಬಗ್ಗೆ ಅಳತೆ ಪುಸ್ತಕಗಳಲ್ಲಿ ಅವಶ್ಯ ದಾಖಲಾತಿ ಮಾಡಿ ದೃಢೀಕರಿಸಿರುವುದಿಲ್ಲ.
8. ರಾ.ಗ್ರಾ.ಉ.ಖಾ.ಯೋಜನೆ ಅಧಿನಿಯಮದ ಪ್ರಕರಣ 3(3)ರಂತೆ ಕೆಲಸ ಮಾಡುವ ಕೂಲಿ ಕಾರ್ಮಿಕರಿಗೆ ಕೆಲಸ ಮಾಡಿದ ನಂತರ, ದಿನಾಂಕದಿಂದ ಒಂದು ವಾರದೊಳಗೆ ಅಥವಾ 15 ದಿನಗಳಿಗೆ ಮೀರದಂತೆ ಕೂಲಿಯನ್ನು ಕಡ್ಡಾಯವಾಗಿ ಪಾವತಿ ಮಾಡಬೇಕಿದೆ. ಆದರೆ ಅನೇಕ ಪ್ರಕರಣಗಳಲ್ಲಿ ಈ ಸೂಚನೆ ಪಾಲಿಸದಂತೆ ಕಂಡುಬರುವುದಿಲ್ಲ, ಇದೇ ರೀತಿ ಪುನರಾವರ್ತನೆಯಾದಲ್ಲಿ, ಕೂಲಿ ಪಾವತಿ ಅಧಿನಿಯಮ 1936 (4/1936)ರನ್ವಯ, ಕೂಲಿಕಾರ್ಮಿಕರಿಗೆ ಪರಿಹಾರ ನೀಡಬೇಕಾದ ಹೊಣೆ ಕಾರ್ಯದರ್ಶಿ/ಅಧ್ಯಕ್ಷರಿಗೆ ಉಂಟಾಗುತ್ತದೆ ಎಂಬುದನ್ನು ಗಮನದಲ್ಲಿರಿಸಬೇಕು.
9. ರಾ.ಗ್ರಾ.ಉ.ಖಾ ಯೋಜನೆ ಅನುಷ್ಠಾನದಲ್ಲಿ ಯಂತ್ರಗಳನ್ನು ಬಳಸಬೇಕಾದ ಸಂದರ್ಭಗಳಲ್ಲಿ ಪತ್ರ ಸಂ.ಗ್ರಾಅಪಂ/5ಉಖಾಯೋ/2008(ಪಿ) ದಿ:-30-8-2009ರಲ್ಲಿ ಸರ್ಕಾರ ನೀಡಿದ ಸೂಚನೆಗಳನ್ನು ಅನುಸರಿಸಿಲ್ಲದೆ ಇರುವುದು ಗಮನಕ್ಕೆ ಬಂದಿದೆ.
10. ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ5ಉಖಾಯೋ08/ದಿ:-9-4-2009ರಲ್ಲಿ ತಿಳಿಸಿದಂತೆಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಿರ್ವಹಿಸುವ ಎಲ್ಲಾ ಕೂಲಿ ಕಾರ್ಮಿಕರು ಕಾಮಗಾರಿಗಳಲ್ಲಿ ಯರು 50 ದಿನಗಳನ್ನು ಪೂರೈಸಿರುತ್ತಾರೋ, ಅಂತಹವರಿಗೆ ರಾಷ್ಟೀಯ ಸ್ವಾಸ್ಥ್ಯ ಭೀಮಾ ಯೋಜನೆ ಆರೋಗ್ಯ ವಿಮೆಯನ್ನು ಹಾಗೂ ಅಮ್ ಆದ್ಮಿ ಭೀಮಾ ಯೋಜನೆಯನ್ನು ವಿಸ್ತರಿಸುವ ಬಗ್ಗೆ ನಮೂನೆ-3ನ್ನು ಪರಿಶೀಲನೆಗೆ ಒದಗಿಸಿಲ್ಲದ ಕಾರಣ ಇದನ್ನು ಪರಿಶೀಲಿಸಲಾಗಿಲ್ಲ.

11. ರಾ.ಗ್ರಾ.ಉ.ಖಾ.ಯೋಜನೆ, [illegible] ಕಂಡಿಕೆ 12 (111)ರಲ್ಲಿ ತಿಳಿಸಿದಂತೆ, ಕಿರು ಮತ್ತು ಸಣ್ಣ ನೀರಾವರಿ ಕಾಮಗಾರಿಗಳು ಸೇರಿದಂತೆ, ನೀರಾವರಿ ಕಾಲುವೆಗಳನ್ನು ತೆಗೆದುಕೊಂಡಿದ್ದು, ಕಾಲುವೆಗಳಲ್ಲಿ ಬೆಳೆದಿರುವ ಪೊದೆ ಹಾಗೂ ಮಣ್ಣನ್ನು ತೆಗೆಯುವ ಕಾಮಗಾರಿಗಳ ಪ್ರಕರಣಗಳಲ್ಲಿ ಶೇ.40ರಷ್ಟು ವಾಯ್ಡ್ಸ್ ಕಳೆಯಬೇಕಾಗಿದ್ದು, ಈ ನಿಯಮ ಅನುಸರಿಸಿಲ್ಲ.
12. ಎಂಬಾಂಕ್‌ಮೆಂಟ್ ಕಾಮಗಾರಿಗಳ ನಿರ್ವಹಣೆಯಲ್ಲಿ ಶೇ15%ರಷ್ಟು ವಾಯ್ಡ್ಸ್ ಕಳೆದಿಲ್ಲ.
13. ರಾ.ಗ್ರಾ.ಉ.ಖಾ.ಯೋಜನೆ ಅಧಿನಿಯಮ 2005ರ ನಿಯಮ ಕಂಡಿಕೆ 15ರಲ್ಲಿ ತಿಳಿಸಿದಂತೆ, ಅಂದಾಜುಗಳ ತಯಾರಿಕೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಗಳು ಕೆಲಸದ ಅಳತೆ ಇತ್ಯಾದಿಗಳು, ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ, ರಚಿಸಲಾಗಿರುವ ಕ.ಪಂ.ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರ) ನಿಯಮಗಳು 2006ರಂತೆ ನಿಯಮದಂತೆ ಪಾಲಿಸಲು ತಿಳಿಸಲಾಗಿದೆ.
14. ಅಕುಶಲ ಉದ್ಯೋಗ ಕೋರಿದ ಹದಿನೈದು ದಿನಗಳು ಅಥವ ಮುಂಗಡ ಅರ್ಜಿಯಲ್ಲಿ ಸೂಚಿಸಿದ ದಿನಾಂಕ ಇವುಗಳಲ್ಲಿ ಯಾವುದು ನಂತರವೋ ಅದರ ಒಳಗಾಗಿ ಉದ್ಯೋಗ ಒದಗಿಸದಿದ್ದಲ್ಲಿ ಆ ಅರ್ಜಿದಾರರಿಗೆ ಆ ಆರ್ಥಿಕ ವರ್ಷದಲ್ಲಿ ಮೊದಲ 30 ದಿನಗಳಿಗೆ ಕನಿಷ್ಠ ಕೂಲಿಯ 1/4 ರಷ್ಟು ನಂತರದ ಅವಧಿಗೆ ಕನಿಷ್ಠ ಕೂಲಿಯ ಶೇಕಡಾ 50% ರಷ್ಟು ನಿರುದ್ಯೋಗ ಭತ್ಯೆ ನೀಡಿರುವ ಬಗ್ಗೆ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.
15. 1 1/3 ರಷ್ಟು ಮಹಿಳೆಯರಿಗೆ ಆದ್ಯತೆ ನೀಡದಿರುವುದು ಕಂಡುಬಂದಿರುತ್ತದೆ.
16. ಉದ್ಯೋಗ ನೀಡಿದ ದಿನಗಳ ಸಂಖ್ಯೆ ಮತ್ತು ಪಾವತಿಸಿದ ಕೂಲಿಯ ವಿವರಗಳನ್ನು ಕುಟುಂಬ ಉದ್ಯೋಗ ಚೀಟಿಯಲ್ಲಿ ಮತ್ತು ಗ್ರಾಮ ಪಂಚಾಯಿತಿ ನಿರ್ವಹಿಸಿರುವ ಉದ್ಯೋಗಕಾಂಕ್ಷಿಗಳ ಮತ್ತು ಉದ್ಯೋಗ ವಹಿಯಲ್ಲಿ ದಾಖಲಿಸಿರುವ ಮಾಹಿತಿಯನ್ನು ಲೆಕ್ಕ ಪರಿಶೋಧನೆಗೆ ಒದಗಿಸಿರುವುದಿಲ್ಲ.
17. ಗ್ರಾ, ಪಂ ಗಳು ಗ್ರಾಮ ಸಭೆಯಲ್ಲಿ ಅನುಮೋದಿಸಲ್ಪಡುವ ಕಾರ್ಯಕ್ರಮದ ಕ್ರಿಯಾ ಯೋಜನೆಯನ್ನು ಲೆಕ್ಕ ಪರಿಶೋಧನೆಗೆ ಒದಗಿಸಿರುತ್ತಾರೆ.
18. ಕಾಮಗಾರಿ ಸ್ಥಳದಲ್ಲಿ ನಾಮ ಫಲಕಗಳನ್ನು ಹಾಕದಿರುವುದು ಕಾಮಗಾರಿಯ ವಿವಿಧ ಹಂತಗಳಲ್ಲಿ ತೆಗೆದಿರುವ ಪೋಟೋ ಗಳನ್ನು ಪರಿಶೀಲಿಸಿದಾಗ ಕಂಡು ಬಂದಿರುತ್ತದೆ. ಕಾಮಗಾರಿಗಳನ್ನು ಕರ್ನಾಟಕ ಪಾರದರ್ಶಕ ನಿಯಮದಡಿ ಕೈಗೊಳ್ಳಲಾಗಿದೆಯೇ, ಎಂಬುದರ ಬಗ್ಗೆಯೂ ಮಾಹಿತಿ ಒದಗಿಸಿರುವುದಿಲ್ಲ.
19. ಸಾಮಾಜಿಕ ಲೆಕ್ಕ ಪರಿಶೋಧನಾ ಧೃಢೀಕೃತ ವರದಿಯನ್ನು ಸಹ ಲೆಕ್ಕ ಪರಿಶೋಧನಾ ವರ್ತುಲಕ್ಕೆ ಲೆಕ್ಕ ಪರಿಶೋಧನಾ ತಂಡಕ್ಕೆ ಒದಗಿಸಿರುವುದಿಲ್ಲ.
20. ಸಿ.ಎ.ರವರು ನೀಡಿರುವ ವರದಿಯನ್ನು ಲೆಕ್ಕ ಪರಿಶೋಧನಾ ತಂಡಕ್ಕೆ ಹಾಜರುಪಡಿಸಿರುವುದಿಲ್ಲ.
21. ಎನ್.ಎಂ.ಆರ್ ಹಾಜರಾತಿ ಪಟ್ಟಿಯನ್ನು ಕೆಲವು ಕಡತಗಳಲ್ಲಿ ನಿರ್ವಹಿಸದೆ ಇರುವುದು ಕಂಡುಬಂದಿರುತ್ತದೆ. ಎಲ್ಲಾ ಕಡತಗಳಲ್ಲಿ ನಿರ್ವಹಿಸಲು ಸೂಚಿಸಿದೆ.
22. ಕಾಮಗಾರಿ ಪ್ರಾರಂಭದ ಆದೇಶ ಪತ್ರ ಹಾಗೂ ಕಾಮಗಾರಿ ಪೂರ್ಣಗೊಂಡ ಬಗ್ಗೆ ಅನುಷ್ಠಾನ ಇಲಾಖೆಯಿಂದ ಧೃಢೀಕರಣ ಪತ್ರವನ್ನು ಕಡತಗಳಲ್ಲಿ ನಿರ್ವಹಿಸಬೇಕಾಗಿ ಸೂಚಿಸಿದೆ.
23. ಕ.ಪಂ.ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರ) ನಿಯಮಗಳು 2006ರ ನಿಯಮ 94ರಲ್ಲಿ ತಿಳಿಸಿದಂತೆ, ಸಾಮಾನ್ಯ ಕಾರ್ಯವಿಧಾನ, ಕಾಮಗಾರಿಗಳ ಲೆಕ್ಕ ಪತ್ರಗಳ ನಿರ್ವಹಣೆ ದಾಸ್ತಾನು, ಉಗ್ರಾಣಗಳೂ, ಯಂತ್ರೋಪಕರಣಗಳು, ಇತ್ಯಾದಿ ಎಲ್ಲಾ ವಿಷಯಗಳಿಗೂ ಮತ್ತು ಕರ್ನಾಟಕ ಲೋಕೋಪಯೋಗಿ ಕಾರ್ಯಗಳ ಲೆಕ್ಕ ಪತ್ರ ಸಂಹಿತೆ, ಉಪಬಂಧಗಳು ಮತ್ತು ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯಲ್ಲಿನ ಸೂಚನೆಗಳನ್ನು ಕಾಮಗಾರಿಗಳ ನಿರ್ವಹಣೆಯಲ್ಲಿ ಪಾಲಿಸಿರುವುದಿಲ್ಲ.

ಈ ಎಲ್ಲಾ ನ್ಯೂನತೆಗಳ ಹಿನ್ನಲೆಯಲ್ಲಿ ಸದರಿ ಯೋಜನೆಯಡಿಯಲ್ಲಿನ ವೆಚ್ಚದ ಸತ್ಯತೆಯ ಬಗ್ಗೆ ಲೆಕ್ಕ ಪರಿಶೋಧನೆಯಲ್ಲಿ ಧೃಢೀಕರಿಸಲು ಸಾಧ್ಯವಾಗುತ್ತಿಲ್ಲ.

೩೭)ಸಿಮೆಂಟ್ ಖಾಲಿ ಚೀಲದ ದಾಸ್ತಾನು ವಹಿ ನಿರ್ವಹಿಸದಿರುವುದು :

೨೦೧೩-೧೪ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಳಡಿ ಕ್ರಿಯ ಯೋಜನೆ ಮೂಲಕ ನಿರ್ವಹಿಸಲಾದ ಕಾಮಗಾರಿಗಳಿಗೆ ಅಗತ್ಯವಾದ ಸಿಮೆಂಟನ್ನು ಖರೀದಿಸಿ ಬಳಸಿದ್ದು ದಾಸ್ತಾನು ಮತ್ತು ವಿತರಣೆಯ ವಹಿಯನ್ನು ನಿರ್ವಹಿಸಿರುವುದಿಲ್ಲ. ಸಿಮೆಂಟ್‌ನ್ನು ಕಾಮಗಾರಿಯ ಉಸ್ತುವಾರಿ ಇಂಜಿನಿಯರ್‌ರವರೇ ಖರೀದಿಸಿ ಬಳಸಿರುವುದರಿಂದ ದಾಸ್ತಾನು ವಹಿ ನಿರ್ವಹಿಸಲು ಸಾಧ್ಯವಾಗಲಿಲ್ಲವೆಂದು ಲೆಕ್ಕ ತನಿಖೆಗೆ ತಿಳಿಸಲಾಗಿದೆ. ಇದು ಲೋಕಪಯೋಗಿ ಇಲಾಖಾ ಸಂಹಿತೆ ನಿಯಮಗಳ ಪ್ರಕಾರ (ಸ್ಟೋರ್ ಮ್ಯನುಯಲ್) ಸಿಮೆಂಟನ್ನು ಮಾರಾಟಗಾರರಿಂದ ನಿಗದಿತ ದರದಲ್ಲಿ ಖರೀದಿಸಿ ದಾಸ್ತಾನಿಗೆ ತೆಗೆದುಕೊಡು ನಂತರ ಕಾಮಗಾರಿಗಳಿಗೆ ಅವಶ್ಯಕವಿರುವಂತೆ ವಿತರಿಸಬೇಕಾಗಿರುತ್ತದೆ. ಇನ್ನು ಮುಂದೆ ನಿಯಮಾನುಸಾರ ದಾಸ್ತಾನು ವಹಿ ನಿರ್ವಹಣೆ ಮೂಲಕ ವಹಿವಾಟು ನಡೆಸುವಂತೆ ಸೂಚಿಸಿದೆ.

ಸದರಿ ಸಾಲಿನಲ್ಲಿ ಕಾಮಗಾರಿಗಳಿಗೆ ಒಟ್ಟು 1635 /- ಚೀಲಗಳಷ್ಟು ಸಿಮೆಂಟನ್ನು ಖರೀದಿಸಲಾಗಿದ್ದು ಬಳಕೆಯ ನಂತರ ಇವುಗಳ ಖಾಲಿ ಚೀಲಗಳನ್ನು ದಾಸ್ತಾನಿಗೆ ತೆಗೆದುಕೊಂಡ ಬಗ್ಗೆಯಾಗಲಿ ಅಥವಾ ಹರಾಜು ಮಾಡಿದ ಬಗ್ಗೆಯಾಗಲೀ ವಿವರಗಳು ಲಭ್ಯವಿರುವುದಿಲ್ಲ. ಅದ್ದರಿಂದ ಕೂಡಲೆ ಕಿರಿಯ ಅಭಿಯಂತರರಿಂದ ವಾಪಸ್ಸು ಪಡೆದು ಹರಾಜು ಮೂಲಕ ವಿಲೇವಾರಿ ಮಾಡಿ ಸಂಬಂಧಿಸಿದ ಯೋಜನೆಗಳ ಖಾತೆಗಳಿಗೆ ಜಮಾ ಮಡುವುದು ಅಲ್ಲಿಯವರೆಗೂ ಚೀಲ 1ಕ್ಕೆ ರೂ. 1.00ರಂತೆ ಒಟ್ಟು.1635/- ಗಳನ್ನು ಸಂಬಂಧಿಸಿದ ಕಿರಿಯ ಅಭಿಯಂತರಿಂದ ವಸೂಲಾತಿಗೆ ಸೂಚಿಸಿದೆ. ಯೋಜನೆಗಳ ಪ್ರಕಾರ ಖರೀದಿ ಮತ್ತು ಬಳಕೆಯ ವಿವರ ಈ ಕೆಳಕಂಡಂತೆ ಇರುವುದು.

ಕ್ರ.ಸಂ	ಯೋಜನೆಗಳು	ಸೀಮೆಂಟ್ ಖರೀದಿ	ಕಾಮಗಾರಿ ಬಿಲ್ಲುಗಳಲ್ಲಿ ಕಟ್ಟಾವಣೆ	ಉಳಿಕೆ ಬಾಬ್ತು
1	ಪಂಚಾಯಿತಿ ನಿಧಿ			
2	13ನೇ ಹಣಕಾಸು ಯೋಜನೆ			
3	ಗ್ರಾಮ ಸ್ವರಾಜ್ ಯೋಜನೆ			
4	ಉದ್ಯೋಗ ಖಾತ್ರಿ ಯೋಜನೆ			4735
	ಒಟ್ಟು			4735

33)13ನೇ ಹಣಕಾಸು ಆಯೋಗದ ನಿಧಿ ಹಾಗೂ ನಿರ್ವಹಣೆ:

13ನೇ ಹಣಕಾಸು ಯೋಜನೆಯ ನಿಧಿಯನ್ನು ವ್ಯವಹರಿಸುತ್ತಿದ್ದು ಅನುದಾನದ ವಹಿ ನಿರ್ವಹಿಸದಿರುವುದರಿಂದ ಬ್ಯಾಂಕ್ ಪಾಸ್ ಪುಸ್ತಕ/ ಪಾಸ್‌ಶೀಟಿನಲ್ಲಿ ನಮೂದಿಸುವ ದಾಖಲೆಯಂತೆ 2013-2014 ನೇ ಸಾಲಿನ ಜಮಾ ವಿವರ ಇಂತಿದೆ.

ಕ್ರ. ಸಂ.	ಜಮಾ ದಿನಾಂಕ	ಅನುದಾನ ಮೊಬಲಗು	ಬಡ್ಡಿ ಮೊಬಲಗು	ಒಟ್ಟು ಮೊಬಲಗು
1	05-07-13	269325		
2	22-07-13	32046		
3	24-07-13	463167		
4	28-08-13	50000		
5	30-10-13	15562		
6	04-01-14	319879		1617565
7	16-01-14	300000		
8	28-01-14	5000		
9	29-03-14	1195		
10	20-03-14	9400		
25-03-14		139454		
ಒಟ್ಟು		1605028	12537	

ಆರ್ಥಿಕ ಪರಿಸ್ಥಿತಿಯ ಬಗ್ಗೆ:-

2013-14ನೇ ಸಾಲಿನಲ್ಲಿ ಹಣಕಾಸು ಅನುದಾನವಾಗಿ 13ನೇ ಹಣಕಾಸುವಿನಡಿ ಹಾಜರುಪಡಿಸಿದ ದಾಖಲೆ ಪತ್ರಗಳನ್ನಾಧರಿಸಿದ ಆರ್ಥಿಕ ಪರಿಸ್ಥಿತಿಯ ವಿವರ ಇಂತಿದೆ.

1-4-2013ರ ಪ್ರಾರಂಭಿಕ ಶಿಲ್ಕು	656139
2013-14ನೇ ಸಾಲಿನಲ್ಲಿ ಜಮಾ	1617565
ಒಟ್ಟು	2273704
2013-14ನೇ ಸಾಲಿನಲ್ಲಿ ಖರ್ಚು	2099535
31-3-2014ರ ಅಂತ್ಯಕ್ಕೆ ಶಿಲ್ಕು	174169
ಬ್ಯಾಂಕಿನಂತೆ ಅಂತಿಮ ಶಿಲ್ಕು	174169
ವ್ಯತ್ಯಾಸ	---

ಅಂತಿಮ ಶಿಲ್ಕುನ್ನು ದೃಢೀಕರಿಸಲು ಅನುದಾನದ ವಹಿ ನಿರ್ವಹಣೆಯ ಮೂಲಕ ಸಮನ್ವಯಗೊಳಿಸಲು ಸೂಚಿಸಲಾಗಿದೆ.

೩೪)ಆದಾಯ ತೆರಿಗೆ ಮಾರಾಟ ತೆರಿಗೆ ರಾಜಧನಗಳ ಕಟಾವಣೆ-ಜಮೆ ಕುರಿತು:-

೨೦೧೩-೧೪ನೇ ಸಾಲಿನಲ್ಲಿ ಪಾವತಿಸಿರುವ ವಿವಧ ಖರೀದಿ / ಸೇವೆಗಾಗಿ ಕರ್ನಾಟಕ ಪಂಚಾಯಿತ್ ರಾಜ್ (ಆಯವ್ಯಯ ಮತ್ತು ಲೆಕ್ಕ ಪಂಚಾಯಿತಿಗಳು) ನಿಯಮಗಳು ೨೦೦೬ರ ನಿಯಮ ೮೮(೧) ರಂತೆ ಬಿಲ್ಲುಗಳಿಂದ ಹಾಗೂ ವಿವಿಧ ನಿಧಿಗಳ ಕಾಮಗಾರಿ ಬಿಲ್ಲುಗಳಿಂದ ಕಟಾಯಿಸಿರುವ ಕಡಿಮೆ ಕಟಾಯಿಸಿರುವ ಹಾಗೂ ಕಟಾಯಿಸಿ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡಿರುವ ಹಾಗೂ ಬಾಕಿ ಇರುವ ಆದಾಯ ತೆರಿಗೆ, ಮಾರಾಟ ತೆರಿಗೆ ಹಾಗೂ ರಾಜಧನ ವಿವರಗಳು ಇಂತಿವೆ.

ವಿವಿಧ ಯೋಜನೆಗಳಡಿ ಬಾಕಿ ಇರುವ ಸರ್ಕಾರಿ ತೆರಿಗೆಗಳ ವಿವರ	1.04.2013ಕ್ಕೆ ಪ್ರಾರಂಭಿಕ ಶುಲ್ಕ	2013-14 ಕ್ಕೆ ಕಟಾಯಿಸಿರುವುದು	ಒಟ್ಟು (ಅಂಕಣ 2+3)	ಜಮೆಯಾದ ಮೊತ್ತ	ಬಾಕಿ ಮೊತ್ತ (ಅಂಕಣ 4-5)	ಷರಾ
1	2	3	4	5	6	7
ವರ್ಗ-1 / 12ನೇ/13ನೇ ಹಣಕಾಸು						
1) ಆದಾಯ ತೆರಿಗೆ	12663	-	12663	-	12663	
2) ಮಾರಾಟ ತೆರಿಗೆ	11689	-	11689	-	11689	
3) ರಾಜಧನ	1609	-	1609	-	1609	
ಎಸ್.ಜಿ.ಆರ್.ವೈ.						
1) ಆದಾಯ ತೆರಿಗೆ	1194	-	1194	-	1194	
2) ಮಾರಾಟ ತೆರಿಗೆ	2669	-	2669	-	2669	
ನರೇಗಾ						
1) ಆದಾಯ ತೆರಿಗೆ	14513	-	14513	-	14513	
2) ಮಾರಾಟ ತೆರಿಗೆ	20915	-	20915	-	20915	
3) ರಾಜಧನ	5794	-	5794	-	5794	
ಒಟ್ಟು	71046	-	71046	-	71046	

ಈ ಬಾಕಿ ಇರುವ ರೂ71046/- ತೆರಿಗೆ ಬಾಕಿಯನ್ನು ಸರ್ಕಾರಕ್ಕೆ ಪಾವತಿಸಿ ಲೆಕ್ಕ ತನಿಖೆಗೆ ಮಾಹಿತಿ ನೀಡುವುದು.

೩೫) ವಹಿಗಳ ನಿರ್ವಹಣ ಬಗ್ಗೆ

1. ಆಸ್ತಿ ವಹಿ ಬಗ್ಗೆ :

ಸರ್ಕಾರಿ ಸುತ್ತೋಲೆ ಸಂಖ್ಯೆ ಆರ್.ಡಿ.ಪಿ 125 ಜಿ.ಆರ್.ವೈ.೯೩ ಲೆಕ್ಕ – ದಿ 13-07-೧೯೯೩ ರಂತೆ (ಕೈಪಿಡಿ ನಿಯಮ ೭೪) ಕಾಮಗಾರಿಗಳಿಂದ ಸೃಷ್ಟಿಯಾದ ಸ್ಥಿರ ಆಸ್ತಿಗಳಿಗೆ ಸಂಬಂಧಿಸಿದಂತೆ ನಿಗಧಿತ ನಮೂನೆಯಲ್ಲಿ ವಿವರ ನಿರ್ವಹಿಸಬೇಕಾಗಿರುತ್ತದೆ. ಸದರಿಯನ್ವಯ ಗ್ರಾಮ ಪಂಚಾಯಿತಿ ಆಯವ್ಯಯ ಮತ್ತು ಲೆಕ್ಕಪತ್ರಗಳ ನಿಯಮಗಳು ೨೦೦೬ರ ನಿಯಮ ೬೯ರ ಪ್ರಕಾರ ಈ ಕೆಳಕಂಡ ಆಸ್ತಿಗಳ ಬಗ್ಗೆ ವಹಿ ನಿರ್ವಹಿಸುವಂತೆ ಹಾಗೂ ಪ್ರತಿ ವರ್ಷವು ಲೆಕ್ಕತನಿಖಾ ತಂಡದ ಪರಿಶೀಲನೆಗೆ ಅದನ್ನು ಹಾಜರುಪಡಿಸುವಂತೆ ಸೂಚಿಸಿದೆ.

1. ನಮೂನೆ-೨೯ರಲ್ಲಿ ಪೀಠೋಪಕರಣ ಯಂತ್ರೋಪಕರಣ ಹಾಗೂ ಇತರೆ ಸಾಮಗ್ರಿಗಳ ದಾಸ್ತಾನು ವಹಿ (ಚರಾಸ್ತಿಗಳು)

1. ನಮೂನೆ-೩೦ರಲ್ಲಿ ಭೂ ದಾಖಲೆಗಳ ವಹಿ (ಸ್ಥಿರಾಸ್ತಿಗಳು)
2. ನಮೂನೆ-೩೧ ರಲ್ಲಿ ಸ್ಥಿರಾಸ್ತಿಗಳಾದ ಕಟ್ಟಡಗಳು, ರಸ್ತೆಗಳು,
3. ಸೇತುವೆಗಳು,ಅಡಿಗಾಲುವೆಗಳು ಇತ್ಯಾದಿಯಾಗಿ ವಹಿ.

ಈ ಮೇಲಿನ 4 ವಿವಿಧ ಪ್ರಮುಖ ವಹಿಗಳನ್ನು ತಪ್ಪದೆ ತೆರೆದು ಪಾಲಿಸುವುದು.

೨. ಕೂಲಿಕಾರರ ಪಟ್ಟಿ:

2006ರ ಲೆಕ್ಕಪತ್ರಗಳ ನಿಯಮ 87 ರಂತೆ ನಮೂನೆ 38ರಲ್ಲಿ ಕಾಮಗಾರಿವಾರು ಕೂಲಿಕಾರರ ಪಟ್ಟಿಯನ್ನು ನಿರ್ವಹಿಸಿರುತ್ತಾರೆ. ಅದರೆ ಸದರಿ ಪಟ್ಟಿಯನ್ನು ಸಕ್ಷಮ ಪ್ರಾಧಿಕಾರದಿಂದ ಪ್ರಮಾಣೀಕೃತಗೊಂಡಿರುವುದಿಲ್ಲ. ಹಾಗೂ ಕಾಮಗಾರಿ ಇಂಜಿನಿಯರ್ ದಿನವಹಿ ಹಾಜರಾತಿಗೆ ಧೃಢೀಕರಿಸುವುದಿಲ್ಲ ಮತ್ತು ಗ್ರಾ.ಪಂ.ಅಧ್ಯಕ್ಷರಿಂದ ಚೆಕ್ ಸಹಿ ಪಡೆದಿರುವುದಿಲ್ಲ ಇನ್ನು ಮುಂದಾದರು ಕ್ರಮವಹಿಸಲು ಲೆಕ್ಕ ತನಿಖೆಯು ಆಗ್ರಹಪಡಿಸುತ್ತದೆ.

೩. ಕರ ನಿರ್ಧರಣಾ ವಹಿ:

ಸದರಿ ವಹಿಯನ್ನು ನಿರ್ವಹಿಸಿರುವುದಿಲ್ಲ 2006ರ ಗ್ರಾಮ ಪಂಚಾಯ್ತಿ (ಲೆಕ್ಕ ಪತ್ರ) ನಿಯಮ 28 ಮತ್ತು 29ರ ಸೂಚನೆಗಳಂತೆ ನಮೂನೆ –9 ಮತ್ತು 10ರಲ್ಲಿ ನಿರ್ವಹಿಸಬೇಕಿರುತ್ತದೆ. ಗ್ರಾ.ಪಂ.ಗಳಲ್ಲಿ ಕಂದಾಯವನ್ನು ವಾರ್ಷಿಕ ಬಾಡಿಗೆ ಮೌಲ್ಯದ ಆಧಾರದ ಮೇಲೆ ಶೇ 10 ರಷ್ಟು ನಿಗಧಿಪಡಿಸಬೇಕು. ಅದ್ದರಿಂದ ಕರನಿರ್ಧರಣಾ ವಹಿಯಲ್ಲಿ ಪ್ರತಿ ಸ್ವತ್ತಿನ ಅಳತೆ ಹಾಗೂ ವಾರ್ಷಿಕ ಬಾಡಿಗೆ ಮೌಲ್ಯವನ್ನು ನಮೂದಿಸಿ ಲೆಕ್ಕ ತನಿಖೆಗೆ ಹಾಜರುಪಡಿಸಲು ಸೂಚಿಸಿದೆ.

4. ಕಾಮಗಾರಿಗಳ ಅಂದಾಜು ವಹಿ:

ಕರ್ನಾಟಕ ಗ್ರಾಮ ಪಂಚಾಯ್ತಿ (ಲೆಕ್ಕ ಪತ್ರ) ನಿಯಮ 79 ನಮೂನೆ 35ರಲ್ಲಿ ನಿರ್ವಹಿಸಬೇಕಿರುತ್ತದೆ. ಈ ಬಗ್ಗೆ ನಿರ್ವಹಿಸಿ ಮುಂದಿನ ಸಾಲಿನ ತನಿಖಾ ತಂಡಕ್ಕೆ ಹಾಜರು ಪಡಿಸಲು ಸೂಚಿಸಿದೆ.ಹಾಗು ನಿಯಮ 85 ರಂತೆ ಪಾಲಿಸಲಾಗುವ ಅಳತೆಪುಸ್ತಕವನ್ನು (ನಮೂನೆ–37) ನಿರ್ವಹಿಸುವಲ್ಲಿ ಅಲ್ಲಿನ ಹನ್ನೊಂದು ವಿಧವಾದ ಸೂಚನೆಗಳನ್ನು ತಪ್ಪದೆ ಪಾಲಿಸತಕ್ಕದ್ದು.

5. <u>ಜಾಹಿರಾತು ಬೇಡಿಕೆ ಮತ್ತು ವಸೂಲಿ ವಹಿ ನಿರ್ವಹಣೆ ಬಗ್ಗೆ:-</u>

ಕರ್ನಾಟಕ ಪಂಚಾಯಿತ್ ರಾಜ್ (ಗ್ರಾಮ ಪಂಚಾಯತ್ ಲೆಕ್ಕ ಪತ್ರಗಳು ಮತ್ತು ಬಜೆಟ್) ನಿಯಮಗಳು 2006ರ ಅಧಿನಿಯಮ 199ನೇ ಪ್ರಕರಣಕ್ಕೆ ಅನುಗುಣವಾಗಿ ಜಾಹಿರಾತಿನ ಮೇಲೆ ತೆರಿಗೆ ವಿಧಿಸಲು ಗ್ರಾಮ ಪಂಚಾಯಿತಿಗೆ ಅಧಿಕಾರವಿರುತ್ತದೆ. ಆದರೆ ಗ್ರಾಮ ಪಂಚಾಯಿತಿಯು ಜಾಹಿರಾತು ತೆರಿಗೆ ವಸೂಲಿ ಮಾಡದೆ ಗ್ರಾಮ ಪಂಚಾಯಿತಿಗೆ ಬರುವ ಆದಾಯ ನಷ್ಟವಾಗಿರುತ್ತದೆ. ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯವರು ಇನ್ನು ಮುಂದೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯಾವ ಜಾಹಿರಾತು ಪ್ರಕಟಗೊಳ್ಳದಂತೆ ಖಚಿತಪಡಿಸಲು ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯವರು ಜಾಹಿರಾತು ಫಲಕಗಳಿಗೆ ವಿಶಿಷ್ಟ ಸಂಖ್ಯೆಯನ್ನು ನೀಡತಕ್ಕದ್ದು, ಮತ್ತು ಹಾಗೆ ತೆರಿಗೆ ವಿಧಿಸಲಾದ ಪ್ರತಿ ಜಾಹಿರಾತಿಗೂ ಮುಂಗಡವಾಗಿ ಹಣ ವಸೂಲು ಮಾಡತಕ್ಕದ್ದು ಹಾಗೂ ಜಾಹಿರಾತು ತೆರಿಗೆ ವಸೂಲಿಯ ಮೇಲೆ ನಿಗಾವಹಿಸಲು ನಮೂನೆ–13ರಲ್ಲಿ ಗ್ರಾಮ ಪಂಚಾಯತ್ ನಿರ್ವಹಣೆಯಲ್ಲಿರುವ ಜಾಹಿರಾತಿನ ಬೇಡಿಕೆ ಮತ್ತು ವಸೂಲಿ ವಹಿಯನ್ನು ಇಡತಕ್ಕದ್ದು ಮತ್ತು ಸಕಾಲಿಕ ತೆರಿಗೆಗಳ ವಸೂಲಾತಿಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯವರು ವಹಿಯನ್ನು ಕಾಲಕಾಲಕ್ಕ ಪರಿಶೀಲಿಸತಕ್ಕದ್ದು ಮತ್ತು ದೃಢೀಕರಿಸತಕ್ಕದ್ದು.

6. ಹೊಸಕಟ್ಟಡಗಳಿಗೆ ತೆರಿಗೆ ನಿರ್ಧರಿಸದ ಬಗ್ಗೆ:-

ಗ್ರಾಮ ಪಂಚಾಯಿತಿಯು ಹೊಸ ಕಟ್ಟಡಗಳಿಗೆ ಕರ್ನಾಟಕ ಪಂಚಾಯಿತ್ ರಾಜ್ (ಗ್ರಾಮ ಪಂಚಾಯತ್ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 29ರ ಪ್ರಕಾರ ಹೊಸಕಟ್ಟಡಗಳಿಗೆ ಕರ ನಿರ್ಧರಣವನ್ನು ಮ್ಯುಟೇಷನ್ ರಿಜಿಸ್ಟರ್‌ನಲ್ಲಿ ಬೇಡಿಕೆ ಮತ್ತು ವಸೂಲಿಯ ರಿಜಿಸ್ಟರ್‌ನ್ನು ನಿರ್ವಹಿಸಿ ಲೆಕ್ಕ ಪರಿಶೋಧನೆ ಹಾಜರುಪಡಿಸಿರುವುದಿಲ್ಲ ಈ ಬಗ್ಗೆ ಸೂಕ್ತ ವಿವರಣೆ ನೀಡಲು ಸೂಚಿಸಿದೆ.

7. ವಿದ್ಯುತ್ ಶುಲ್ಕ ಪಾವತಿ ಬಗ್ಗೆ ನಿಗಾ ವಹಿ ನಿರ್ವಹಿಸದಿರುವುದು:-

ಪ್ರಸ್ತುತ ಸಾಲಿನಲ್ಲಿ ಗ್ರಾಮ ಪಂಚಾಯಿತಿಗೆ ವಿದ್ಯುತ್ ಶುಲ್ಕದ ಬಾಬ್ತುಗಳನ್ನು ಕರ್ನಾಟಕ ವಿದ್ಯುತ್ ಮಂಡಳಿಗೆ ಸರ್ಕಾರದಿಂದ ನೇರವಾಗಿ ಶಾಸನಬದ್ಧ ಅನುದಾನದಲ್ಲಿ ಕಟಾಯಿಸಿ ಹೊಂದಾಣಿಕೆಯಗುತ್ತಿರುವುದು ಕಂಡುಬಂದಿದೆ. ಆದರೆ ಈ ಬಗ್ಗೆ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯವರು ವಿದ್ಯುತ್ ಶುಲ್ಕ ಪಾವತಿಯ ಬಗ್ಗೆ ಒಂದು ನಿಗಾವಹಿಯನ್ನು ನಿರ್ವಹಿಸಿ ಮೀಟರ್ ರೀಡಿಂಗ್ ಅನ್ವಯ ಬೇಡಿಕೆ ಮತ್ತು ಪಾವತಿಯ ಬಗ್ಗೆ ಎಚ್ಚರವಹಿಸಲು ಸೂಚಿಸಿದೆ.

8. ಖರೀದಿಗಳ ದಾಖಲೆ ಮತ್ತು ವಹಿ:

ಕರ್ನಾಟಕ ಗ್ರಾಮ ಪಂಚಾಯ್ತಿ (ಲೆಕ್ಕ ಪತ್ರ) ನಿಯಮ 63 ರಂತೆ ನಮೂನೆ 28ರಲ್ಲಿ ಪಂಚಾಯಿತಿ ವತಿಯಿಂದ ಖರೀದಿ ಮಾಡಿದ ವಸ್ತುಗಳ ಹಾಗು ಬೀದಿದೀಪ ದಾಖಲೆ ಮತ್ತು ವಹಿ ನಿರ್ವಹಿಸಿ ಹಾಜರುಪಡಿಸಿರುವುದಿಲ್ಲ. ಕೂಡಲೆ ಕ್ರಮಕೈಗೊಳ್ಳಲು ಸೂಚಿಸಿದೆ. ಇದು ಮುಖ್ಯ ದಾಖಲೆಯಾಗಿದ್ದು, ಇದರ ಗೈರು ಹಾಜರಿಯಲ್ಲಿ ಖರೀದಿಗಳು, ಅದರ ಬಳಕೆ ಹಾಗೂ ಉಳಿಕೆಗಳ ಪರಿಶೀಲನೆ ಹಾಗು ಖಚಿತ ಅಭಿಪ್ರಾಯ ನೀಡಿಕೆಗೆ ಅಡ್ಡಿಯುಂಟಾಗಿರುತ್ತದೆ

9. ಸಾಮಾಗ್ರಿಗಳ ದಾಸ್ತಾನು ಸತ್ಯಾಪನೆ ಮಾಡದಿರುವುದು:

2006ರ ಕರ್ನಾಟಕ ಗ್ರಾಮ ಪಂಚಾಯ್ತಿಗಳ (ಆಯವ್ಯಯ ಮತ್ತು ಲೆಕ್ಕಪತ್ರ) ನಿಯಮಗಳಲ್ಲಿನ ನಿಯಮ 66 ಮತ್ತು 70 ರಂತೆ ವರ್ಷಾಂತ್ಯಕ್ಕೆ ಅಧ್ಯಕ್ಷರು ಸಾಮಗ್ರಿಗಳ ದಾಸ್ತಾನನ್ನು ಭೌತಿಕ ಶಿಲ್ಕುನೊಂದಿಗೆ ತಾಳೆ ಮಾಡಿದ ಬಗ್ಗೆ ವಹಿಯಲ್ಲಿ ದಾಖಲಿಸಿ ದೃಢೀಕರಿಸಬೇಕಾಗಿರುತ್ತದೆ. ಅದರೆ ಸದರಿ ನಿಯಮದಂತೆ ಕ್ರಮ ಕೈಗೊಂಡಿರುವುದಿಲ್ಲ ಕೂಡಲೆ ಕ್ರಮಕೈಗೊಂಡು ದಾಸ್ತಾನು ಸತ್ಯಾಪನೆ ಮಾಡಲು

೩೬)ವಿದ್ಯುತ್, ನಲ್ಲಿ ಸಾಮಗ್ರಿಗಳ ಖರೀದಿ ಮತ್ತು ಮೋಟಾರ್ ದುರಸ್ಥಿಯ ಬಗೆ ನ್ಯೂನತೆಗಳು:

ಪ್ರಸಕ್ತ ಸಾಲಿನಲ್ಲಿ ಗ್ರಾಮ ಪಂಚಾಯಿತಿಯು ತನ್ನ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಾದಿಲ್ವಾರು ಬಿಲ್ಲುಗಳ ಮೂಲಕ ವೆಚ್ಚವನ್ನು ಭರಿಸಿರುತ್ತಾರೆ.

1) ಸಾಮಗ್ರಿಗಳ ಖರೀದಿಗೆ ಮುನ್ನ ಬೇಡಿಕೆ ಪಟ್ಟಿ ತಯಾರಿಸಿ ಗ್ರಾಮ ಪಂಚಾಯಿತಿಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆದ ವಿವರವಿಲ್ಲ.

2) ಹೊಸ ಸಾಮಗ್ರಿಗಳನ್ನು ಅಳವಡಿಸಿದಾಗ ದೊರೆತ ಹಳೆಯ ಸಾಮಗ್ರಿಗಳ ದಾಸ್ತಾನು ವಿವರ ನಿರ್ವಹಿಸಿ ಅನುಪಯುಕ್ತ ಸಾಮಗ್ರಿಗಳನ್ನು ನಿಯಮಾನುಸಾರ ಹರಾಜು ಮಾಡಿ ಬಂದ ಹಣವನ್ನು ಗ್ರಾಮ ಪಂಚಾಯಿತಿ ನಿಧಿಗೆ ಜಮಾ ಮಾಡಿದ ವಿವರ ನೀಡಿರುವುದಿಲ್ಲ.

3) ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಎಷ್ಟು ಬೀದಿ ದೀಪದ ವಿದ್ಯುತ್ ಕಂಬಗಳಿವೆ ಅದರಲ್ಲಿ ಅಳವಡಿಸಿರುವ ಬೀದಿ ದೀಪಗಳ ಉರಿಯುವ ಶಕ್ತಿ ಎಷ್ಟು ಮತ್ತು ಎಷ್ಟು ನೀರು ಸರಬರಾಜು ಸ್ಥಾವರಗಳಿವೆ ಎಷ್ಟು ಸಾರ್ವಜನಿಕ ನಲ್ಲಿಗಳಿವೆ ಎಂಬ ವಿವರ ನೀಡಿರುವುದಿಲ್ಲ.

4) ಸಾಮಗ್ರಿಗಳ ದಾಸ್ತಾನು ಮತ್ತು ವಿತರಣೆ ವಹಿಯನ್ನು ಒಂದು ಸಾಮಾನ್ಯ ವಹಿಯಲ್ಲಿ ನಿರ್ವಹಿಸಿರುತ್ತಾರೆ. ಈ ವಹಿಯ ಪ್ರಕಾರ ಖರೀದಿಸಿದ ಸಾಮಗ್ರಿಗಳಲ್ಲಿ ವರ್ಷಾಂತ್ಯಕ್ಕೆ ಬಾಕಿ ಉಳಿದ ಸಾಮಗ್ರಿಗಳನ್ನು ಭೌತಿಕವಾಗಿ ಎಣಿಕೆ ಮಾಡಿ ಅಧ್ಯಕ್ಷರಿಂದ ದಾಸ್ತಾನು ವಹಿಯಲ್ಲಿ ದೃಢೀಕರಿಸಿರುವುದಿಲ್ಲ.

5) ಮೋಟಾರ್ ಮತ್ತು ಕೈಪಂಪು ದುರಸ್ಥಿಗೆ ಮುನ್ನ ಕೆಟ್ಟು ಹೋಗಿರುವ ಬಗ್ಗೆ ಸಂಬಂಧಿಸಿದ ಮೆಕ್ಯಾನಿಕ್ ಅಥವಾ ವಾಟರ್‌ಮೆನ್‌ನಿಂದಾಗಲಿ ಹಾಗೂ ಸಾರ್ವಜನಿಕರಿಂದಾಗಲಿ ಬಂದ ದೂರು ಇತರೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿಲ್ಲ.

೬) ಪೈಪ್‌ಲೈನ್ ಒಡೆದು ಹೋದಾಗ ಆಯಾಯ ಗ್ರಾಮಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ವಾಟರ್‌ಮೆನ್‌ಗಳಿಂದ ಅಥವಾ ಸಾರ್ವಜನಿಕರಿಂದ ಬಂದ ದೂರುಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ.

೭) ಕರ್ನಾಟಕ ಸಾದಿಲ್ವಾರು ವೆಚ್ಚ ಕೈಪಿಡಿ 1958ರ ನಿಯಮ 55(49)ರಂತೆ ರೂ.5000/- ಮೀರಿದ ಆದರೆ ರೂ.1.00 ಲಕ್ಷದವರೆಗಿನ ಖರೀದಿಗಳನ್ನು ದರಪಟ್ಟಿಯನ್ನು ಕರೆವುದರ ಮೂಲಕವು ಹಾಗು ರೂ.1.00 ಲಕ್ಷ ಮೀರಿದ ಖರೀದಿ/ಕಾಂಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣ ಕಾಯ್ದೆ 1999 ಯಂತೆ ಜರುಗಿಸಿ ನಿರ್ವಹಿಸಬೇಕಿತ್ತು. ಆ ಕ್ರಮ ಆಗಿರುವ ಬಗ್ಗೆ ದಾಖಲೆಗಳನ್ನು ಪಾಲಿಸಿರುವ ಬಗ್ಗೆ ಮಾಹಿತಿ ಒದಗಿಸಿಲ್ಲ.

ಈ ಮೇಲಿನ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವಂತೆ ಹಾಗೂ ನಿಯಮಗಳನ್ನು ಅನುಸರಿಸಿ ನಿರ್ವಹಿಸುವಂತೆ ಹಿಂದಿನ ಸಾಲುಗಳ ಲೆಕ್ಕ ತನಿಖಾ ವರದಿಗಳಲ್ಲಿ ಸೂಚಿಸುತ್ತ ಬಂದಿದ್ದರೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಈ ಬಗ್ಗೆ ಸೂಕ್ತ ವಿವರಣೆ ನೀಡಲು ವರದಿಯು ಸೂಚಿಸಿದೆ.

37) <u>ಪಾವತಿ ಬಿಲ್ಲುಗಳ ಮೂಲದಲ್ಲಿ ತೆರಿಗೆ ಕಡಿತಗೊಳಿಸುವ ಬಗ್ಗೆ:-</u>

ಗ್ರಾಮ ಪಂಚಾಯಿತಿ ನಲ್ಲಿ ಸಾಮಗ್ರಿ ಮತ್ತು ವಿದ್ಯುತ್ ಸಾಮಗ್ರಿ ಮೋಟಾರ್ ದುರಸ್ಥಿ ಸಾಮಗ್ರಿ ಹಾಗೂ ಕೈಪಂಪು ದುರಸ್ಥಿ ಸಾಮಗ್ರಿ ಮತ್ತು ಇತ್ಯಾದಿ ಖರೀದಿಗಳ ಬಿಲ್ಲು ಪಾವತಿಸುವ ಸಂದರ್ಭದಲ್ಲಿ ಕರ್ನಾಟಕ ಮಾರಾಟ ತೆರಿಗೆ ಕಾಯಿದೆ ಹಾಗೂ ಭಾರತೀಯ ವರಮಾನ ತೆರಿಗೆ ಕಾಯಿದೆಗಳ ಪ್ರಕಾರ ಮೂಲದಲ್ಲಿ ಮಾರಾಟ ತೆರಿಗೆ ಹಾಗೂ ವರಮಾನ ತೆರಿಗೆ ಹಾಗೂ ವರಮಾನ ತೆರಿಗೆಯನ್ನು ಕಡಿತಗೊಳಿಸಿರುವುದಿಲ್ಲ ಆದ ಕಾರಣ ಈ ಬಗ್ಗೆ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯವರು ಕ್ರಮ ಕೈಗೊಂಡು 2013-14ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಯಿಂದ ಹಣ ಪಡೆದಿರುವ ಸಂಸ್ಥೆಗಳಿಂದ ತೆರಿಗೆ ಕಡಿತ ಮಾಡುವ ಬಗ್ಗೆ ಕ್ರಮ ವಹಿಸಲು ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯವರಿಗೆ ತಿಳಿಸಲಾಗಿದೆ.

38) <u>ಪಂಚತಂತ್ರ ಜಮಾ ಖರ್ಚಿನ ಪಟ್ಟಿಯನ್ನು ಹಾಜರುಪಡಿಸದಿರುವ ಬಗ್ಗೆ:-</u>

2013-14ನೇ ಸಾಲಿನಲ್ಲಿ ಪಂಚತಂತ್ರವನ್ನು ಕಂಪ್ಯೂಟರ್‌ನಲ್ಲಿ ಆನ್‌ಲೈನ್ ಮೂಲಕ ಗಣಕೀಕರಿಸುವ ಛಾಯ ಪ್ರತಿಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದರು . ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮೌಖಿಕವಾಗಿ 2013-14ನೇ ಸಾಲಿನ ಪಂಚತಂತ್ರವನ್ನು ಈಗಾಗಲೇ ಅಳವಡಿಸುತ್ತಿರುವುದರಿಂದ 2013-14ನೇ ಸಾಲಿನ ಪಂಚತಂತ್ರದ ಜಮಾ ಖರ್ಚಿನ ಪಟ್ಟಿಯು ಆನ್‌ಲೈನ್‌ನಲ್ಲಿ ಬರುತ್ತಿಲ್ಲವಾದ್ದರಿಂದ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ 2013-14ನೇ ಸಾಲಿನ ಪಂಚತಂತ್ರವನ್ನು ಪರಿಶೀಲಿಸಲು ತನಿಖಾ ಸಮಯದಲ್ಲಿ ಸಾಧ್ಯವಾಗಿಲ್ಲ.

೩೯)ಲೆಕ್ಕ ತನಿಖಾ ಶುಲ್ಕ ಪಾವತಿಸುವ ಬಗ್ಗೆ:

ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಸೂಚನೆ ಸಂಖ್ಯೆ : ಗ್ರಾ.ಅಪ.:73 ಜಿಪಸ:2004, ದಿನಾಂಕ : 09-11-2005ರಲ್ಲಿ 1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 311ನೇ ಪ್ರಕರಣದ ಮೂಲಕ 1995 ರ ಕರ್ನಾಟಕ ಗ್ರಾಮ ಪಂಚಾಯಿತಿಗಳ (ಲೆಕ್ಕ ಪತ್ರಗಳು ಆಯವ್ಯಯ) ನಿಯಮಗಳಲ್ಲಿನ ನಿಯಮ-42ಬಿ ಯಂತೆ ಗ್ರಾಮ ಪಂಚಾಯಿತಿಗಳ ವಾರ್ಷಿಕ ವಹಿವಾಟು ಕುರಿತು ಮಾಡಿದ ಲೆಕ್ಕ ತಪಾಸಣೆಗೆ ವಿಧಿಸಲಾಗುವ , ಲೆಕ್ಕ ತನಿಖಾ ಶುಲ್ಕ ರೂ. 1000/-ಗಳ ಮೊತ್ತವನ್ನು ಸರ್ಕಾರದ ಪರವಾಗಿ ನಿಯಂತ್ರಕರು ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ರಾಮನಗರ ಇವರಿಗೆ ಸಂದಾಯವಾಗುವಂತೆ ಚೆಕ್ ಅಥವಾ ಡಿ:ಡಿ: ಮೂಲಕ ಪಾವತಿಸಲು ಸೂಚಿಸಿದೆ.

ಸದರಿ ಆದೇಶದನ್ವಯ 2004-05ನೇ ಸಾಲಿನಿಂದ ಲೆಕ್ಕ ತನಿಖಾ ಶುಲ್ಕದ ವಿವರ ಈ ಕೆಳಕಂಡಂತೆ ಇರುತ್ತಿದೆ ಹಾಗು ಇದನ್ನು ಕೆಳಗೆ ನಮೂದಿಸಿರುವ ಲೆಕ್ಕ ಶೀರ್ಷಿಕೆಯಡಿ ಶೀಘ್ರವಾಗಿ ಪಾವತಿಸಲು ಲೆಕ್ಕ ತನಿಖೆಯು ತಿಳಿಸುತ್ತದೆ.

1.04.2013 ಕ್ಕೆ ಪ್ರಾರಂಭಿಕ ಶುಲ್ಕ ರೂ.	8000
2013-14 ರ ಪ್ರಸ್ತುತ ವರ್ಷದ ಶುಲ್ಕ ರೂ	1000
ಒಟ್ಟು ರೂ.	9000
2013-14ರ ಪ್ರಸಕ್ತ ವರ್ಷದಲ್ಲಿ ಪಾವತಿ	-
31.03.2014ರ ಅಂತಿಮ ಶಿಲ್ಕು	9000

ಲೆಕ್ಕ ಶೀರ್ಷಿಕೆ

0070 – ಆಡಳಿತ ಸೇವೆಗಳು
060 – ಇತರೇ ಸೇವೆಗಳು
110 – ಸರ್ಕಾರಿ ಲೆಕ್ಕಪರಿಶೋಧನಾ ಶುಲ್ಕ
001 – ಲೆಕ್ಕ ಪರಿಶೋಧನಾ ಶುಲ್ಕ.

53.ಸಾಮಾನ್ಯ ಅಭಿಪ್ರಾಯ:

1) ಜೋಡಿ ನಮೂದು ಲೆಕ್ಕ ಪದ್ಧತಿಯಡಿ ಗ್ರಾಮ ಪಂಚಾಯಿತಿಗಳ ಲೆಕ್ಕಪತ್ರಗಳನ್ನು ಸೂಕ್ತ ವಹಿಗಳಲ್ಲಿ ನಿರ್ವಹಣೆ ಮಾಡದಿರುವುದರಿಂದ, ಲೆಕ್ಕ ಪತ್ರಗಳ ಮಾಹಿತಿಗಳನ್ನು ದೃಢೀಕರಿಸಲು ಕಷ್ಟಕರವಾಗಿದೆ. ಪ್ರಯುಕ್ತ 2006ರ ಗ್ರಾಮ ಲೆಕ್ಕ ಪತ್ರಗಳು ಮತ್ತು ಆಯ-ವ್ಯಯ ನಿಯಮಗಳ ಪ್ರಕಾರ ನಿಗಧಿತ ನಮೂನೆಗಳಲ್ಲಿ ನಿರ್ವಹಿಸಲು ಕ್ರಮಕೈಗೊಳ್ಳಬೇಕಿರುತ್ತದೆ.
2) ಸರ್ಕಾರದ ಲೆಕ್ಕಶೀರ್ಷಿಕೆಗಳಿಗೆ ಜಮಾ ಮಾಡಬೇಕಾದ ತೆರಿಗೆಗಳು/ಉಪಕರಗಳು ಮತ್ತು ಲೆಕ್ಕ ತನಿಖಾ ಶುಲ್ಕಗಳನ್ನು ಆಯಾ ಮಾಹೆ ವರ್ಷಗಳಲ್ಲಿಯೆ ಜಮಾ ಮಾಡಲು ಕ್ರಮವಹಿಸಬೇಕಿರುತ್ತದೆ. ಸಿಬ್ಬಂದಿ ಸಂಬಳ ಹಾಗೂ ಅಧ್ಯಕ್ಷ, ಉಪಾಧ್ಯಕ್ಷರ ಸಂಬಳ ಪಾವತಿಗೆ ಸರಿಯಾಗಿ ಧೃಢೀಕರಣ ಪಡೆಯಬೇಕಾಗಿರುತ್ತದೆ.
3) ಸಾಮಾಜಿಕ ಲೆಕ್ಕ ಪರಿಶೋಧನಾ ಧೃಢೀಕೃತ ವರದಿಯನ್ನು ಸಹ ಲೆಕ್ಕ ಪರಿಶೋಧನಾ ವರ್ತುಲದ ಲೆಕ್ಕ ಪರಿಶೋಧನಾ ತಂಡಕ್ಕೆ ಒದಗಿಸಿರುವುದಿಲ್ಲ.
4) ವಿವಿಧ ಯೋಜನೆಗಳಿಗೆ ಸಂಬಂಧಿಸಿದ ಲೆಕ್ಕ ಪತ್ರಗಳ ನಿರ್ವಹಣೆಯಲ್ಲಿ ಸಮರ್ಪಕವಾದ ಮಾಹಿತಿಗಳನ್ನು ಒದಗಿಸದೆ ಇರುವ ಕಾರಣಗಳಿಂದಾಗಿ, ವೆಚ್ಚಗಳ ಸತ್ಯಾಪನೆ ಬಗ್ಗೆ ಲೆಕ್ಕ ಪರಿಶೋಧನೆಯ ಧೃಢೀಕರಣ ಸಾಧ್ಯವಾಗುತ್ತಿಲ್ಲ. ಅಲ್ಲದೆ ಈ ರೀತಿಯಾಗಿ ದಾಖಲೆಗಳನ್ನು/ಮಾಹಿತಿಗಳನ್ನು ಒದಗಿಸದೆ ಇರುವುದು ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/29/ಲೆಪಬಿ/2006/ದಿನಾಂಕ:18/4/2007 ರಲ್ಲಿ ವಿಧಿಸಿರುವ ಅಂಶಗಳನ್ನು ವಿರುದ್ಧವಾಗಿದೆ ಎಂದು ಅಭಿಪ್ರಾಯಪಡಲಾಗಿದೆ.
5) ಸಾಮಾಗ್ರಿಗಳ ಖರೀದಿ ಪ್ರಕ್ರಿಯೆಯಲ್ಲಿ ಪಾರದರ್ಶಕ ನಿಯಮ 2000ರ ನಿಯಮಾವಳಿಗಳನ್ನು ಪೂರ್ಣ ಪ್ರಮಾಣದಲ್ಲಿ ಪಾಲಿಸಿರುವುದಿಲ್ಲ.
6) ಪಂಚತಂತ್ರ ಯೋಜನೆಯಡಿಯಲ್ಲಿ ಲೆಕ್ಕ ಪತ್ರಗಳನ್ನು ನಿರ್ವಹಿಸಿರುವುದು ಕಂಡುಬರುತ್ತಿಲ್ಲ.
7) ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯದ ಸುತ್ತೋಲೆ ಗ್ರಾಅಪ/160ಎಎಫ್ಎಸ್/2013, ದಿನಾಂಕ:27.3.2013ರಲ್ಲಿ ನೀಡಿರುವ ಸೂಚನೆಯನ್ನು ಸರಿಯಾಗಿ ಅಳವಡಿಸಿಕೊಂಡಿರುವುದಿಲ್ಲ. ಅದನ್ನು ಅಳವಡಿಸಿ ಜಾರಿಗೊಳಿಸುವುದು.
8) ಲೆಕ್ಕ ಪತ್ರಗಳ ನಿರ್ವಹಣೆಯಲ್ಲಿ ಸುಧಾರಣೆ ಅಗತ್ಯವಿದೆ.

ಸಹಾಯಕ ನಿಯಂತ್ರಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ
ರಾಮನಗರ.

ಅನುಬಂಧ

ಸದರಿ ಗ್ರಾಮ ಪಂಚಾಯಿತಿಯ ಹಣಕಾಸಿನ ವಹಿವಾಟನ್ನು ಉಪ ಖಜಾನೆ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ವಹಿವಾಟು ನಡೆಸಿದ್ದು 2013-14 ರ ಸಾಲಿನ ಆರ್ಥಿಕ ಪರಿಸ್ಥಿತಿ ಈ ಕೆಳಕಂಡಂತೆ ನೀಡಲಾಗಿದೆ

. ವಿರುಪಾಕ್ಷಿಪುರ ಗ್ರಾಮ ಪಂಚಾಯಿತಿ ಚನ್ನಪಟ್ಟಣ ತಾಲ್ಲೂಕ್ ರಾಮನಗರ ಜಿಲ್ಲೆ.

ಕ್ರ ಸಂಖ್ಯೆ	ಖಜಾನೆ/ಬ್ಯಾಂಕ್	ಪ್ರಾರಂಭ ಶಿಲ್ಕು ನಗದು ಪುಸ್ತಕ ಪ್ರಕಾರ	2013-14 ನೇ ಸಾಲಿಗೆ ಸ್ವೀಕೃತಿಗಳ ವಿವರ				ಒಟ್ಟು	ವೆಚ್ಚ	ನಾ.ನ. ಪುಸ್ತಕದ ಅಖೈರು ಶಿಲ್ಕು (8-9)	ಖಜಾನೆ/ ಬ್ಯಾಂಕಿನ ಅಖೈರು ಶಿಲ್ಕು	ವ್ಯತ್ಯಾಸ
			ಅನುದಾನ	ತೆರಿಗೆ ಶುಲ್ಕಗಳು	ಇತರೆ	ಒಟ್ಟು					
1	2	3	4	5	6	7	8	9	10	11	12
	ಗ್ರಾಮ ಪಂಚಾಯಿತಿ ನಿಧಿ										
1	ಖಜಾನೆ ಖಾತೆ	1721				0	1721		1721	1721	0
2	ಕು.ನೀ ಅನುದಾನ ಖಾತೆ	73493				0	73493		73493	73493	0
3	ಕಂದಾಯ ಖಾತೆ ಹಾಗೂ	104474	0	979317	3459	982776	1087250	039493	47757	47757	0
4	13ನೇ ಹಣಕಾಸು	656139	1605028	0	12537	1617565	2273704	2099535	174169	174169	0
5	ಶಾಸನಬದ್ಧ ಅನುದಾನ	0	322497		2118	324615	324615	304937	19678	19678	
	ಒಟ್ಟು	835827	1927525	979317	18114	2924956	3760783	3443965	316818	316818	0
	ಯೋಜನೆಗಳ ಖಾತೆ										
1	ಎಸ್‌ಜಿಆರ್‌ವೈ	500		0		0	500	0	500	500	0
2	ಟಿ.ಎಸ್.ಸಿ	20715	597500	0	3262	600762	621477	616990	4487	4487	0
3	ಐ.ಎ.ವೈ.	31496		0		0	31496		31496	31496	0
4	ಐ.ಎ.ವೈ-2	276073	80000	0	10612	90612	366685	165680	201005	201005	0
5	ಆಶ್ರಯ	371834	0	0	15153	15153	386987	30000	356987	356987	0
6	ನರೇಗಾ	1149	20000	0	1759	21759	22908	0	22908	22908	0
	ಒಟ್ಟು	701767	697500	0	30786	728286	1430053	812670	617383	617383	0
	ಒಟ್ಟು ಮೊತ್ತ	1537594	2625025	979317	48900	3653242	5190836	4256635	934201	934201	0

ಸಹಾಯಕ ನಿಯಂತ್ರಕರು
ಸ್ಥಳೀಯ ಲೆಕ್ಕ ಪರಿಶೋಧನಾ
ರಾಮನಗರ

[illegible] ಪುರ ಗ್ರಾಮ ಪಂಚಾಯಿತಿಯ 2013–14ನೇ ಸಾಲಿನ ವರ್ಗೀಕೃತ ಜಮಾ ಖರ್ಚಿನ ತಖ್ತೆ;

ಸ್ವೀಕೃತಿ

ಕ್ರ.ಸ	ಉ.ಕ್ರ.ಸ	ವಿವರಗಳು	ಮೊತ್ತ	ಒಟ್ಟು ಮೊತ್ತ
1		**ಪ್ರಾರಂಭದ ಶಿಲ್ಕು**	1537594	1537594
2		**ಗ್ರಾಮ ಪಂಚಾಯಿತಿ ಆದಾಯಗಳು**		
	1	ಭೂಮಿ ತೆರಿಗೆ	318000	
	2	ಕಟ್ಟಡ ತೆರಿಗೆ	126700	
	3	ನೀರಿನ ಧರ ಸಾಮನ್ಯ	87500	
	4	ನೀರಿನ ದರಗಳು	168500	
	5	ಕಟ್ಟಡ ಪರವಾನಿಗೆ	32000	
	6	ಕಡಿಮೆ ಇರಸಾಲು	98359	
	7	ದೀಪದ ತೆರಿಗೆ	126058	
	8	ಬಾಡಿಗೆಗಳು	1200	
	9	ಖಾತೆ ಫೀ	850	
	10	ನಕಲು	350	
	11	ವ್ಯಾಪಾರ ಪರವಾನಿಗೆ	18000	
	12	ಇತರೆ	1800	979317
3		**ಬಡ್ಡಿ ಹಣ**	18114	18114
4		**ಅನುದಾನಗಳು**		
	1	ಕು.ನೀ. ಅನುದಾನ ಖಾತೆ	22497	
	2	[illegible]	1605028	
	3	ಶಾಸನಬದ್ಧ ಅನುದಾನ	300000	1927525

ಪಾವತಿಗಳು

ಕ್ರ.ಸ	ಉ.ಕ್ರ.ಸ	ವಿವರಗಳು	ಮೊತ್ತ	ಒಟ್ಟು ಮೊತ್ತ
1		**ಆಡಳಿತ ವೆಚ್ಚ**		
	1	ಅಧ್ಯಕ್ಷ & ಉಪಧ್ಯಾಕ್ಷರ ಗೌರವ ಧನ	8800	
		ಸದಸ್ಯರ ತರಭೇತಿ ಭತ್ಯೆ\ತರಬೇತಿ	5750	14550
		ಗ್ರಾಮ ಪಂಚಾಯಿತಿ ಕಛೇರಿ		
		ನೌಕರರ ವೇತನ	434232	
		ಡಿ.ಟಿ.ಪಿ., ಜೆರಾಕ್ಸ್, ಕರಪತ್ರ, ಬ್ಯಾನರ್, ಗೋಡೆ ಬರಹ	9320	
2		ಪೀಠೋಪಕರಣ	86223	
	1	ಯು.ಪಿ.ಎಸ್ ಖರೀದಿ	41390	
	2	ವಂತಿಕೆಗಳು	12000	
	3	ದಿನಪತ್ರಕೆ	2070	
	4	ಬ್ಯಾಂಕ್ ಶಿಲ್ಕು	485	
	5	ಕಟ್ಟಡ ದುರಸ್ಥಿ	53308	
		ನೌಕರರಿಗೆ ಉಡುಗರೆ	5000	
		ಸಾದಿಲ್ವಾರು ವೆಚ್ಚ	43403	
		ಬಾಡಿಗೆ	4500	
	6	ಖರೀದಿ ಪುಸ್ತಕ	2400	694331
3		**ನಾಗರೀಕ ಸೌಲಭ್ಯಗಳು**		
	1	ನೀರು ಸರಬರಾಜು ಸಾಮತ್ರಿ ಖರೀದಿ	1358412	
	2	ವಿದ್ಯುತ್ ಬೀದಿ ದೀಪ ಸಾಮತ್ರಿ ಖರೀದಿ	370375	
	3	ಕಾವೇರಿ ನೀರಾವರಿ ನಿಗ್ರಮಕ್ಕೆ ವಂತಿಕೆ	229430	
	4	ವಿದ್ಯುತ್ ಬೀದಿ ದೀಪ ಸಾಮತ್ರಿ ದುರಸ್ಥಿ	7000	

							5	ಪೈಪು ಲೈನು ,ಕೈಪಂಪು ದುರಸ್ಥಿ ಮೋಟಾರು ದುರಸ್ಥಿ	548001	
							6	ಕಾಮಗಾರಿಗಳು	75498	
							7	ಶೇ.22.5ರಡಿಯಲ್ಲಿನ ವೆಚ್ಚ	54500	
							8	ಶೇ3 ರವೆಚ್ಚ	15000	
							9	ಗ್ರಾಮ ನೈರ್ಮಲ್ಯ	54526	
							10	ಬ್ಲಿಚಿಂಗ್ ಪೌಡರ್ / ಫೈನಾಯಿಲ್ ಖರೀದಿ	8000	
							11	ಜನ ಜಾಗ್ರೂತಿ ಕಾರ್ಯಕ್ರಮ	14342	2735084
5	**ಯೋಜನೇತರ ಬಾಬ್ತು**					4	**ಯೋಜನೇತರ ವೆಚ್ಚಗಳು**			
	1	ಎಸ್‌ಜಿಆರ್‌ವೈ	0	0	0		1	ಎಸ್‌ಜಿಆರ್‌ವೈ	0	0
	2	ಟಿ.ಎಸ್.ಸಿ	597500	3262	600762		2	ಟಿ.ಎಸ್.ಸಿ	616990	616990
	3	ಐ.ಎ.ವೈ.	0	0	0		3	ಐ.ಎ.ವೈ.	0	0
	4	ಐ.ಎ.ವೈ-2	80000	10612	90612		4	ಐ.ಎ.ವೈ-2	165680	165680
	5	ಆಶ್ರಯ	0	15153	15153		5	ಆಶ್ರಯ	30000	30000
	6	ನರೇಗಾ	20000	1759	21759		6	ನರೇಗಾ	0	0
						5	**ಅಂತಿಮ ಶಿಲ್ಕು**		**934201**	934201
ಒಟ್ಟು (1+2+3+4+5)			5141936	48900	5190836	**ಒಟ್ಟು (1+2+3+4+5)**			5190836	5190836

5190836

ಸಹಾಯಕ ನಿಯಂತ್ರಕರು

ಸ್ಥ.ಲೆ.ಪವ.

2

ಕರ್ನಾಟಕ ಸರ್ಕಾರ

ಸಂಖ್ಯೆ:ಸ.ನಿ.ಸ್ಥ.ಲೆ.ಪ.ವ.ರಾ.ಕಾವಿ./2015-16 /02

ಹಿರಿಯ ಉಪನಿರ್ದೇಶಕರ ಕಛೇರಿ,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ರಾಮನಗರ ದಿನಾಂಕ 5-4-16

ರವರಿಗೆ:

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು,
[illegible] ಪಂಚಾಯಿತಿ,
[illegible] ತಾಲ್ಲೂಕು,

ಮಾನ್ಯರೆ,

ವಿಷಯ:- [illegible] ಗ್ರಾಮ ಪಂಚಾಯಿತಿ
2014-15 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ರವಾನಿಸುವ ಬಗ್ಗೆ.

****

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ನಿಯಮ 246ರ ಪ್ರಕಾರ ರಾಮನಗರ ಜಿಲ್ಲೆಯ 2014-15 ನೇ ಸಾಲಿನ ಲೆಕ್ಕ ಪರಿಶೋಧನೆ ನಡೆಸಿದ್ದು, ಸದರಿ ಲೆಕ್ಕ ಪರಿಶೋಧನಾ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ರವಾನಿಸಲಾಗಿದೆ. ಈ ಪತ್ರಕ್ಕೆ ಲಗತ್ತಿಸಿರುವ ಲೆಕ್ಕ ತಪಸಣಾ ವರದಿಯ ಕಂಡಿಕೆ ಸಂಖ್ಯೆ ರಲ್ಲಿ ತೆರಿಗೆ ವಸೂಲಿ ಹಣ ದುರುಪಯೋಗ:ಅಪವಿನಿಯೋಗ ವಂಚನೆ ನಷ್ಟದ ಬಗೆಗಿನ ಪ್ರಕರಣಗಳನ್ನು ತಪಾಸಣೆಯಲ್ಲಿ ಗಮನಿಸಿದ್ದು, ಇವುಗಳ ಒಟ್ಟು ಮೊತ್ತ ರೂ 4724 ಆಗಿರುತ್ತದೆ. ಈಬಗ್ಗೆ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ ಲೆಕ್ಕ ಪತ್ರ ಮತ್ತು ಆಯವ್ಯಯ) 2006 ರ ನಿಯಮ 113ರಲ್ಲಿ ತಿಳಿಸಿರುವಂತೆ ವಿಚಾರಣೆಯನ್ನು ಜರುಗಿಸಿ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ. ಹಾಗೇಯೆ ಅನುಪಾಲನ ವರದಿಗಳನ್ನು ಅಡ್‌ಹಾಕ್ ಸಮಿತಿ ಮುಂದೆ ಮಂಡಿಸಿ ಲೆಕ್ಕಪರಿಶೋಧನಾ ವರದಿಯ ತೀರುವಳಿಗೆ ಕ್ರಮವಹಿಸಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ಉಪನಿರ್ದೇಶಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ರಾಮನಗರ.

O/C

ಅನುಬಂಧ-2

ಅವಲೋಕನ ರಹಿತ ಅಭಿಪ್ರಾಯ

ರಾಮನಗರ ಜಿಲ್ಲೆಯ __ಚನ್ನಪಟ್ಟಣ__ ತಾಲ್ಲೂಕಿನ ___[illegible]_____
ಗ್ರಾಮಪಂಚಾಯಿತಿಯ 2014-15 ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳ ಟೀಕೆ ಟಿಪ್ಪಣಿಗಳು.

4. ನಗದು ಪುಸ್ತಕ, ಜರ್ನಲ್ ನಮೂದು ಪುಸ್ತಕ, ಲೆಡ್ಜರ್ ಲೆಕ್ಕಗಳು ಹಾಗೂ ಟ್ರಯಲ್ ಬ್ಯಾಲೆನ್ಸ್ ಗಳಲ್ಲಿನ ವಹಿವಾಟುಗಳು ಲೆಕ್ಕಗಳ ನಿರ್ವಹಣೆ ಕುರಿತು ಟೀಕೆ ಟಿಪ್ಪಣಿಗಳು. (ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು/ಕಾರ್ಯದರ್ಶಿ ಇವರುಗಳು ನೀಡಿರುವ ವಿತ್ತೀಯ ತಂಖ್ತೆಗಳನ್ನು ಏಕನಮೂನೆ ನಗದುಪುಸ್ತಕ, ಬ್ಯಾಂಕ್ ಪಾಸ್ ಶೀಟ್ ಇತ್ಯಾದಿ ಮಾಹಿತಿಗಳೊಂದಿಗೆ ಪರಿಶೀಲಿಸಲಾಗಿದೆ.)

   (ಅ) ನಗದು ಪುಸ್ತಕವನ್ನು (ನಿಗಧಿತ ನಮೂನೆ 49 ರಲ್ಲಿ ನಿಯಮ 104ರಂತೆ ನಿರ್ವಹಿಸಿರುವುದಿಲ್ಲ(Double entry system of accounting)

   (ಆ) ಜರ್ನಲ್ ವೋಚರ್ ಹಾಗೂ ಲೆಡ್ಜರ್ ಲೆಕ್ಕಗಳನ್ನು ನಮೂನೆ 51,52 ರಲ್ಲಿ ನಿರ್ವಹಿಸಿರುವುದಿಲ್ಲ.

   (ಇ) ಟ್ರಯಲ್ ಬ್ಯಾಲೆನ್ಸ್‌ನ್ನು ಪ್ರಾಯೋಗಿಕ ಸಮತೋಲನಾ ಪಟ್ಟಿಯನ್ನು ನಮೂನೆ-54 ನಿಯಮ 108 ಉಪನಿಯಮ 3 ರಲ್ಲಿ ನೀಡಿರುವುದಿಲ್ಲ.

5. ವಿತ್ತ ನಿರೂಪಣಾ ತಃಖ್ತೆಗಳಲ್ಲಿ ಗಮನಿಸಲಾದ ನ್ಯೂನತೆಗಳು.

   (ಅ) ನಮೂನೆ 53ರಲ್ಲಿ ನಿಯಮ 108ರಂತೆ ಸ್ವೀಕೃತಿ ಮತ್ತು ಪಾವತಿ ಲೆಕ್ಕವನ್ನು ಲೆಕ್ಕ ತನಿಖೆಗೆ ನೀಡಿದ್ದು ತಾಳೆಯಾಗಿರುತ್ತದೆ.

   (ಆ) ನಮೂನೆ 55 ನಿಯಮ 109ರ ಪ್ರಕಾರ ಆದಾಯ ಮತ್ತು ವೆಚ್ಚದ ಲೆಕ್ಕವನ್ನು ಲೆಕ್ಕ ತನಿಖೆಗೆ ನೀಡಿದ್ದು ತಾಳೇಯಾಗಿರುತ್ತದೆ.

   (ಇ) ನಮೂನೆ 56 ನಿಯಮ 109(4) ರಂತೆ ಸಮತೋಲನ ಪಟ್ಟಿಯನ್ನು ನೀಡಿದ್ದು ಲೆಕ್ಕ ತನಿಖೆಗೆ ತಾಳೆಯಾಗಿರುತ್ತದೆ.

6. ವಿತ್ತೀಯ ತಃಖ್ತೆಗಳನ್ನು ಚಾರ್ಟರ್ಡ್ ಅಕೌಂಟಂಟರಿಂದ ಪ್ರಮಾಣೀಕರಿಸಿದ ವಿತ್ತೀಯ ತ:ಖ್ತೆಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿರುವುದಿಲ್ಲ.

ಲೆಕ್ಕ ಪರಿಶೋಧಕರು/
ಲೆಕ್ಕಪರಿಶೋಧಣಾಧಿಕಾರಿ ಹೆಸರು
ಸ್ಥಳ __________
ದಿನಾಂಕ_________

ಅವಲೋಕನದೊಂದಿಗೆ ವಾರ್ಷಿಕ ಲೆಕ್ಕಗಳ ಪ್ರಮಾಣೀಕರಣ

ರಾಮನಗರ ಜಿಲ್ಲೆಯ [illegible] ತಾಲ್ಲೂಕಿನ [illegible] ಗ್ರಾಮ ಪಂಚಾಯಿತಿಯ 2014-15 ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ಮೇರೆಗೆ ಹಾಗೂ ವಿತ್ತ ನಿರೂಪಣಾ ತಃಖ್ತೆಗಳ ಪರಿಶೋಧನೆ ಬಗ್ಗೆ ಮಹಾಲೇಖಪಾಲರು ಅನುಸರಿಸುವ ಲೆಕ್ಕಪರಿಶೋಧನಾ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು, ರಾಜ್ಯ ಲೆಕ್ಕಪತ್ರ ಇಲಾಖೆಯ ನಿಯಂತ್ರಕರ ಸೂಚನೆ ಮೇರೆಗೆ ಪರೀಕ್ಷಿಸಲಾಗಿದೆ.

5. ಲೆಕ್ಕ ಪರಿಶೋಧನೆಯ ಉದೇಶಕ್ಕೆ ಅವಶ್ಯಕವಾಗಿ ಬೇಕಾದ ಎಲ್ಲಾ ಮಾಹಿತಿ ಹಾಗೂ ವಿವರಣೆಗಳನ್ನು ನನ್ನ ತಿಳುವಳಿಕೆ ಮತ್ತು ನಂಬಿಕೆಗೆ ತಕ್ಕಂತೆ ಪಡೆದಿರುತ್ತೇನೆ.

6. ಲೆಕ್ಕ ಪರಿಶೋಧನೆಯ ಅಭಿಪ್ರಾಯದಲ್ಲಿ, ಕಾಯ್ದೆ,ನಿಯಮಾವಳಿ ಹಾಗೂ ಲೆಕ್ಕ ಪರಿಶೋಧನಾ ಕೈಪಿಡಿ ಮಾರ್ಗದರ್ಶಿ ಪ್ರಕಾರ, ಪರಿವೀಕ್ಷಣೆಯಿಂದ ಕಂಡುಬಂದಂತೆ, ಇದಕ್ಕೆ ಲಗತ್ತಿಸಿದ ವಾರ್ಷಿಕ ಲೆಕ್ಕಗಳನ್ನು ಕುರಿತು ಟೀಕೆ ಟಿಪ್ಪಣಿಗಳು ಎಂಬ ಅನುಬಂಧದಲ್ಲಿ ನಮೂನೆ ಮಾದರಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ ಸೂಚಿಸಲಾದ ಲೋಪದೋಷಗಳು ಹಾಗೂ ನ್ಯೂನತೆಗಳನ್ನು ಹೊರತುಪಡಿಸಿ, ಗ್ರಾಮಪಂಚಾಯಿತಿಯು ಸಮರ್ಪಕ ಲೆಕ್ಕಪತ್ರ ಪುಸ್ತಕಗಳನ್ನು ನಿರ್ವಹಿಸಬೇಕಾಗಿರುತ್ತದೆ.

7. ವರದಿಯಲ್ಲಿ ಪ್ರಸ್ತಾಪಿಸಲಾದ ಗ್ರಾಮ ಪಂಚಾಯಿತಿಯ ಸಮತೋಲನಾ ಪಟ್ಟಿ, ಆದಾಯ ಮತ್ತು ವೆಚ್ಚದ ತಃಖ್ತೆ, ಹಾಗೂ ಸ್ವೀಕೃತಿ ಮತ್ತು ಪಾವತಿ ತಃಖ್ತೆಗಳು ಲೆಕ್ಕ ಪುಸ್ತಕಗಳೊಂದಿಗೆ ಟೀಕೆ ಟಿಪ್ಪಣಿಗಳಲ್ಲಿ ದಾಖಲಿಸಲಾದ ಅವಲೋಕನಗಳಿಗೆ ಒಳಪಟ್ಟಂತೆ ತಾಳೆಯಾಗುತ್ತವೆ.

8. ಟೀಕೆ ಟಿಪ್ಪಣಿಗಳಲ್ಲಿ ದಾಖಲಿಸಿದ ಅವಲೋಕನಗಳಿಗೆ ಒಳಪಟ್ಟಂತೆ ವಿತ್ತ ನಿರೂಪಣಾ ತಃಖ್ತೆಗಳು ಗ್ರಾಮ ಪಂಚಾಯಿತಿಯ ವಿದ್ಯಮಾನಗಳ ನೈಜ ಮತ್ತು ನ್ಯಾಯೋಚಿತ ನೋಟವನ್ನು ಒದಗಿಸುತ್ತಿಲ್ಲ. ಅನುಬಂಧ-2ನ್ನು ಲಗತ್ತಿಸಿದೆ.

ಕರ್ನಾಟಕ ಪಂಚಾಯತ್ ರಾಜ್ ಗ್ರಾಮಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಾಮಾವಳಿಗಳು 2006ರ ನಿಯಮ ಅಧ್ಯಾಯ 2 ರ ಪ್ರಕಾರ ಗ್ರಾಮಪಂಚಾಯಿತಿಯು ಲೆಕ್ಕಪತ್ರಗಳನ್ನು ನಿರ್ವಹಿಸದೇ ಇರುವ ಕಾರಣ, ಈ ವರದಿಯ ಕಂಡಿಕೆ ----1---- ರಿಂದ ---39--- ರವರೆಗೆ ವಿಶದಪಡಿಸುವಂತೆ ನನ್ನ ಅಭಿಪ್ರಾಯದ ಪ್ರಕಾರ, ಕೇಂದ್ರ ರಾಜ್ಯ ಸರ್ಕಾರದ, ಜಿಪಂ/ತಾ.ಪಂ/ಗ್ರಾ.ಪಂ/ಯಾವ ಉದ್ದೇಶಕ್ಕಾಗಿ ಬಳಸಲು ಅವಕಾಶ ನೀಡಿತ್ತೋ, ಸದರಿ ಉದ್ದೇಶಕ್ಕಾಗಿಯೇ ಹಣ ಬಳಕೆಯಾಗಿದೆ ಎಂದು ಧೃಢೀಕರಿಸಲು ಲೆಕ್ಕ ಪರಿಶೋಧನೆಯಲ್ಲಿ ಸಾಧ್ಯವಾಗುತ್ತಿಲ್ಲ ಕಾರಣ 2014-15 ರ ಸ್ವೀಕೃತಿ ಪಾವತಿ ತಃಖ್ತೆಗಳನ್ನು ಸರಿಯಾಗಿರುವುದಿಲ್ಲ. ಈ ರೀತಿಯಾಗಿ ಮಾಸಿಕ, ತ್ರೈಮಾಸಿಕ ಹಾಗೂ ವಾರ್ಷಿಕ ಲೆಕ್ಕ ಪತ್ರಗಳನ್ನು ಲೆಕ್ಕ ತನಿಖೆಗೆ ಸಲ್ಲಿಸದೆ ಇರುವ ಕಾರಣ ಆದಾಯ ಮತ್ತು ವೆಚ್ಚದ, ಸ್ವೀಕೃತಿ ಮತ್ತು ಪಾವತಿಯ ಸತ್ಯಾಪನೆಯನ್ನು ಧೃಢೀಕರಿಸಲು ಸಾಧ್ಯವಾಗುತ್ತಿಲ್ಲ.

ವಿವರಣಾ ಪಟ್ಟಿ ಮತ್ತು ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಧೃಢೀಕೃತ ಮಾಹಿತಿಗಳನ್ನು ಪಡೆದು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಅಲ್ಲದೆ ಸಾಮಾಜಿಕ ಲೆಕ್ಕ ಪರಿಶೋಧನೆಯ ವರದಿಗಳನ್ನು . ಸಹ ಲೆಕ್ಕ ಪರಿಶೋಧನೆಯ ಸಂದರ್ಭದಲ್ಲಿ/ಪುನರ್ ಅವಲೋಕನದ ಸಂದರ್ಭದಲ್ಲಾಗಲೀ ಒದಗಿಸಿರುವುದಿಲ್ಲ.

ಈ ಎಲ್ಲಾ ಕಾರಣಗಳಿಂದ ಇರುವ ಕಾರಣ ಆದಾಯ ಮತ್ತು ವೆಚ್ಚದ, ಸ್ವೀಕೃತಿ ಮತ್ತು ಪಾವತಿಯ ಸತ್ಯಾಪನೆಯನ್ನು ಧೃಢೀಕರಿಸಲು ಸಾಧ್ಯವಾಗುತ್ತಿಲ್ಲ.

ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ವಿರೂಪಾಕ್ಷಿಪುರ ಗ್ರಾಮಪಂಚಾಯಿತಿಯ 2014-15 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯಲ್ಲಿಟ್ಟಿರುವ ಮತ್ತು ವಸೂಲಾತಿಗೆ ಸೂಚಿಸಿರುವ ಮೊಬಲಗಿನ ವಿವರದ ಪಟ್ಟಿ.

ಕ್ರ. ಸಂ.	ಕಂಡಿಕೆ ಸಂಖ್ಯೆ	ನ್ಯೂನತೆಗಳ ಸ್ವರೂಪ	(ಭಾಗ/ ಪುಟಸಂಖ್ಯೆ)	ಆಕ್ಷೇಪಣಾ ಮೊಬಲಗು ರೂ.	ವಸೂಲಾತಿಗೆ ಸೂಚಿಸಿರುವ ಮೊಬಲಗು ರೂ.
1	4	ಹಿಂದಿನ ಸಾಲುಗಳ ವರದಿಗಳ ಮೇಲೆ ತೆಗೆದುಕೊಂಡಿರುವ ಕ್ರಮದ ಬಗ್ಗೆ.	–	–	–
2	15(2)	ಕಡಿಮೆ ಇರುಸಾಲು ಬಗ್ಗೆ	–	–	4724
3	18	ಉಪಕರಗಳಿಗೆ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡದಿರುವುದು	–	101551	–
4	31	ಆದಾಯ, ಮಾರಾಟ, ರಾಜ್ಯಧನ ಕಟಾವಣೆ ಮತ್ತು ಜಮಾ ಕುರಿತು	–	39967	–
5	35	ನೀರು ನಿರ್ವಹಣೆ ಮತ್ತು ಬೀದಿ ದೀಪಗಳಿಗೆ ಸಾಮಾಗ್ರಿಗಳ ರಶೀದಿಯಲ್ಲಿನ ನ್ಯೂನತೆ	–	–	–
6	38	ಲೆಕ್ಕ ತನಿಖಾ ಶುಲ್ಕ ಪಾವತಿಸುವುದರ ಬಗ್ಗೆ	–	–	–
ಒಟ್ಟು			~~141518~~	4724	

141518 4724

ಉಪನಿರ್ದೇಶಕರು,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
ರಾಮನಗರ.

10. ಗ್ರಾಮಪಂಚಾಯಿತಿ ನಿಧಿಯ ಸಾಮಾನ್ಯ ಆದಾಯ ಮತ್ತು ಸಾಮಾನ್ಯ ವೆಚ್ಚಗಳ ಬಗ್ಗೆ:

ಗ್ರಾಮ ಪಂಚಾಯಿತಿ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ವಿವಿಧ ಯೋಜನೆಗಳ ಜಮಾ ಮತ್ತು ಪಾವತಿ ವಿವರಗಳನ್ನು ಹೊರತುಪಡಿಸಿ, ಸ್ವಆದಾಯ ಹಾಗೂ ಸೆಕ್ಷನ್ 206 ಮತ್ತು 208ರಡಿ ಸ್ವೀಕೃತಿಯಾಗಿರುವ ಎಲ್ಲಾ ಅನುದಾನ / ನೀರು ನಿರ್ವಹಣೆ ಅನುದಾನಗಳ ವಾರ್ಷಿಕ ಜಮೆ ಮತ್ತು ವೆಚ್ಚಗಳ ವಿವರವನ್ನು ಹಿಂದಿನ ಎರಡು ವರ್ಷಗಳ ಸಾಮಾನ್ಯ ಆದಾಯ ಮತ್ತು ಸಾಮಾನ್ಯ ವೆಚ್ಚಗಳೊಂದಿಗೆ ತಾಳೆಮಾಡಲಾಗಿ ಸರಾಸರಿ ಆದಾಯ ಮತ್ತು ವೆಚ್ಚಗಳ ವಿವರ ಈ ಕೆಳಕಂಡಂತೆ ಇರುವುದು ಕಂಡುಬಂದಿದೆ.

ಕ್ರ.ಸಂ	ವಾರ್ಷಿಕ	ಸಾಮಾನ್ಯ ಆದಾಯ ರೂ.	ಸಾಮಾನ್ಯ ವೆಚ್ಚ ರೂ.
1	2012-2013	2857387	2614050
2	2013-2014	2924956	3443965
3	2014-2015	2795492	2912931
ಒಟ್ಟು		2577835	8970945
ಸರಾಸರಿ		2859278	2990315

11. ಋಣ ಶೀರ್ಷಿಕೆಗಳು

ಅ) ಹೂಡಿಕೆಗಳು ಹಾಗು ಠೇವಣಿಗಳು:

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 95ರ ಪ್ರಕಾರ ನಮೂನೆ 41 ರಲ್ಲಿ ಹೂಡಿಕೆ ವಹಿಯನ್ನು ಹಾಗೆಯೆ ಠೇವಣಿಗಳ ಬಗ್ಗೆ ದಾಖಲೆಗಳನ್ನು ನಮೂನೆ-47ರಲ್ಲಿ ನಿರ್ವಹಿಸಬೇಕಾಗಿರುತ್ತದ ನಿಯಮ 100ರನ್ವಯ ಇಂದಿನವರೆಗೂ ನಿರ್ವಹಣೆ ಮಾಡದಿರುವುದರಿಂದ ನಿಯಮಾನುಸಾರ ನಿರ್ವಹಿಸಲು ಸೂಚಿಸಿದೆ.

ಆ) ಮುಂಗಡಗಳು:-

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 98ರ ಪ್ರಕಾರ ನಮೂನೆ 44 ರಲ್ಲಿ ಮುಂಗಡಗಳ ವಹಿ ನಿರ್ವಹಿಸಬೇಕಿರುತ್ತದೆ. ಆದರೆ ಈವರೆಗು ಈ ವಹಿಯನ್ನು ನಿರ್ವಹಿಸಿರುವುದಿಲ್ಲ. ನಿಯಮಾನುಸಾರ ನಿರ್ವಹಿಸಲು ಸೂಚಿಸಿದೆ.

ಇ.(I) ಇ.ಎಂ.ಡಿ. ಠೇವಣಿಗಳು:-

2014-15 ನೇ ಸಾಲಿನ ಜಮೆ ವಿವರಗಳ ಪ್ರಕಾರ ಇ.ಎಂ.ಡಿ ಠೇವಣಿಗಳ ವಿವರ ಇರುವುದಿಲ್ಲ.

1.4.2014 ಕ್ಕೆ ಪ್ರಾರಂಭಿಕ ಶಿಲ್ಕು	ಯಾವುದು ಇರುವುದಿಲ್ಲ
2014-15 ಸ್ವೀಕೃತಿ	
ಒಟ್ಟು	
2014-15ಕ್ಕೆ ಮರುಪಾವತಿ	
31.3.2015ಕ್ಕೆ ಅಂತಿಮ ಶಿಲ್ಕು	

ಇ. (II) ಭದ್ರತಾ ಠೇವಣಿಗಳ ಡಿ.ಸಿ.ಬಿ. ಬಗ್ಗೆ :

ಗುತ್ತಿಗೆದಾರರ ಕಾಮಗಾರಿಗಳ ಬಿಲ್ಲುಗಳಲ್ಲಿ ಕಟಾವಣೆ ಮಾಡಿರುವ ಭದ್ರತಾ ಠೇವಣಿಗಳ ದಾಖಲೆಗಾಗಿ ನಮೂನೆ 41ರಲ್ಲಿ ಪ್ರತ್ಯೇಕವಾಗಿ ವಹಿ ನಿರ್ವಹಿಸಬೇಕಿರುತ್ತದೆ. ಹಾಗೂ ಈ ಬಗ್ಗೆ ಸರ್ಕಾರವು ಕಾಲಕಾಲಕ್ಕೆ ವಿಧಿಸುವ ದರಗಳನ್ವಯ ಕಟಾವಣೆ ಮಾಡಬೇಕು.

1.4.2014 ಕ್ಕೆ ಪ್ರಾರಂಭಿಕ ಬಾಕಿ ರೂ.	ಯಾವುದು ಇರುವುದಿಲ್ಲ
2014-15ರಲ್ಲಿ ವಸೂಲಿ ರೂ	
ಒಟ್ಟು ರೂ.	
2014-15ಕ್ಕೆ ಪಾವತಿ ರೂ	
31.3.2015ಕ್ಕೆ ಅಂತಿಮ ಶಿಲ್ಕುರೂ.	

ಮೇಲಿನಂತೆ ನಿಯಮ 100ರ (3) ರಂತೆ, ಠೇವಣಿ ಮೊತ್ತಗಳ 3 ವರ್ಷ ಅವಧಿಯ ನಂತರವೂ ಮರುಪಾವತಿ ಪಡೆಯದಿದ್ದರೆ ಅಂತಹ ಠೇವಣಿಗಳನ್ನು ಅವಧಿ ಮೀರಿದ ಠೇವಣಿಗಳೆಂದು ಪರಿಗಣಿಸಿ ಮುಟ್ಟುಗೋಲು ಹಾಕಿಕೊಳ್ಳುವಂತೆ ಸೂಚಿಸಿದೆ. ಬಾಕಿಯಿರುವ ಠೇವಣಿ ಯಾವ ವರ್ಷದಲ್ಲಿ ಹೂಡಿದೆ ಎಂದು ತಿಳಿದು ಕ್ರಮವಹಿಸಲು ಸೂಚಿಸಿದೆ.

(ಈ) ಸಾಲದ ಬಗ್ಗೆ

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 96 ರ ಪ್ರಕಾರ ನಮೂನೆ 42 ರಲ್ಲಿ ಸಾಲಗಳ ವಹಿಯನ್ನು ನಿರ್ವಹಿಸಬೇಕಿರುತ್ತದೆ. ಆದರೆ ಈವರೆಗು ನಿರ್ವಹಿಸಿರುವುದಿಲ್ಲ. ಇದನ್ನು ತಪ್ಪದೆ ನಿರ್ವಹಿಸಲು ಸೂಚಿಸಿದೆ. ಲಭ್ಯ ಮಾಹಿತಿ ಪ್ರಕಾರ ಪಂಚಾಯತ್ ರಾಜ್ ಕಾಯ್ದೆ 1993ರ ಪ್ರಕರಣ 214ರ ಪ್ರಕಾರ ಪಡೆದಿರುವ ಸಾಲದ ವಿವರ ಇರುವುದಿಲ್ಲ.

12.ಮಾಸಿಕ ಮತ್ತು ತ್ರೈಮಾಸಿಕ ಲೆಕ್ಕಪತ್ರಗಳು:-

ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು ನಿಯಮಗಳು 2006ರ ನಿಯಮ 108 ರ ಪ್ರಕಾರ ಕಾರ್ಯದರ್ಶಿಯು ಪ್ರತಿ ತಿಂಗಳ ಸ್ವೀಕೃತಿ ಮತ್ತು ಪಾವತಿ ವಿವರಣಾ ಪಟ್ಟಿಯನ್ನು ನಮೂನೆ 53 ರಲ್ಲಿ ಹಾಗೂ ಪ್ರಾಯೋಗಿಕ ಆರ್ಥಿಕ ಸ್ಥಿತಿಗತಿ ಪಟ್ಟಿಯನ್ನು ನಮೂನೆ 54ರಲ್ಲಿ ಪ್ರತಿ ಮಾಹೆಯ 20ನೇ ತಾರೀಖಿನೊಳಗಾಗಿ ಗ್ರಾಮ ಪಂಚಾಯಿತಿ ಸಭೆಗೆ ಮಂಡಿಸಿ, ಅನುಮೋಧನೆ ಪಡೆದ ಪಟ್ಟಿಗಳನ್ನು ಜಿಲ್ಲಾ ಪಂಚಾಯಿತಿ ಹಾಗೂ ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಛೇರಿಗಳಿಗೆ ಪರಿಶೀಲನೆಗಾಗಿ ಸಲ್ಲಿಸಬೇಕಿರುತ್ತದೆ. ಈ ರೀತಿ ಮಾಸಿಕ ಮತ್ತು ತ್ರೈಮಾಸಿಕ ಲೆಕ್ಕಗಳನ್ನು ಸಕ್ಷಮ ಪ್ರಾಧಿಕಾರಗಳು ಪರಿಶೀಲನೆ ಮಾಡಿ ಕಂಡು ಬಂದಿರುವ ಲೋಪದೋಷಗಳನ್ನು ಸರಿಪಡಿಸಿ ಕೊಳ್ಳುವಂತೆ ಮಾರ್ಗದರ್ಶನ ನೀಡುವ ಸಂಭವ ಮತ್ತು ಅವಕಾಶಗಳು ಇರುತ್ತದೆ.

13. ವಾರ್ಷಿಕ ಲೆಕ್ಕಪತ್ರಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸದಿರುವುದು:

ಪಂಚಾಯತ್ ರಾಜ್ ಅಧಿನಿಯಮ 243 ಉಪಪ್ರಕರಣ (3) ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 109 ರ ಪ್ರಕಾರ ಮುಂದುವರಿದ ವರ್ಷದ ಜೂನ್ 30ರೊಳಗೆ ಪಿ.ಡಿ.ಒ/ಕಾರ್ಯದರ್ಶಿಗಳು ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸಿ ಗ್ರಾಮ ಪಂಚಾಯಿತಿಯ ಅನುಮೋದನೆ ಪಡೆದು, ಅನುಮೋದಿತ ಪ್ರತಿಗಳನ್ನು ಆಯಾ ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಧಿಕಾರಿಗಳಿಗೆ ಮತ್ತು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲದ ಸಹಾಯಕ ನಿಯಂತ್ರಕರಿಗೆ ಸಲ್ಲಿಸಬೇಕಿರುತ್ತದೆ ಆದರೆ ಈ ಕ್ರಮವು ಆಗಿರುವುದಿಲ್ಲ. ಆದ ಪ್ರಯುಕ್ತ ಇನ್ನು ಮುಂದೆ ನಮೂನೆ 53 ರಲ್ಲಿ ಸ್ವೀಕೃತಿ ಮತ್ತು ಪಾವತಿ ವಿವರಗಳ ಪಟ್ಟಿಯನ್ನು ನಮೂನೆ-55ರಲ್ಲಿ ಆದಾಯ ಮತ್ತು ವೆಚ್ಚಗಳ ಪಟ್ಟಿಯನ್ನು ಹಾಗೂ ನಮೂನೆ -56ರಲ್ಲಿ ಸಮತೋಲನ ಪಟ್ಟಿಗಳನ್ನು ಮತ್ತು ನಮೂನೆ-54ರಲ್ಲಿ ಟ್ರಯಲ್ ಬ್ಯಾಲೆನ್ಸ್ ಪಟ್ಟಿ ಒಳಗೊಂಡಂತೆ ವಾರ್ಷಿಕ ಲೆಕ್ಕಪತ್ರಗಳನ್ನು ಸಕ್ಷಮ ಪ್ರಾಧಿಕಾರಗಳಿಗೆ ಹಾಗೂ ವರ್ತುಲ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದೆ. ಈ ರೀತಿಯಾಗಿ ಮಾಸಿಕ, ತ್ರೈಮಾಸಿಕ ಹಾಗೂ ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕ ತನಿಖೆಗೆ ಸಲ್ಲಿಸದೇ ಇರುವ ಕಾರಣ ಆದಾಯ ಮತ್ತು ವೆಚ್ಚದ ಸ್ವೀಕೃತಿ ಮತ್ತು

ಪಾವತಿಯ ಸತ್ಯಾಪನೆಯನ್ನು ಧೃಢೀಕರಿಸಲು ಸಾಧ್ಯವಾಗುತ್ತಿಲ್ಲ. ವಿತ್ತೀಯ ವಿವರಣಾ ಪಟ್ಟಿಗಳು ಚಾರ್ಟರ್ಡ್ ಅಕೌಂಟೆಂಟ್ಸ್‌ರವರಿಂದ ಧೃಢೀಕರಿಸದೆ ಇರುವುದರಿಂದ ಲೆಕ್ಕಗಳ ಸತ್ಯಾಪನೆಯನ್ನು ಧೃಢೀಕರಿಸಲು ಸಾಧ್ಯವಾಗಿರುವುದಿಲ್ಲ. ಈ ಕ್ರಮವನ್ನು ಮಾಡಿ ಲೆಕ್ಕತನಿಖೆಗೆ ಧೃಢಿಕರಣಕ್ಕಾಗಿ ಕಳುಹಿಸಲು ಸೂಚಿಸಲಾಗಿದೆ.

14. ರಶೀತಿ ಪುಸ್ತಕಗಳ ದಾಸ್ತಾನು ವಹಿ:-

ರಶೀತಿ ಪುಸ್ತಕಗಳ ದಾಸ್ತಾನವಹಿಯನ್ನು ಪರಿಶೀಲಿಸಲಾಗಿ ಕೆಳಕಂಡ ಅಂಶಗಳು ಕಂಡುಬಂದಿವೆ.

(ಅ) ದಾಸ್ತಾನು ವಹಿಯನ್ನು ಹಿಂದಿನ ಪದ್ಧತಿಯಲ್ಲಿ ನಿರ್ವಹಿಸಿದ್ದು, ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಬಜೆಟ್) ನಿಯಮಗಳು 2006ರ ನಿಯಮ 21ರನ್ವಯ ನಮೂನೆ 5ರಲ್ಲಿ ನಿರ್ವಹಿಸಲು ಸೂಚಿಸಲಾಗಿದೆ.

(ಆ) ನಿಯಮ 19ರಂತೆ ನಮೂನೆ 3ರಲ್ಲಿ ಮುದ್ರಿಸಿದ ರಶೀತಿ ಪುಸ್ತಕಗಳನ್ನು ಉಪಯೋಗಿಸಲು ಸೂಚಿಸಲಾಗಿದೆ. ಆದರೆ 2013-14ರಲ್ಲಿ ಹಳೆ ನಮೂನೆ ರಶೀತಿ ಪುಸ್ತಕಗಳನ್ನು ಉಪಯೋಗಿಸಿ ಆದಾಯಗಳ ನಗದು ಸಂಗ್ರಹಿಸಿರುವುದು ನಿಯಮಬದ್ಧವಾಗಿರುವುದಿಲ್ಲ.

(I). ಪ್ರಸಕ್ತ ಸಾಲಿನಲ್ಲಿ ಉಪಯೋಗಿಸಿದ ರಶೀತಿ ಪುಸ್ತಕಗಳ ದಾಸ್ತಾನು ವಿವರಗಳು ಇಂತಿವೆ.

1.4.2014ರಲ್ಲಿನ ಪ್ರಾರಂಭಿಕ ಶಿಲ್ಕು : 08 (2015-2110) 19969-1970)

2014-15ರಲ್ಲಿ ಸ್ವೀಕೃತಿ : 23

ಒಟ್ಟು ಪುಸ್ತಕಗಳು : 31 ಆದುದರಿಂದ 2013-14ರ ವರದಿಯಲ್ಲಿ 2 ರಸೀದಿ ಪುಸ್ತಕಗಳನ್ನು 2014-15 ಲೆಕ್ಕಪರಿಶೋಧನೆಯ್ಲಲಿ ಪರಿಗಣಿಸಲಾಗಿದೆ.

2014-15ನೇ ಸಾಲಿನಲ್ಲಿ ಉಪಯೋಗಿಸಿರುವ ರಶೀತಿ ಪುಸ್ತಕಗಳು : 26

31.3.2015ರಲ್ಲಿ ಅಖೈರು ಶಿಲ್ಕು : 05 (3895-3898 ಮತ್ತು 1964)

(II). ಉಪಯೋಗಿಸಿದ ರಶೀತಿ ಪುಸ್ತಕಗಳಲ್ಲಿ 2014-15ನೇ ಸಾಲಿನಲ್ಲಿ ಭಾಗಶಃ ಉಪಯೋಗಿಸಿದ ರಶೀತಿ ಪುಸ್ತಕಗಳ ವಿವರ.

ರಶೀತಿ ಪುಸ್ತಕದ ಸಂಖ್ಯೆ	ರಶೀತಿಸಂಖ್ಯೆ ದಿನಾಂಕದಿಂದ	ರಶೀತಿಸಂಖ್ಯೆ ದಿನಾಂಕದವರೆಗೆ	ಉಪಯೋಗಿಸಿದ್ದು
3893	194601/12.3.2015	194624/20.3.2015	ಚಲುವಯ್ಯ
3892	19455/16.3.2015	194592/26.3.2015	ಗೀತಾ
3844	194651/26.3.2015	194690/30.3.2015	ಗೀತಾ

15. ಗ್ರಾಮ ಪಂಚಾಯಿತಿಯ ತೆರಿಗೆಗಳ ವಸೂಲಿ ಮತ್ತು ನಿಧಿಗೆ ಜಮಾ ವಿವರದ ತಃಖ್ತೆ:

(i) ವಸೂಲಾತಿ ಹಾಗೂ ಜಮೆ:

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 19ರಂತೆ ತೆರಿಗೆಗಳ ವಸೂಲಾತಿಯ ವಿವರ ಹಾಗೂ ನಿಯಮ 25ರನ್ವಯ ವಸೂಲಾತಿಯಾದ ತೆರಿಗೆಗಳ ಬಾಬ್ತು ಗ್ರಾಮ ಪಂಚಾಯಿತಿ ನಿಧಿಗೆ ಜಮಾ ಮಾಡಿರುವ ವಿವರಗಳ ತಃಖ್ತೆ ಇಂತಿದೆ.

ಮಾಹೆಯ ವಿವರ	ಪಂಚಾಯಿತಿಯ ನಿಧಿ ಮೂಲಗಳಿಂದ ವಸೂಲಿಸಿದ ತೆರಿಗೆಯ ಮೊತ್ತ ರೂ.	2014-15ರಲ್ಲಿ ಮಾಹೆಯಲ್ಲಿ ಜಮಾ ಮೊತ್ತ ರೂ.	ವ್ಯತ್ಯಾಸದ ವಿವರ	
			ಹೆಚ್ಚು ಜಮಾ ರೂ.	ಕಡಿಮೆ ಜಮಾ ರೂ.
ಏಪ್ರಿಲ್ 2014	51668	53638		
ಮೇ 2014	47703	57613		
ಜೂನ್ 2014	85983	62775		
ಜುಲೈ 2014	70997	92024		
ಆಗಸ್ಟ್ 2014	66140	26200		
ಸೆಪ್ಟೆಂಬರ್ 2014	53502	86774		
ಅಕ್ಟೋಬರ್ 2014	31986	23645		
ನವೆಂಬರ್ 2014	68030	33100		
ಡಿಸೆಂಬರ್ 2013	74163	93004		
ಜನವರಿ 2015	85234	89112		
ಫೆಬ್ರವರಿ 2015	44427	47401		
ಮಾರ್ಚಿ 2015	130895	137734		
ಒಟ್ಟು	810728	806004	-	4724

15(2).ಕಡಿಮೆ ಇರುಸಾಲು ಕಂಡುಬಂದಿರುವುದು:

2014-15ನೇ ಸಾಲಿನ ಸದರಿ ಪಂಚಾಯಿತಿಯ ಒಟ್ಟು ವಸೂಲಾತಿ ರೂ.810728/- ಗಳು ಖಾತೆಗೆ ಜಮೆಯಾದ ಮೊತ್ತ. 806004/- ವ್ಯತ್ಯಾಸದ ಹಣ ರೂ.4724/- ಗಳನ್ನು ಸಂಬಂಧಿಸಿದ ಕರವಸೂಲಿಗಾರ, ಪಿಡಿಓ ರಿಂದ ವಸೂಲಾತಿ ಮಾಡಲು ಸೂಚಿಸಿದೆ ಹಾಗೂ ವಸೂಲಿಸಿದ ಎಲ್ಲಾ ರಸೀದಿಗಳನ್ನು ದಿನವಹಿ ಪುಸ್ತಕದಲ್ಲಿ ನಮೂದಿಸುವುದು.

16. ಆಸ್ತಿ - ಹೊಣೆಗಾರಿಕೆಗಳ ವಿವರ:

ದಿನಾಂಕ: 31.3.2015ಕ್ಕೆ **ವಿರೂಪಾಕ್ಷಿಪುರ** ಗ್ರಾಮ ಪಂಚಾಯಿತಿಯ ಲಭ್ಯವಿರುವ ಅಂಕಿ ಅಂಶಗಳ ಪ್ರಕಾರ ಆಸ್ತಿ - ಹೊಣೆಗಾರಿಕೆ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ಆರ್ಥಿಕ ಆಸ್ತಿಗಳ ವಿವರ	ಮೊತ್ತ ರೂ.	ಕ್ರ. ಸಂ.	ಹೊಣೆಗಾರಿಕೆಗಳ ವಿವರ	ಮೊತ್ತ ರೂ.
1	ಆಸ್ತಿಗಳು-ಸ್ವಂತ ನಿಧಿಯಿಂದ	560805	1	ಉಪಕರಗಳ ಬಾಬ್ತು	625071
2	ಆಸ್ತಿಗಳ-ಯೋಜನೆಗಳ ನಿಧಿಯಿಂದ	-	2	ತೆರಿಗೆಗಳ ಬಾಬ್ತು	141621
3	ಠೇವಣಿ/ಸಾಲ/ಮುಂಗಡ ಇ.ಎಂ.ಡಿ ಎಫ್ ಎಸ್.ಡಿ	-	3	ಆಡಿಟ್ ಶುಲ್ಕ	10000
4	ಬ್ಯಾಂಕ್ ಶಿಲ್ಕು	936903	4	ಬಾಕಿಯಿರುವ ವೆಚ್ಚಗಳು	-
5	ಆಸ್ತಿಗಿಂತ ಹೊಣೆಗಾರಿಕೆ ಹೆಚ್ಚಿರುವುದು	-	5	ಠೇವಣಿಗಳು/ಮುಂಗಡ	-
		-	6	ಸರ್ಕಾರಿ ತೆರಿಗೆಗಳ ಬಾಬ್ತು	-
		-	7	ಹೊಣೆಗಾರಿಕೆಗಿಂತ ಆಸ್ತಿ ಹೆಚ್ಚಿರುವುದು	721016
	ಒಟ್ಟು	1497708		ಒಟ್ಟು	1497708

17.ತೆರಿಗೆಗಳ ಬೇಡಿಕೆ ವಸೂಲಿ ಮತ್ತು ಬಾಕಿಗಳ ವಿವರಗಳು:

ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993ರ ಸೆಕ್ಷನ್ 199 ರ ಪ್ರಕಾರ ತೆರಿಗೆಗಳನ್ನು ವಿಧಿಸಲಾಗಿದೆ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಾವಳಿ 2006ರ ನಿಯಮ 30 ರನ್ವಯ ನಮೂನೆ-11 ರಲ್ಲಿ ಡಿ.ಸಿ.ಬಿ. ವಹಿಯನ್ನು ನಿರ್ವಹಿಸಬೇಕಿರುತ್ತದೆ. ಈ ಬಗ್ಗೆ ಕ್ರಮವಹಿಸುವಂತೆ ಸೂಚಿಸಿದೆ ತೆರಿಗೆಗಳ ಬೇಡಿಕೆ ವಹಿ ಮತ್ತು ದಿನವಹಿಯ ವಸೂಲಾತಿಯ ಕಿರ್ದಿ ಪ್ರಕಾರ 2014-15ನೇ ಸಾಲಿನ ಗ್ರಾಮ ಪಂಚಾಯಿತಿಯ ಬೇಡಿಕೆ-ವಸೂಲಿ ಹಾಗೂ ಬಾಕಿಯ ವಿವರ ಈ ಕೆಳಕಂಡಂತಿರುತ್ತದೆ. (ಕಾರ್ಯದರ್ಶಿಗಳು ಹಾಜರುಪಡಿಸಿರುವಂತೆ)

ಕ್ರ. ಸಂ	ತೆರಿಗೆಗಳ ವಿವರ	1.4.2014ಕ್ಕೆ ಪ್ರಾರಂಭಿಕ ಶಿಲ್ಕು ರೂ.	2014-15 ಕ್ಕೆ ಬೇಡಿಕೆ ರೂ.	ಒಟ್ಟು ಮೊತ್ತ ರೂ.	ವರ್ಷದ ವಸೂಲಿ ಮೊತ್ತ ರೂ.	31.3.2015ಕ್ಕೆ ಅಂತಿಮ ಶಿಲ್ಕು ರೂ.
1	2	3	4	5	6	7
1	ನಿವೇಶನ ಕಂದಾಯ ಮನೆ ಕಂದಾಯ	129464	383726	513190	444700	68490
2	ದೀಪದ ಕಂದಾಯ	405769	213373	619142	237867	381275
3	ನೀರಿನ ಕಂದಾಯ	12700	218793	231493	120453	111040
4	ಬಾಡಿಗೆಗಳು	-	-	-	-	-
5	ಹರಾಜುಗಳು	-	-	-	-	-
6	ಇತರೆ	-	-	-	-	-
	ಒಟ್ಟು	547933	815892	1363825	803020	560805

18.ಉಪಕರಗಳನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡದಿರುವ ಬಗ್ಗೆ:

ಪ್ರಸಕ್ತ ಸಾಲಿನಲ್ಲಿ ವಸೂಲಿಯಾದ ತೆರಿಗೆಗಳ ಮೇಲೆ ಸರ್ಕಾರಕ್ಕೆ ಜಮಾ ಮಾಡಬೇಕಾದ ಉಪಕರಗಳ ವಿವರ ಈ ಕೆಳಕಂಡಂತೆ ಇರುತ್ತದೆ.

ವಿವರ	ಮನೆ/ನಿವೇಶನ ಕಂದಾಯ ಉಪಕರಗಳು				ಒಟ್ಟು ರೂ.
	ಆರೋಗ್ಯ ಕರ ರೂ.	ಶಿಕ್ಷಣ ಕರ ರೂ.	ಗ್ರಂಥಾಲಯ ಕರ ರೂ.	ಬಿಕ್ಷುಕರ ಕರ ರೂ.	
ಪ್ರಸಕ್ತ	49780	33187	19912	9956	112834
ಕಳೆಯಿರಿ ಶೇ 10%	4978	3319	1991	996	11283
ಉಳಿಕೆ 90%	44802	29868	17921	8960	101551
1.4.14ಕ್ಕೆ ಪ್ರಾರಂಭಿಕ ಬಾಕಿ	238470	159177	93438	32435	523520
ಒಟ್ಟು	283272	189045	111359	41935	625071
ಸರ್ಕಾರಕ್ಕೆ ಜಮಾ	-	-	-	-	-
31.3.15ಕ್ಕೆ ಅಂತ್ಯಕ್ಕೆ ಬಾಕಿ	283272	189045	111359	41935	625071

ದಿನಾಂಕ : 31.3.2015 ರ ಅಂತ್ಯಕ್ಕೆ ಜಮಾ ಮಾಡದೇ ಉಳಿದಿರುವ ಉಪಕರಗಳ ಮೊತ್ತ ರೂ.625071/- ಗಳನ್ನು ಗ್ರಾಮ ಪಂಚಾಯಿತಿ ನಿಧಿಯಿಂದ ಡ್ರಾ ಮಾಡಿ ಸರ್ಕಾರದ ಆಯಾ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡಲು ಗ್ರಾಮ ಪಂಚಾಯಿತಿ ಆಡಳಿತ ವರ್ಗಕ್ಕೆ ಸೂಚಿಸಿದೆ. ಅಲ್ಲಿಯವರೆಗೂ ಪ್ರಸಕ್ತ ಸಾಲಿನ ಮೊತ್ತ ರೂ.101551/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

19.ಆದಾಯ ತರುವ ಆಸ್ತಿ/ಮೂಲಗಳ ವಹಿ/ದಾಖಲೆ ಪಾಲಿಸುವಿಕೆ:

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006 ನಿಯಮ 34ರ ಅನ್ವಯ ನಿಗದಿತ ನಮೂನೆ 15ರಲ್ಲಿ ಆದಾಯ ಸೃಷ್ಟಿ ಆಸ್ತಿಗಳ ವಿವರ ಮತ್ತು ವಸೂಲಾತಿ ವಿವರದ ವಹಿಯನ್ನು ನಿರ್ವಹಿಸಬೇಕಿರುತ್ತದೆ. ಪ್ರಯುಕ್ತ ನಿಯಮಾನುಸಾರ ನಿರ್ವಹಿಸಲು ಸೂಚಿಸಿದೆ. ಮುಖ್ಯವಾದ ಈ ದಾಖಲೆ/ವಹಿ ಪಾಲಿಸದಿದ್ದಲ್ಲಿ ಬೇಡಿಕೆ-ಬಾಕಿಗಳ ವಿವರ ಪಾರದರ್ಶಕವಾಗಿರದೆ, ವಸೂಲಾಗಬಹುದಾದ ಆದಾಯ ಹಾಗು ಬಾಕಿಗಳು ವಸೂಲಾಗದೆ ಹೋಗುವ ಸಂಭವವಿರುತ್ತದೆ. ಹಾಗೆಯೆ ಪಂಚಾಯ್ತಿ ಆಸ್ತಿಗಳ ಒಟ್ಟಾರೆ ಚಿತ್ರಣ ಲಭ್ಯವಾಗದೆ ಹೋಗುತ್ತದೆ.

ಕ್ರ. ಸಂ	ಬಾಡಿಗೆದಾರನ ಹೆಸರು	ನಿಗದಿ ಪಡಿಸಿದ ಮಾಸಿಕ ಬಾಡಿಗೆ ರೂ.	01-04-13 ಪ್ರಾರಂಭಿಕ ಬಾಕಿ ರೂ.	2014-15ನೇ ಸಾಲಿಗೆ ತಗಾದೆ ರೂ.	ಒಟ್ಟು ಬೇಡಿಕೆ ರೂ.	2014-15 ಸಾಲಿಗೆ ವಸೂಲಿ ರೂ.	31.3.2015ಕ್ಕೆ ಬಾಕಿ ರೂ.
		ಯಾವುದು ಇರುವುದಿಲ್ಲ					

20. ಹರಾಜ್ ಪ್ರಕರಣಗಳ ಬಗ್ಗೆ:

2006 ರ ಕರ್ನಾಟಕ ಪಂಚಾಯತ್ ರಾಜ್ ಲೆಕ್ಕ ಪತ್ರ ನಿಯಮಗಳ ನಿಯಮ 34 ರನ್ವಯ ಗ್ರಾಮ ಪಂಚಾಯಿತಿಯ ಆದಾಯ ಮೂಲಗಳಲ್ಲಿ ಹರಾಜ್ ಮೂಲಕ ವಿಲೇಮಾಡುವುದು ಪ್ರಮುಖ ಅಂಶವಾಗಿರುತ್ತದೆ. ಸದರಿಯನ್ವಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆಗಳು/ ಹುಣಸೆ/ ಮಾವಿನ ಮತ್ತು ಇತರೆ ಫಲಗಳು, ಮರಳು ಕಲ್ಲು ಸಾಗಾಣಿಕೆ, ಹುಲ್ಲುಗಾವಲು, ಅನುಪಯುಕ್ತ ಸಾಮಾಗ್ರಿಗಳು, ಇತ್ಯಾದಿಯಾಗಿ ವಾರ್ಷಿಕಾವಧಿಗೆ ಹರಾಜ್ ಮಾಡಿರುವುದು ಕಂಡು ಬಂದಿಲ್ಲ ಸದರಿಯನ್ವಯ 2013-14ನೇ ಸಾಲಿನ ಹರಾಜ್ ಮೂಲಕ ವಿಲೇಮಾಡಿರುವ ವಿವರ ಇರುವುದಿಲ್ಲ.

ಕ್ರ. ಸಂ	ಹರಾಜ್ ದಿನಾಂಕ	ಹರಾಜ್ ವಿವರ	ಬಾಕಿ ಮೊತ್ತ	ಅಕ್ಕೈರು ಬಿಡ್ಡು ಮೊತ್ತ	ಸೆಸ್ಸ್‌ಗಳ ಮೊತ್ತ	2014-15 ರಲ್ಲಿ ವಸೂಲಿ	31.3.2015 ಕ್ಕೆ ಅಂತ್ಯಕ್ಕೆ ಬಾಕಿ
			ಯಾವುದು ಇರುವುದಿಲ್ಲ				

21.ಪರವಾನಗಿ ಶುಲ್ಕಗಳ ಬಗ್ಗೆ.

(1). ಕಟ್ಟಡ ಪರವಾನಗಿ ಶುಲ್ಕ:

ಗ್ರಾಮ ಪಂಚಾಯಿತಿಗಳ (ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006 ರ ನಿಯಮ 35 ರನ್ವಯ ನಮೂನೆ-16ರಲ್ಲಿ ಪ್ರತಿಯೊಂದು ಶೀರ್ಷಿಕೆಯಡಿ ಲೈಸನ್ಸ್ ನೀಡಿಕೆಗಳ ದಾಖಲೆ ವಹಿಯನ್ನು ನಿರ್ವಹಿಸಬೇಕಿರುತ್ತದೆ. ಈ ಬಗ್ಗೆ ವಹಿ ನಿರ್ವಹಿಸಿರುವುದಿಲ್ಲ ಈ ದಾಖಲೆ/ವಹಿ ನಿರ್ವಹಣೆ ಮಾಡಲು ಕ್ರಮವಹಿಸುವಂತೆ ಸೂಚಿಸಿದೆ. ಲಭ್ಯವಾದ ಮಾಹಿತಿ ಪ್ರಕಾರ 2014-15ನೇ ಸಾಲಿನಲ್ಲಿ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿಯ ಪರವಾನಗಿಗಳ ಡಿ.ಸಿ.ಬಿ. ಯ ಘೋಷ್ವಾರೆ ಈ ಕೆಳಕಂಡಂತೆ ಇರುವುದು.

ಲಭ್ಯವಾದ ಮಾಹಿತಿ ಪ್ರಕಾರ 2014-15 ನೇ ಸಾಲಿನಲ್ಲಿ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿಯ ಪರವಾನಗಿಗಳ ಪ್ರಕರಣಗಳಿಂದ ಒಟ್ಟು ರೂ. /- ಶುಲ್ಕ ಖಾತೆಗೆ ಜಮೆಯಾಗಿರುತ್ತದೆ.

2/3

				ಶೇ 22.5ರ ವೆಚ್ಚ		77831
				ಶೇ 3% ವೆಚ್ಚ		18000
				ಸರ್ಕಾರಕ್ಕೆ ಜಮಾ ಮಾಡಿದ ತೆರಿಗೆಗಳು ಮತ್ತು ಕರಗಳು		
				ಆರೋಗ್ಯ ಕರ		
				ಶಿಕ್ಷಣ ಕರ		
				ಗ್ರಂಥಾಲಯ ಕರ		
				ರಾಜ ಧನ		
				ಆದಾಯ ತೆರಿಗೆ		
				ಮಾರಾಟ ತೆರಿಗೆ		30608
ಕ್ರ.ಸಂ	**ಯೋಜನಾ ಬಾಬ್ತು**	**ಅನುದಾನ ರೂ**		**ಬಡ್ಡಿ- ಇತರೆ ರೂ.**	**ಒಟ್ಟು ರೂ.**	**ವೆಚ್ಚ ರೂ**
1	ಎಸ್.ಜಿ.ಆರ್.ವೈ	–		–	–	–
2	ಐ.ಎ.ವೈ(ಇಂದಿರಾ ಆವಾಜ್)	–		5818	5818	194140
3	ಗ್ರಾಮ ಸ್ವರಾಜ್	–		–	–	–
4	ಉದ್ಯೋಗ ಖಾತ್ರಿ	20000		924	20924	60
5	ಆಶ್ರಯ	–		14429	14429	300600 30060
6	ಸುವರ್ಣ ಗ್ರಾಮೋದಯ(ತ)	–		–	–	–
7	ಸ್ವಚ್ಛಗ್ರಾಮ	351195		1515	352710	295925
8	ಮುಂದುವರಿಕೆ ಶಿಕ್ಷಣ	–		–	–	–
9	ಗ್ರಂಥಾಲಯ	–		–	–	–
10	ಶಾಲಾ ಶೌಚಾಲಯ	–		–	––	–
11	ಸಂ. ನೈರ್ಮಲ್ಯ	2512000		4295	2516295	2257410
12	ಮಳೆ ಕೊಯ್ಲು	–		–	–	–
13	ಎಸ್.ಜಿ.ಎಸ್.ವೈ	–		–	–	–
14	ಕುಗ್ರಾಮ ಸುವರ್ಣಗ್ರಾಮ	–		–	–	–
15	12ನೇ ಹಣಕಾಸು ಯೋಜನೆ	–		–	–	–
	1.04.14 ಕ್ಕೆ ಪ್ರಾರಂಭಿಕ ಶಿಲ್ಕು	921761		**31.3.2015 ಕ್ಕೆ ಅಂತಿಮ ಶಿಲ್ಕು**		936903
	ಒಟ್ಟು	6627429		**ಒಟ್ಟು**		6627429

16

ಉಪನಿರ್ದೇಶಕರು..
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
ರಾಮನಗರ.

(೩).ರಾಜೀವ್ ಗಾಂಧಿ ಗ್ರಾಮೀಣ ವಸತಿ ಯೋಜನೆ:

ಈ ಹಿಂದೆ ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ಮನೆ ನಿರ್ಮಿಸಿಕೊಳ್ಳಲು ಮತ್ತು ದುರಸ್ತಿಗೊಳಿಸಲು ಸಹಾಯ ಧನವನ್ನು ನೀಡುತ್ತಿದ್ದ ಯೋಜನೆಗಳನ್ನು ರಾಜೀವ್‌ಗಾಂಧಿ ಗ್ರಾಮೀಣ ವಸತಿ ಯೋಜನೆಯಡಿ ಮುಂದುವರೆಸಿರುವುದು ಕಂಡುಬಂದಿದೆ ಸದರಿಯೋಜನೆಯಡಿ ಸ್ವಂತ ಜಾಗ ಇರುವಂತಹ ವಸತಿಹೀನರ ಫಲಾನುಭವಿಗಳನ್ನು ಆಯ್ಕೆಮಾಡಿ ಗ್ರಾಮಪಂಚಾಯಿತಿ ನಡವಳಿ ಮೂಲಕ ಸಕ್ಷಮ ಪ್ರಾಧಿಕಾರಗಳಿಂದ ಅನುಮೋಧನೆ ಪಡೆದು ಪ್ರತಿಮನೆ ನಿರ್ಮಾಣಕ್ಕೆ ರೂ. /- ಗಳನ್ನು 4 ಕಂತುಗಳಲ್ಲಿ ನೀಡುತ್ತಿರುವುದು ಪರಿಶೀಲನೆಯಿಂದ ಕಂಡು ಬಂದಿದೆ ಈ ಬಗ್ಗೆ ಹಣಕಾಸು ವಹಿವಾಟುವನ್ನು ಪ್ರತ್ಯೇಕ ಬ್ಯಾಂಕ್ ಖಾತೆಯಲ್ಲಿ ನಿರ್ವಹಿಸಲಾಗಿದ್ದು 2014-15ನೇ ಸಾಲಿನ ಆರ್ಥಿಕ ಪರಿಸ್ಥಿತಿ ಘೋಷ್ವಾರೆ ಈ ಕೆಳಕಂಡಂತೆ ಇರುವುದು. ಜಿಲ್ಲಾ ಪಂಚಾಯಿತಿಯ ಅನುಮೋದಿತ ಫಲಾನುಭವಿಗಳ ಪಟ್ಟಿಯೊಂದಿಗೆ ಕಡತಗಳನ್ನು ಹಾಜರುಪಡಿಸದ ಕಾರಣ ವೆಚ್ಚವನ್ನು ಪರಿಶೀಲಿಸಿರುವುದಿಲ್ಲ.

ಪ್ರಾರಂಭಿಕ ಶಿಲ್ಕು ರೂ.	356987
ಸ್ವೀಕೃತಿಗಳು ಅ) ಅನುದಾನ ರೂ. ಆ) ಖಾತೆಯ ಬಡ್ಡಿ ರೂ. ಇ) ಇತರೆ ಜಮೆ ರೂ.	- 14429
ಒಟ್ಟು ರೂ.	371416
2014-15ರ ವೆಚ್ಚ ರೂ.	30060
31.3.2015ಕ್ಕೆ ಶಿಲ್ಕು ರೂ. ಬ್ಯಾಂಕ್ ಖಾತೆಯ ಶಿಲ್ಕು ರೂ.	341356
ವ್ಯಾತ್ಯಾಸ ರೂ.	-

28. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005ರ 4ನೇ ಪ್ರಕರಣದಡಿ, ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ. ಗ್ರಾಅಪ/41/ರಾಗ್ರಾಉ/06 ದಿನಾಂಕ 1-2-2007 ರಲ್ಲಿ ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ರಾಮನಗರ ಜಿಲ್ಲೆಯಲ್ಲಿ ದಿನಾಂಕ 1-4-2008ರಿಂದ ಕಾಯ್ದೆಯನ್ವಯ ಅನುಷ್ಠಾನಗೊಳಿಸಲಾಗಿದೆ. ರಾಜ್ಯದ ಅಧಿಸೂಚಿತ ಜಿಲ್ಲೆಗಳಲ್ಲಿ ಸ್ವಯಂ ಪ್ರೇರಣೆಯಿಂದ ಅರ್ಜಿ ಸಲ್ಲಿಸುವ ಮೂಲಕ ಅಕುಶಲ ದೈಹಿಕ ಕೆಲಸ ಬಯಸುವ ಗ್ರಾಮೀಣ ಪ್ರದೇಶದ ವಯಸ್ಕ ಸದಸ್ಯರ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ಮಟ್ಟದಲ್ಲಿ ಕನಿಷ್ಠ 100 ದಿನಗಳ ಖಾತರಿ ಉದ್ಯೋಗವನ್ನು ಒದಗಿಸಿ ಅವರ ಜೀವನಕ್ಕೆ ಭದ್ರತೆ ಒದಗಿಸುವುದು ಹಾಗೂ ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸುವುದು ಮತ್ತು ಗ್ರಾಮೀಣ ಬಡವರ ಜೀವನೋಪಾಯದ ಸಂಪನ್ಮೂಲ ಆಧಾರಗಳನ್ನು ಬಲಪಡಿಸುವುದು ಮುಖ್ಯ ಉದ್ದೇಶವಾಗಿದೆ. ಸದರಿ ಅಧಿಸೂಚನೆಯ ಕಂಡಿಕೆ (19) ರಂತೆ ಗ್ರಾಮ ಪಂಚಾಯಿತಿಗಳಿಗೆ ಸರ್ಕಾರ ಬಿಡುಗಡೆ ಮಾಡುವ ಅನುದಾನವನ್ನು ನಿಯಮಾನುಸಾರ ಹಾಗೂ ಸಮರ್ಪಕವಾಗಿ ಬಳಕೆ ಮಾಡಿರುವುದರ ಬಗ್ಗೆ ಶಾಸನಬದ್ಧ ಅಧಿಕಾರಿಯಾಗಿ ಲೆಕ್ಕ ಪರಿಶೋಧನೆ ಕೈಗೊಳ್ಳಲಾಗಿದೆ.

ಸದರಿ ಯೋಜನೆಯಡಿ 2014-15ನೇ ಸಾಲಿನಲ್ಲಿ ಉದ್ಯೋಗಕ್ಕಾಗಿ ಬಂದಿರುವ ಮತ್ತು ವೆಚ್ಚವಾಗಿರುವ ಅನುದಾನ ವಿವರವು ನಗದು ಪುಸ್ತಕದಲ್ಲಿ ನಿರ್ವಹಿಸಿರುವ ಮತ್ತು ನಿಧಿಯ ಬ್ಯಾಂಕ್ ಖಾತೆಯಲ್ಲಿ ದಾಖಲಿಸಿರುವ ಮಾಹಿತಿಗಳನ್ನಾಧರಿಸಿ ಆರ್ಥಿಕ ಪರಿಸ್ಥಿತಿಯ ವಿವರ ಈ ಕೆಳಕಂಡಂತಿದೆ.

೨೬. ಇಂದಿರಾ ಆವಾಜ್ ಯೋಜನೆ :-

ಗ್ರಾಮವಾಸಿ ಬಡಜನರಿಗೆ ವಸತಿ ಸೌಕರ್ಯಕ್ಕಾಗಿ ಸಹಾಯಧನದೊಡನೆ ಪ್ರೋತ್ಸಾಹಿಸಲು ಮತ್ತು ಗುಡಿಸಲು ರಹಿತ ಗ್ರಾಮಗಳಾಗಿ ಪರಿವರ್ತಿಸಲು, ಸರ್ಕಾರದ ಸುತ್ತೋಲೆ ಆರ್‌ಡಿಪಿ14ಐಎವೈ99 ದಿನಾಂಕ 11-1-2000 ಮತ್ತು ದಿನಾಂಕ 5-5-2000ರ ಸರ್ಕಾರಿ ಆದೇಶ ಗ್ರಾಅಪ47ಐಎವೈ2000 ರಂತೆ ಕೆಳಕಂಡ ವಿವರಗಳಂತೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯ ಕಡತಗಳನ್ನು ಪರಿಶೀಲಿಸಲಾಗಿ ಈ ಕೆಳಗಿನ ನ್ಯೂನತೆಗಳು ಕಂಡುಬಂದಿರುತ್ತವೆ.

ಈ ಯೋಜನೆಯ ಅನುಷ್ಠಾನದಲ್ಲಿ ಕಂಡುಬಂದ ನ್ಯೂನತೆಗಳು:-

1. ಈ ಉಪಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳ ಮನೆ ಪರಿವರ್ತಿಸುವ ಪ್ರಥಮದಲ್ಲಿ ಅಗತ್ಯ ಮಾಹಿತಿಗಳನ್ನು ಅನುಬಂಧ -2 ರಲ್ಲಿ ಪಡೆದಿರುವ ಬಗ್ಗೆ ಮಾಹಿತಿಗಳನ್ನು ತಪಾಸಣೆಗೆ ಹಾಜರುಪಡಿಸಿರುವುದಿಲ್ಲ.

2. ಮನೆಗಳ ಪರಿವರ್ತನೆಯ ಪ್ರಥಮದಲ್ಲಿ ಮತ್ತು ಪರಿವರ್ತನೆಯ ನಂತರದ ಫಲಾನುಭವಿಗಳು ಈ ಉಪಯೋಜನೆಯನ್ನು ಹೊರತುಪಡಿಸಿ, ಇತರೆ ಯಾವ ಯೋಜನೆಯಲ್ಲಿಯೂ ಸೌಲಭ್ಯ ಪಡೆದಿಲ್ಲವೆಂಬುದನ್ನು ದೃಢೀಕರಿಸುವ ಮಾಹಿತಿ ಇರುವುದಿಲ್ಲ.

ಮೇಲ್ಕಂಡ ಮಾಹಿತಿಗಳನ್ನು ಪರಿಗಣಿಸಿ, ಸೂಕ್ತ ದಾಖಲೆ ಪತ್ರಗಳ ನಿರ್ವಹಣೆಗಳೊಡನೆ ಕಾರ್ಯಾನುಷ್ಠಾನದಲ್ಲಿ ಸುಧಾರಣೆ ಹೊಂದಲು ಸೂಚಿಸಲಾಗಿದೆ.

ಆದುದರಿಂದ ಈ ಅವಧಿಯಲ್ಲಿ ಆಗಿರುವ ವೆಚ್ಚವನ್ನು ಲೆಕ್ಕ ಪರಿಶೋಧನೆಯಲ್ಲಿ ಧೃಢಿಕರಿಸಲು ಸಾಧ್ಯವಾಗುತ್ತಿಲ್ಲ. ಇದನ್ನು ಮುಂದಿನ ಲೆಕ್ಕ ತನಿಖೆ ವೇಳೆಗಾದರು ಸಾದರಪಡಿಸುವುದು.

೨೭. ಇತರೆ ಯೋಜನೆಗಳ ಕಡತಗಳನ್ನು ಕುರಿತು.

(1). ಸಂಪೂರ್ಣ ಗ್ರಾಮ ನೈರ್ಮಲ್ಯ ಯೋಜನೆ:

ಸಂಪೂರ್ಣ ಸ್ವಚ್ಛತಾ ಆಂದೋಲನ ಯೋಜನೆಯು ಗ್ರಾಮ ನೈರ್ಮಲ್ಯದಿಂದ ಜನರ ಆರೋಗ್ಯ ವೃದ್ಧಿಪಡಿಸಿ ಜೀವನ ಮಟ್ಟ ಮತ್ತು ಸ್ವಚ್ಛತೆಯನ್ನು ಕಾಯ್ದುಕೊಳ್ಳಲು, ವೈಯುಕ್ತಿಕ ಶೌಚಾಲಯ, ಅಂಗನವಾಡಿ ಮತ್ತು ಸರ್ಕಾರಿ ಶಾಲೆಗಳಲ್ಲಿ ಶೌಚಾಲಯಗಳ ನಿರ್ಮಾಣ ಮಾಡಿ ಹಳ್ಳಿಯ ಜನರ ಆರೋಗ್ಯ ಕಾಪಾಡುವ ಮತ್ತು ಗ್ರಾಮ ಸ್ವಚ್ಛತೆಯನ್ನು ಕಾಪಾಡುವ ಗುರಿಯಾಗಿದ್ದು ಈ ಪಂಚಾಯಿತಿಯಲ್ಲಿ ಯೋಜನಾ ಅನುಷ್ಠಾನಗೊಳಿಸಲು ಅನುಸರಿಸಿದ ವ್ಯವಸ್ಥೆಯ ವಿವರ ತಿಳಿದು ಬಂದಿಲ್ಲ.

(2). ಸ್ವರ್ಣಜಯಂತಿ ಗ್ರಾಮ ಸ್ವರೋಜ್ಗಾರ್ ಯೋಜನೆ:-

ಸರ್ಕಾರದ ಅಧಿಸೂಚನೆ ಗ್ರಾಅಪಂ 367ಜಿಪಸ2002 ದಿನಾಂಕ 18-8-2003ರಲ್ಲಿ ಪಂಚಾಯತ್‌ರಾಜ್‌ಗಳ ಮೂಲಕ ಬಡತನದ ಕುಟುಂಬಗಳನ್ನು ಬಡತನ ರೇಖೆಯಿಂದ ಮೇಲೆತ್ತಿ ಅವರಿಗೆ ವರ್ಷಾನುಕ್ರಮೇಣದಲ್ಲಿ ಆದಾಯ ತರುವಂತೆ ಗ್ರಾಮೀಣ ಬಡತನವನ್ನು ಸ್ವಸಹಾಯ ಗುಂಪುಗಳಾಗಿ ಪರಿವರ್ತಿಸಿ ಮೂಲಭೂತ ಸೌಲಭ್ಯಗಳನ್ನು ಬಲಪಡಿಸುವುದು, ನಿರ್ಮಾಣ ಸಾಮರ್ಥ್ಯ ಹಾಗೂ ಆದಾಯ ತರುವಂತೆ ಸ್ವತ್ತನ್ನು ಅಭಿವೃದ್ಧಿಪಡಿಸಲು ತಂತ್ರಜ್ಞಾನ, ತರಬೇತಿ, ಮಾರುಕಟ್ಟೆ ವ್ಯವಸ್ಥೆಗಳ ಮೂಲಕ ಸಂಘಟಿಸುವ ಧ್ಯೇಯವಾಗಿರುತ್ತದೆ.

4 ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳ ವಿವರ:

4(1) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 246(6) ಮತ್ತು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 113ರಂತೆ, ಗ್ರಾಮ ಪಂಚಾಯಿತಿಯು ಹಿಂದಿನ ಲೆಕ್ಕತನಿಖಾ ವರದಿಗಳಿಗೆ ಉತ್ತರಿಸಲು ಕೈಗೊಂಡ ಕ್ರಮದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ವಸೂಲಾತಿ/ ಆಕ್ಷೇಪಣೆಗಳನ್ನು ನಿಗಧಿತ ನಮೂನೆಗಳಲ್ಲಿನ ವಹಿಯಲ್ಲಿ ನಿರ್ವಹಿಸಿರುವುದಿಲ್ಲ ಮತ್ತು ಅನುಪಾಲನಾ ವರದಿಗಳನ್ನು ಸಹ ಸಲ್ಲಿಸದೆ ಇರುವುದು ಕಂಡುಬಂದಿರುತ್ತದೆ.

ಆದುದರಿಂದ ನಿಯಮ 113ರಂತೆ, ಲೆಕ್ಕ ತಪಾಸಣಾ ವರದಿ/ಕಂಡಿಕೆಗಳಿಗೆ ಅನುಪಾಲನಾ ವರದಿಯನ್ನು ಗ್ರಾಮಪಂಚಾಯಿತಿ ಸಭೆಯಲ್ಲಿ ಮಂಡಿಸಿ ಚನ್ನಪಟ್ಟಣ ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಷರಾದೊಂದಿಗೆ ಹಾಗೂ ಅವರ ಮುಖಾಂತರ (ಸಹಾಯಕ ನಿಯಂತ್ರಕರು) ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ರಾಮನಗರ ಇವರಿಗೆ ತೀರುವಳಿಗಾಗಿ ಸಲ್ಲಿಸಲು ಸೂಚಿಸಲಾಗಿದೆ.

ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ತೀರುವಳಿಯಾಗದೆ ಬಾಕಿ ಇರುವ ಕಂಡಿಕೆಗಳಲ್ಲಿ ಆಕ್ಷೇಪಣೆಗಳಲ್ಲಿಟ್ಟಿರುವ ಮತ್ತು ವಸೂಲಾತಿಗೆ ಸೂಚಿಸಿರುವ ಮೊತ್ತಗಳ ವರ್ಷಾವಾರು ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿರುತ್ತದೆ.

ಈ ಸಂಬಂಧ ರಚಿತವಾಗಿರುವ ಅಡ್‌ಹಾಕ್ ಸಮಿತಿ ಸಭೆಯಲ್ಲಿ ಕಂಡಿಕೆಗಳ ತೀರುವಳಿಗೆ ಕ್ರಮವಹಿಸಲು ತಿಳಿಸಲಾಗಿದೆ. ಸಕಾಲಿಕ ಕ್ರಮಗಳಿಂದ ಮಾತ್ರವೇ ವಸೂಲಾತಿಗೆ ಸೂಚಿಸಲಾಗಿರುವ ಮೊತ್ತಗಳನ್ನು ವಸೂಲಿಸಬಹುದಾಗಿದೆ. ವಿಳಂಬದ ಹಾಗೂ ನಿರ್ಲಕ್ಷಿತ ಕ್ರಮಗಳಿಂದ ವಸೂಲಾಗಬಹುದಾದ ಹಣದ ಮೌಲ್ಯಗಳು ವಸೂಲಾಗದ ಹುತವನ್ನು ತಲುಪುವ ಸಂಭವ ಏರ್ಪಡಬಹುದಾಗಿರುತ್ತದೆ. ಆದ್ದರಿಂದ, ಈ ಸಂಬಂಧವಾಗಿ ಜರೂರು ಕ್ರಮಜರುಗಿಸಲು ಲೆಕ್ಕಪರಿಶೋಧನೆ ಸೂಚಿಸುತ್ತದೆ.

2015-16 ನೇ ಸಾಲಿನ ವರ್ಷಾಂತ್ಯಕ್ಕೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಸೆಕ್ಷನ್ 246(7)ರ ಪ್ರಕಾರ ಹಿಂದಿನ ಸಾಲಿನ ಲೆಕ್ಕತನಿಖಾ ವರದಿಗಳ ಕಂಡಿಕೆಗಳಂತೆ ತೀರುವಳಿಗೊಂಡ ಕಂಡಿಕೆಗಳ ವಿವರ ಈ ಕೆಳಕಂಡಂತಿದ್ದು, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಸೆಕ್ಷನ್ 246(8)ರ ಪ್ರಕಾರ ಚನ್ನಪಟ್ಟಣತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಋಣಭಾರ ಹೊರಿಸಿದ ಮತ್ತು ತೀರುವಳಿಗೊಂಡ ಪ್ರಕರಣಗಳ ವಿವರಗಳು ಲೆಕ್ಕ ಪರಿಶೋಧನೆಗೆ ಒದಗಿಸಿರುವುದಿಲ್ಲ.

ಚನ್ನಪಟ್ಟಣ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ವಿರೂಪಾಕ್ಷಿಪುರ ಗ್ರಾಮ ಪಂಚಾಯಿತಿರವರುಗಳು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993 ರ ಸೆಕ್ಷನ್ 246(6) ಮತ್ತು (8), (9) ರಂತೆ ಸೂಕ್ತ ಕ್ರಮಕೈಗೊಳ್ಳಲು ಲೆಕ್ಕಪರಿಶೋಧನೆಯು ಸೂಚಿಸಿದೆ.

4(2) ವರ್ಷಾಂತ್ಯಕ್ಕೆ ಕರ್ನಾಟಕ ಪಂಚಾಯತ್ ರಾಜ್ 1993 ಸೆಕ್ಷನ್ 246[7]ರ ಪ್ರಕಾರ ಹಿಂದಿನ ಲೆಕ್ಕ ತನಿಖಾ ವರದಿಗಳ ತೀರುವಳಿ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ವಿವರ.

ಕ್ರ.ಸಂ	ವರ್ಷ	ಆಕ್ಷೇಪಣೆ		ವಸೂಲಾತಿ	
		ಕಂಡಿಕೆ	ಮೊತ್ತ	ಕಂಡಿಕೆ	ಮೊತ್ತ
1.	01.04.2015ಕ್ಕೆ ಪ್ರಾರಂಭ ಶಿಲ್ಕು		1253133		209607
2.	2015-16ಕ್ಕೆ ಸೇರ್ಪಡೆ	1	68453	2	35442
3.	ಒಟ್ಟು		1321586		245049
4.	2015-16ಕ್ಕೆ ತೀರುವಳಿ		-		-
5.	31.03.2016ಕ್ಕೆ ಅಂತಿಮ ಶಿಲ್ಕು		1321586		245049

ಕರ್ನಾಟಕ ಪಂಚಾಯತ್ ರಾಜ್ಯ (ಆಯವ್ಯಯ ಮತ್ತು ಲೆಕ್ಕ ಪತ್ರಗಳು) ಗಳ ನಿಯಮಗಳು 2006 ನಿಯಮ 114ರ ಪ್ರಕಾರ ಲೆಕ್ಕ ಪರಿಶೋಧನಾ ಸಮಿತಿಯನ್ನು ರಚಿಸಿರುತ್ತಾರೆ/ರಚಿಸಿರುವುದಿಲ್ಲ. ಈ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು/ಕಾರ್ಯದರ್ಶಿಗಳ/ ಗ್ರಾಮ ಪಂಚಾಯಿತಿಯ ವಿವರಣೆ ಅಗತ್ಯ.

ಬಾಕಿ ಉಳಿದಿರುವ ಆಕ್ಷೇಪಣೆ ವಸೂಲಾತಿ ಮೊತ್ತಗಳ ತೀರುವಳಿಗೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ನಿಯಮ 246 (6)(8) ರ ಪ್ರಕಾರ. ಸಕ್ಷಮ ಪ್ರಾಧಿಕಾರವಾದ ಕಾರ್ಯ ನಿರ್ವಾಹಣಾಧಿಕಾರಿ,ತಾಲ್ಲೂಕು ಪಂಚಾಯತಿ ಚನ್ನಪಟ್ಟಣ ತಾಲ್ಲೂಕು ರವರು ಸದರಿ ಆರ್ಥಿಕ ವರ್ಷದಲ್ಲಿ ಅಡ್‌ಹಾಕ್ ಸಮಿತಿ ಸಭೆ ಕರೆದು ತೀರುವಳಿಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಇದರಿಂದ ಸದರಿ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿ ಕಾರ್ಯದರ್ಶಿಗಳು/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸೇವೆಯಿಂದ ನಿವೃತ್ತಿ ಹೊಂದಿ ಆಕ್ಷೇಪಣಾ ಮೊತ್ತ ಮತ್ತು ವಸೂಲಾತಿ ಮೊತ್ತಗಳು ತೀರುವಳಿಯಾಗದೇ ಬಾಕಿ ಉಳಿಯುವುದಕ್ಕೆ ಕಾರಣವಾಗುತ್ತದೆ. ಇದಕ್ಕೆ ಸಂಬಂಧಿಸಿದ ಕಾರ್ಯನಿರ್ವಹಣಾ ಅಧಿಕಾರಿಗಳೇ ನೇರ ಜವಾಬ್ದಾರರಾಗುತ್ತಾರೆ.

4(4) 2015-16ನೇ ಸಾಲಿನಲ್ಲಿ ಜಮಾ ಬಂದಿ ನಡೆಸಿರುವ ವಿವರ:

ಸಂಪೂರ್ಣ ಪಾರದರ್ಶಕತೆ ಹೊಂದುವ ಸಲುವಾಗಿ ಸರ್ಕಾರವು ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ಜಮಾಬಂದಿ ನಿರ್ವಹಣೆ) ಕಾಯಿದೆ 2004 ದಿನಾಂಕ: 15.03.2005 ರಿಂದ ಜಾರಿಗೆ ತಂದಿದ್ದು ಆರ್ಥಿಕ ವರ್ಷದಲ್ಲಿ ಆಗಸ್ಟ್ 16 ರಿಂದ ಸೆಪ್ಟೆಂಬರ್ 15 ರೊಳಗೆ ನಡೆಸಬೇಕಾಗಿರುತ್ತದೆ. ಆದರೆ ಗ್ರಾಮ ಪಂಚಾಯಿತಿಯು ದಿನಾಂಕ:02- 10-2015 ರಂದು 2014-15ನೇ ಸಾಲಿನ ಲೆಕ್ಕಪತ್ರಗಳ ಜಮಾಬಂಧಿ ನಡೆಸಿದ್ದು ವಿಳಂಭವಾಗಿರುತ್ತದೆ. ಈ ಬಗ್ಗೆ ಸಕ್ಷಮ ಪ್ರಾಧಿಕಾರವದ ಕಾರ್ಯನಿರ್ವಹಣಾ ಅಧಿಕಾರಿ,ತಾಲ್ಲೂಕು ಪಂಚಾಯಿತಿ ಚನ್ನಪಟ್ಟಣ ತಾಲ್ಲೂಕು ರವರೆ ಜವಬ್ದಾರರಾಗಿರುತ್ತಾರೆ.

ಭಾಗ – 02

ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆ:-

5. ಭೌತಿಕ ಪರಿಶೀಲನೆ :-

ಸದರಿ ಸಾಲಿನ ವಿರೂಪಾಕ್ಷಿಪುರ ಗ್ರಾಮ ಪಂಚಾಯ್ತಿಯ ಲೆಕ್ಕ ತನಿಖಾ ಪ್ರಾರಂಭ ದಿನಾಂಕ:19-12-2016 ರಂದು ಭೌತಿಕವಾಗಿ ಪರಿಶೀಲಿಸಲಾಗಿರುವ ವಿವರ ಕೆಳಕಂಡಂತಿರುತ್ತದೆ.

1.	ನಗದು ಶಿಲ್ಕು ಮೊತ್ತ ರೂ.	ಲೆಕ್ಕಪರಿಶೋಧನೆಗೆ ಮಾಹಿತಿ ಒದಗಿಸಿರುವುದಿಲ್ಲ
2.	ಉಪಯೋಗಿಸದಿರುವ ಧನಾದೇಶ ಪುಸ್ತಕಗಳ ಸಂಖ್ಯೆ	
3.	ಅಂಚೆ ಚೀಟಿ ಶಿಲ್ಕಿನ ಮೊತ್ತ ರೂ.	
4.	ಉಪಯೋಗಿಸದ ಅಳತೆ ಪುಸ್ತಕಗಳ ಸಂಖ್ಯೆ	
5.	ಉಪಯೋಗಿಸದ ದಿನಗೂಲಿ ಪಟ್ಟಿಗಳ ಸಂಖ್ಯೆ	
6.	ಹೂಡಿಕೆಗಳ ಮೊತ್ತ ರೂ.	
7.	ಉಪಯೋಗಿಸದ ರಸೀದಿ ಪುಸ್ತಕಗಳ ದಾಸ್ತಾನು ಸಂಖ್ಯೆ	ರಸೀದಿ ಪುಸ್ತಕ ದಾಸ್ತಾನು ವಹಿಯನ್ನು ಕ್ರಮಬದ್ಧವಾಗಿ ನಿರ್ವಹಿಸಿರುವುದಿಲ್ಲ

6.1. ಆರ್ಥಿಕ ಪರಿಸ್ಥಿತಿ :-

2015-16ನೇ ಸಾಲಿನ ಗ್ರಾಮ ಪಂಚಾಯ್ತಿ ನಿಧಿಯ ಹಾಗೂ ಎಲ್ಲಾ ಯೋಜನೆಗಳ ಹಾಗೂ ಬ್ಯಾಂಕ್ ಮತ್ತು ಖಜಾನೆ ಖಾತೆಗಳ ಆರ್ಥಿಕ ಪರಿಸ್ಥಿತಿ ವಿವರಗಳು ಈ ಕಳಕಂಡಂತಿರುತ್ತವೆ.

ವಿವರಗಳು	ಗ್ರಾಮ ಪಂಚಾಯತಿ ನಿಧಿಗಳು	ಯೋಜನಾ ನಿಧಿಗಳು	ಒಟ್ಟು	ನರೇಗಾ ಆನ್‌ಲೈನ್ ಪಾವತಿ	ಒಟ್ಟು ಮೊತ್ತ
01-04-2015 ಕ್ಕೆ ಪ್ರಾರಂಭ ಶಿಲ್ಕು	256164	680739	936903	-	936903
2015-16 ನೇ ಸಾಲಿಗೆ ಸ್ವೀಕೃತಿ	3862213	440342	4302555	5129917	9432472
ಒಟ್ಟು	4118377	**1121081**	**5239458**	**5129917**	10369375
2015-16 ನೇ ಸಾಲಿಗೆ ವೆಚ್ಚ	3550361	723645	4274006	5129917	**9403923**
31-03-2016 ಕ್ಕೆ ಅಖೈರು ಶಿಲ್ಕು	**568016**	**397436**	**965452**	-	965452
ಖಜಾನೆ/ಬ್ಯಾಂಕ್ ಶಿಲ್ಕುಪಟ್ಟಿಯಂತೆ ಅಂತಿಮ ಶಿಲ್ಕು	518952	365197	884149	-	**884149**
ವ್ಯತ್ಯಾಸ	**49064**	**32239**	**81303**	-	81303

ಲೆಕ್ಕ ತನಿಖೆಗೆ ಹಾಜರು ಪಡಿಸಿದ ದಾಖಲೆಗಳ ಪ್ರಕಾರ ಆರ್ಥಿಕ ವರ್ಷದ ಅಂತ್ಯಕ್ಕೆ ಅಂತಿಮ ಶಿಲ್ಕನ್ನು ಬ್ಯಾಂಕ್/ಖಜಾನೆ ಪಾಸ್ ಪುಸ್ತಕಗಳ ಶಿಲ್ಕಿನೊಂದಿಗೆ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯ್ತಿ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006 ನಿಯಮ 105 ರಂತೆ ಲೆಕ್ಕ ಸಮನ್ವಯಗೊಳಿಸಲಾಗಿರುತ್ತದೆ. ಈ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು /ಕಾರ್ಯದರ್ಶಿಗಳು ಕ್ರಮ ಕೈಗೊಳ್ಳಲು ಸೂಚಿಸಿದೆ. ಸಮಗ್ರ ಅರ್ಥಿಕ ಪರಿಸ್ಥಿತಿ ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ. ಮತ್ತು 2015-16ನೇ ಸಾಲಿನ ಸ್ವೀಕೃತಿ ಮತ್ತು ಪಾವತಿ ವಿವರಗಳ ತಃಖ್ತೆಯನ್ನು ಅನುಬಂಧ-3ರಲ್ಲಿ ಲಗತ್ತಿಸಿದೆ.

6.2. ಗ್ರಾಮಪಂಚಾಯಿತಿ ನಿಧಿಯ ಸಾಮಾನ್ಯ ಆದಾಯ ಮತ್ತು ಸಾಮಾನ್ಯ ವೆಚ್ಚಗಳ ವಿವರ:

ಗ್ರಾಮ ಪಂಚಾಯಿತಿ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ವಿವಿಧ ಯೋಜನೆಗಳ ಜಮಾ ಮತ್ತು ಪಾವತಿ ವಿವರಗಳನ್ನು ಹೊರತುಪಡಿಸಿ ಸ್ವ ಆದಾಯ ಹಾಗೂ ಸೆಕ್ಷನ್ 206 ಮತ್ತು 208ರಡಿ ಸ್ವೀಕೃತಿಯಾಗಿರುವ ಎಲ್ಲಾ ಅನುದಾನ / ನೀರು ನಿರ್ವಹಣೆ ಅನುದಾನಗಳ ವಾರ್ಷಿಕ ಜಮೆ ಮತ್ತು ವೆಚ್ಚಗಳ ವಿವರವನ್ನು ಹಿಂದಿನ ಎರಡು ವರ್ಷಗಳ ಸಾಮಾನ್ಯ ಆದಾಯ ಮತ್ತು ಸಾಮಾನ್ಯ ವೆಚ್ಚಗಳೊಂದಿಗೆ ತಾಳೆಮಾಡಲಾಗಿ ಸರಾಸರಿ ಆದಾಯ ಮತ್ತು ವೆಚ್ಚಗಳ ವಿವರ ಈ ಕೆಳಕಂಡಂತೆ ಇರುವುದು ಕಂಡುಬಂದಿದೆ.

ಕ್ರ.ಸಂ	ವಾರ್ಷಿಕ	ಸಾಮಾನ್ಯ ಆದಾಯ ರೂ.	ಸಾಮಾನ್ಯ ವೆಚ್ಚ ರೂ.
1	2013-2014	2924956	3443965
2	2014-2015	2795492	2912931
3	2015-2016	3862213	3550361
ಒಟ್ಟು		9582661	9907257
ಸರಾಸರಿ		319422	3302419

7. ನಗದು ಪುಸ್ತಕ ನಿರ್ವಹಣೆ-ಲೋಪದೋಷಗಳು:

ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮ 2006 ರ ನಿಯಮ 104 ರಲ್ಲಿ ತಿಳಿಸಿದಂತೆ ನಮೂನೆ-49 ರಲ್ಲಿ ನಗದು ಪುಸ್ತಕ ನಿರ್ವಹಿಸಲಾಗಿದ್ದು, ಪೂರ್ಣ ಪ್ರಮಾಣದಲ್ಲಿ ಇಲ್ಲದಿದ್ದರೂ, ಪ್ರಾರಂಭಿಕ ಹಂತದಲ್ಲಿ ಸಾಧಾರಣ ನಿರ್ವಹಿಸಿದೆ. ಮುಂದಿನ ಆರ್ಥಿಕ ಸಾಲಿನಲ್ಲಿ ಈ ಕೆಳಗೆ ಸೂಚಿಸಿದಂತೆ. ನಗದು ಪುಸ್ತಕ ಹಾಗೂ ಅದಕ್ಕೆ ಸಂಬಂಧಿಸಿದ ಇನ್ನಿತರ ದಾಖಲೆಗಳನ್ನು ನಿರ್ವಹಿಸಲು ಸೂಚಿಸಿದೆ. ನಮೂನೆ-49 ರಲ್ಲಿ ನಗದು ಮತ್ತು ಬ್ಯಾಂಕ್ ಕಾಲಂಗಳನ್ನು ಒಳಗೊಂಡ ನಗದು ಪುಸ್ತಕವನ್ನು ನಿರ್ವಹಿಸತಕ್ಕದ್ದು. ಗ್ರಾಮ ಪಂಚಾಯತಿಯ ನಗದನ್ನು ಹಾಗೂ ಖಜಾನೆ / ಬ್ಯಾಂಕ ವ್ಯವಹಾರಗಳನ್ನು ಸಂಬಂಧಪಟ್ಟ ಕಾಲಂಗಳಲ್ಲಿ ಅನುಕ್ರಮವಾಗಿ ನಮೂದಿಸತಕ್ಕದ್ದು ಬ್ಯಾಂಕ್ ಖಾತೆಗಳಿಗೆ ಜಮೆ / ಆದಾಯಗಳನ್ನು (Credit) ನಗದು ಪುಸ್ತಕದ ಎಡಭಾಗದಲ್ಲಿ ನಮೂದಿಸತಕ್ಕದ್ದು ರಶೀದಿ ಪುಸ್ತಕಗಳಲ್ಲಿ ದಾಖಲಿಸಿದ ನಮೂದುಗಳ ಆಧಾರದ ಮೇಲೆ (ದಿನವಹಿ ಪುಸ್ತಕದ ವಸೂಲಾತಿಯನ್ನು ಆಧರಿಸಿಯೂ) ಚೆಕ್ ಸ್ವೀಕೃತಿ ರಿಜಿಸ್ಟರ್‌ನಲ್ಲಿ ದಾಖಲಾದ ಚೆಕ್ಕುಗಳ ಮತ್ತು ಬ್ಯಾಂಕಿಗೆ ಜಮೆ ಮಾಡಲಾದ ಚಲನ್‌ಗಳ ಆಧಾರದ ಮೇಲೆ ನಗದು ಪುಸ್ತಕವನ್ನು ಬರೆಯತಕ್ಕದ್ದು ನಗದು ಪುಸ್ತಕದ ಬಲಭಾಗದಲ್ಲಿ ಪಾವತಿಗಳಿಗೆ ಸಂಬಂಧಿಸಿದ ಆರ್ಥಿಕ ವಹಿವಾಟಿನ ರಿಜಿಸ್ಟರಿನಲ್ಲಿರುವ ನಮೂದುಗಳ ಆಧಾರದ ಮೇಲೆ ಬರೆಯತಕ್ಕದ್ದು. ನಗದು ಪುಸ್ತಕಗಳನ್ನು ಈ ಕೆಳಕಂಡಂತೆ ನಿರ್ವಹಿಸಲು ಕ್ರಮ ಕೈಗೊಳ್ಳಲು ಸೂಚಿಸಿದೆ.

1. ನಗದು ಪುಸ್ತಕವು ಮುದ್ರಿತ ರೂಪದಲ್ಲಿರತಕ್ಕದ್ದು ಮತ್ತು ಪುಟಗಳಿಗೆ ಯಾಂತ್ರೀಕೃತ ಅಂಕಿಗಳನ್ನು ನೀಡತಕ್ಕದ್ದು ಈ ವರ್ಷದ ಹಾಜರುಪಡಿಸಿದ ನಗದು ವಹಿಗೆ ಯಾಂತ್ರೀಕೃತ ಪುಟ ಸಂಖ್ಯೆ ನೀಡಿರುವದಿಲ್ಲ.
2. ನಗದು ಪುಸ್ತಕವನ್ನು ಬಳಸಲು ತೆಗೆದುಕೊಂಡಾಗ ಅದರಲ್ಲಿರುವ ಪುಟಗಳು ಸರಿಯಾಗಿವೆಯೇ ಎಂಬುದನ್ನು ಪರಿಶೀಲಿಸತಕ್ಕದ್ದು ಮತ್ತು ಹಾಗೆ ಪರಿಶೀಲಿಸಲಾಗಿದೆ. ಎಂಬುದಕ್ಕೆ ನಗದು ಪುಸ್ತಕದಲ್ಲಿ ಮೊದಲು ಪುಟದಲ್ಲಿ ಅದರ ಪುಟ ಸಂಖ್ಯೆಗಳನ್ನು ನಮೂದಿಸಿ ಕಾರ್ಯದರ್ಶಿಯು ದೃಢೀಕರಿಸತಕ್ಕದ್ದು.
3. ಪ್ರತಿ ದಿನವೂ ನಗದು ಪುಸ್ತಕವನ್ನು ಮುಕ್ತಾಯಗೊಳಿಸತಕ್ಕದ್ದು. ಈ ರೀತಿ ತಾಳೆ ಮಾಡಿದ ಪುಸ್ತಕದಲ್ಲಿ ನಗದು ಶಿಲ್ಕುಗಳ ಪ್ರತಿ ದಿನ ತಾಳೆಯಾಗತಕ್ಕದ್ದು. ಈ ರೀತಿ ತಾಳೆ ಮಾಡಿದ ವಿವರಗಳನ್ನು ನಗದು ಪುಸ್ತಕದಲ್ಲಿ ದಾಖಲಿಸಿ ಕಾರ್ಯದರ್ಶಿ ದೃಢೀಕರಿಸುವದು ಅವಶ್ಯಕವಾಗಿದೆ.
4. ದಿನದ ಅಂತಿಮ ನಗದು ಶಿಲ್ಕಿನಲ್ಲಿ ಇರತಕ್ಕ ವಿವರಗಳನ್ನು ಅಂದರೆ ಸಂಗ್ರಹವಾದ ಹಣವನ್ನು ನಿಗದಿತ ದಿನದೊಳಗಾಗಿ ಜಮಾ ಮಾಡದೇ ಇರುವುದು. ಬಟವಡೆಯಾಗದ ವೇತನ, ಮುಂಗಡ ಹಣದ ಶಿಲ್ಕು ಇತ್ಯಾದಿಗಳ ವಿವರಗಳನ್ನು ನಮೂದಿಸಿರುವದಿಲ್ಲ.
5. ಬ್ಯಾಂಕಿನಲ್ಲಿ ಬರುವ ಡೆಬಿಟ್ ಮತ್ತು ಕ್ರೆಡಿಟ್ ಚೀಟಿಗಳಿಗೆ ಅನುಗುಣವಾಗಿ ಬ್ಯಾಂಕ ಪಾಸ್ ಪುಸ್ತಕಗಳಲ್ಲಿರುವಂತೆ ಬ್ಯಾಂಕುಗಳು ವಿಧಿಸಿದ ಕಮಿಷನ್ ಬಾಬ್ತು ಮತ್ತು ಜಮೆ ಮಾಡಿದ ಬಡ್ಡಿ ಇತ್ಯಾದಿ ವಿವರಗಳನ್ನು ನಗದು ಪುಸ್ತಕದಲ್ಲಿ ನಮೂದಿಸತಕ್ಕದ್ದು ಬ್ಯಾಂಕಿನಿಂದ ಡೆಬಿಟ್ ಕ್ರೆಡಿಟ್ ಚೀಟಿಗಳನ್ನು ತಕ್ಷಣ ಪಡೆದುಕೊಂಡು ಅದನ್ನು ವೋಚರ ಆಗಿ ಪರಿಗಣಿಸಿ ನಗದು ಪುಸ್ತಕದಲ್ಲಿ ಖರ್ಚು ದಾಖಲಿಸಿರುವುದನ್ನು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಿದೆ.

6. 105 ನೇ ನಿಯಮದಡಿಯಲ್ಲಿ ಸೂಚಿಸಿರುವಂತೆ ಖಜಾನೆ / ಬ್ಯಾಂಕ್ ಹೊಂದಾಣಿಕೆ ಪತ್ರವನ್ನು ಪ್ರತಿ ತಿಂಗಳ ಕೊನೆಗೆ ಸಿದ್ಧಪಡಿಸಿ. ಬ್ಯಾಂಕ್ /. ಖಜಾನೆ ಶಿಲ್ಕನ್ನು ತಾಳೆ ಮಾಡಿ ನಗದು ಪುಸ್ತಕದಲ್ಲಿ ದಾಖಲಿಸಿರುವುದಿಲ್ಲ. ದಾಖಲಿಸಲು ಸೂಚಿಸಿದೆ.

8. **ಸಮನ್ವಯೀಕರಣ :**

ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರಗಳ) ನಿಯಮ 2006 ರ ನಿಯಮ 105 ರಂತೆ ನಗದು ಪುಸ್ತಕದ ಬ್ಯಾಂಕ್ ಶಿಲ್ಕಿನೊಂದಿಗೆ ಬ್ಯಾಂಕಿನ ಅಂತಿಮ ಶಿಲ್ಕು ತಾಳೆಯಾಗಬೇಕು ಇದನ್ನು ಗ್ರಾಮ ಪಂಚಾಯತಿ ಮಾಡದಿರುವದರಿಂದ ಪರಿಶೀಲಿಸುವುದು ಅಸಾಧ್ಯವಾಗಿದೆ. ಇದು ಅಮೂಲ್ಯ ದಾಖಲೆಯಾದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ಅಗತ್ಯ.

ಗ್ರಾಮ ಪಂಚಾಯತಿ ನಿಧಿಯ ದುರುಪಯೋಗ ಅಥವಾ ಅವ್ಯವಹಾರಗಳನ್ನು ಪತ್ತೆ ಹಚ್ಚಲು ಜಮಾ ಮತ್ತು ಖರ್ಚುಗಳ ತಪ್ಪು ವರ್ಗೀಕರಣವನ್ನು ಸರಿಪಡಿಸಲು ಪ್ರತಿ ತಿಂಗಳ ಕೊನೆಯಲ್ಲಿ ಖಜಾನೆ / ಬ್ಯಾಂಕಿನಲ್ಲಿರುವ ಶಿಲ್ಕುನೊಂದಿಗೆ ನಗದು ಪುಸ್ತಕದಲ್ಲಿನ ಶಿಲ್ಕನ್ನು ಹೊಂದಾಣಿಕೆ ಮಾಡದಿರುವುದು. ನಗದು ಪುಸ್ತಕದಲ್ಲಿ ದಾಖಲಿಸದೆ ಇರುವದನ್ನು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಿದೆ.

9. **ಸಾಮಾನ್ಯ ಲೆಡ್ಜರ್ ಹಾಗೂ ಜರ್ನಲ್ ಪುಸ್ತಕ ನಿರ್ವಹಣೆ :**

ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006 ರ ನಿಯಮ 107 ರಂತೆ ಸಾಮಾನ್ಯ ಲೆಡ್ಜರ್ ನಿರ್ವಹಿಸುವುದು. ಜರ್ನಲ್ ಪುಸ್ತಕವನ್ನು ನಮೂನೆ 50 ರಲ್ಲಿ ನಿರ್ವಹಿಸತಕ್ಕದ್ದು. ನಮೂನೆ 51 ರಲ್ಲಿನ ಜರ್ನಲ್ ವೋಚರನ್ನು ತಯಾರಿಸಿ ಇದರ ಆಧಾರದ ಮೇಲೆ ಜರ್ನಲ್ ಪುಸ್ತಕದಲ್ಲಿ ನಮೂದುಗಳನ್ನು ದಾಖಲಿಸತಕ್ಕದ್ದು. ಎಲ್ಲಾ ಜರ್ನಲ್ ಹೊಂದಣಿಕೆಗಳನ್ನು ಗ್ರಾಮ ಪಂಚಾಯತಿ ಕಾರ್ಯದರ್ಶಿ ನಮೂದಿಸತಕ್ಕದ್ದು ಮತ್ತು ಜರ್ನಲ್ ಪುಸ್ತಕದಲ್ಲಿ ಪ್ರತಿಯೊಂದು ಬಾಬ್ತನ್ನು ನಮೂದಿಸಬೇಕಾಗಿದ್ದು ಹೆಚ್ಚಿನ ಪ್ರಕರಣಗಳಲ್ಲಿ ಜರ್ನಲ್ ವೋಚರಗಳನ್ನು ತಯಾರಿಸದೆ ಸಾಮಾನ್ಯ ಲೆಡ್ಜರ್‌ನಲ್ಲಿ ದಾಖಲಿಸಿರುವದನ್ನು ಗಮನಿಸಲಾಗಿದೆ. ನೇರವಾಗಿ ಲೆಡ್ಜರ್‌ಗಳ ಮೂಲಕ ಲೆಕ್ಕಕ್ಕೆ ಸೇರ್ಪಡೆಗೊಳಿಸಲಾಗಿದೆ.

ಜರ್ನಲ್ ವೋಚರಗಳಿಲ್ಲದೆ ಯಾವುದೇ ಕ್ರೆಡಿಟ್ ಅಥವಾ ಡೆಬಿಟನ್ನು ಲೆಡ್ಜರಗಳಿಗೆ ದಾಖಲಿಸುವದು ಕ್ರಮಬದ್ಧವಾಗಿರುವದಿಲ್ಲ.

10. **ಆಯವ್ಯಯದ ವಿವರ :-**

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಅಧಿನಿಯಮ 241ರ ಪ್ರಕಾರ ಆಯವ್ಯಯಕ್ಕೆ ಮಾರ್ಚ್ 10ರೊಳಗೆ ಗ್ರಾಮ ಪಂಚಾಯ್ತಿಯ ಅನುಮೋದನೆಯನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಪಂಚಾಯಿತಿ ಕಾರ್ಯದರ್ಶಿಯವರು ಪಡೆಯಬೇಕಾಗಿದ್ದು ದಿನಾಂಕ -2016 ರಂದು ಅನುಮೋದನೆ ಪಡೆದಿದ್ದು ನಿಗಧಿತ ಅವಧಿಯಲ್ಲಿ ಅನುಮೋದನೆ ಪಡೆಯಲಾಗಿದೆ/ವಿಳಂಭವಾಗಿ ಅನುಮೋದನೆ ಪಡೆಯಲಾಗಿದೆ. ಇನ್ನು ಮುಂದೆ ನಿಯಮಾನುಸಾರ ನಿಗದಿತ ದಿನಾಂಕದೊಳಗೆ ಆಯವ್ಯಯಕ್ಕೆ ಅನುಮೋದನೆ ಪಡೆಯಲು ಸೂಚಿಸಿದೆ.

ಮಂಜೂರಾದ ಆಯವ್ಯಯದ ಪ್ರಕಾರ 2015-16ನೇ ಸಾಲಿನ ಆಯವ್ಯಯ ವಿವರಗಳು ಈ ಕೆಳಕಂಡಂತಿದೆ.

ಕ್ರ.ಸಂ	ವಿವರ	ಆದಾಯ	ವೆಚ್ಚ
1.	ನಿರೀಕ್ಷಿತ	ರೂ.9374805.00	ರೂ.9271489.00
2.	ವಾಸ್ತವಿಕ	ರೂ. 9432472.00	ರೂ. 9403923.00

10.(ಅ). **ಆಯವ್ಯಯದ ಬಗ್ಗೆ ಷರಾ :-**

1. ಕರ್ನಾಟಕ ಪಂಚಾಯತ್ ರಾಜ್(ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಾವಳಿ 2006 ನಿಯಮ 12 ರಂತೆ ಆಯವ್ಯಯ ತಯಾರಿಸಲಾಗಿದೆ.

2. ಜಿ.ಪಿ.ಬಿ.ಎ.ಆರ್ ನಿಯಮ 12(4)(ii) ರನ್ವಯ ಆರ್ಥಿಕ ವರ್ಷದ ಆರಂಭಕ್ಕೆ ಬಾಕಿ ಇರುವ ಹೊಣೆಗಾರಿಕೆಗಳ ಮರುಪಾವತಿಗೆ ಅವಕಾಶ ಕಲ್ಪಿಸಿರುವುದಿಲ್ಲ.

3. ಜಿ.ಪಿ.ಬಿ.ಎ.ಆರ್ ನಿಯಮ 12ರ ಉಪನಿಯಮ 4(iii) ರನ್ವಯ ಸರ್ಕಾರ ನಿಗದಿಪಡಿಸಿರುವಂತೆ ಗ್ರಾಮ ಪಂಚಾಯಿತಿಗಳ ಅನುದಾನ ಮತ್ತು ಆದಾಯಗಳಲ್ಲಿ ಶೇ.10 ರಷ್ಟು ಅಂತಿಮ ಶಿಲ್ಕಿಗೆ ಅವಕಾಶ ಕಲ್ಪಿಸಿರುವುದಿಲ್ಲ.

ಕರ್ನಾಟಕ ಪಂಚಾಯತ್ ರಾಜ್(ಆಯ-ವ್ಯಯ ಮತ್ತು ಲೆಕ್ಕ ಪತ್ರಗಳು)ನಿಯಮಗಳು 2006 ನಿಯಮ 15ರಂತೆ ಆಯವ್ಯಯ ನಿಯಂತ್ರಣ ರಿಜಿಸ್ಟರನ್ನು ನಿರ್ವಹಿಸಿರುವುದಿಲ್ಲ.

11. ಮಾಸಿಕ ಮತ್ತು ಅರ್ಧವಾರ್ಷಿಕ ಲೆಕ್ಕಪತ್ರಗಳು :-

ಗ್ರಾಮ ಪಂಚಾಯಿತ್ತಿಗಳ ಆಯವ್ಯಯ ಮತ್ತು ಲೆಕ್ಕಪತ್ರ ನಿಯಮಗಳು 2006ರ ನಿಯಮ 108ರ ಪ್ರಕಾರ ಕಾರ್ಯದರ್ಶಿಯು ಪ್ರತಿ ತಿಂಗಳ ಸ್ವೀಕೃತಿ ಮತ್ತು ಪಾವತಿ ವಿವರಣಾ ಪತ್ರವನ್ನು ನಮೂನೆ 53ರಲ್ಲಿ ಹಾಗೂ ಪ್ರಾಯೋಗಿಕ ಆರ್ಥಿಕ ಸ್ಥಿತಿಗತಿ ಪಟ್ಟಿಯನ್ನು ನಮೂನೆ 54ರಲ್ಲಿ ಸಿದ್ದಪಡಿಸಿ ಮುಂದಿನ ಮಾಹೆಯ 20ನೇ ತಾರೀಖಿನೊಳಗಾಗಿ ಗ್ರಾಮ ಪಂಚಾಯ್ತಿ ಸಭೆಗೆ ಮಂಡಿಸಿ, ಅನುಮೋದಿತ ಪ್ರತಿಗಳನ್ನು ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ರಾಮನಗರ ಹಾಗೂ ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ರಾಮನಗರ ಇವರಿಗೆ ಸಲ್ಲಿಸಿರುವುದಿಲ್ಲ. ಈ ಬಗ್ಗೆ ಕ್ರಮ ವಹಿಸಲು ಸೂಚಿಸಿದೆ.

12. ವಾರ್ಷಿಕ ಲೆಕ್ಕಪತ್ರಗಳು :-

12(1) ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವ ಮತ್ತು ವಾಸ್ತವ ವಾರ್ಷಿಕ ಲೆಕ್ಕಪತ್ರಗಳಿಗೆ ವ್ಯತ್ಯಾಸವಿರುವ ವಿವರ :-

ಪಂಚಾಯತ್ ರಾಜ್ ಅಧಿನಿಯಮ 243 ಉಪಪ್ರಕರಣ (3) ಹಾಗೂ ಆಯವ್ಯಯ ಮತ್ತು ಲೆಕ್ಕಪತ್ರಗಳ ನಿಯಮಗಳು 2006ರ ನಿಯಮ 109ರ ಪ್ರಕಾರ ಜೂನ್ 30ನೇ ತಾರೀಖಿನೊಳಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸಿ ಗ್ರಾಮ ಪಂಚಾಯ್ತಿಯ ಅನುಮೋದನೆ ಪಡೆದು, ಅನುಮೋದಿತ ಪ್ರತಿಗಳನ್ನು ರಾಮನಗರ ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿಗಳಿಗೆ ಮತ್ತು ರಾಮನಗರ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲದ ಹಿರಿಯ ಉಪನಿರ್ದೇಶಕರಿಗೆ ಕಳುಹಿಸಬೇಕಾಗಿರುತ್ತದೆ.

ಸದರಿ ಪಂಚತಂತ್ರದ ತಂತ್ರಾಂಶದಲ್ಲಿರುವ ಲೆಕ್ಕ ಪತ್ರಗಳನ್ನು ಪರಿಶೀಲಿಸಿದಾಗ ಗ್ರಾಮ ಪಂಚಾಯಿತಿಯ ಪಂಚತಂತ್ರದ ತಂತ್ರಾಂಶದಲ್ಲಿ ಅಳವಡಿಸಿರುವ ಮತ್ತು ವಾಸ್ತವ ವಾರ್ಷಿಕ ಲೆಕ್ಕ ಪತ್ರಗಳಿಗೆ ವ್ಯತ್ಯಾಸವಿದ್ದು ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತವೆ.

1. ಗ್ರಾಮ ಪಂಚಾಯಿತಿಯ ಸಂಪೂರ್ಣ ಆರ್ಥಿಕ ಚಿತ್ರಣ ದೊರಕುವುದಿಲ್ಲ.
2. ಗ್ರಾಮ ಪಂಚಾಯಿತಿಯಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಯೋಜನೆಗಳ ಖಾತೆಗಳ ವ್ಯವಹಾರವು ಪಂಚತಂತ್ರಾಂಶದಲ್ಲಿ ಅಳವಡಿಕೆಯಾಗಿರುವುದಿಲ್ಲ.
3. ಇದರಿಂದ ಸ್ವೀಕೃತಿ ಮತ್ತು ಪಾವತಿ ಮತ್ತು ಆದಾಯ ವೆಚ್ಚಗಳಲ್ಲಿ ವ್ಯತ್ಯಾಸವಿರುತ್ತದೆ.
4. ಸ್ವೀಕೃತಿ ರಶೀದಿಗಳಲ್ಲಿ ವಸೂಲಾದ ವಾಸ್ತವ ಮತ್ತು ಪಂಚತಂತ್ರಾಂಶದಲ್ಲಿ ಅಳವಡಿಕೆಯಾಗಿರುವ ಮೊತ್ತಕ್ಕೂ ವ್ಯತ್ಯಾಸವಿರುತ್ತದೆ.
5. ಆಸ್ತಿಗಳ ಡಿ.ಸಿ.ಬಿ ಯಲ್ಲೂ ಪ್ರಾರಂಭಿಕ ಶಿಲ್ಕಿನಲ್ಲಿ ವ್ಯತ್ಯಾಸವಿರುತ್ತದೆ.
6. ಸಮತೋಲನ ಪಟ್ಟಿಯಲ್ಲಿ ಆರಂಭಿಕ ಪಟ್ಟಿ ತಯಾರಿಸಿ ಮೌಲ್ಯ ನಿರ್ಧರಿಸಿ ತಂತ್ರಾಂಶದಲ್ಲಿ ಅಳವಡಿಸಿರುವುದಿಲ್ಲ.
7. ವಾಸ್ತವ 31.03.2016ರ ಅಂತ್ಯಕ್ಕೆ ಮತ್ತು ಪಂಚತಂತ್ರದಲ್ಲಿ ಅಳವಡಿಸಿರುವ ಆಸ್ತಿ ಮತ್ತು ಹೊಣೆಗಾರಿಕೆಗಳ ಅಂಕಿ ಅಂಶಗಳಿಗೂ ವ್ಯತ್ಯಾಸವಿರುತ್ತದೆ.
8. ಸೃಜಿಸಿರುವ ಆಸ್ತಿಗಳ ಸವಕಳಿ ಮೌಲ್ಯಕ್ಕೂ ಪಂಚತಂತ್ರಾಂಶದಲ್ಲಿ ಅಳವಡಿಸಿರುವ ಅಂಕಿ ಅಂಶಗಳಿಗೆ ವ್ಯತ್ಯಾಸವಿರುತ್ತದೆ.

ಈ ಬಗ್ಗೆ ಸಕ್ಷಮ ಪ್ರಾಧಿಕಾರ ಸೂಕ್ತ ಕ್ರಮಗೊಂಡು ಈ ಮೇಲ್ಕಂಡ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಲು ಸೂಚಿಸಿದೆ.

13 ವಾರ್ಷಿಕ ಲೆಕ್ಕಪತ್ರಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದು:

ಪಂಚಾಯತ್ ರಾಜ್ ಅಧಿನಿಯಮ 243 ಉಪಪ್ರಕರಣ (3) ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 109 ರ ಪ್ರಕಾರ ಮುಂದುವರಿದ ವರ್ಷದ ಜೂನ್ 30ರೊಳಗೆ ಪಿ.ಡಿ.ಓ/ಕಾರ್ಯದರ್ಶಿಗಳು ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸಿ ಗ್ರಾಮ ಪಂಚಾಯಿತಿಯ ಅನುಮೋದನೆ ಪಡೆದು, ಅನುಮೋದಿತ ಪ್ರತಿಗಳನ್ನು ಆಯಾ ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಧಿಕಾರಿಗಳಿಗೆ ಮತ್ತು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲದ ಹಿರಿಯ ಉಪನಿರ್ದೇಶಕರಿಗೆ ಸಲ್ಲಿಸಬೇಕಿರುತ್ತದೆ. ನಮೂನೆ 53 ರಲ್ಲಿ ಸ್ವೀಕೃತಿ ಮತ್ತು ಪಾವತಿ ವಿವರಗಳ ಪಟ್ಟಿಯನ್ನು ನಮೂನೆ–55ರಲ್ಲಿ ಆದಾಯ ಮತ್ತು ವೆಚ್ಚಗಳ ಪಟ್ಟಿಯನ್ನು ಹಾಗೂ ನಮೂನೆ –56ರಲ್ಲಿ ಸಮತೋಲನ ಪಟ್ಟಿಗಳನ್ನು ಮತ್ತು ನಮೂನೆ–54ರಲ್ಲಿ ಟ್ರಯಲ್ ಬ್ಯಾಲೆನ್ಸ್ ಪಟ್ಟಿ ಒಳಗೊಂಡಂತೆ ವಾರ್ಷಿಕ ಲೆಕ್ಕಪತ್ರಗಳನ್ನು ರಾಮನಗರ ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಹಣಾಧಿಕಾರಿಗಳ ಮೂಲಕ ವರ್ತುಲ ಕಛೇರಿಗೆ ಸಲ್ಲಿಸಲಾಗಿರುತ್ತದೆ. ಇದೇ ರೀತಿಯಾಗಿ ಮಾಸಿಕ, ತ್ರೈಮಾಸಿಕ ಹಾಗೂ ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕ ತನಿಖೆಗೆ ಸಲ್ಲಿಸದೇ ಇರುವ ಕಾರಣ ಆದಾಯ ಮತ್ತು ವೆಚ್ಚದ ಸ್ವೀಕೃತಿ ಮತ್ತು ಪಾವತಿಯ ಸತ್ಯಾಪನೆಯನ್ನು ಧೃಢೀಕರಿಸಲು ಸಾಧ್ಯವಾಗುತ್ತಿಲ್ಲ. ವಿತ್ತೀಯ ವಿವರಣಾ ಪಟ್ಟಿಗಳು ಚಾರ್ಟರ್ಡ್ ಅಕೌಂಟೆಂಟ್ಸ್‌ರವರಿಂದ ಧೃಢೀಕರಿಸದೆ ಇರುವುದರಿಂದ ಲೆಕ್ಕಗಳ ಸತ್ಯಾಪನೆಯನ್ನು ಧೃಢೀಕರಿಸಲು ಸಾಧ್ಯವಾಗಿರುವುದಿಲ್ಲ.

14. ವಾರ್ಷಿಕ ಲೆಕ್ಕಗಳ ಪ್ರಮಾಣೀಕರಣ :– [ಅವಲೋಕನಾಸಹಿತ]

ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ವಿರೂಪಾಕ್ಷಿಪುರ ಗ್ರಾಮ ಪಂಚಾಯಿತಿಯ 2015–16ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತ್ತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ಮೇರೆಗೆ ಹಾಗೂ ವಿತ್ತ ನಿರೂಪಣಾ ತಃಖ್ತೆಗಳ ಪರಿಶೋಧನೆ ಬಗ್ಗೆ ಮಹಾಲೇಖಪಾಲಕರು ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪ್ರಧಾನ ನಿರ್ದೇಶಕರ ಸೂಚನೆ ಮೇರೆಗೆ, ಪರೀಕ್ಷಿಸಲಾಗಿದೆ.

1. ಲೆಕ್ಕಪರಿಶೋಧನೆಯ ಉದ್ದೇಶಕ್ಕೆ ಅವಶ್ಯವಾಗಿ ಬೇಕಾದ ಎಲ್ಲಾ ಮಾಹಿತಿ ಹಾಗೂ ವಿವರಣೆಗಳನ್ನು ನನ್ನ ತಿಳುವಳಿಕೆ ಮತ್ತು ನಂಬಿಕೆಗೆ ತಕ್ಕಂತೆ ಪಡೆದಿರುತ್ತೇನೆ.

2. ಲೆಕ್ಕಪರಿಶೋಧನೆಯ ಅಭಿಪ್ರಾಯದಲ್ಲಿ ಅಧಿನಿಯಮ, ನಿಯಮಾವಳಿ ಹಾಗೂ ಲೆಕ್ಕಪತ್ರ ಕೈಪಿಡಿ–ಮಾರ್ಗದರ್ಶಿ ಪ್ರಕಾರ, ಲೆಕ್ಕ ಪರಿವೀಕ್ಷಣೆಯಿಂದ ಕಂಡು ಬಂದಂತೆ ಅನುಬಂಧ 5 ರಲ್ಲಿ ತೋರಿಸಿರುವ ಲೋಪದೋಷಗಳು ಹಾಗೂ ನ್ಯೂನತೆಗಳನ್ನು ಹೊರತುಪಡಿಸಿ ಗ್ರಾಮ ಪಂಚಾಯ್ತಿಯಲ್ಲಿ ಸಮರ್ಪಕ ಲೆಕ್ಕಪತ್ರಗಳನ್ನು ನಿರ್ವಹಿಸಿರುತ್ತದೆ.

3. ವರದಿಯಲ್ಲಿ ಪ್ರಸ್ತಾಪಿಸಲಾದ ಗ್ರಾಮ ಪಂಚಾಯ್ತಿಯ ಸಮತೋಲನಾ ಪಟ್ಟಿ, ಆದಾಯ ಮತ್ತು ವೆಚ್ಚದ ತಃಖ್ತೆ ಹಾಗೂ ಸ್ವೀಕೃತಿ ಮತ್ತು ಪಾವತಿ ತಃಖ್ತೆಗಳು ಟೀಕೆ ಟಿಪ್ಪಣಿಗಳಲ್ಲಿ ದಾಖಲಿಸಿದ ಅವಲೋಕನಗಳಿಗೆ ಒಳಪಟ್ಟಂತೆ ಲೆಕ್ಕ ಪುಸ್ತಕಗಳೊಂದಿಗೆ ತಾಳೆಯಾಗಿರುತ್ತದೆ.

4. ಟೀಕೆ ಟಿಪ್ಪಣಿಗಳಲ್ಲಿ ದಾಖಲಿಸಿದ ಅವಲೋಕನಗಳಿಗೆ ಒಳಪಟ್ಟಂತೆ ವಿತ್ತ ನಿರೂಪಣಾ ತಃಖ್ತೆಗಳು ಗ್ರಾಮ ಪಂಚಾಯ್ತಿಯ ವಿದ್ಯಮಾನಗಳ ನೈಜ ಹಾಗೂ ನ್ಯಾಯೋಚಿತ ನೋಟವನ್ನು ಒದಗಿಸುತ್ತವೆ.

15. ಗ್ರಾಮ ಸಭೆಯ ವಿವರ :–

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ನಿಯಮ 1993 ಕಲಂ 3ಎ ರನ್ವಯ ಪ್ರತಿ 6 ತಿಂಗಳಿಗೊಮ್ಮೆ ಕಡ್ಡಾಯ ಗ್ರಾಮ ಸಭೆ ನಡೆಸಬೇಕಾಗಿದ್ದು, ಸದರಿ ಗ್ರಾಮ ಪಂಚಾಯಿತಿನಲ್ಲಿ ಪುಸ್ತಕ ಸಾಲಿನಲ್ಲಿ ಗ್ರಾಮ ಸಭೆ ನೆಡೆಸಿರುವ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ಗ್ರಾಮ ಸಭೆ ನೆಡೆಸಿರುವ ದಿನಾಂಕ	ಷರಾ
ಮಾಹಿತಿ ಒದಗಿಸಿರುವುದಿಲ್ಲ		

16. ಅನುದಾನಗಳು :-

ಕರ್ನಾಟಕ ಗ್ರಾಮ ಪಂಚಾಯತ್ ರಾಜ್ (ಗ್ರಾಮ ಪಂಚಾಯ್ತಿಗಳ ಲೆಕ್ಕ ಪತ್ರಗಳು ಮತ್ತು ಆಯವ್ಯಯ) ನಿಯಮಗಳು 2006ರ ನಿಯಮ 99 ರನ್ವಯ ನಮೂನೆ 45ರಲ್ಲಿ ಅನುದಾನಗಳ ವಹಿಯನ್ನು ನಿರ್ವಹಿಸಲಾಗಿದೆ/ನಿರ್ವಹಿಸಿರುವುದಿಲ್ಲ. ಅನುದಾನಗಳ ವಹಿ ಪ್ರಮುಖವಾದ ವಹಿಯಾಗಿದ್ದು ವರ್ಷದ ಅಂತ್ಯದಲ್ಲಿ ಅನುದಾನದ ಪ್ರಾರಂಭ ಶಿಲ್ಕು, ಸ್ವೀಕರಿಸಿದ ಅನುದಾನಗಳು, ವರ್ಷದ ಅವಧಿಯಲ್ಲಿ ವಿನಿಯೋಗಿಸಿದ ಅನುದಾನಗಳು, ಹಾಗೂ ವರ್ಷದ ಕೊನೆಯಲ್ಲಿ ಉಳಿದಿರುವ ಅಂತಿಮ ಶಿಲ್ಕುಗಳನ್ನು ಸೂಚಿಸುವ ಘೋಷ್ವಾರೆಯನ್ನು ಹಾಕಿ ಅಧ್ಯಕ್ಷರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು/ಕಾರ್ಯದರ್ಶಿಗಳು ದೃಢೀಕರಿಸಿರುವುದಿಲ್ಲ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

2015-16ನೇ ಸಾಲಿನಲ್ಲಿ ಕರ್ನಾಟಕ ಗ್ರಾಮ ಪಂಚಾಯತ್ ಅಧಿನಿಯಮ 1993ರ ಪ್ರಕರಣ 206 ಹಾಗೂ 208ರನ್ವಯ ಈ ಕೆಳಕಂಡ ಅನುದಾನಗಳು ಗ್ರಾಮ ಪಂಚಾಯತ್ ನಿಧಿ/ಖಾತೆಗೆ ಜಮ ಬಂದಿರುತ್ತದೆ

ಕ್ರ.ಸಂ	ಅನುದಾನದ ವಿವರ	ಅನುದಾನ ಹೊಂದಾಣಿಕೆಯ ಬ್ಯಾಂಕ್ ಖಾತೆ ವಿವರ		ಅನುದಾನದ ಮೊತ್ತ
		ಬ್ಯಾಂಕ್ ಹೆಸರು	ಬ್ಯಾಂಕ್ ಖಾತೆ ಸಂಖ್ಯೆ	
1	ಶಾಸನಬದ್ಧ ಅನುದಾನ	ಎಸ್.ಬಿ.ಎಂ ಹೊಂಗನೂರು	54055112210	435355
2	13ನೇ ಹಣಕಾಸು ನಿಧಿ	ಎಸ್.ಬಿ.ಎಂ. ಚನ್ನಪಟ್ಟಣ	6406245024	566659
3	ವಿದ್ಯುತ್ ಅನುದಾನ ಖಾತೆ	ಎಸ್.ಬಿ.ಎಂ ಚನ್ನಪಟ್ಟಣ	6417043997	1133957
4	ಕಂದಾಯ ಖಾತೆ	ಎಸ್.ಬಿ.ಎಂ ಹೊಂಗನೂರು	54055110871	2310
5	14ನೇ ಹಣಕಾಸು ನಿಧಿ	ಎಸ್.ಬಿ.ಎಂ. ಚನ್ನಪಟ್ಟಣ	64182346206	629232
6	ಟಿಎಸ್‌ಸಿ/ಎಸ್‌ಬಿಐ/ಎಸ್‌ಬಿಎಂ	ಎಸ್‌ಬಿಎಂ,ಹೊಂಗನೂರು	54055112405	40900
7	ನರೇಗಾ	ಎಸ್.ಬಿ.ಎಂ.ಅಕ್ಕೂರು	64026709839	10000
			ಒಟ್ಟು ರೂ.	**3186513**

ಅನುದಾನಗಳ ಷರತ್ತು ಮತ್ತು ನಿಬಂಧನೆಗಳಲ್ಲಿ ಸೂಚಿಸಿರುವಂತೆ ನಿಯಮ 99ರಂತೆ ನಮೂನೆ 46ರಲ್ಲಿ ಬಳಕೆ ಪ್ರಮಾಣ ಪತ್ರಗಳನ್ನು ಸಕ್ಷಮ ಪ್ರಾಧಿಕಾರಗಳಿಗೆ ಸಲ್ಲಿಸಿರುವ ಬಗ್ಗೆ ಮಾಹಿತಿಯನ್ನು ಹಾಜರುಪಡಿಸಲಾಗಿದೆ/ಯಾವುದೇ ಮಾಹಿತಿ ಹಾಜರುಪಡಿಸಿರುವುದಿಲ್ಲ.

17. ಋಣ ಶೀರ್ಷಿಕೆಗಳು

17.1. ಹೂಡಿಕೆಗಳು :-

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯ್ತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 95ರ ಪ್ರಕಾರ ನಮೂನೆ 41ರಲ್ಲಿ ಹೂಡಿಕೆ ವಹಿಯನ್ನು ನಿರ್ವಹಿಸಿರುವುದಿಲ್ಲ. ನಿಯಮಾನುಸಾರ ನಿರ್ವಹಿಸಲು ಸೂಚಿಸಿದೆ. ಲಭ್ಯ ಮಾಹಿತಿಗಳ ಪ್ರಕಾರ 2015-16ನೇ ಸಾಲಿನ ಹೂಡಿಕೆಗಳ ವ್ಯವಹಾರ ಇರುವುದಿಲ್ಲ.

17.2. ಸಾಲಗಳು :-

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯ್ತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 96ರ ಪ್ರಕಾರ ನಮೂನೆ 42ರಲ್ಲಿ ಸಾಲಗಳ ವಹಿಯನ್ನುನಿರ್ವಹಿಸಿಲ್ಲ. ನಿಯಮಾನುಸಾರ ಸದರಿ ವಹಿಯನ್ನು ನಿರ್ವಹಿಸಲು ಸೂಚಿಸಿದೆ. 2015-16ನೇ ಸಾಲಿನಲ್ಲಿ ಯಾವುದೇ ವಹಿವಾಟು ಇರುವುದಿಲ್ಲ.

17.3 ಮುಂಗಡಗಳು :-

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯ್ತಿಗಳ ಆಯವ್ಯಯ ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 98ರ ಪ್ರಕಾರ ನಮೂನೆ 44ರಲ್ಲಿ ಮುಂಗಡಗಳ ರಿಜಿಸ್ಟರನ್ನು ನಿರ್ವಹಿಸಿರುವುದಿಲ್ಲ. ನಿಯಮಾನುಸಾರ ನಿರ್ವಹಿಸಲು ಸೂಚಿಸಿದೆ. 2015-16ನೇ ಸಾಲಿನಲ್ಲಿ ಯಾವುದೇ ವಹಿವಾಟು ಇರುವುದಿಲ್ಲ.

18. ಠೇವಣಿಗಳು :-

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯ್ತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 100ರ ಪ್ರಕಾರ ನಮೂನೆ 47ರಲ್ಲಿ ಠೇವಣಿ ವಹಿಯನ್ನು ನಿರ್ವಹಿಸಿರುವುದಿಲ್ಲ. ನಿಯಮಾನುಸಾರ ನಿರ್ವಹಿಸಲು ಸೂಚಿಸಿದೆ. 2015-16ನೇ ಸಾಲಿನಲ್ಲಿ ಎಫ್.ಎಸ್.ಡಿ ಮೂಲಕ ಯಾವುದೇ ಠೇವಣಿಗಳನ್ನು ಸ್ವೀಕರಿಸಿರುವುದಿಲ್ಲ.

19. ಸ್ವೀಕೃತಿಗಳ ಪರಿಶೀಲನೆ

19.1. ರಸೀದಿಗಳ ಪರಿಶೀಲನೆ :-

2015-16ನೇ ಸಾಲಿನಲ್ಲಿ ರಸೀದಿ ಪುಸ್ತಕಗಳು ದಾಸ್ತಾನು ವಹಿಯನ್ನು ಕರ್ನಾಟಕ ಪಂಚಾಯತ್ ರಾಜ್ ಲೆಕ್ಕ ಪತ್ರ (ಗ್ರಾಮ ಪಂಚಾಯ್ತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 21ರ ಪ್ರಕಾರ ನಿಗದಿತ ನಮೂನೆ 5ರಲ್ಲಿ ದಾಸ್ತಾನು ಲೆಕ್ಕ ನಿರ್ವಹಿಸಿಲ್ಲ. ನಿಯಮಾನುಸಾರ ನಿರ್ವಹಿಸಲು ಸೂಚಿಸಿದೆ. 2015-16ನೇ ಸಾಲಿನಲ್ಲಿ ರಸೀದಿ ಪುಸ್ತಕಗಳ ದಾಸ್ತಾನು ಪರಿಶೀಲಿಸಲಾಗಿ ವ್ಯವಹಾರ ಕೆಳಕಂಡಂತಿರುತ್ತದೆ. ದಾಸ್ತಾನು ವಹಿಯ ಅಲಭ್ಯತೆಯಲ್ಲಿ ಬೇರೆ ರಸೀತಿ ಪುಸ್ತಕಗಳನ್ನು ಉಪಯೋಗಿಸಿದ್ದಲ್ಲಿ ಸಂಬಂಧಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು/ಕಾರ್ಯದರ್ಶಿಗಳೇ ಜವಬ್ದಾರರಾಗಬೇಕಾಗಿರುತ್ತದೆ. ಈ ಬಗ್ಗೆ ಸೂಕ್ತ ಆಡಳಿತಾತ್ಮಕ ತನಿಖೆ ಅಗತ್ಯವಾಗಿದೆ.

1.	01.04.2015 ಕ್ಕೆ ಪ್ರಾರಂಭಿಕ ಶಿಲ್ಕು	04	3895 ರಿಂದ 3898=04
2.	2015-16 ಕ್ಕೆ ಸಾಲಿಗೆ ಹೊಸ ಖರೀದಿ / ಸ್ವೀಕೃತಿ	50	4506 ರಿಂದ 4515=10 9401 ರಿಂದ 9420=20 9231 ರಿಂದ 9250=20
3.	ಒಟ್ಟು ರಸೀದಿ ಪುಸ್ತಕಗಳು	54	
4.	20135-16 ಕ್ಕೆ ಸಾಲಿಗೆ ಉಪಯೋಗಿಸಿದ ರಸೀದಿ ಪುಸ್ತಕಗಳು	27	3895 ರಿಂದ 3898=04 4506 ರಿಂದ 4515=10 9401 ರಿಂದ 9413=13
5.	31.03.2016 ಕ್ಕೆ ಅಂತಿಮ ಶಿಲ್ಕು	28	9414 ರಿಂದ 9420=07 9231 ರಿಂದ 9250=20

ಷರಾ:-2014-15ನೇ ಸಾಲಿನಲ್ಲಿ ಅಂತಿಮಶಿಲ್ಕಿನಲ್ಲಿ ತೋರಿಸಿರುವ ರಸೀದಿ ಪುಸ್ತಕ ಸಂಖ್ಯೆ 1964 ನ್ನು 2014-15ನೇ ಸಾಲಿನಲ್ಲಿ ಭಾಗಶಃ ಉಪಯೋಗಿಸಿರುವುದರಿಂದ ಆರಂಭ ಶಿಲ್ಕಿನಲ್ಲಿ 5 ರಸೀದಿ ಪುಸ್ತಕದ ಬದಲು 4 ರಸೀದಿ ಪುಸ್ತಕಗಳನ್ನು ಪರಿಗಣಿಸಿದೆ.

19.2. ಪ್ರಸಕ್ತ ಸಾಲಿನಲ್ಲಿ ಹಿಂದಿನ ಸಾಲಿನ ಭಾಗಶಃ ಉಳಿದಿದ್ದ ಹಾಗೂ ಪೂರ್ಣವಾಗಿ ಉಪಯೋಗಿಸಿದ ರಸೀದಿ ಪುಸ್ತಕಗಳ ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ರಸೀದಿ ಪುಸ್ತಕಸಂಖ್ಯೆ	ರಸೀದಿ ಸಂಖ್ಯೆ/ದಿನಾಂಕ ಇಂದ	ರಸೀದಿ ಸಂಖ್ಯೆ/ದಿನಾಂಕ ವರೆಗೆ	ಷರಾ
1.	3892	194593/04-04-2015	194600/13-04-2015	ಪೂರ್ಣವಾಗಿ ಉಪಯೋಗಿಸಿದೆ
	3893	194625/6-4-2015	194650/05-05-2015	
	3894	194691/23-02-2015	194700/17-04-2015	

ಕ್ರ.ಸಂ	ರಸೀದಿ ಪುಸ್ತಕ ಸಂಖ್ಯೆ	ರಸೀದಿ ಸಂಖ್ಯೆ	ಸ್ವೀಕೃತಿ ಮೊತ್ತ
1	9411	470501	350
2	9411	470502	345
3	9411	470503	395
4	9411	470504	300
		ಒಟ್ಟು ಮೊತ್ತ	**1390**

23. ಆಸ್ತಿ & ಹೊಣೆಗಾರಿಕೆಗಳ ವಿವರ:

ದಿನಾಂಕ: 31.3.2016ಕ್ಕೆ ವಿರೂಪಾಕ್ಷಿಪುರ ಗ್ರಾಮ ಪಂಚಾಯಿತಿಯ ಲಭ್ಯವಿರುವ ಅಂಕಿ ಅಂಶಗಳ ಪ್ರಕಾರ ಆಸ್ತಿ & ಹೊಣೆಗಾರಿಕೆ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ಆರ್ಥಿಕ ಆಸ್ತಿಗಳ ವಿವರ	ಮೊತ್ತ ರೂ.	ಕ್ರ. ಸಂ.	ಹೊಣೆಗಾರಿಕೆಗಳ ವಿವರ	ಮೊತ್ತ ರೂ.
1	ಆಸ್ತಿಗಳು-ಸ್ವಂತ ನಿಧಿಯಿಂದ	774697	1	ಉಪಕರಗಳ ಬಾಬ್ತು	693524
2	ಆಸ್ತಿಗಳ-ಯೋಜನೆಗಳ ನಿಧಿಯಿಂದ	–	2	ತೆರಿಗೆಗಳ ಬಾಬ್ತು	–
3	ಠೇವಣಿ/ಸಾಲ/ಮುಂಗಡ ಇ.ಎಂ.ಡಿ ಎಫ್ ಎಸ್.ಡಿ	ಎನ್.ಪಿ	3	ಆಡಿಟ್ ಶುಲ್ಕ	11000
4	ಬ್ಯಾಂಕ್ ಶಿಲ್ಕು	965452	4	ಬಾಕಿಯಿರುವ ವೆಚ್ಚಗಳು	ಎನ್.ಪಿ
5	ಆಸ್ತಿಗಿಂತ ಹೊಣೆಗಾರಿಕೆ ಹೆಚ್ಚಿರುವುದು	–	5	ಠೇವಣಿಗಳು/ಮುಂಗಡ	ಎನ್.ಪಿ
			6	ಸರ್ಕಾರಿ ತೆರಿಗೆಗಳ ಬಾಬ್ತು	110881
			7	ಹೊಣೆಗಾರಿಕೆಗಿಂತ ಆಸ್ತಿ ಹೆಚ್ಚಿರುವುದು	924744
	ಒಟ್ಟು	**1740149**		ಒಟ್ಟು	**1740149**

24. ತೆರಿಗೆ/ತೆರಿಗೆಯೇತರ ಬೇಡಿಕೆ ವಸೂಲಿ ಮತ್ತು ಬಾಕಿಗಳ ಬಗ್ಗೆ :-

ಅ] ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಸೆಕ್ಷನ್ 199ರ ಪ್ರಕಾರ ತೆರಿಗೆಗಳನ್ನು ವಿಧಿಸಲಾಗಿದೆ. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯ್ತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಾವಳಿ 2006ರ ನಿಯಮ 30ರ ಅನ್ವಯ ಡಿ.ಸಿ.ಬಿ. ವಹಿಯನ್ನು ನಿರ್ವಹಿಸಿಲ್ಲ. ಸಂಸ್ಥೆಯವರು ನೀಡಿದ ತೆರಿಗೆಗಳ ಬೇಡಿಕೆ ವಸೂಲಿ ಮತ್ತು ಬಾಕಿ ತಃಖ್ತೆ ಮಾಹಿತಿಗಳ ಪ್ರಕಾರ 2015-16ನೇ ಸಾಲಿಗೆ ಈ ಗ್ರಾಮ ಪಂಚಾಯ್ತಿಯ ಬೇಡಿಕೆ ವಸೂಲಿ ಹಾಗೂ ಬಾಕಿಯ ವಿವರ ಕೆಳಕಂಡಂತಿರುತ್ತದೆ.

ಕ್ರ. ಸಂ.	ತೆರಿಗೆಗಳ ವಿವರ	01.04.15ಕ್ಕೆ ಪ್ರಾರಂಭಿಕ ಶಿಲ್ಕು	2015-16ಕ್ಕೆ ಬೇಡಿಕೆ	ಒಟ್ಟು ಮೊತ್ತ	ವರ್ಷದ ವಸೂಲಿ ಮೊತ್ತ	31.03.16ಕ್ಕೆ ಅಂತಿಮ ಶಿಲ್ಕು
1.	ಮನೆ ಕಂದಾಯ	68490	403802	472292	328295	143997
2.	ನೀರಿನ ದರ	381275	578569	959844	474237	485607
3.	ದೀಪದ ತೆರಿಗೆ	111040	182108	293148	148055	145093
4.	ಲೈಸೆನ್ಸ್ ಫೀ	–	8000	8000	8000	–
	ಒಟ್ಟು	**560805**	1172479	**1733284**	**958587**	**774697**

ಜಿ.ಪಿ.ಬಿ.ಎ.ಆರ್.ನಿಯಮ 20ರನ್ವಯ ನಮೂನೆ-3 ರಲ್ಲಿ ಸಾಮಾನ್ಯ ರಸೀದಿಯನ್ನು ಅಳವಡಿಸಿ ಜಾರಿಗೊಳಿಸಿಲ್ಲ. ಚೆಕ್/ಡಿ.ಡಿ.ಗಳ ವಹಿಯನ್ನು ನಿರ್ವಹಿಸಿ ನಮೂನೆ-3ಎ ನಲ್ಲಿ ತಾತ್ಕಾಲಿಕ ರಸೀದಿ ನೀಡಿರುವುದಿಲ್ಲ.

ಗ್ರಾಮ ಪಂಚಾಯಿತಿಯು ತೆರಿಗೆ ವಿಧಿಸಬೇಕಾದ ಎಲ್ಲಾ ನಿವೇಶನಗಳು ಮತ್ತು ಕಟ್ಟಡಗಳನ್ನು ತೆರಿಗೆ ವ್ಯಾಪ್ತಿಗೆ ತಂದಿರುವ ಬಗ್ಗೆ ಮಾಹಿತಿ ಒದಗಿಸಿರುವುದಿಲ್ಲ.

ಕರ್ನಾಟಕ ಪಂಚಾಯತ್ ರಾಜ್ ತೆರಿಗೆಗಳ ಅಧಿನಿಯಮ 1994ರ ನಿಯಮ 14 ರಂತೆ ಕಂದಾಯದ ದರಗಳನ್ನು ಪ್ರತಿ 4 ವರ್ಷಗಳಿಗೊಮ್ಮೆ ಪರಿಷ್ಕರಿಸಬೇಕಾಗಿದ್ದು, ಸದರಿ ಗ್ರಾಮ ಪಂಚಾಯತಿಯಲ್ಲಿ ಕಂದಾಯದ ದರಗಳನ್ನು ಪರಿಷ್ಕರಿಸಲಾಗಿದೆ/ಪರಿಷ್ಕರಿಸಿರುವುದಿಲ್ಲ. ಆದ್ದರಿಂದ ಕೂಡಲೇ ಕ್ರಮ ಕೈಗೊಂಡು ಪರಿಷ್ಕರಿಸಿ ಗ್ರಾಮ ಪಂಚಾಯಿತಿಯ ಆದಾಯವನ್ನು ಹೆಚ್ಚಿಸಿಕೊಳ್ಳಲು ಸೂಚಿಸಿದೆ,

25.1. ಪ್ರಸಕ್ತ ಸಾಲಿನಲ್ಲಿ ವಸೂಲಿಯಾದ ತೆರಿಗೆಗಳ ಮೇಲೆ ಉಪಕರಗಳನ್ನು ವಿಧಿಸಿ ಸರ್ಕಾರಕ್ಕೆ ಜಮಾ ಮಾಡಬೇಕಾದ ಉಪಕರಗಳ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ	ಉಪ ಕರದ ವಿವರ	ಚಾಲ್ತಿ ಸಾಲಿಗೆ ವಸೂಲಿ	ಶೇಕಡ 10ರಂತೆ ಗ್ರಾಮ ಪಂಚಾಯಿತಿ ಶುಲ್ಕ	ನಿವ್ವಳ ಉಪಕರ	01-4-15ಕ್ಕೆ ಪ್ರಾರಂಭಿಕ ಬಾಕಿ	ಒಟ್ಟು ಪಾವತಿಸ ಬೇಕಾದುದು	2015-16 ರಲ್ಲಿ ಪಾವತಿ	31-3-16ಕ್ಕೆ ಬಾಕಿ
1	ಆರೋಗ್ಯಕರ	36750	3675	33075	283272	316347	–	316347
2	ಶಿಕ್ಷಣ ಕರ	24500	2450	22050	189045	211095	–	211095
3	ಗ್ರಂಥಾಲಯ ಕರ	14700	1470	13230	111359	124589	6517	118072
4	ಬಿಕ್ಷುಕರ ಕರ	7350	735	6615	41935	48550	–	48550
	ಒಟ್ಟು	**83300**	**8330**	**74970**	**625611**	**700041**	**6517**	**693524**

ಮೇಲಿನಂತೆ 31-03-2015ಕ್ಕೆ ಬಾಕಿ ಇರುವ ಉಪಕರಗಳನ್ನು ಈ ಕೂಡಲೇ ಸರ್ಕಾರದ ಸಂಬಂಧಪಟ್ಟ ಶೀರ್ಷಿಕೆಗಳಿಗೆ ಜಮಾ ಮಾಡುವುದು. ಹಾಗೂ ಪ್ರಸಕ್ತ ಸಾಲಿನಲ್ಲಿ ವಸೂಲಿಯಾದ ಉಪಕರಗಳ ನಿವ್ವಳ ಮೊತ್ತ ರೂ. 68453 ಗಳನ್ನು ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು/ಅಧ್ಯಕ್ಷರ ಜವಾಬ್ದಾರಿಯ ಮೇಲೆ ಆಕ್ಷೇಪಣೆಯಲ್ಲಿಡಲಾಗಿದೆ.

25.2. ವಿವಿಧ ಉಪಕರಗಳು ಮತ್ತು ತೆರಿಗೆಗಳ ಮೊತ್ತವನ್ನು ಗ್ರಾಮ ಪಂಚಾಯಿತಿಯ ಇತರೆ ಉದ್ದೇಶಗಳಿಗೆ ಬಳಸಿಕೊಂಡಿರುವ ಬಗ್ಗೆ.

ಈ ಗ್ರಾಮಪಂಚಾಯಿತಿಯ ನಿಧಿ 1ಮತ್ತು 2ರ ಆಖೈರು ಶಿಲ್ಕು ವರ್ಷ ಅಂತ್ಯಕ್ಕೆ ಕ್ರಮವಾಗಿ ರೂ.568016.00 ಗಳ ಮತ್ತು ರೂ.647560.00 ಒಟ್ಟಾರೆ ರೂ. 1215576.00 ಗಳು ಮಾತ್ರ ಬಾಕಿ ಇದ್ದು ಈ ಸಂಸ್ಥೆಯು ವರ್ಷ ಅಂತ್ಯಕ್ಕೆ ಪಾವತಿಸಬೇಕಾಗಿರುವ ವಿವಿಧ ಉಪಕರಗಳ ಮೊತ್ತ ರೂ. 693524.00 ಮತ್ತು ವಿವಿಧ ತೆರಿಗೆಗಳ ಮೊತ್ತ ರೂ.110881.00 ಗಳಿದ್ದು, ಇದರಿಂದ ತೆರಿಗೆಗಳ ಮೇಲೆ ವಸೂಲಿಸಿದ ಉಪಕರಗಳನ್ನು ಮತ್ತು ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಲಾದ ವಿವಿಧ ತೆರಿಗೆಗಳನ್ನು ಸಂಬಂಧಿಸಿದ ಸರ್ಕಾರದ ಲೆಕ್ಕ ಶೀರ್ಷಿಕೆಗಳಿಗೆ ಜಮೆ ಮಾಡದೆ ಗ್ರಾಮ ಪಂಚಾಯಿತಿಯ ಇತರೆ ಉದ್ದೇಶಗಳಿಗೆ ಬಳಸಿಕೊಂಡಿರುವುದು ನಿಯಮ ಬಾಹಿರವಾಗಿರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ಸಕ್ಷಮ ಪ್ರಾಧಿಕಾರ ಅಗತ್ಯ ಕ್ರಮ ವಹಿಸಿ ಬಾಕಿ ಇರುವ ವಿವಿಧ ಉಪಕರಗಳು ಮತ್ತು ತೆರಿಗೆಗಳನ್ನು ಕೂಡಲೇ ಪಾವತಿಸುವ ಬಗ್ಗೆ ಸೂಕ್ತ ನಿರ್ದೇಶನ ನೀಡುವುದು.

26. ಮ್ಯುಟೇಶನ್ ವಹಿಗಳನ್ನು ಹಾಜರುಪಡಿಸದಿರುವುದು ;-

2015-16 ನೇ ಸಾಲಿನಲ್ಲಿ ಮುಟೇಶನ್ ವಹಿಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಆಸ್ತಿಗಳು ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆಗೊಂಡ ಜಮೀನು/ಬಡಾವಣೆಗಳ ಖಾತೆ ಮಾಡಿರುವ ವಿವರ ನೊಂದಣಿಯಿಂದ ವರ್ಗಾವಣೆಗೊಂಡ ಖಾತೆಗಳ ವಿವರ ಮರಣ/ಪೌತಿ ಖಾತೆಗಳ ವಿವರಗಳ ಸಂಖ್ಯೆಗಳನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಈ ಖಾತ ವರ್ಗಾವಣೆ ಪ್ರಕರಣಗಳಲ್ಲಿ ನಿಯಮಬಾಹಿರವಾದ ಖಾತೆಗಳ ವರ್ಗಾವಣೆಯಾಗಿದಲ್ಲಿ ಸಂಬಂಧಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು/ಕಾರ್ಯದರ್ಶಿಗಳು ನೇರ ಹೊಣೆಗಾರರಾಗಿರುತ್ತಾರೆ. ಇನ್ನು ಮುಂದೆ ಯಾವುದೇ ಖಾತೆ ಬದಲಾವಣೆ ಮತ್ತು ಹೊಸದಾಗಿ ಖಾತೆ ನೊಂದಾಣಿ ಮಾಡಿದ ಸಂದರ್ಭದಲ್ಲಿ ಮುಟೇಶನ್ ವಹಿಯಲ್ಲಿ ದಾಖಲಿಸಿ ದೃಢೀಕರಿಸಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವ ಬಗ್ಗೆ ಸಕ್ಷಮ ಪ್ರಾಧಿಕಾರ ಅಗತ್ಯ ಕ್ರಮ ವಹಿಸುವುದು.

01-04-2015ರ ಪ್ರಾರಂಭಿಕ ಶಿಲ್ಕು ರೂ.	23929.00
ಸ್ವೀಕೃತಿಗಳು ರೂ.	
ಅ) ಅನುದಾನ 1. 13ನೇ ಹಣಕಾಸು ನಿಧಿ ರೂ. 516620.00 2. 14ನೇ ಹಣಕಾಸು ನಿಧಿ ರೂ.629232.00 3. ಗ್ರಾಮೀಣ ಕುಡಿಯುವ ನೀರಿನ ಅನುದಾನ ರೂ. 50039.00 ಒಟ್ಟು ರೂ. 1195891.00	1207417.00
ಆ) ಖಾತೆಯ ಬಡ್ಡಿ ರೂ. 11526.00	
ಒಟ್ಟು ರೂ.	**1231346.00**
2015-16ರ ವೆಚ್ಚ ರೂ. 1.13ನೇ ಹಣಕಾಸು ನಿಧಿ ವೆಚ್ಚ ರೂ.466575.00 2.14ನೇ ಹಣಕಾಸು ನಿಧಿಗೆ ವರ್ಗಾವಣೆ ರೂ.629232.00	1095807.00
31-03-2016ಕ್ಕೆ ಅಂತಿಮ ಶಿಲ್ಕು ರೂ.	**135539.00**
ಬ್ಯಾಂಕ್ ಖಾತೆಯ ಶಿಲ್ಕು ರೂ.	135539.00
ವ್ಯತ್ಯಾಸ ರೂ.	-

13ನೇ ಹಣಕಾಸು ಯೋಜನೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಯು ಹೊಂದಿರುವ ಬ್ಯಾಂಕ್ ಖಾತೆಗೆ 2015-16 ನೇ ಸಾಲಿನಲ್ಲಿ ಹೊಂದಾಣಿಕೆಯಾಗಿರುವ ಅನುದಾನ ರೂ.1195891.00ಗಳಲ್ಲಿ 14 ನೇ ಹಣಕಾಸಿನ ನಿಧಿ ಅನುದಾನ ರೂ.629232.00 ಮತ್ತು ಗ್ರಾಮೀಣ ಕುಡಿಯುವ ನೀರಿನ ಅನುದಾನ ರೂ.50039.00ಗಳು ಒಳಗೊಂಡಿರುತ್ತದೆ.ಈ ಯೋಜನೆಯ ಬ್ಯಾಂಕ್ ಖಾತೆಯಲ್ಲಿ ಜಮೆಯಾಗಿರುವ ಅನುದಾನಗಳಲ್ಲಿ ನಿರ್ವಹಿಸಿರುವ ವೆಚ್ಚಗಳ ವಿವರಗಳು ಕೆಳಗಿನಂತಿದೆ.

ಕ್ರ.ಸಂ	ವೆಚ್ಚದ ವಿವರಗಳು	ಮೊತ್ತ ರೂ.ಗಳಲ್ಲಿ
1	ಕಾಮಗಾರಿ ವೆಚ್ಚಗಳು	134397
2	ಕುಡಿಯುವ ನೀರು ಸರಬರಾಜು ಸಾಮಾಗ್ರಿಗಳ ಖರೀದಿ	247532
3	ಬ್ಲೀಚಿಂಗ್ ಪೌಡರ್ ಖರೀದಿ	11069
4	ಶೇ.25% ತರಬೇತಿ ಸಹಾಯಧನ	50000
5	ಆದಾಯತೆರಿಗೆ ಪಾವತಿ	19379
6	ಮಾರಾಟ ತೆರಿಗೆ ಪಾವತಿ	4198
	ಒಟ್ಟು ಮೊತ್ತ	**466575**

40.2 . 14 ನೇ ಹಣಕಾಸು ಯೋಜನೆ ವೆಚ್ಚಗಳ ಬಗ್ಗೆ:

2015-16 ನೇ ಸಾಲಿನ ಲೆಕ್ಕ ತನಿಖೆಗೆ ಒದಗಿಸಿದ ದಾಖಲಾತಿಗಳಂತೆ 14 ನೇ ಹಣಕಾಸು ಯೋಜನೆಯಡಿ ನಿರ್ವಹಿಸಲಾಗಿರುವ ಆರ್ಥಿಕ ವ್ಯವಹಾರಗಳ ವಿವರಗಳು ಕೆಳಗಿಂತಿದೆ.

01-04-2015ರ ಪ್ರಾರಂಭಿಕ ಶಿಲ್ಕು ರೂ.	-
ಸ್ವೀಕೃತಿಗಳು ರೂ.	
ಅ) ಅನುದಾನ ರೂ.629232.00	631916.00
ಆ) ಖಾತೆಯ ಬಡ್ಡಿ ರೂ.2684.00	
ಒಟ್ಟು ರೂ.	**631916.00**
2015-16ರ ವೆಚ್ಚ ರೂ.	493807.00
31-03-2016ಕ್ಕೆ ಅಂತಿಮ ಶಿಲ್ಕು ರೂ.	**138109.00**
ಬ್ಯಾಂಕ್ ಖಾತೆಯ ಶಿಲ್ಕು ರೂ.	138109.00
ವ್ಯತ್ಯಾಸ ರೂ.	-

14ನೇ ಹಣಕಾಸು ಯೋಜನೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಯು ಹೊಂದಿರುವ ಬ್ಯಾಂಕ್ ಖಾತೆಗೆ 2015-16 ನೇ ಸಾಲಿನಲ್ಲಿ ಹೊಂದಾಣಿಕೆಯಾಗಿರುವ ಅನುದಾನ ರೂ.629232.00 ಗಳಲ್ಲಿ ನಿರ್ವಹಿಸಿರುವ ವೆಚ್ಚಗಳ ವಿವರಗಳು ಕೆಳಗಿನಂತಿದೆ.

ಕ್ರ.ಸಂ	ವೆಚ್ಚದ ವಿವರಗಳು	ಮೊತ್ತ ರೂ.ಗಳಲ್ಲಿ
1	ಕಾಮಗಾರಿ ವೆಚ್ಚಗಳು	91730
2	ಚರಂಡಿ ಸ್ವಚ್ಚತೆ ಕಾಮಗಾರಿ ವೆಚ್ಚಗಳು	211889
3	ಬೀದಿದೀಪ/ವಿದ್ಯುತ್ ಸಾಮಾಗ್ರಿಗಳ ಖರೀದಿ	165000
4	ಶೇ.25% ಪ.ಜಾ/ಪ.ಪಂ ಸಹಾಯಧನ	6000
5	ಶೇ.3% ವಿಕಲಚೇತನರಿಗೆ ಸಹಾಯಧನ	3000
6	ಆದಾಯ ತೆರಿಗೆ	5788
7	ಮಾರಾಟ ತೆರಿಗೆ	10200
	ಒಟ್ಟು ಮೊತ್ತ	**493807**

40.3. 13/14ನೇ ಹಣಕಾಸು ಯೋಜನೆಯ ಅಡಿ ಗ್ರಾಮ ಪಂಚಾಯತಿಯಲ್ಲಿ ನಿರ್ವಹಿಸಿರುವ ಕಾಮಗಾರಿಗಳನ್ನು ಕುರಿತು:

2015-16ನೇ ಸಾಲಿನಲ್ಲಿ 13/14ನೇ ಹಣಕಾಸು ಯೋಜನೆಗೆ ಒದಗಿಸಿದ ಅನುದಾನದಲ್ಲಿ ಗ್ರಾಮಪಂಚಾಯತಿಯಲ್ಲಿ ನಿರ್ವಹಿಸಿರುವ ಕಾಮಗಾರಿ ವೆಚ್ಚಗಳ ವಿವರಗಳನ್ನು **ಅನುಬಂಧ-4** ರಲ್ಲಿ ಲಗತ್ತಿಸಲಾಗಿದೆ. ದಾಖಲೆಗಳ ಪರಿಶೀಲನೆಯಿಂದ ಕಂಡುಬಂದ ನ್ಯೂನತೆಗಳು ಈ ಕೆಳಕಂಡಂತಿವೆ.

1) ಅನುಬಂಧದಲ್ಲಿ ವಿವರಿಸಿರುವ ಕಾಮಗಾರಿಗಳ ನಿರ್ವಹಣೆ ಕ್ರಿಯಾ ಯೋಜನೆಯ ಮೂಲಕ ಅನುಮೋದನೆ ಪಡೆದ ಬಗ್ಗೆ ಮಾಹಿತಿಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.
2) ಅಂದಾಜುಪಟ್ಟಿಗೆ ಆಡಾಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಪಡೆದ ಬಗ್ಗೆ ದೃಢೀಕರಣಗಳಿರುವುದಿಲ್ಲ.
3) ಒಮ್ಮೆ ಪಾವತಿಯಾಗಿರುವ ಬಿಲ್ಲುಗಳು ಮತ್ತೊಮ್ಮೆ ಪಾವತಿಯಾಗುವ ಸಂದರ್ಭಗಳನ್ನು ತಡೆಹಿಡಿಯಲು ಅವಕಾಶವಾಗುವಂತೆ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 91ರಂತೆ ನಮೂನೆ 39ರಲ್ಲಿ ಕಾಮಗಾರಿ ರಿಜಿಸ್ಟರು ನಿರ್ವಹಿಸಿ ತಪಾಸಣೆಗೆ ಹಾಜರ್ಪಡಿಸಿರುವುದಿಲ್ಲ.

4) ಕಾಮಗಾರಿ ಪೂರ್ಣಗೊಳಿಸಿರುವುದನ್ನು ದೃಢೀಕರಿಸಲು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 92ರಂತೆ ನಮೂನೆ 40ರಲ್ಲಿ ಕಾಮಗಾರಿ ಮುಕ್ತಾಯದ ವರದಿಯನ್ನು ನೀಡಿರುವುದಿಲ್ಲ.

5) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 81ರನ್ವಯ ಕಾಮಗಾರಿಗಳನ್ನು ಟೆಂಡರು / ತುಂಡು ಕಾಮಗಾರಿ ಕರಾರಿನ ಮೇಲೆ ಗುತ್ತಿಗೆದಾರರಿಗೆ ವಹಿಸುವಲ್ಲಿ ಸ್ಪರ್ಧಾತ್ಮಕ ಕಡಿಮೆ ದರ ನಿಗಧಿ ಪಡಿಸಿರುವುದನ್ನು ರುಜುವಾತು ಪಡಿಸುವ ಮತ್ತು ಕಾಮಗಾರಿಗಳ ನಿರ್ವಹಣೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಾವಳಿ 2000ರ ಪ್ರಕಾರ ನಿಯಮ ಪಾಲಿಸಿದ ಬಗ್ಗೆ ದಾಖಲೆಗಳನ್ನು ತಪಾಸಣೆಗೆ ಹಾಜರುಪಡಿಸಿರುವುದಿಲ್ಲ.

6) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 89ರಂತೆ ಗುತ್ತಿಗೆದಾರರಿಂದ ಪಡೆದ ಭದ್ರತಾ ಠೇವಣಿ ಪಡೆದಿರುವ ಬಗ್ಗೆ ಮಾಹಿತಿ ಒದಗಿಸಿರುವುದಿಲ್ಲ.

ಮೇಲ್ಕಂಡ ನ್ಯೂನತೆಗಳನ್ನು ಸರಿಪಡಿಸಿದ ಮಾಹಿತಿಯನ್ನು ಲೆಕ್ಕಪರಿಶೋಧನೆಯ ಗಮನಕ್ಕೆ ತರಲು ಸೂಚಿಸಿದೆ.

46.2 ಸ್ವರ್ಣಜಯಂತಿ ಗ್ರಾಮ ಸ್ವರೋಜ್ಗಾರ್ ಯೋಜನೆ:-

ಸರ್ಕಾರದ ಅಧಿಸೂಚನೆ ಗ್ರಾಅಪಂ 367 ಜಿಪಸ 2002 ದಿನಾಂಕ 18-8-2003ರಲ್ಲಿ ಪಂಚಾಯತ್‌ರಾಜ್‌ಗಳ ಮೂಲಕ ಬಡತನದ ಕುಟುಂಬಗಳನ್ನು ಬಡತನ ರೇಖೆಯಿಂದ ಮೇಲೆತ್ತಿ ಅವರಿಗೆ ವರ್ಷಾನುಕ್ರಮೇಣದಲ್ಲಿ ಆದಾಯ ತರುವಂತೆ ಗ್ರಾಮೀಣ ಬಡತನವನ್ನು ಸ್ವಸಹಾಯ ಗುಂಪುಗಳಾಗಿ ಪರಿವರ್ತಿಸಿ ಮೂಲಭೂತ ಸೌಲಭ್ಯಗಳನ್ನು ಬಲಪಡಿಸುವುದು, ನಿರ್ಮಾಣ ಸಾಮರ್ಥ್ಯ ಹಾಗೂ ಆದಾಯ ತರುವಂತೆ ಸ್ವತ್ತನ್ನು ಅಭಿವೃದ್ಧಿಪಡಿಸಲು ತಂತ್ರಜ್ಞಾನ, ತರಬೇತಿ, ಮಾರುಕಟ್ಟೆ ವ್ಯವಸ್ಥೆಗಳ ಮೂಲಕ ಸಂಘಟಿಸುವ ಧ್ಯೇಯವಾಗಿರುತ್ತದೆ. ಗ್ರಾಮ ಪಂಚಾಯತಿಯಲ್ಲಿ ಲೆಕ್ಕತನಿಖೆಗೆ ಒದಗಿಸಿದ ಆರ್ಥಿಕ ವ್ಯವಹಾರಗಲ ದಾಖಲಾತಿಗಳಲ್ಲಿನ ಮಾಹಿತಿಗಳಂತೆ 2015-16 ನೇ ಸಾಲಿನಲ್ಲಿ ಈ ಯೋಜನೆಗೆ ಸಂಬಂದಿಸಿದಂತೆ ಸರ್ಕಾರದಿಂದ ಯಾವುದೇ ಅನುದಾನ ಬಂದಿರುವುದಾಗಲಿ ಹಾಗೂ ಯಾವುದೇ ವೆಚ್ಚ ನಿರ್ವಹಿಸಿರುವುದಾಗಲಿ ಕಂಡುಬಂದಿರುವುದಿಲ್ಲ.

47. ವಿದ್ಯುತ್ ಅನುದಾನ (ESCROW) ಖಾತೆ

ಸರ್ಕಾರವು ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಬೀದಿದೀಪಗಳು ಮತ್ತು ನೀರು ಸರಬರಾಜು ಮತ್ತಿತರ ಕಾರಣಗಳಿಗಾಗಿ ಉಪಯೋಗಿಸುವ ವಿದ್ಯುತ್ ಬಳಕೆ ವೆಚ್ಚದಬಿಲ್ ಪಾವತಿಗಾಗಿ ಪ್ರತ್ಯೇಕವಾಗಿ ಲೆಕ್ಕ ನಿರ್ವಹಿಸುವ ಸಲುವಾಗಿ ಅನುದಾನವನ್ನು ಪ್ರತ್ಯೇಕವಾಗಿ ಬಿಡುಗಡೆ ಮಾಡುತ್ತಿದ್ದು ಈ ಅನುದಾನವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು. ಚನ್ನಪಟ್ಟಣ ಶಾಖೆಯಲ್ಲಿನ ಪ್ರತ್ಯೇಕ ಬ್ಯಾಂಕ್‌ಖಾತೆ ಸಂಖ್ಯೆ 64170433997ರಲ್ಲಿ ನಿರ್ವಹಿಸಲಾಗುತ್ತಿದೆ. 2015-16ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ ಹಾಗೂ ನಿರ್ವಹಿಸಿರುವ ವೆಚ್ಚ ಮತ್ತು ದಿನಾಂಕ:31-03-2016ಕ್ಕೆ ಈ ಖಾತೆಯಲ್ಲಿರುವ ಅಂತಿಮ ಶಿಲ್ಕಿನ ವಿವರ ಕೆಳಕಂಡಂತಿದೆ.

ವಿವರ	ಮೊತ್ತ
01-04-2015ರ ಪ್ರಾರಂಭಿಕ ಶಿಲ್ಕು ರೂ.	–
ಸ್ವೀಕೃತಿಗಳು ರೂ.	*1146678.00*
ಅ) ಅನುದಾನ *1. 13ನೇ ಹಣಕಾಸು ಯೋಜನೆ ರೂ. 32510100* *2. 14ನೇ ಹಣಕಾಸು ಯೋಜನೆ ರೂ.209744.00* *3. ರಾಜ್ಯ ಸರ್ಕಾರದ ಅನುದಾನ ರೂ. 599112.00* *ಒಟ್ಟು ಅನುದಾನ ರೂ. 1133957.00*	
ಆ) ಖಾತೆಯ ಬಡ್ಡಿ ರೂ. 12621.00	
ಇ) ನಗದು ಜಮೆ ರೂ.100.00	
ಒಟ್ಟು ರೂ.	*1146678.00*
2015-16ರ *ವೆಚ್ಚ ರೂ.*	*1146578.00*
31-03-2016ಕ್ಕೆ ಅಂತಿಮ ಶಿಲ್ಕು ರೂ.	***100.00***
ಬ್ಯಾಂಕ್ ಖಾತೆಯ ಶಿಲ್ಕು ರೂ.	*100.00*
ವ್ಯತ್ಯಾಸ ರೂ.	–

48. ನಿರ್ಮಲ ಭಾರತ ಅಭಿಯಾನ ಯೋಜನೆ/ಸ್ವಚ್ಛಭಾರತ ಅಭಿಯಾನ ಯೋಜನೆ:

ನಿರ್ಮಲ ಭಾರತ ಅಭಿಯಾನ ಯೋಜನೆ/ಸ್ವಚ್ಛಭಾರತ ಅಭಿಯಾನ ಯೋಜನೆಯು ಗ್ರಾಮ ನೈರ್ಮಲ್ಯದಿಂದ ಜನರ ಆರೋಗ್ಯ ವೃದ್ಧಿಪಡಿಸಿ ಜೀವನ ಮಟ್ಟ ಮತ್ತು ಸ್ವಚ್ಛತೆಯನ್ನು ಕಾಯ್ದುಕೊಳ್ಳಲು ಹಾಗೂ ಬಯಲು ಮುಕ್ತ ಶೌಚಾಲಯ ಆಂದೋಲನದ ರೂಪವಾಗಿ ವೈಯಕ್ತಿಕ ಶೌಚಾಲಯವಿಲ್ಲದ ಗ್ರಾಮೀಣ ಬಡಕುಟುಂಬಗಳು ವೈಯುಕ್ತಿಕ ಶೌಚಾಲಯ ನಿರ್ಮಾಣಮಾಡಕೊಳ್ಳಲು ಸಹಾಯಧನ ಒದಗಿಸುವ ಸಲುವಾಗಿ ಈ ಯೋಜನೆ ಅಡಿ 2015-16 ನೇ ಸಾಲಿನಲ್ಲಿ ಒಟ್ಟು ಅನುದಾನ ರೂ.1785000.00ಗಳನ್ನು ಒದಗಿಸಲಾಗಿರುತ್ತದೆ. ಈ ಮೊತ್ತದಲ್ಲಿ ಅರ್ಹ ಫಲಾನುಭವಿಗಳನ್ನು ಗುರ್ತಿಸಿ ಒಟ್ಟು ರೂ.2485000.00ಗಳ ಸಹಾಯಧನ ವಿತರಿಸಿರುವುದು ಲೆಕ್ಕತನಿಖೆಗೆ ಒದಗಿಸಿದ ದಾಖಲಾತಿಗಳಿಂದ ಕಂಡುಬಂದಿರುತ್ತದೆ. ಈ ಯೋಜನೆಯಲ್ಲಿ 2015-16 ನೇ ಸಾಲಿನಲ್ಲಿ ನಡೆದಿರುವ ಆರ್ಥಿಕ ವ್ಯವಹಾರಗಳ ವಿವರಗಳು ಕೆಳಗಿನಂತಿದೆ.

1	ಪ್ರಾರಂಭಿಕ ಶಿಲ್ಕು	263372.00
2	2015-16ನೇ ಸಾಲಿನಲ್ಲಿ ಜಮಾ ಅ) ಅನುದಾನ ರೂ. ಆ) ಬಡ್ಡಿ ರೂ. ಇ) ಚೆಕ್ ವಾಪಸಾತಿ ರೂ.	
3	ಒಟ್ಟು	
4	2014-15ನೇ ಸಾಲಿನಲ್ಲಿ ಆದ ವೆಚ್ಚ	ಲೆಕ್ಕ ತನಿಖೆಗೆ ಪಾಸ್ ಪುಸ್ತಕ/ನಗದು ಪುಸ್ತಕ ಸಲ್ಲಿಸಿಲ್ಲ
	ಈ)ಫಲಾನುಭವಿಗಳಿಗೆ ಪಾವತಿಸಿದ ಸಹಾಯಧನ ರೂ.	
	ಉ)ಐ.ಇ.ಸಿ.ಕಾರ್ಯಕ್ರಮ ವೆಚ್ಚ ರೂ.	
5	31-3-2016ರ ಅಂತ್ಯಕ್ಕೆ ಅಂತಿಮ ಶಿಲ್ಕು	
6	ಬ್ಯಾಂಕ್ ಖಾತೆಯ ಶಿಲ್ಕು ರೂ.	
7	ವ್ಯತ್ಯಾಸ ರೂ.	

49. ಸರ್ಕಾರಕ್ಕೆ ಜಮಾ ಮಾಡಬೇಕಾದ ರಾಜಧನ/ಮಾರಾಟಕರ ಮತ್ತು ಆದಾಯ ತೆರಿಗೆಗಳ ವಿವರ:-

2015-16ನೇ ಸಾಲಿನಲ್ಲಿ ಪಾವತಿಸಿರುವ ವಿವಿಧ ಖರೀದಿ / ಸೇವೆಗಾಗಿ ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕ ಪಂಚಾಯಿತಿಗಳು) ನಿಯಮಗಳು 2006ರ ನಿಯಮ 88(1) ರಂತೆ ಬಿಲ್ಲುಗಳಿಂದ ಹಾಗೂ ವಿವಿಧ ನಿಧಿಗಳ ಕಾಮಗಾರಿ ಬಿಲ್ಲುಗಳಿಂದ ಕಟಾಯಿಸಿರುವ ಕಡಿಮೆ ಕಟಾಯಿಸಿರುವ ಹಾಗೂ ಕಟಾಯಿಸಿ ಸಂಬಂಧಿಸಿದ ಲೆಕ್ಕಶೀರ್ಷಿಕೆಗಳಿಗೆ ಜಮಾ ಮಾಡಿರುವ ಹಾಗೂ ಬಾಕಿ ಇರುವ ಆದಾಯ ತೆರಿಗೆ, ಮಾರಾಟ ತೆರಿಗೆ ಹಾಗೂ ರಾಜಧನ ಮತ್ತು ಕಾರ್ಮಿಕ ಕಲ್ಯಾಣ ನಿಧಿ ವಿವರಗಳನ್ನು ಅನುಬಂಧ-3 ಮತ್ತು ಅನುಬಂಧ-4ರಲ್ಲಿ ನೀಡಲಾಗಿದ್ದು ಸಂಕ್ಷಿಪ್ತ ವಿವರ ಕೆಳಕಂಡಂತಿವೆ.

ವಿವಿಧ ಯೋಜನೆಗಳಡಿ ಬಾಕಿ ಇರುವ ಸರ್ಕಾರಿ ತೆರಿಗೆಗಳ ವಿವರ	1.4.2015ಕ್ಕೆ ಪ್ರಾರಂಭಿಕ ಶುಲ್ಕ	2015-16 ಕ್ಕೆ ಕಟಾಯಿಸಿರುವುದು	ಒಟ್ಟು (ಅಂಕಣ 2+3)	ಜಮೆಯಾದ ಮೊತ್ತ	ಬಾಕಿ ಮೊತ್ತ (ಅಂಕಣ 4-5)	ಷರಾ
1	2	3	4	5	6	7
ವರ್ಗ-1/13ನೇ/14ನೇ ಹಣಕಾಸು						
1) ಆದಾಯ ತೆರಿಗೆ	26411	9875	36286	25167	1119	
2) ಮಾರಾಟ ತೆರಿಗೆ	5876	18138	24014	14398	9616	
3) ರಾಜಧನ	5138	1000	6138	-	6138	
4) ಕಾರ್ಮಿಕ ಕಲ್ಯಾಣ ನಿಧಿ	-	6060	6060	-	6060	
5) ಗುತ್ತಿಗೆದಾರರಭವಿಷ್ಯ ನಿಧಿ	-	4360	4360	-	4360	
ಎಸ್.ಜಿ.ಆರ್.ವೈ.						
1) ಆದಾಯ ತೆರಿಗೆ	6494	-	6494	-	6494	
2) ಮಾರಾಟ ತೆರಿಗೆ	1194	-	1194	-	1194	
3) ರಾಜಧನ	2669	-	2669	-	2669	
ಗ್ರಾಮಸ್ವರಾಜ್						
1) ಆದಾಯ ತೆರಿಗೆ	6675	-	6675	-	6675	
2) ಮಾರಾಟ ತೆರಿಗೆ	11868	-	11868	-	11868	
3) ರಾಜಧನ	3466	-	3466	-	3466	
ನರೇಗಾ						
1) ಆದಾಯ ತೆರಿಗೆ	14513	-	14513	-	14513	
2) ಮಾರಾಟ ತೆರಿಗೆ	20915	-	20915	-	20915	
3) ರಾಜಧನ	5794	-	5794	-	5794	
ಒಟ್ಟು	111013	39433	150446	39565	110881	

ಈ ಬಾಕಿ ಇರುವ ರೂ.110881.00ತೆರಿಗೆ ಬಾಕಿಯನ್ನು ಸರ್ಕಾರಕ್ಕೆ ಪಾವತಿಸಿ ಲೆಕ್ಕ ತನಿಖೆಗೆ ಮಾಹಿತಿ ನೀಡುವುದು.

50. ಆಸ್ತಿ ವಹಿ ನಿರ್ವಹಣೆ:

ಸರ್ಕಾರಿ ಸುತ್ತೋಲೆ ಸಂಖ್ಯೆ ಆರ್.ಡಿ.ಪಿ 125 ಜೆ.ಆರ್.ವೈ.93 ಲೆಕ್ಕ – ದಿ 13-07-1993 ರಂತೆ (ಕೈಪಿಡಿ ನಿಯಮ 74) ಕಾಮಗಾರಿಗಳಿಂದ ಸೃಷ್ಟಿಯಾದ ಸ್ಥಿರ ಆಸ್ತಿಗಳಿಗೆ ಸಂಬಂಧಿಸಿದಂತೆ ನಿಗಧಿತ ನಮೂನೆಯಲ್ಲಿ ವಿವರ ನಿರ್ವಹಿಸಬೇಕಾಗಿರುತ್ತದೆ. ಸದರಿಯನ್ವಯ ಗ್ರಾಮ ಪಂಚಾಯಿತಿ ಆಯವ್ಯಯ ಮತ್ತು ಲೆಕ್ಕಪತ್ರಗಳ ನಿಯಮಗಳು 2006ರ ನಿಯಮ 69ರ ಪ್ರಕಾರ ಈ ಕೆಳಕಂಡ ಆಸ್ತಿಗಳ ಬಗ್ಗೆ ವಹಿ ನಿರ್ವಹಿಸುವಂತೆ ಹಾಗೂ ಪ್ರತಿ ವರ್ಷವು ಲೆಕ್ಕತನಿಖಾ ತಂಡದ ಪರಿಶೀಲನೆಗೆ ಅದನ್ನು ಹಾಜರುಪಡಿಸುವಂತೆ ಸೂಚಿಸಿದೆ.

1. ನಮೂನೆ-29ರಲ್ಲಿ ಪೀಠೋಪಕರಣ ಯಂತ್ರೋಪಕರಣ ಹಾಗೂ ಇತರೆ ಸಾಮಾಗ್ರಿಗಳ ದಾಸ್ತಾನು ವಹಿ (ಚರಾಸ್ತಿಗಳು)
2. ನಮೂನೆ-30ರಲ್ಲಿ ಭೂ ದಾಖಲೆಗಳ ವಹಿ (ಸ್ಥಿರಾಸ್ತಿಗಳು)
3. ನಮೂನೆ-31 ರಲ್ಲಿ ಸ್ಥಿರಾಸ್ತಿಗಳಾದ ಕಟ್ಟಡಗಳು, ರಸ್ತೆಗಳು,
4. ಸೇತುವೆಗಳು,ಅಡಿಗಾಲುವೆಗಳು ಇತ್ಯಾದಿಗಳ ವಹಿ.

ಈ ಮೇಲಿನ 4 ಪ್ರಮುಖ ವಹಿಗಳನ್ನು ತಪ್ಪದೆ ತೆರೆದು ಪಾಲಿಸುವುದು.

51. ಕೂಲಿಕಾರರ ಪಟ್ಟಿ:

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 87 ರಂತೆ ನಮೂನೆ 38ರಲ್ಲಿ ಕಾಮಗಾರಿವಾರು ಕೂಲಿಕಾರರ ಪಟ್ಟಿಯನ್ನು ನಿರ್ವಹಿಸಿರುತ್ತಾರೆ. ಅದರೆ ಸದರಿ ಪಟ್ಟಿಯನ್ನು ಸಕ್ಷಮ ಪ್ರಾಧಿಕಾರದಿಂದ ಪ್ರಮಾಣೀಕೃತಗೊಂಡಿರುವುದಿಲ್ಲ ಹಾಗೂ ಕಾಮಗಾರಿ ಇಂಜಿನಿಯರ್ ದಿನವಹಿ ಹಾಜರಾತಿಗೆ ಧೃಢೀಕರಿಸಿರುವುದಿಲ್ಲ ಮತ್ತು ಗ್ರಾಮ ಪಂಚಯತಿ ಅಧ್ಯಕ್ಷರಿಂದ ಚೆಕ್ ಸಹಿ ಪಡೆದಿರುವುದಿಲ್ಲ ಇನ್ನು ಮುಂದಾದರು ಇಂತಹ ನ್ಯೂನತೆಗಳು ಮರುಕಳಿಸದಂತೆ ಸೂಕ್ತ ಕ್ರಮವಹಿಸಲು ಲೆಕ್ಕಪರಿಶೋಧನೆ ಸೂಚಿಸುತ್ತದೆ.

52. ಕಾಮಗಾರಿ ಬಿಲ್ಲುಗಳ ಪರಿಶೀಲನೆಯಲ್ಲಿ ಕಂಡು ಬಂದ ನ್ಯೂನತೆಗಳು:

ಕಾಮಗಾರಿ ಬಿಲ್ಲುಗಳನ್ನು ಪರಿಶೀಲಿಸಲಾಗಿ ಅವುಗಳ ನಿರ್ವಹಣೆಯಲ್ಲಿ ಕಂಡುಬಂದ ನ್ಯೂನತೆಗಳು ಈ ಕೆಳಕಂಡಂತಿದ್ದು ಅವು ಮುಂದೆ ಮರುಕಳಿಸಿದಂತೆ ಕ್ರಮಕೈಗೊಳ್ಳುವುದು.

1. ಸಾಮಾಗ್ರಿಗಳ ಎಂ.ಎ.ಎಸ್.ಲೆಕ್ಕಗಳನ್ನು ನಿರ್ವಹಿಸಿರುವುದಿಲ್ಲ.
2. ಕಾಮಗಾರಿಗಳಲ್ಲಿ ಕೂಲಿಕಾರರ ಹಾಜರಾತಿಗೆ ಸಂಬಂಧಿಸಿದಂತೆ ದಿನವಹಿ ಹಾಜರಾತಿ ಪಟ್ಟಿಯನ್ನು ಲಗತ್ತಿಸಿರುವುದಿಲ್ಲ
3. ಪ್ರತಿದಿನ ಹಾಜರಾದ ದಿನಗೂಲಿ ಕಾರ್ಮಿಕರ ಸಂಖ್ಯೆಯನ್ನು ಹಾಗೂ ಎನ್.ಎಂ.ಆರ್.ನಲ್ಲಿ ದಾಖಲಿಸಿ ಕಿರಿಯ ಅಭಿಯಂತರರು ಸಹಿ ಮಾಡಿರುವುದಿಲ್ಲ.
4. ಕಾಮಗಾರಿ ಬಿಲ್ಲುಗಳ ದಿನಗೂಲಿ ವೆಚ್ಚದಲ್ಲಿ ಶೇ 10 ರಿಂದ 15ರಷ್ಟು ಉಳಿತಾಯ ತೋರಿಸಬೇಕಾಗಿದ್ದು ಕೆಲವು ಬಿಲ್ಲುಗಳಲ್ಲಿ ತೋರಿಸಿರುವುದಿಲ್ಲ.
5. ಎನ್.ಎಂ.ಆರ್.ಗಳಲ್ಲಿ ಹೆಬ್ಬೆಟ್ಟು ಸಹಿಗಳಿಗೆ ಧೃಢೀಕರಣಗಳನ್ನು ಮಾಡಿರುವುದಿಲ್ಲ ಬಿಲ್ಲುಗಳನ್ನು ಡಿ.ಎಲ್.ಆರ್. ಪಟ್ಟಿ ಮತ್ತು ಸಿಮೆಂಟಿನ ಲೆಕ್ಕಚಾರದ ಪಟ್ಟಿಯನ್ನು ಲಗತ್ತಿಸಿರುವುದಿಲ್ಲ.

53. ಕರ ನಿರ್ಧರಣಾ ವಹಿ:

ಸದರಿ ವಹಿಯನ್ನು ನಿರ್ವಹಿಸಿರುವುದಿಲ್ಲ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 28 ಮತ್ತು 29ರ ಸೂಚನೆಗಳಂತೆ ನಮೂನೆ -9 ಮತ್ತು 10ರಲ್ಲಿ ನಿರ್ವಹಿಸಬೇಕಿರುತ್ತದೆ. ಗ್ರಾ.ಪಂ.ಗಳಲ್ಲಿ ಕಂದಾಯವನ್ನು ವಾರ್ಷಿಕ ಬಾಡಿಗೆ ಮೌಲ್ಯದ ಆಧಾರದ ಮೇಲೆ ಶೇ 10 ರಷ್ಟು ನಿಗಧಿಪಡಿಸಬೇಕು. ಅದ್ದರಿಂದ ಕರನಿರ್ಧರಣಾ ವಹಿಯಲ್ಲಿ ಪ್ರತಿ ಸ್ವತ್ತಿನ ಅಳತೆ ಹಾಗೂ ವಾರ್ಷಿಕ ಬಾಡಿಗೆ ಮೌಲ್ಯವನ್ನು ನಮೂದಿಸಿ ಲೆಕ್ಕ ತನಿಖೆಗೆ ಹಾಜರುಪಡಿಸಲು ಸೂಚಿಸಿದೆ.

54. ಕಾಮಗಾರಿಗಳ ಅಂದಾಜು ವಹಿ:

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 79 ನಮೂನೆ 35ರಲ್ಲಿ ನಿರ್ವಹಿಸಬೇಕಿರುತ್ತದೆ. ಈ ಬಗ್ಗೆ ನಿರ್ವಹಿಸಿ ಮುಂದಿನ ಸಾಲಿನ ತನಿಖಾ ತಂಡಕ್ಕೆ ಹಾಜರುಪಡಿಸಲು ಸೂಚಿಸಿದೆ.ಹಾಗು ನಿಯಮ 85 ರಂತೆ ಪಾಲಿಸಲಾಗುವ ಅಳತೆಪುಸ್ತಕವನ್ನು (ನಮೂನೆ-37) ನಿರ್ವಹಿಸುವಲ್ಲಿ ಅಲ್ಲಿನ ಹನ್ನೊಂದು ವಿಧವಾದ ಸೂಚನೆಗಳನ್ನು ತಪ್ಪದೆ ಪಾಲಿಸತಕ್ಕದ್ದು.

55. ನಿಧಿ ಸಂಗ್ರಹಣೆಯನ್ನು ಅಭಿವೃದ್ಧಿ ಪಡಿಸುವ ವಹಿಗಳನ್ನು ನಿರ್ವಹಿಸದಿರುವುದು:

ಗ್ರಾಮ ಪಂಚಾಯಿತಿಯ ನಿಧಿ ಸಂಗ್ರಹಣೆಯಲ್ಲಿ ಆದಾಯ ಕ್ರೂಢೀಕರಣೆಗೆ ಸಂಬಂಧಿಸಿದ ಕೆಳಕಂಡ ವಹಿಗಳನ್ನು ನಿಯಮಾನುಸಾರ ನಿರ್ವಹಿಸಿ ತಪಾಸಣೆಗೆ ಸಾದರಪಡಿಸುತ್ತಿಲ್ಲ, ಅಲ್ಲದೆ ಗ್ರಾಮ ಪಂಚಾಯಿತಿಯ ತನ್ನ ಮೂಲ ಆದಾಯಗಳಿಂದ ತೆರಿಗೆಗಳ ಸಂಗ್ರಹಣೆಯನ್ನು ಅಭಿವೃದ್ಧಿಪಡಿಸದಿರುವುದು ಕಂಡು ಬಂದಿರುತ್ತದೆ.

ಕ್ರಮ ಸಂಖ್ಯೆ	ನಿಧಿ ಸಂಗ್ರಹಣೆಗೆ ಸಂಬಂಧಿಸಿದ ವಹಿಗಳ ವಿವರ	ನಿಯಮದ ವಿವರ	ಸಕ್ಷಮ ನಮೂನೆ
1	ತೆರಿಗೆ ನಿರ್ಧರಣೆ ಪಟ್ಟಿ (ಅಸೆಸ್‌ಮೆಂಟ್ ಲಿಸ್ಟ್)	28	9
2	ಮ್ಯಾಟೇಷನ್ ವಹಿ(ಪರಿವರ್ತನೆ)	29	10
3	ಆದಾಯ ತರುವ ಆಸ್ತಿಗಳ ವಹಿ	34	15
4	ಲೈಸೆನ್ಸ್ ನೀಡಿಕೆ ವಹಿ	35	16

ಆದುದರಿಂದ ಕರ್ನಾಟಕ ಪಂಚಾಯತ್‌ರಾಜ್ (ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ಮೇಲ್ಕಂಡ ನಿಯಮಗಳಡಿ, ನಿಯಮಿತ ನಮೂನೆಗಳಲ್ಲಿ ನಿರ್ವಹಿಸಿ, ನಿಧಿ ಕ್ರೋಢೀಕರಣೆಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಸೂಚಿಸಲಾಗಿದೆ.

56. ಲೆಕ್ಕ ಪರಿಶೋಧನೆಗೆ ಒದಗಿಸದಿರುವ ದಾಖಲೆಗಳು / ವಹಿಗಳು :-

2015-16ನೇ ಸಾಲಿನ ಈ ಕೆಳಕಂಡ ದಾಖಲಾತಿಗಳನ್ನು ನಿರ್ವಹಿಸಿ ಲೆಕ್ಕ ಪರಿಶೋಧನೆಗೆ ಒದಗಿಸಿರುವುದಿಲ್ಲ.

1. ಜಾಹಿರಾತು ಬೇಡಿಕೆ ಮತ್ತು ವಸೂಲಿ ರಿಜಿಸ್ಟರ್
2. ನೀರಿನ ದರಗಳ ಬೇಡಿಕೆ ಮತ್ತು ವಸೂಲಿ ರಿಜಿಸ್ಟರ್
3. ಆದಾಯ ತರುವ ಆಸ್ತಿ ಪಾಸ್ತಿಗಳ ರಿಜಿಸ್ಟರ್
4. ಲೈಸನ್ಸ್ ನೀಡಿಕೆ ರಿಜಿಸ್ಟರ್
5. ಮನರಂಜನೆ ತೆರಿಗೆಗಳ ಬೇಡಿಕೆ ರಿಜಿಸ್ಟರ್
6. ಖರೀದಿ ದಾಸ್ತಾನು ಮತ್ತು ವಿತರಣೆ ವಹಿ
7. ಕಾಮಗಾರಿ ಅಂದಾಜು ಪಟ್ಟಿಗಳ ರಿಜಿಸ್ಟರ್
8. ನಾಮವಾರು ಹಾಜರಿ ಪಟ್ಟಿ (ಎನ್.ಎಂ.ಆರ್) ವಹಿ
9. ಕಾಮಗಾರಿ ರಿಜಿಸ್ಟರ್
10. ಅಳತೆ ಪುಸ್ತಕಗಳ ರಿಜಿಸ್ಟರ್
11. ಸಾಲ ತೀರುವಳಿ ರಿಜಿಸ್ಟರ್
12. ಭೂ ದಾಖಲಾತಿ ರಿಜಿಸ್ಟರ್
13. ಸ್ಥಿರಾಸ್ಥಿ ವಹಿ (ಭೂಮಿ ಹೊರತುಪಡಿಸಿ)
14. ತೆರಿಗೆಗಳ ಡಿಸಿಬಿ ವಹಿ.
15. ಮುಟೇಶನ್ ವಹಿ.
16. ಹೊಸದಾಗಿ ಸೃಜಿಸಲ್ಪಟ್ಟ ಆಸ್ತಿ ವಹಿ.

58. ಲೆಕ್ಕ ಪರಿಶೋಧನಾ ಶುಲ್ಕ :-

ಸರ್ಕಾರಿ ಆದೇಶ ಸಂಖ್ಯೆ : ಗ್ರಾಂಅಪ/73/ಜಿಪಸ/2004/ದಿನಾಂಕ : 09.11.05ರ ಪ್ರಕಾರ ಲೆಕ್ಕ ತನಿಖಾ ಶುಲ್ಕವನ್ನು ವಾರ್ಷಿಕ 1,000-00ರಂತೆ 2014-15ನೇ ಸಾಲಿನವರೆಗಿನ ಲೆಕ್ಕ ಪರಿಶೋಧನೆ ಮಾಡಿದ ಸಂಬಂಧ ಕೆಳಕಂಡ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲು ಸೂಚಿಸಿದೆ. 2015-16ನೇ ಸಾಲಿಗೆ ಈ ಸಂಸ್ಥೆಯು ಪಾವತಿಸಬೇಕಾಗಿರುವ ಲೆಕ್ಕ ತನಿಖಾ ಶುಲ್ಕದ ಬೇಡಿಕೆ, ಪಾವತಿ ಹಾಗೂ ಬಾಕಿ ಕೆಳಕಂಡಂತೆ ಇರುತ್ತದೆ.

01.04.2015ಕ್ಕೆ ಬಾಕಿ	10000.00
2015-16ನೇ ಸಾಲಿಗೆ ತಗಾದೆ	1000.00
ಒಟ್ಟು ರೂ.	11000.00
2015-16ನೇ ಸಾಲಿಗೆ ಪಾವತಿ	-
31.03.16ಕ್ಕೆ ಬಾಕಿ	11000.00

ಬಾಕಿ ಇರುವ ರೂ.12000.00ಗಳ ಲೆಕ್ಕ ತನಿಖಾ ಶುಲ್ಕವನ್ನು ಲೆಕ್ಕ ಶೀರ್ಷಿಕೆ :-0070-60-110-0-01 ಗೆ

0070	ಇತರೆ ಆಡಳಿತ ಸೇವೆಗಳು
60	ಇತರೆ ಸೇವೆಗಳು
110	ಸರ್ಕಾರಿ ಲೆಕ್ಕ ಪರಿಶೋಧನಾ ಶುಲ್ಕ
0-01	ಲೆಕ್ಕ ಪರಿಶೋದನಾ ಶುಲ್ಕ

ಚಲನ್ ಮೂಲಕ ಭರ್ತಿಮಾಡಿ ಸಾಂದಾಯ ಮಾಡಲು ಹಾಗೂ ಸಂದಾಯದ ಚಲನ್ ಪ್ರತಿಯನ್ನು ಹಿರಿಯ ಉಪನಿರ್ದೇಶಕರ (ಸಹಾಯಕ ನಿಯಂತ್ರಕರ) ಕಚೇರಿಗೆ ಕಳುಹಿಸುವಂತೆ ಸೂಚಿಸಿದೆ.

59. ಸಾಮಾನ್ಯ ಅಭಿಪ್ರಾಯ :-

1. ರಸೀದಿಗಳ ಸ್ವೀಕೃತಿ ಮತ್ತು ಗ್ರಾಮ ಪಂಚಾಯಿತಿ ನಿಧಿಗೆ ಜಮಾ ಮಾಡಿರುವುದನ್ನು ಪ್ರತಿ ಮಾಹೆಯಲ್ಲೂ ಮುಕ್ತಾಯದಲ್ಲಿ ಸಮನ್ವಯ ಮಾಡಿರುವುದಿಲ್ಲ.

2. ಕರ್ನಾಟಕ ಗ್ರಾಮ ಪಂಚಾಯಿತಿ ಕಾಯಿದೆ 1993 ರ ಲೆಡ್ಜೆಟ್ ಮತ್ತು ಲೆಕ್ಕಪತ್ರ ನಿಯಮ 2006ರ ಕಲಂ 19 ರನ್ವಯ ವಸೂಲಿಸಿದ ಮೊತ್ತ ಕೂಡಲೇ ಗ್ರಾಮ ಪಂಚಾಯಿತಿ ನಿಧಿಗೆ ಜಮಾ ಮಾಡಿರುವುದಿಲ್ಲ. ಸುಮಾರು ಕನಿಷ್ಠ ಒಂದರಿಂದ ಆರುತಿಂಗಳವರೆಗೂ ವಿಳಂಭವಾಗಿ ಜಮಾ ಮಾಡಲಾಗಿರುತ್ತದೆ. ಇದು ತಾತ್ಕಾಲಿಕ ಹಣ ದುರುಪಯೋಗವಾದಂತಾಗುತ್ತದೆ.

3. ಸರ್ಕಾರಿ ಸುತ್ತೋಲೆ ಸಂಖ್ಯೆ: 38012002/ದಿನಾಂಕ: 24.05.2003 ರ ಅನುಗುಣವಾಗಿ ವಸೂಲಿಸಿದ ಉಪಕರಗಳನ್ನು ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡದೇ ಇತರೇ ಉದ್ದೇಶಗಳಿಗೆ ಬಳಸಲಾಗಿದೆ.

4. ಡಿ.ಸಿ.ಬಿ ವಹಿಯನ್ನು ನಿಯಮಾನುಸಾರ ನಿರ್ವಹಿಸಿರುವುದಿಲ್ಲ.

5. ವಸೂಲಿಸಿದ ಶಾಸನ ಬದ್ಧ ತೆರಿಗೆಗಳಾದ ಆದಾಯ, ಮಾರಾಟ, ರಾಜಧನ, ಕಾರ್ಮಿಕರ ಕಲ್ಯಾಣ ನಿಧಿ ಹಾಗೂ ಇತರೆ ತೆರಿಗೆಗಳನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡಿರುವುದಿಲ್ಲ.

6. ಬಿಡುಗಡೆಯಾದ ಅನುದಾನವನ್ನು ಸಂಪೂರ್ಣವಾಗಿ ಮತ್ತು ಆಯಾ ಯೋಜನೆಯ ಮಾರ್ಗಸೂಚಿಗಳನುಸಾರವಾಗಿ ಬಳಸಿರುವುದಿಲ್ಲ. ಇದರಿಂದ ಯೋಜನೆಗಳ ಉದ್ದೇಶ ಪೂರ್ಣಗೊಳ್ಳುವುದಿಲ್ಲ.

7. ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993ರ ನಿಯಮ 63 ರಿಂದ 64 ರನ್ವಯ ನಿರ್ವಹಿಸಬೇಕಾದ ದಾಖಲೆಗಳಾದ ನಗದು ವಹಿ, ಆಸ್ತಿ ವಹಿ, ದಾಸ್ತಾನುವಹಿ, ಬೀದಿ ದೀಪ ವಹಿ, ಬಡತನ ರೇಖೆಯಿಂದ ಕೆಳಗಿರುವವರ ವಹಿ, ಮತ್ತು ಅಳತೆ ಪುಸ್ತಕ ವಹಿಗಳನ್ನು ನಿರ್ವಹಿಸಿರುವುದಿಲ್ಲ. ಆಸ್ತಿ ವಹಿ ನಿರ್ವಹಿಸದೆ ಇರುವುದರಿಂದ ವಿವಿಧ ಯೋಜನೆಗಳಡಿಯಲ್ಲಿ ಸೃಜಿಸಲಾದ ಆಸ್ತಿಗಳನ್ನು ಪರಿಶೀಲಿಸಲು ಲೆಕ್ಕ ಪರಿಶೋಧನೆಗೆ ಸಾಧ್ಯವಾಗಿರುವುದಿಲ್ಲ.

8. ಸಾಮಾನ್ಯ ವೆಚ್ಚಗಳಡಿಯಲ್ಲಿ ಸ್ವಂತ ಚೆಕ್‌ಗಳ ಮೂಲಕ ಹಣ ಸೆಳೆದಿರುವುದು ಇದು ನಿಯಮ ಬಾಹಿರವಾಗಿರುತ್ತದೆ

9. ಶೇ.25ರಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣಕ್ಕಾಗಿ ಅನುದಾನವನ್ನು ಮೀಸಲಿಟ್ಟಿರುವುದಿಲ್ಲ. ಹಾಗೂ ಮೀಸಲಿಟ್ಟ ಅನುದಾನ ಸಂಪೂರ್ಣ ಬಳಕೆಯಾಗಿರುವುದಿಲ್ಲ.

10. ಶೇ.3ರಡಿ ಅಂಗವಿಕಲರ ಕಲ್ಯಾಣಕ್ಕಾಗಿ ಅನುದಾನ ಮೀಸಲಟ್ಟಿರುವುದಿಲ್ಲ. ಹಾಗೂ ಮೀಸಲಿಟ್ಟ ಅನುದಾನ ಸಂಪೂರ್ಣವಾಗಿ ಬಳಕೆಯಾಗಿರುವುದಿಲ್ಲ.

11. 13ನೇ ಹಣಕಾಸು ಯೋಜನೆಯಲ್ಲಿ ಮಾರ್ಗಸೂಚಿಗಳನ್ವಯ ವೆಚ್ಚ ಭರಿಸದೆ ಖರೀದಿ ಮತ್ತು ಇತರೆ ಉದ್ದೇಶಗಳಿಗೆ ಬಳಸಲಾಗಿರುತ್ತದೆ.

12. ಆಂತರಿಕ ನಿಯಂತ್ರಣ ಸಾಧನಗಳಾದ ಮಾಸಿಕ ಮತ್ತು ಅರ್ಧವಾಸಿಕ ಲೆಕ್ಕ ಪತ್ರಗಳನ್ನು ನಿಯಮಾನುಸಾರ ತಯಾರಿಸಿ ಸಲ್ಲಿಸಿರುವುದಿಲ್ಲ.

13. ಆಂತರಿಕ ಲೆಕ್ಕ ಪರಿಶೋಧನೆಯನ್ನು ಕೈಗೊಳ್ಳದೆ ಇರುವುದರಿಂದ ಗ್ರಾಮ ಪಂಚಾಯಿತಿಯ ಲೆಕ್ಕ ಪತ್ರಗಳ ಮೇಲೆ monitoring ಸಾಧ್ಯವಾಗಿರುವುದಿಲ್ಲ.

14. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕ್ರಿಯಾ ಯೋಜನೆ ಮೊತ್ತ ಹಾಗೂ ವಾಸ್ತವಿಕ ಅನುಷ್ಠಾನದ ಮೊತ್ತಕ್ಕೂ ವ್ಯತ್ಯಾಸವಿರುತ್ತದೆ. ವಿತರಿಸಿರುವ ಉದ್ಯೋಗ ಚೀಟಿಗಳಿಗೂ ಸೃಜಿಸಲಾದ ಮಾನವ ದಿನಗಳಿಗೂ ವ್ಯತ್ಯಾಸವಿರುತ್ತದೆ.

15. ಪಂಚತಂತ್ರದಲ್ಲಿ ನಮೂದುಗಳಿಗೂ ವಾಸ್ತವಿಕ ಅಂಕಿ ಅಂಶಗಳಿಗೂ ವ್ಯತ್ಯಾಸವಿರುತ್ತದೆ.

16. ಜೋಡಿ ನಮೂದು ಪದ್ಧತಿಯ ನಿಯಮಗಳಂತೆ, ನಗದುಪುಸ್ತಕ, ಜರ್ನಲ್ ಪುಸ್ತಕ, ಜರ್ನಲ್ ಲೆಡ್ಜರ್‌ಗಳ ಮತ್ತು ವಿವಿಧ ನಮೂನೆಗಳನ್ನು ಅಳವಡಿಸಿ ಜೋಡಿ ನಮೂದು ಪದ್ಧತಿಯಲ್ಲಿ ನಿರ್ವಹಿಸಿ ಲೆಕ್ಕ ತನಿಖೆಗೆ ಒದಗಿಸಿರುವುದಿಲ್ಲ.

17. ಖರೀದಿ ಪ್ರಕ್ರಿಯೆಯಲ್ಲಿ ಪಾರದರ್ಶಕ ನಿಯಮ 1999 ಮತ್ತು 2000 ಗಳನ್ನು ಪೂರ್ಣ ಪ್ರಮಾಣದಲ್ಲಿ ಪಾಲಿಸಿರುವುದಿಲ್ಲ.

18. ಗ್ರಾಮ ಪಂಚಾಯಿಗಳ ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ದ್ವಿ ನಮೂದು ಲೆಕ್ಕ ಪದ್ಧತಿಯಲ್ಲಿ ದಾಖಲೆಗಳನ್ನು ನಿರ್ವಹಿಸಿರುವಂತೆ ಸಾಮರ್ಥವನ್ನು ಪಡೆಯುವಂತೆ ತರಬೇತಿ ನೀಡಲು ಚಾರ್ಟಡ್ ಅಕೌಂಟೆಟ್‌ರವರೊಂದಿಗೆ ಕರಾರು ಮಾಡಿಕೊಂಡಿರುವುದು ಸರಿಯಷ್ಟೆ, ಆದರೆ ಲೆಕ್ಕ ಪರಿಶೋದನೆಗಾಗಿ ಬೇಟಿ ನೀಡಿದಾಗ, ಕರಾರಿನಂತೆ ಗ್ರಾಮ ಪಂಚಾಯಿತಿಯಲ್ಲಿ ದ್ವಿನಮೂದು ಲೆಕ್ಕ ಪದ್ಧತಿಯಲ್ಲಿ ನಿರ್ವಹಿಸದೇ ಬಗ್ಗೆ (ಅದರ ಪ್ರಕ್ರಿಯೆ ಮತ್ತು ಉದ್ದೇಶ) ಅಲ್ಲಿನ ಸಿಬ್ಬಂದಿಗೆ ಮಾಹಿತಿ ಇಲ್ಲದೆ ಇರುವುದು ಗಮನಿಸಲಾಗಿರುತ್ತದೆ. ಆದ್ದರಿಂದ ಕರಾರು ಮಾಡಿಕೊಂಡಿರುವ ಉದ್ದೇಶ ಸಫಲವಾಗಿರುವುದಿಲ್ಲ.

19. ಗ್ರಾಮ ಪಂಚಾಯಿತಿಗಳ ಲೆಕ್ಕ ತಃಖ್ತೆಗಳನ್ನು ಪರಿಶೀಲಿಸಲಾಗಿ ಚಾರ್ಟೆಡ್ ಅಕೌಂಟೆಂಡ್ ರವರ ಸಮತೋಲನ ಪಟ್ಟಿಯ ಅಂಕಿ ಅಂಶಗಳಿಗೂ ಹಾಗೂ ಪಂಚತಂತ್ರ ಪಟ್ಟಿಗಳ ಅಂಕಿ ಅಂಶಗಳಿಗೂ ವ್ಯತ್ಯಾಸವಿರುತ್ತದೆ. ಈ ವ್ಯತ್ಯಾಸವನ್ನು ಸರಿಪಡಿಸುವುದು.

ಹಿರಿಯ ಉಪನಿರ್ದೇಶಕರು,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ರಾಮನಗರ.

ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ವಿರೂಪಾಕ್ಷಿಪುರ ಗ್ರಾಮ ಪಂಚಾಯಿತಿಯ 2015-16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಲ್ಲಿ ಕಂಡುಬಂದ ಲೋಪದೋಷಗಳು/ನ್ಯೂನತೆಗಳು :-

01. ನಗದು ಪುಸ್ತಕ/ ಜರ್ನಲ್ ಪುಸ್ತಕ / ಸಾಮಾನ್ಯ ಲೆಡ್ಜರ್ ಲೆಕ್ಕಗಳು :-

ನಗದು ಪುಸ್ತಕ :

ಜಿ.ಪಿ.ಬಿ.ಎ.ಆರ್. ನಿಯಮಾವಳಿ 2006 ನಿಯಮ 104ರ ಪ್ರಕಾರ ನಮೂನೆ 49ರಲ್ಲಿ ಜೋಡಿ ನಮೂದು ಪದ್ಧತಿಯ ನಗದು ಪುಸ್ತಕವನ್ನು ನಿರ್ವಹಿಸಬೇಕಾಗಿರುತ್ತದೆ. ಈ ರೀತಿ ನಿರ್ವಹಿಸಿದ ನಗದು ವಹಿಯನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿಲ್ಲವಾದ್ದರಿಂದ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.

ಜರ್ನಲ್ ಪುಸ್ತಕ :-

ಜಿ.ಪಿ.ಬಿ.ಎ.ಆರ್.ನಿಯಮಾವಳಿ 2006 ನಿಯಮ 106ರ ಪ್ರಕಾರ ನಮೂನೆ 50 ರಲ್ಲಿ ಜನರಲ್ ಪುಸ್ತಕವನ್ನು ನಮೂನೆ 51ರಲ್ಲಿ ಜರ್ನಲ್ ವೋಚರ್‌ನ ಆಧಾರದ ಮೇಲೆ ಜರ್ನಲ್ ಪುಸ್ತಕದಲ್ಲಿ ನಮೂದುಗಳನ್ನು ಮಾಡತಕ್ಕದ್ದು. ಈ ರೀತಿ ನಿರ್ವಹಿಸಿದ ವಹಿಯನ್ನು ಲೆಕ್ಕ ತನಿಖೆಗಿ ಹಾಜರುಪಡಿಸಿಲ್ಲವಾದ್ದರಿಂದ ಪರಿಶೀಲಿಸಲಾಗಿಲ್ಲ.

ಲೆಡ್ಜರ್ ಲೆಕ್ಕಗಳು :-

ಜಿ.ಪಿ.ಬಿ.ಎ.ಆರ್.ನಿಯಮಾವಳಿ 2006 ನಿಯಮ 107ರ ಪ್ರಕಾರ ನಮೂನೆ 52 ರಲ್ಲಿ ಸಾಮಾನ್ಯ ಲೆಡ್ಜರ್ ಪುಸ್ತಕವನ್ನು ನಿರ್ವಹಿಸಿ, ಅದರಲ್ಲಿ ಪ್ರತಿಯೊಂದು ಬಗೆಯ ಸ್ವೀಕೃತಿ ಮತ್ತು ಪಾವತಿ ಲೆಕ್ಕಗಳನ್ನು ಒಳಗೊಂಡ ಪ್ರತ್ಯೇಕ ಪುಟವನ್ನು ಕಾಯ್ದಿರಿಸಬೇಕು. ಈ ರೀತಿ ನಿರ್ವಹಿಸಿದ ವಹಿಯನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿಲ್ಲವಾದ್ದರಿಂದ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.

2. ವಿತ್ತ ನಿರೂಪಣಾ ತಃಖ್ತೆಗಳಲ್ಲಿ ಕಂಡು ಬಂದ ಲೋಪದೋಷಗಳು ಹಾಗೂ ನ್ಯೂನತೆಗಳಲ್ಲಿ ಸ್ವೀಕೃತಿ ಹಾಗೂ ಪಾವತಿಗಳು / ಆದಾಯ ಮತ್ತು ವೆಚ್ಚಗಳು / ಸಮತೋಲನಾ ಪಟ್ಟಿ :-
ತಾಳೆ ಪಟ್ಟಿ :-
ಸ್ವೀಕೃತಿ ಮತ್ತು ಪಾವತಿ ಲೆಕ್ಕ :-

ಸ್ವೀಕೃತಿ ಮತ್ತು ಪಾವತಿ ಲೆಕ್ಕದ ತ:ಖ್ತೆಯಲ್ಲಿ ವರ್ಗೀಕರಣವನ್ನು ಕ್ರಮಬದ್ಧವಾಗಿ ಮಾಡಿರುವುದಿಲ್ಲ ಅಂದರೆ ಯೋಜನೆಗಳಲ್ಲಿ ಕೆಲವು ಆಸ್ತಿ ನಿರ್ಮಾಣವಾಗಿದ್ದು, ವೆಚ್ಚದ ಕಾಲಂನಲ್ಲಿ ವರ್ಗೀಕರಣ ಮಾಡದೆ ರೆವಿನ್ಯೂ ಬಂಡವಾಳ ವೆಚ್ಚವನ್ನು ಒಪ್ಪಿಗೆ ತೋರಿಸಲಾಗಿದೆ.
ನಗದು ಪುಸ್ತಕದ ನಗದು / ಬ್ಯಾಂಕ್ ಕಾಲಂ ನಗದು ಹರಿವಿನ ಎಲ್ಲಾ ವಹಿವಾಟುಗಳನ್ನು ಶೀರ್ಷಿಕೆ, ಉಪ ಶೀರ್ಷಿಕೆವಾರು ನಿಖರವಾಗಿ ವರ್ಗೀಕರಿಸಿ ತ:ಖ್ತೆಯಲ್ಲಿ ತಂದಿರುವುದಿಲ್ಲ.
ನಿರ್ದಿಷ್ಟ ಯೋಜನೆಗಳ ಅನುದಾನದಿಂದ ಭರಿಸಿದ ರಾಜಸ್ವ ವೆಚ್ಚಗಳನ್ನು ಪಾವತಿ ವಿಭಾಗದ ಇತರೆ ರಾಜಸ್ವದ ವೆಚ್ಚದ ಕೆಳಗೆ ತಂದಿರುವುದಿಲ್ಲ.

ವರಮಾನ ಮತ್ತು ವೆಚ್ಚದ ಲೆಕ್ಕ :-

1. ಸಂಚಯ ಲೆಕ್ಕ ಪದ್ಧತಿಯ ಮಾನದಂಡಕ್ಕೆ ಒಳಪಡುವ ಎಲ್ಲಾ ಆದಾಯ(ವಾಸ್ತವಿಕವಾಗಿ ಸ್ವೀಕೃತವಾಗಿದ್ದರೂ ಅಥವಾ ಸ್ವೀಕೃತಿಯಾಗದಿದ್ದರೂ) ಮತ್ತು ವೆಚ್ಚ (ವಾಸ್ತವಿಕವಾಗಿ ಪಾವತಿಯಾಗಿರಲೆ ಅಥವಾ ಆಗದಿರಲಿ)ಗಳನ್ನು ಸಂಪೂರ್ಣವಾಗಿ ಪರಿಗಣಿಸಿರುವುದಿಲ್ಲ.
2. ಸೃಜಿಸಲ್ಪಟ್ಟ ಆಸ್ತಿಗಳ ಮೇಲಿನ ಸವಕಳಿ ಮೌಲ್ಯವನ್ನು ಲೆಕ್ಕಾಚಾರ ಮಾಡಿ ವೆಚ್ಚವೆಂಬು ತೋರಿಸಿರುವುದಿಲ್ಲ.
3. ವರಮಾನ ಮತ್ತು ವೆಚ್ಚ ತ:ಖ್ತೆ ವಿವಿಧ ಸ್ವರೂಪದ ಪ್ರತಿಯೊಂದು ಶೀರ್ಷಿಕೆಗೂ ಅನುಸೂಚಿಗಳನ್ನು ಲಗತ್ತಿಸಿರುವುದಿಲ್ಲ.
4. ನಗದೇತರ ಬಾಬುಗಳಾದ ಸವಕಳಿ ತೊಡೆದುಹಾಕಲಾಗಿದ್ದು, ಅನುಪಯುಕ್ತ ಸಾಮಗ್ರಿಗಳು, ಗ್ರಾ.ಪಂ.ಆಸ್ತಿಗಳ ಮಾರಾಟದಿಂದ ಬಂದ ಲಾಭ/ನಷ್ಟಗಳನ್ನು ತ:ಖ್ತೆಯಲ್ಲಿ ತೋರಿಸಿಲ್ಲ.

ಸಮತೋಲನ ಪಟ್ಟಿ :-

1. ದಿನಾಂಕ:01-04-2008ರನ್ವಯ ಗ್ರಾಮ ಪಂಚಾಯತಿಯ ಆರಂಭಿಕ ಪಟ್ಟಿ ತಯಾರಿಸಿ ಮೌಲ್ಯ ನಿರ್ಧರಿಸಿ ತ:ಖ್ತೆಯಲ್ಲಿ ಅಳವಡಿಸಿಕೊಂಡಿರುವುದಿಲ್ಲ.
2. ದಿನಾಂಕ:31-03-2016ರ ಅಂತ್ಯಕ್ಕೆ ಬಾಕಿ ಇರುವ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಸಮರ್ಪಕವಾಗಿ ಗುಂಪೀಕರಿಸಿ ತ:ಖ್ತೆಯಲ್ಲಿ ಅಳವಡಿಸಿರುವುದಿಲ್ಲ.
3. ಪ.ಜಾ/ಪ.ಪಂ.ದವರಿಗೆ ಕಾಯ್ದಿರಿಸಿದ ಮೊತ್ತದಲ್ಲಿ 31-03-2016ರ ಅಂತಿಮ ಶಿಲ್ಕನ್ನು ತ:ಖ್ತೆಯ ಹೊಣೆಗಾರಿಕೆ ಭಾಗದಲ್ಲಿ ಬಿಂಬಿಸಿರುವುದಿಲ್ಲ.
4. ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಮೊಬಲಗುಗಳನ್ನು ಸಮತೋಲನಾ ಪಟ್ಟಿಯ ಆಸ್ತಿಯ ಭಾಗದಲ್ಲಿ ತಂದು ಅನುಸೂಚಿ-3ರಲ್ಲಿ ವಿವರಗಳನ್ನು ದಾಖಲಿಸಿರುವುದಿಲ್ಲ.

ಮೇಲಿನ ಹಣಕಾಸು ತ:ಖ್ತೆಗಳಲ್ಲಿ ಕಂಡುಬಂದ ನ್ಯೂನತೆಗಳನ್ನು ಕಾರ್ಯದರ್ಶಿ/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಸಲ್ಲಿಸಿದ ನಗದು ಪುಸ್ತಕ, ಬ್ಯಾಂಕು ಪುಸ್ತಕ, ವೋಚರ್‌ಗಳು, ಬಿಲ್ಲುಗಳು ಹಾಗೂ ಇತರೆ ಪೂರಕ ದಾಖಲೆಗಳನ್ನು ಪರಿಶೀಲಿಸಿ ವರದಿ ಮಾಡಲಾಗಿದೆ.

ಸ್ಥಳ: ರಾಮನಗರ
ದಿನಾಂಕ: -01-:2017

ಹಿರಿಯ ಉಪನಿರ್ದೇಶಕರು
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ರಾಮನಗರ.

ಅನುಬಂಧ-1 (ಪ್ಯಾರಾ ಸಂ.2)

ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ವಿರೂಪಾಕ್ಷಿಪುರ ಗ್ರಾಮಪಂಚಾಯತಿಯ 2015-16 ನೇ ಸಾಲಿನ ಲೆಕ್ಕಪರಿಶೋಧನೆಯಂತೆ ಹಿಂದಿನ ಲೆಕ್ಕ ತನಿಖಾ ವರದಿಗಳ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳಿಗೆ ಅನುಸರಣಾ ವರದಿಯನ್ನು ಕಾಯ್ದೆಯ ಅಧಿನಿಯಮ216(7)ರ ಪ್ರಕಾರ ಪರಿಶೀಲಿಸಿ ಚನ್ನಪಟ್ಟಣ ತಾಲ್ಲುಕು ಪಂಚಾಯತಿಯ ಕಾರ್ಯನಿರ್ವಹಣಾ ಅಧಿಕಾರಿಗಳು ಕೈಬಿಟ್ಟ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ವಿವರಣಾ ತ:ಖ್ತೆ:

ಅ.ನಂ	ವರ್ಷ	ಲೆಕ್ಕ ತನಿಖಾ ವರದಿ ಆಕ್ಷೇಪಣೆ/ವಸೂಲಾತಿ ಕಂಡಿಕೆಗಳ ಸಂಖ್ಯೆ ಹಾಗೂ ಮೊತ್ತ				ತಿರುವಳಿ ಗೊಂಡಿರುವುದಾಗಿ ಪರಿಗಣಿಸಲಾದ ಆಕ್ಷೇಪಣೆ/ವಸೂಲಾತಿ ವಿವರ				ತಿರುವಳಿಯಾಗದ ಆಕ್ಷೇಪಣೆ/ವಸೂಲಾತಿ ವಿವರ				ಷರಾ
		ಕಂಡಿಕೆ ಸಂಖ್ಯೆ	ಆಕ್ಷೇಪಣೆ ಮೊತ್ತ	ಕಂಡಿಕೆ ಸಂಖ್ಯೆ	ವಸೂಲಾತಿ ಮೊತ್ತ	ಕಂಡಿಕೆ ಸಂಖ್ಯೆ	ಆಕ್ಷೇಪಣೆ ಮೊತ್ತ	ಕಂಡಿಕೆ ಸಂಖ್ಯೆ	ವಸೂಲಾತಿ ಮೊತ್ತ	ಕಂಡಿಕೆ ಸಂಖ್ಯೆ	ಆಕ್ಷೇಪಣೆ ಮೊತ್ತ	ಕಂಡಿಕೆ ಸಂಖ್ಯೆ	ವಸೂಲಾತಿ ಮೊತ್ತ	
1	2	3	4	5	6	7	8	9	10	11	12	13	14	15
1	1994-95		32214		403						32214		403	
2	1995-96		20713		614						20713		614	
3	1996-97		33127		2207						33127		2207	
4	1997-98		36778		1561						36778		1561	
5	1998-99		34612		30343						34612		30343	
6	1999-2000		76080		2692						76080		2692	
7	2000-01		111675		3811						111675		3811	
8	2001-02		11490		1939						11490		1939	
9	2002-03		9658		988						9658		988	
10	2003-04		27143		1271						27143		1271	
11	2004-05		0		0						0		0	
12	2005-06		218363		15067						218363		15067	
13	2006-07		37741		3040						37741		3040	
14	2007-08		37402		453						37402		453	

15	2008–09		15801		1261						15801		1261	
16	2009–10		37819		5324						37819		5324	
17	2010–11		51714		1854						51714		1854	
18	2011–12		80784		125158						80784		125158	
19	2012–13		136950		2053						136950		2053	
20	2013–14		101551		4844						101551		4844	
21	2014–15	4	141518	1	4724					4	141518	1	4724	
ಒಟ್ಟು			**1253133**		**209607**						**1253133**		**209607**	

ಹಿರಿಯ ಉಪನಿರ್ದೇಶಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ
ರಾಮನಗರ.

4. ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳ ವಿವರ:

4(1) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 246(6) ಮತ್ತು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 113ರಂತೆ, ಗ್ರಾಮ ಪಂಚಾಯಿತಿಯು ಹಿಂದಿನ ಲೆಕ್ಕತನಿಖಾ ವರದಿಗಳಿಗೆ ಉತ್ತರಿಸಲು ಕೈಗೊಂಡ ಕ್ರಮದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ವಸೂಲಾತಿ/ ಆಕ್ಷೇಪಣೆಗಳನ್ನು ನಿಗಧಿತ ನಮೂನೆಗಳಲ್ಲಿನ ವಹಿಯಲ್ಲಿ ನಿರ್ವಹಿಸಿರುವುದಿಲ್ಲ ಮತ್ತು ಅನುಪಾಲನಾ ವರದಿಗಳನ್ನು ಸಹ ಸಲ್ಲಿಸದೆ ಇರುವುದು ಕಂಡುಬಂದಿರುತ್ತದೆ.

ಆದುದರಿಂದ ನಿಯಮ 113ರಂತೆ, ಲೆಕ್ಕ ತಪಾಸಣಾ ವರದಿ/ಕಂಡಿಕೆಗಳಿಗೆ ಅನುಪಾಲನಾ ವರದಿಯನ್ನು ಗ್ರಾಮಪಂಚಾಯಿತಿ ಸಭೆಯಲ್ಲಿ ಮಂಡಿಸಿ ಚನ್ನಪಟ್ಟಣ ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಷರಾದೊಂದಿಗೆ ಹಾಗೂ ಅವರ ಮುಖಾಂತರ (ಸಹಾಯಕ ನಿಯಂತ್ರಕರು) ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ರಾಮನಗರ ಇವರಿಗೆ ತೀರುವಳಿಗಾಗಿ ಸಲ್ಲಿಸಲು ಸೂಚಿಸಲಾಗಿದೆ.

ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ತೀರುವಳಿಯಾಗದೆ ಬಾಕಿ ಇರುವಕಂಡಿಕೆಗಳಲ್ಲಿ ಆಕ್ಷೇಪಣೆಗಳಲ್ಲಿಟ್ಟಿರುವ ಮತ್ತು ವಸೂಲಾತಿಗೆ ಸೂಚಿಸಿರುವ ಮೊತ್ತಗಳ ವರ್ಷಾವಾರು ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿರುತ್ತದೆ.

ಈ ಸಂಬಂಧ ರಚಿತವಾಗಿರುವ ಅಡ್‌ಹಾಕ್ ಸಮಿತಿ ಸಭೆಯಲ್ಲಿ ಕಂಡಿಕೆಗಳ ತೀರುವಳಿಗೆ ಕ್ರಮವಹಿಸಲು ತಿಳಿಸಲಾಗಿದೆ. ಸಕಾಲಿಕ ಕ್ರಮಗಳಿಂದ ಮಾತ್ರವೇ ವಸೂಲಾತಿಗೆ ಸೂಚಿಸಲಾಗಿರುವ ಮೊತ್ತಗಳನ್ನು ವಸೂಲಿಸಬಹುದಾಗಿದೆ. ವಿಳಂಬದ ಹಾಗೂ ನಿರ್ಲಕ್ಷಿತ ಕ್ರಮಗಳಿಂದ ವಸೂಲಾಗಬಹುದಾದ ಹಣದ ಮೌಲ್ಯಗಳು ವಸೂಲಾಗದ ಹಂತವನ್ನು ತಲುಪುವ ಸಂಭವ ಏರ್ಪಡಬಹುದಾಗಿರುತ್ತದೆ. ಆದ್ದರಿಂದ, ಈ ಸಂಬಂಧವಾಗಿ ಜರೂರು ಕ್ರಮಜರುಗಿಸಲು ಲೆಕ್ಕಪರಿಶೋಧನೆ ಸೂಚಿಸುತ್ತದೆ.

2017-18ನೇ ಸಾಲಿನ ವರ್ಷಾಂತ್ಯಕ್ಕೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಸೆಕ್ಷನ್ 246(7)ರ ಪ್ರಕಾರ ಹಿಂದಿನ ಸಾಲಿನ ಲೆಕ್ಕತನಿಖಾ ವರದಿಗಳ ಕಂಡಿಕೆಗಳಂತೆ ತೀರುವಳಿಗೊಂಡ ಕಂಡಿಕೆಗಳ ವಿವರ ಈ ಕೆಳಕಂಡಂತಿದ್ದು, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಸೆಕ್ಷನ್ 246(8)ರ ಪ್ರಕಾರ ಚನ್ನಪಟ್ಟಣ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಋಣಭಾರ ಹೊರಿಸಿದ ಮತ್ತು ತೀರುವಳಿಗೊಂಡ ಪ್ರಕರಣಗಳ ವಿವರಗಳು ಲೆಕ್ಕ ಪರಿಶೋಧನೆಗೆ ಒದಗಿಸಿರುವುದಿಲ್ಲ.

ಚನ್ನಪಟ್ಟಣ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ವಿರೂಪಾಕ್ಷಿಪುರ ಗ್ರಾಮ ಪಂಚಾಯಿತಿರವರು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993 ರ ಸೆಕ್ಷನ್ 246(6) ಮತ್ತು (8), (9) ರಂತೆ ಸೂಕ್ತ ಕ್ರಮಕ್ಕೈಗೊಳ್ಳಲು ಲೆಕ್ಕಪರಿಶೋಧನೆಯು ಸೂಚಿಸಿದೆ.

4(2) ವರ್ಷಾಂತ್ಯಕ್ಕೆ ಕರ್ನಾಟಕ ಪಂಚಾಯತ್ ರಾಜ್ 1993 ಸೆಕ್ಷನ್ 246[7]ರ ಪ್ರಕಾರ ಹಿಂದಿನ ಲೆಕ್ಕ ತನಿಖಾ ವರದಿಗಳ ತೀರುವಳಿ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ವಿವರ.

ಕ್ರ.ಸಂ	ವರ್ಷ	ಆಕ್ಷೇಪಣೆ		ವಸೂಲಾತಿ	
		ಕಂಡಿಕೆ	ಮೊತ್ತ	ಕಂಡಿಕೆ	ಮೊತ್ತ
1.	01.04.2017ಕ್ಕೆ ಪ್ರಾರಂಭ ಶಿಲ್ಕು		1494911		211427
2.	2017-18ಕ್ಕೆ ಸೇರ್ಪಡೆ		68615		0
3.	ಒಟ್ಟು		**1563526**		**211427**
4.	2017-18ಕ್ಕೆ ತೀರುವಳಿ		-		-
5.	31.03.2018ಕ್ಕೆ ಅಂತಿಮ ಶಿಲ್ಕು		**1563526**		**211427**

ಕರ್ನಾಟಕ ಪಂಚಾಯತ್ ರಾಜ್ಯ (ಆಯವ್ಯಯ ಮತ್ತು ಲೆಕ್ಕ ಪತ್ರಗಳು) ಗಳ ನಿಯಮಗಳು 2006 ನಿಯಮ 114ರ ಪ್ರಕಾರ ಲೆಕ್ಕ ಪರಿಶೋಧನಾ ಸಮಿತಿಯನ್ನು ರಚಿಸಿರುವುದಿಲ್ಲ. ಈ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು/ಕಾರ್ಯದರ್ಶಿಗಳ/ ಗ್ರಾಮ ಪಂಚಾಯಿತಿಯ ವಿವರಣೆ ಅಗತ್ಯ.

/ಕಾರ್ಯದರ್ಶಿಗಳು ಕ್ರಮ ಕೈಗೊಳ್ಳಲು ಸೂಚಿಸಿದೆ. ಸಮಗ್ರ ಆರ್ಥಿಕ ಪರಿಸ್ಥಿತಿ ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ. ಮತ್ತು 2017-18 ನೇ ಸಾಲಿನಲ್ಲಿ ಸ್ವೀಕೃತಿ ಮತ್ತು ಪಾವತಿ ತಃಖ್ತೆಯನ್ನು ಅನುಬಂಧ-3ರಲ್ಲಿ ಲಗತ್ತಿಸಿದೆ.

6.2. ಗ್ರಾಮಪಂಚಾಯಿತಿ ನಿಧಿಯ ಸಾಮಾನ್ಯ ಆದಾಯ ಮತ್ತು ಸಾಮಾನ್ಯ ವೆಚ್ಚಗಳ ಬಗ್ಗೆ:

ಗ್ರಾಮ ಪಂಚಾಯಿತಿ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ವಿವಿಧ ಯೋಜನೆಗಳ ಜಮಾ ಮತ್ತು ಪಾವತಿ ವಿವರಗಳನ್ನು ಹೊರತುಪಡಿಸಿ ಸ್ವ ಆದಾಯ ಹಾಗೂ ಸೆಕ್ಷನ್ 206 ಮತ್ತು 208ರಡಿ ಸ್ವೀಕೃತಿಯಾಗಿರುವ ಎಲ್ಲಾ ಅನುದಾನ / ನೀರು ನಿರ್ವಹಣೆ ಅನುದಾನಗಳ ವಾರ್ಷಿಕ ಜಮೆ ಮತ್ತು ವೆಚ್ಚಗಳ ವಿವರವನ್ನು ಹಿಂದಿನ ಎರಡು ವರ್ಷಗಳ ಸಾಮಾನ್ಯ ಆದಾಯ ಮತ್ತು ಸಾಮಾನ್ಯ ವೆಚ್ಚಗಳೊಂದಿಗೆ ತಾಳೆಮಾಡಲಾಗಿ ಸರಾಸರಿ ಆದಾಯ ಮತ್ತು ವೆಚ್ಚಗಳ ವಿವರ ಈ ಕೆಳಕಂಡಂತೆ ಇರುವುದು ಕಂಡುಬಂದಿದೆ.

ಕ್ರ.ಸಂ	ವಾರ್ಷಿಕ	ಸಾಮಾನ್ಯ ಆದಾಯ ರೂ.	ಸಾಮಾನ್ಯ ವೆಚ್ಚ ರೂ.
1	2015-2016	3862213	3550961
2	2016-2017	5499288	3554377
3	2017-2018	14172069	13152660
ಒಟ್ಟು		**23533570**	**20257998**
ಸರಾಸರಿ		**7844523**	**6752466**

7. ನಗದು ಪುಸ್ತಕ ನಿರ್ವಹಣೆ-ಲೋಪದೋಷಗಳು:

ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮ 2006 ರ ನಿಯಮ 104 ರಲ್ಲಿ ತಿಳಿಸಿದಂತೆ ನಮೂನೆ-49 ರಲ್ಲಿ ನಗದು ಪುಸ್ತಕ ನಿರ್ವಹಿಸಲಾಗಿದ್ದು, ಪೂರ್ಣ ಪ್ರಮಾಣದಲ್ಲಿ ಇಲ್ಲದಿದ್ದರೂ, ಪ್ರಾರಂಭಿಕ ಹಂತದಲ್ಲಿ ಸಾಧಾರಣ ನಿರ್ವಹಿಸಿದೆ. ಮುಂದಿನ ಆರ್ಥಿಕ ಸಾಲಿನಲ್ಲಿ ಈ ಕೆಳಗೆ ಸೂಚಿಸಿದಂತೆ. ನಗದು ಪುಸ್ತಕ ಹಾಗೂ ಅದಕ್ಕೆ ಸಂಬಂಧಿಸಿದ ಇನ್ನಿತರ ದಾಖಲೆಗಳನ್ನು ನಿರ್ವಹಿಸಲು ಸೂಚಿಸಿದೆ. ನಮೂನೆ-49 ರಲ್ಲಿ ನಗದು ಮತ್ತು ಬ್ಯಾಂಕ್ ಕಾಲಂಗಳನ್ನು ಒಳಗೊಂಡ ನಗದು ಪುಸ್ತಕವನ್ನು ನಿರ್ವಹಿಸತಕ್ಕದ್ದು. ಗ್ರಾಮ ಪಂಚಾಯತಿಯ ನಗದನ್ನು ಹಾಗೂ ಖಜಾನೆ / ಬ್ಯಾಂಕ ವ್ಯವಹಾರಗಳನ್ನು ಸಂಬಂಧಪಟ್ಟ ಕಾಲಂಗಳಲ್ಲಿ ಅನುಕ್ರಮವಾಗಿ ನಮೂದಿಸತಕ್ಕದ್ದು ಬ್ಯಾಂಕ್ ಖಾತೆಗಳಿಗೆ ಜಮೆ / ಆದಾಯಗಳನ್ನು (Credit) ನಗದು ಪುಸ್ತಕದ ಎಡಭಾಗದಲ್ಲಿ ನಮೂದಿಸತಕ್ಕದ್ದು ರಶೀದಿ ಪುಸ್ತಕಗಳಲ್ಲಿ ದಾಖಲಿಸಿದ ನಮೂದುಗಳ ಆಧಾರದ ಮೇಲೆ (ದಿನವಹಿ ಪುಸ್ತಕದ ವಸೂಲಾತಿಯನ್ನು ಆಧರಿಸಿಯೂ) ಚೆಕ್ ಸ್ವೀಕೃತಿ ರಿಜಿಸ್ಟರ್‌ನಲ್ಲಿ ದಾಖಲಾದ ಚೆಕ್ಕುಗಳ ಮತ್ತು ಬ್ಯಾಂಕಿಗೆ ಜಮೆ ಮಾಡಲಾದ ಚಲನ್‌ಗಳ ಆಧಾರದ ಮೇಲೆ ನಗದು ಪುಸ್ತಕವನ್ನು ಬರೆಯತಕ್ಕದ್ದು ನಗದು ಪುಸ್ತಕದ ಬಲಭಾಗದಲ್ಲಿ ಪಾವತಿಗಳಿಗೆ ಸಂಬಂಧಿಸಿದ ಆರ್ಥಿಕ ವಹಿವಾಟಿನ ರಿಜಿಸ್ಟರಿನಲ್ಲಿರುವ ನಮೂದುಗಳ ಆಧಾರದ ಮೇಲೆ ಬರೆಯತಕ್ಕದ್ದು. ನಗದು ಪುಸ್ತಕಗಳನ್ನು ಈ ಕೆಳಕಂಡಂತೆ ನಿರ್ವಹಿಸಲು ಕ್ರಮ ಕೈಗೊಳ್ಳಲು ಸೂಚಿಸಿದೆ.

1. ನಗದು ಪುಸ್ತಕವು ಮುದ್ರಿತ ರೂಪದಲ್ಲಿರತಕ್ಕದ್ದು ಮತ್ತು ಪುಟಗಳಿಗೆ ತಾಂತ್ರೀಕೃತ ಅಂಕಿಗಳನ್ನು ನೀಡತಕ್ಕದ್ದು ಈ ವರ್ಷದ ಹಾಜರುಪಡಿಸಿದ ನಗದು ವಹಿಗೆ ಯಂತ್ರೀಕೃತ ಪುಟ ಸಂಖ್ಯೆ ನೀಡಿರುವದಿಲ್ಲ.
2. ನಗದು ಪುಸ್ತಕವನ್ನು ಬಳಸಲು ತೆಗೆದುಕೊಂಡಾಗ ಅದರಲ್ಲಿರುವ ಪುಟಗಳು ಸರಿಯಾಗಿವೆಯೇ ಎಂಬುದನ್ನು ಪರಿಶೀಲಿಸತಕ್ಕದ್ದು ಮತ್ತು ಹಾಗೆ ಪರಿಶೀಲಿಸಲಾಗಿದೆ. ಎಂಬುದಕ್ಕೆ ನಗದು ಪುಸ್ತಕದಲ್ಲಿ ಮೊದಲು ಪುಟದಲ್ಲಿ ಅದರ ಪುಟ ಸಂಖ್ಯೆಗಳನ್ನು ನಮೂದಿಸಿ ಕಾರ್ಯದರ್ಶಿಯು ದೃಢೀಕರಿಸತಕ್ಕದ್ದು.
3. ಪ್ರತಿ ದಿನವೂ ನಗದು ಪುಸ್ತಕವನ್ನು ಮುಕ್ತಾಯಗೊಳಿಸತಕ್ಕದ್ದು. ಈ ರೀತಿ ತಾಳೆ ಮಾಡಿದ ಪುಸ್ತಕದಲ್ಲಿ ನಗದು ಶಿಲ್ಕುಗಳ ಪ್ರತಿ ದಿನ ತಾಳೆಯಾಗತಕ್ಕದ್ದು. ಈ ರೀತಿ ತಾಳೆ ಮಾಡಿದ ವಿವರಗಳನ್ನು ನಗದು ಪುಸ್ತಕದಲ್ಲಿ ದಾಖಲಿಸಿ ಕಾರ್ಯದರ್ಶಿ ದೃಢೀಕರಿಸುವದು ಅವಶ್ಯಕವಾಗಿದೆ.
4. ದಿನದ ಅಂತಿಮ ನಗದು ಶಿಲ್ಕಿನಲ್ಲಿ ಇರತಕ್ಕ ವಿವರಗಳನ್ನು ಅಂದರೆ ಸಂಗ್ರಹವಾದ ಹಣವನ್ನು ನಿಗದಿತ ದಿನದೊಳಗಾಗಿ ಜಮಾ ಮಾಡದೇ ಇರುವುದು. ಬಟವಡೆಯಾಗದ ವೇತನ, ಮುಂಗಡ ಹಣದ ಶಿಲ್ಕು ಇತ್ಯಾದಿಗಳ ವಿವರಗಳನ್ನು ನಮೂದಿಸಿರುವದಿಲ್ಲ.
5. ಬ್ಯಾಂಕಿನಲ್ಲಿ ಬರುವ ಡೆಬಿಟ್ ಮತ್ತು ಕ್ರೆಡಿಟ್ ಚೀಟಿಗಳಿಗೆ ಅನುಗುಣವಾಗಿ ಬ್ಯಾಂಕ ಪಾಸ್ ಪುಸ್ತಕಗಳಲ್ಲಿರುವಂತೆ ಬ್ಯಾಂಕುಗಳು ವಿಧಿಸಿದ ಕಮಿಷನ್ ಬಾಬ್ತು ಮತ್ತು ಜಮೆ ಮಾಡಿದ ಬಡ್ಡಿ ಇತ್ಯಾದಿ ವಿವರಗಳನ್ನು ನಗದು ಪುಸ್ತಕದಲ್ಲಿ ನಮೂದಿಸತಕ್ಕದ್ದು ಬ್ಯಾಂಕಿನಿಂದ ಡೆಬಿಟ್ ಕ್ರೆಡಿಟ್ ಚೀಟಿಗಳನ್ನು ತಕ್ಷಣ ಪಡೆದುಕೊಂಡು ಅದನ್ನು ವೋಚರ ಆಗಿ ಪರಿಗಣಿಸಿ ನಗದು ಪುಸ್ತಕದಲ್ಲಿ ಖರ್ಚು ದಾಖಲಿಸಿರುವುದನ್ನು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಿದೆ.
6. 105 ನೇ ನಿಯಮದಡಿಯಲ್ಲಿ ಸೂಚಿಸಿರುವಂತೆ ಖಜಾನೆ / ಬ್ಯಾಂಕ್ ಹೊಂದಾಣಿಕೆ ಪತ್ರವನ್ನು ಪ್ರತಿ ತಿಂಗಳ ಕೊನೆಗೆ ಸಿದ್ಧಪಡಿಸಿ ಬ್ಯಾಂಕ್ / ಖಜಾನೆ ಶಿಲ್ಕನ್ನು ತಾಳೆ ಮಾಡಿ ನಗದು ಪುಸ್ತಕದಲ್ಲಿ ದಾಖಲಿಸಿರುವುದಿಲ್ಲ. ದಾಖಲಿಸಲು ಸೂಚಿಸಿದೆ.

8. ಸಮನ್ವಯೀಕರಣ :

ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರಗಳ) ನಿಯಮ 2006 ರ ನಿಯಮ 105 ರಂತೆ ನಗದು ಪುಸ್ತಕದ ಬ್ಯಾಂಕ್ ಶಿಲ್ಕಿನೊಂದಿಗೆ ಬ್ಯಾಂಕಿನ ಅಂತಿಮ ಶಿಲ್ಕು ತಾಳೆಯಾಗಬೇಕು ಇದನ್ನು ಗ್ರಾಮ ಪಂಚಾಯತಿ ಮಾಡದಿರುವದರಿಂದ ಪರಿಶೀಲಿಸುವುದು ಅಸಾಧ್ಯವಾಗಿದೆ. ಇದು ಅಮೂಲ್ಯ ದಾಖಲೆಯಾದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ಅಗತ್ಯ.

ಗ್ರಾಮ ಪಂಚಾಯತಿ ನಿಧಿಯ ದುರುಪಯೋಗ ಅಥವಾ ಅವ್ಯವಹಾರಗಳನ್ನು ಪತ್ತೆ ಹಚ್ಚಲು ಜಮಾ ಮತ್ತು ಖರ್ಚುಗಳ ತಪ್ಪು ವರ್ಗೀಕರಣವನ್ನು ಸರಿಪಡಿಸಲು ಪ್ರತಿ ತಿಂಗಳ ಕೊನೆಯಲ್ಲಿ ಖಜಾನೆ / ಬ್ಯಾಂಕಿನಲ್ಲಿರುವ ಶಿಲ್ಕುನೊಂದಿಗೆ ನಗದು ಪುಸ್ತಕದಲ್ಲಿನ ಶಿಲ್ಕನ್ನು ಹೊಂದಾಣಿಕೆ ಮಾಡದಿರುವುದು, ನಗದು ಪುಸ್ತಕದಲ್ಲಿ ದಖಲಿಸದೆ ಇರುವುದನ್ನು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಿದೆ.

9. ಸಾಮಾನ್ಯ ಲೆಡ್ಜರ್ ಹಾಗೂ ಜರ್ನಲ್ ಪುಸ್ತಕ ನಿರ್ವಹಣೆ :

ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006 ರ ನಿಯಮ 107 ರಂತೆ ಸಾಮಾನ್ಯ ಲೆಡ್ಜರ್ ನಿರ್ವಹಿಸುವುದು. ಜರ್ನಲ್ ಪುಸ್ತಕವನ್ನು ನಮೂನೆ 50 ರಲ್ಲಿ ನಿರ್ವಹಿಸತಕ್ಕದ್ದು, ನಮೂನೆ 51 ರಲ್ಲಿನ ಜರ್ನಲ್ ವೋಚರನ್ನು ತಯಾರಿಸಿ ಇದರ ಆಧಾರದ ಮೇಲೆ ಜರ್ನಲ್ ಪುಸ್ತಕದಲ್ಲಿ ನಮೂದುಗಳನ್ನು ದಾಖಲಿಸತಕ್ಕದ್ದು. ಎಲ್ಲಾ ಜರ್ನಲ್ ಹೊಂದಣಿಕೆಗಳನ್ನು ಗ್ರಾಮ ಪಂಚಾಯತಿ ಕಾರ್ಯದರ್ಶಿ ನಮೂದಿಸತಕ್ಕದ್ದು ಮತ್ತು ಜರ್ನಲ್ ಪುಸ್ತಕದಲ್ಲಿ ಪ್ರತಿಯೊಂದು ಬಾಬ್ತನ್ನು ನಮೂದಿಸಬೇಕಾಗಿದ್ದು ಹೆಚ್ಚಿನ ಪ್ರಕರಣಗಳಲ್ಲಿ ಜರ್ನಲ್ ವೋಚರಗಳನ್ನು ತಯಾರಿಸದೆ ಸಾಮಾನ್ಯ ಲೆಡ್ಜರ್‌ನಲ್ಲಿ ದಾಖಲಿಸಿರುವದನ್ನು ಗಮನಿಸಲಾಗಿದೆ. ನೇರವಾಗಿ ಲೆಡ್ಜರ್‌ಗಳ ಮೂಲಕ ಲೆಕ್ಕಕ್ಕೆ ಸೇರ್ಪಡೆಗೊಳಿಸಲಾಗಿದೆ.

ಜರ್ನಲ್ ವೋಚರಗಳಿಲ್ಲದೆ ಯಾವುದೇ ಕ್ರೆಡಿಟ್ ಅಥವಾ ಡೆಬಿಟನ್ನು ಲೆಡ್ಜರಗಳಿಗೆ ದಾಖಲಿಸುವದು ಕ್ರಮಬದ್ಧವಾಗಿರುವುದಿಲ್ಲ.

10. ಆಯವ್ಯಯ ವಿವರ :

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 241ರನ್ವಯ ಪ್ರಕಾರ ಆಯವ್ಯಯಕ್ಕೆ ಮಾರ್ಚ್ 10ರೊಳಗೆ ಗ್ರಾಮ ಪಂಚಾಯತಿಯ ಅನುಮೋದನೆಯನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಯವರು ಪಡೆಯಬೇಕಾಗಿದ್ದು ದಿನಾಂಕ: 27-02-2017 ರಂದು ಅನುಮೋದನೆ ಪಡೆಯಲಾಗಿದೆ/ವಿಳಂಬವಾಗಿ ಅನುಮೋದನೆ ಪಡೆಯಲಾಗಿದೆ. ಇನ್ನು ಮುಂದೆ ನಿಯಾನುಸಾರ ನಿಗಧಿತ ದಿನಾಂಕದೊಳಗೆ ಆಯವ್ಯಯಕ್ಕೆ ಅನುಮೋದನೆ ಪಡೆಯಲು ಸೂಚಿಸಿದೆ.

ಮಂಜೂರಾದ ಆಯವ್ಯಯದ ಪ್ರಕಾರ 2017-18ನೇ ಸಾಲಿನ ಆಯವ್ಯಯ ವಿವರಗಳು ಈ ಕೆಳಕಂಡಂತಿದೆ.

ಕ್ರ.ಸಂ.	ವಿವರ	ಆದಾಯ	ವೆಚ್ಚ
1.	ನಿರೀಕ್ಷಿತ	13571696	15323367
2.	ವಾಸ್ತವಿಕ	14172069	13152660

10.(ಅ) ಆಯವ್ಯಯದ ಬಗ್ಗೆ ಷರಾ:

1. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಾವಳಿ 2006 ನಿಯಮ 12 ರಂತೆ ಆಯವ್ಯಯ ತಯಾರಿಸಲಾಗಿದೆ.
2. ಜಿ.ಪಿ.ಬಿ.ಎ.ಆರ್ ನಿಯಮ 12(4)(ii) ರನ್ವಯ ಆರ್ಥಿಕ ವರ್ಷದ ಆರಂಭಕ್ಕೆ ಬಾಕಿ ಇರುವ ಹೊಣೆಗಾರಿಕೆಗಳ ಮರುಪಾವತಿಗೆ ಅವಕಾಶ ಕಲ್ಪಿಸಿರುವುದಿಲ್ಲ.
3. ಜಿ.ಪಿ.ಬಿ.ಎ.ಆರ್ ನಿಯಮ 12ರ ಉಪನಿಯಮ 4(iii) ರನ್ವಯ ಸರ್ಕಾರ ನಿಗದಿಪಡಿಸಿರುವಂತೆ ಗ್ರಾಮ ಪಂಚಾಯಿತಿಗಳ ಅನುದಾನ ಮತ್ತು ಆದಾಯಗಳಲ್ಲಿ ಶೇ.10 ರಷ್ಟು ಅಂತಿಮ ಶಿಲ್ಕಿಗೆ ಅವಕಾಶ ಕಲ್ಪಿಸಿರುವುದಿಲ್ಲ.

ಕರ್ನಾಟಕ ಪಂಚಾಯತ್ ರಾಜ್(ಆಯ-ವ್ಯಯ ಮತ್ತು ಲೆಕ್ಕ ಪತ್ರಗಳು)ನಿಯಮಗಳು 2006 ನಿಯಮ 15ರಂತೆ ಆಯವ್ಯಯ ನಿಯಂತ್ರಣ ರಿಜಿಸ್ಟರನ್ನು ನಿರ್ವಹಿಸಿರುವುದಿಲ್ಲ.

11. ಮಾಸಿಕ ಮತ್ತು ಅರ್ಧವಾರ್ಷಿಕ ಲೆಕ್ಕಪತ್ರಗಳು :-

ಗ್ರಾಮ ಪಂಚಾಯಿತ್ತಿಗಳ ಆಯವ್ಯಯ ಮತ್ತು ಲೆಕ್ಕಪತ್ರ ನಿಯಮಗಳು 2006ರ ನಿಯಮ 108ರ ಪ್ರಕಾರ ಕಾರ್ಯದರ್ಶಿಯು ಪ್ರತಿ ತಿಂಗಳ ಸ್ವೀಕೃತಿ ಮತ್ತು ಪಾವತಿ ವಿವರಣಾ ಪತ್ರವನ್ನು ನಮೂನೆ 53ರಲ್ಲಿ ಹಾಗೂ ಪ್ರಾಯೋಗಿಕ ಆರ್ಥಿಕ ಸ್ಥಿತಿಗತಿ ಪಟ್ಟಿಯನ್ನು ನಮೂನೆ 54ರಲ್ಲಿ ಸಿದ್ದಪಡಿಸಿ ಮುಂದಿನ ಮಾಹೆಯ 20ನೇ ತಾರೀಖಿನೊಳಗಾಗಿ ಗ್ರಾಮ ಪಂಚಾಯ್ತಿ ಸಭೆಗೆ ಮಂಡಿಸಿ, ಅನುಮೋದಿತ ಪ್ರತಿಗಳನ್ನು ಮುಖ್ಯಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ರಾಮನಗರ ಹಾಗೂ ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ರಾಮನಗರ ಇವರಿಗೆ ಸಲ್ಲಿಸಿರುವುದಿಲ್ಲ. ಈ ಬಗ್ಗೆ ಕ್ರಮ ವಹಿಸಲು ಸೂಚಿಸಿದೆ.

12. ವಾರ್ಷಿಕ ಲೆಕ್ಕಪತ್ರಗಳು :-

12(1) ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವ ಮತ್ತು ವಾಸ್ತವ ವಾರ್ಷಿಕ ಲೆಕ್ಕಪತ್ರಗಳಿಗೆ ವ್ಯತ್ಯಾಸವಿರುವ ವಿವರ:-

ಪಂಚಾಯತ್ ರಾಜ್ ಅಧಿನಿಯಮ 243 ಉಪಪ್ರಕರಣ (3) ಹಾಗೂ ಆಯವ್ಯಯ ಮತ್ತು ಲೆಕ್ಕಪತ್ರಗಳ ನಿಯಮಗಳು 2006ರ ನಿಯಮ 109ರ ಪ್ರಕಾರ ಜೂನ್ 30ನೇ ತಾರೀಖಿನೊಳಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸಿ ಗ್ರಾಮ ಪಂಚಾಯ್ತಿಯ ಅನುಮೋದನೆ ಪಡೆದು, ಅನುಮೋದಿತ ಪ್ರತಿಗಳನ್ನು ರಾಮನಗರ ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿಗಳಿಗೆ ಮತ್ತು ರಾಮನಗರ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲದ ಹಿರಿಯ ಉಪನಿರ್ದೇಶಕರಿಗೆ ಕಳುಹಿಸಬೇಕಾಗಿರುತ್ತದೆ.

ಸದರಿ ಪಂಚತಂತ್ರದ ತಂತ್ರಾಂಶದಲ್ಲಿರುವ ಲೆಕ್ಕ ಪತ್ರಗಳನ್ನು ಪರಿಶೀಲಿಸಿದಾಗ ಗ್ರಾಮ ಪಂಚಾಯಿತಿಯ ಪಂಚತಂತ್ರದ ತಂತ್ರಾಂಶದಲ್ಲಿ ಅಳವಡಿಸಿರುವ ಮತ್ತು ವಾಸ್ತವ ವಾರ್ಷಿಕ ಲೆಕ್ಕ ಪತ್ರಗಳಿಗೆ ವ್ಯತ್ಯಾಸವಿದ್ದು ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತವೆ.

1. ಗ್ರಾಮ ಪಂಚಾಯಿತಿಯ ಸಂಪೂರ್ಣ ಆರ್ಥಿಕ ಚಿತ್ರಣ ದೊರಕುವುದಿಲ್ಲ.
2. ಗ್ರಾಮ ಪಂಚಾಯಿತಿಯಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಯೋಜನೆಗಳ ಖಾತೆಗಳ ವ್ಯವಹಾರವು ಪಂಚತಂತ್ರಾಂಶದಲ್ಲಿ ಅಳವಡಿಕೆಯಾಗಿರುವುದಿಲ್ಲ.
3. ಇದರಿಂದ ಸ್ವೀಕೃತಿ ಮತ್ತು ಪಾವತಿ ಮತ್ತು ಆದಾಯ ವೆಚ್ಚಗಳಲ್ಲಿ ವ್ಯತ್ಯಾಸವಿರುತ್ತದೆ.
4. ಸ್ವೀಕೃತಿ ರಶೀದಿಗಳಲ್ಲಿ ವಸೂಲಾದ ವಾಸ್ತವ ಮತ್ತು ಪಂಚತಂತ್ರಾಂಶದಲ್ಲಿ ಅಳವಡಿಕೆಯಾಗಿರುವ ಮೊತ್ತಕ್ಕೂ ವ್ಯತ್ಯಾಸವಿರುತ್ತದೆ.
5. ಆಸ್ತಿಗಳ ಡಿ.ಸಿ.ಬಿ ಯಲ್ಲೂ ಪ್ರಾರಂಭಿಕ ಶಿಲ್ಕಿನಲ್ಲಿ ವ್ಯತ್ಯಾಸವಿರುತ್ತದೆ.
6. ಸಮತೋಲನ ಪಟ್ಟಿಯಲ್ಲಿ ಆರಂಭಿಕ ಪಟ್ಟಿ ತಯಾರಿಸಿ ಮೌಲ್ಯ ನಿರ್ಧರಿಸಿ ತಂತ್ರಾಂಶದಲ್ಲಿ ಅಳವಡಿಸಿರುವುದಿಲ್ಲ.
7. ವಾಸ್ತವ 31.03.2016ರ ಅಂತ್ಯಕ್ಕೆ ಮತ್ತು ಪಂಚತಂತ್ರದಲ್ಲಿ ಅಳವಡಿಸಿರುವ ಆಸ್ತಿ ಮತ್ತು ಹೊಣೆಗಾರಿಕೆಗಳ ಅಂಕಿ ಅಂಶಗಳಿಗೂ ವ್ಯತ್ಯಾಸವಿರುತ್ತದೆ.
8. ಸೃಜಿಸಿರುವ ಆಸ್ತಿಗಳ ಸವಕಳಿ ಮೌಲ್ಯಕ್ಕೂ ಪಂಚತಂತ್ರಾಂಶದಲ್ಲಿ ಅಳವಡಿಸಿರುವ ಅಂಕಿ ಅಂಶಗಳಿಗೆ ವ್ಯತ್ಯಾಸವಿರುತ್ತದೆ.

ಈ ಬಗ್ಗೆ ಸಕ್ಷಮ ಪ್ರಾಧಿಕಾರ ಸೂಕ್ತ ಕ್ರಮಗೊಂಡು ಈ ಮೇಲ್ಕಂಡ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಲು ಸೂಚಿಸಿದೆ.

13 ವಾರ್ಷಿಕ ಲೆಕ್ಕಪತ್ರಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದು:

ಪಂಚಾಯತ್ ರಾಜ್ ಅಧಿನಿಯಮ 243 ಉಪಪ್ರಕರಣ (3) ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 109 ರ ಪ್ರಕಾರ ಮುಂದುವರಿದ ವರ್ಷದ ಜೂನ್ 30ರೊಳಗೆ ಪಿ.ಡಿ.ಓ/ಕಾರ್ಯದರ್ಶಿಗಳು ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸಿ ಗ್ರಾಮ ಪಂಚಾಯಿತಿಯ ಅನುಮೋದನೆ ಪಡೆದು, ಅನುಮೋದಿತ ಪ್ರತಿಗಳನ್ನು ಆಯಾ ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಧಿಕಾರಿಗಳಿಗೆ ಮತ್ತು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲದ ಹಿರಿಯ ಉಪನಿರ್ದೇಶಕರಿಗೆ ಸಲ್ಲಿಸಬೇಕಿರುತ್ತದೆ. ನಮೂನೆ 53 ರಲ್ಲಿ ಸ್ವೀಕೃತಿ ಮತ್ತು ಪಾವತಿ ವಿವರಗಳ ಪಟ್ಟಿಯನ್ನು ನಮೂನೆ-55ರಲ್ಲಿ ಆದಾಯ ಮತ್ತು ವೆಚ್ಚಗಳ ಪಟ್ಟಿಯನ್ನು ಹಾಗೂ ನಮೂನೆ -56ರಲ್ಲಿ ಸಮತೋಲನ ಪಟ್ಟಿಗಳನ್ನು ಮತ್ತು ನಮೂನೆ-54ರಲ್ಲಿ ಟ್ರಯಲ್ ಬ್ಯಾಲನ್ಸ್ ಪಟ್ಟಿ ಒಳಗೊಂಡಂತೆ ವಾರ್ಷಿಕ ಲೆಕ್ಕಪತ್ರಗಳನ್ನು ರಾಮನಗರ ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಹಣಾಧಿಕಾರಿಗಳ ಮೂಲಕ ವರ್ತುಲ ಕಛೇರಿಗೆ ಸಲ್ಲಿಸಲಾಗಿರುತ್ತದೆ. ಇದೇ ರೀತಿಯಾಗಿ ಮಾಸಿಕ, ತ್ರೈಮಾಸಿಕ ಹಾಗೂ ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕ ತನಿಖೆಗೆ

ಸಲ್ಲಿಸದೇ ಇರುವ ಕಾರಣ ಆದಾಯ ಮತ್ತು ವೆಚ್ಚದ ಸ್ವೀಕೃತಿ ಮತ್ತು ಪಾವತಿಯ ತಃಖ್ತೆಯನ್ನು ಧೃಢೀಕರಿಸಲು ಸಾಧ್ಯವಾಗುತ್ತಿಲ್ಲ. ವಿತ್ತೀಯ ವಿವರಣಾ ಪಟ್ಟಿಗಳು ಚಾರ್ಟರ್ಡ್ ಅಕೌಂಟೆಂಟ್ಸ್‌ರವರಿಂದ ಧೃಢೀಕರಿಸದೆ ಇರುವುದರಿಂದ ಲೆಕ್ಕಗಳ ಸತ್ಯಾಪನೆಯನ್ನು ಧೃಢೀಕರಿಸಲು ಸಾಧ್ಯವಾಗಿರುವುದಿಲ್ಲ.

14. ವಾರ್ಷಿಕ ಲೆಕ್ಕಗಳ ಪ್ರಮಾಣೀಕರಣ :– [ಅವಲೋಕನಾಸಹಿತ]

ರಾಮನಗರ ಜಿಲ್ಲೆಯ **ಚನ್ನಪಟ್ಟಣ** ತಾಲ್ಲೂಕಿನ **ವಿರೂಪಾಕ್ಷಿಪುರ** ಗ್ರಾಮ ಪಂಚಾಯಿತಿಯ 2017–18ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯ್ತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ಮೇರೆಗೆ ಹಾಗೂ ವಿತ್ತ ನಿರೂಪಣಾ ತಃಖ್ತೆಗಳ ಪರಿಶೋಧನೆ ಬಗ್ಗೆ ಮಹಾಲೇಖಪಾಲಕರು ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪ್ರಧಾನ ನಿರ್ದೇಶಕರ ಸೂಚನೆ ಮೇರೆಗೆ, ಪರೀಕ್ಷಿಸಲಾಗಿದೆ.

1. ಲೆಕ್ಕಪರಿಶೋಧನೆಯ ಉದ್ದೇಶಕ್ಕೆ ಅವಶ್ಯವಾಗಿ ಬೇಕಾದ ಎಲ್ಲಾ ಮಾಹಿತಿ ಹಾಗೂ ವಿವರಣೆಗಳನ್ನು ನನ್ನ ತಿಳುವಳಿಕೆ ಮತ್ತು ನಂಬಿಕೆಗೆ ತಕ್ಕಂತೆ ಪಡೆದಿರುತ್ತೇನೆ.

2. ಲೆಕ್ಕಪರಿಶೋಧನೆಯ ಅಭಿಪ್ರಾಯದಲ್ಲಿ ಅಧಿನಿಯಮ, ನಿಯಮಾವಳಿ ಹಾಗೂ ಲೆಕ್ಕಪತ್ರ ಕೈಪಿಡಿ–ಮಾರ್ಗದರ್ಶಿ ಪ್ರಕಾರ, ಲೆಕ್ಕ ಪರಿವೀಕ್ಷಣೆಯಿಂದ ಕಂಡು ಬಂದಂತೆ ಅನುಬಂಧ 5 ರಲ್ಲಿ ತೋರಿಸಿರುವ ಲೋಪದೋಷಗಳು ಹಾಗೂ ನ್ಯೂನತೆಗಳನ್ನು ಹೊರತುಪಡಿಸಿ ಗ್ರಾಮ ಪಂಚಾಯ್ತಿಯಲ್ಲಿ ಸಮರ್ಪಕ ಲೆಕ್ಕಪತ್ರಗಳನ್ನು ನಿರ್ವಹಿಸಿರುತ್ತದೆ.

3. ವರದಿಯಲ್ಲಿ ಪ್ರಸ್ತಾಪಿಸಲಾದ ಗ್ರಾಮ ಪಂಚಾಯ್ತಿಯ ಸಮತೋಲನಾ ಪಟ್ಟಿ, ಆದಾಯ ಮತ್ತು ವೆಚ್ಚದ ತಃಖ್ತೆ ಹಾಗೂ ಸ್ವೀಕೃತಿ ಮತ್ತು ಪಾವತಿ ತಃಖ್ತೆಗಳು ಟೀಕೆ ಟಿಪ್ಪಣಿಗಳಲ್ಲಿ ದಾಖಲಿಸಿದ ಅವಲೋಕನಗಳಿಗೆ ಒಳಪಟ್ಟಂತೆ ಲೆಕ್ಕ ಪುಸ್ತಕಗಳೊಂದಿಗೆ ತಾಳೆಯಾಗಿರುತ್ತದೆ.

4. ಟೀಕೆ ಟಿಪ್ಪಣಿಗಳಲ್ಲಿ ದಾಖಲಿಸಿದ ಅವಲೋಕನಗಳಿಗೆ ಒಳಪಟ್ಟಂತೆ ವಿತ್ತ ನಿರೂಪಣಾ ತಃಖ್ತೆಗಳು ಗ್ರಾಮ ಪಂಚಾಯ್ತಿಯ ವಿದ್ಯಮಾನಗಳ ನೈಜ ಹಾಗೂ ನ್ಯಾಯೋಚಿತ ನೋಟವನ್ನು ಒದಗಿಸುತ್ತವೆ.

15. ಗ್ರಾಮ ಸಭೆಯ ವಿವರ :–

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ನಿಯಮ 1193 ಕಲಂ 3ಎ ರನ್ವ ಪ್ರತಿ 6 ತಿಂಗಳಿಗೊಮ್ಮೆ ಕಡ್ಡಾಯ ಗ್ರಮ ಸಭೆ ನಡೆಸಬೇಕಾಗಿದ್ದು. ಸದರಿ ಗ್ರಾಮ ಪಂಚಾಯಿತಿನಲ್ಲಿ ಪ್ರಸ್ತುತ ಸಾಲಿನಲ್ಲಿ ಗ್ರಾಮ ಸಭೆ ನಡೆಸಿರುವ ಬಗ್ಗೆ ಮಾಹಿತಿ ಸಲ್ಲಿಸಿರುವುದಿಲ್ಲ.

16. ಅನುದಾನಗಳು :–

ಕರ್ನಾಟಕ ಗ್ರಾಮ ಪಂಚಾಯತ್ ರಾಜ್ (ಗ್ರಾಮ ಪಂಚಾಯ್ತಿಗಳ ಲೆಕ್ಕ ಪತ್ರಗಳು ಮತ್ತು ಆಯವ್ಯಯ) ನಿಯಮಗಳು 2006ರ ನಿಯಮ 99 ರನ್ವಯ ನಮೂನೆ 45ರಲ್ಲಿ ಅನುದಾನಗಳ ವಹಿಯನ್ನು ನಿರ್ವಹಿಸಿರುವುದಿಲ್ಲ. ಅನುದಾನಗಳ ವಹಿ ಪ್ರಮುಖವಾದ ವಹಿಯಾಗಿದ್ದು ವರ್ಷದ ಅಂತ್ಯದಲ್ಲಿ ಅನುದಾನದ ಪ್ರಾರಂಭ ಶಿಲ್ಕು, ಸ್ವೀಕರಿಸಿದ ಅನುದಾನಗಳು, ವರ್ಷದ ಅವಧಿಯಲ್ಲಿ ವಿನಿಯೋಗಿಸಿದ ಅನುದಾನಗಳು, ಹಾಗೂ ವರ್ಷದ ಕೊನೆಯಲ್ಲಿ ಉಳಿದಿರುವ ಅಂತಿಮ ಶಿಲ್ಕುಗಳನ್ನು ಸೂಚಿಸುವ ಘೋಷ್ವಾರೆಯನ್ನು ಹಾಕಿ ಅಧ್ಯಕ್ಷರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು/ಕಾರ್ಯದರ್ಶಿಗಳು ದೃಡೀಕರಿಸಿರುವುದಿಲ್ಲ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

2017–18ನೇ ಸಾಲಿನಲ್ಲಿ ಕರ್ನಾಟಕ ಗ್ರಾಮ ಪಂಚಾಯತ್ ಅಧಿನಿಯಮ 1993ರ ಪ್ರಕರಣ 206 ಹಾಗೂ 208ರನ್ವಯ ಈ ಕೆಳಕಂಡ ಅನುದಾನಗಳು ಗ್ರಾ.ಪಂ.ನಿಧಿಗೆ ಜಮ ಬಂದಿರುತ್ತದೆ.

17. ಋಣ ಶೀರ್ಷಿಕೆಗಳು:–

17.1. ಹೂಡಿಕೆಗಳು :–

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯ್ತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 95ರ ಪ್ರಕಾರ ನಮೂನೆ 41ರಲ್ಲಿ ಹೂಡಿಕೆ ವಹಿಯನ್ನು ನಿರ್ವಹಿಸಿರುವುದಿಲ್ಲ. ನಿಯಮಾನುಸಾರ ನಿರ್ವಹಿಸಲು ಸೂಚಿಸಿದೆ. ಲಭ್ಯ ಮಾಹಿತಿಗಳ ಪ್ರಕಾರ 2017–18ನೇ ಸಾಲಿನ ಹೂಡಿಕೆಗಳ ವ್ಯವಹಾರ ಇರುವುದಿಲ್ಲ.

17.2. ಸಾಲಗಳು:-

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತ್ತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 95ರ ಪ್ರಕಾರ ನಮೂನೆ 41ರಲ್ಲಿ ಸಾಲಗಳ ವಹಿಯನ್ನು ನಿರ್ವಹಿಸಿಲ್ಲ. ನಿಯಮಾನುಸಾರ ನಿರ್ವಹಿಸಲು ಸೂಚಿಸಿದೆ. 2017-18ನೇ ಸಾಲಿನಲ್ಲಿ ಯಾವುದೇ ವಹಿವಾಟು ಇರುವುದಿಲ್ಲ.

17.3 ಮುಂಗಡಗಳು :-

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತ್ತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 98ರ ಪ್ರಕಾರ ನಮೂನೆ 44ರಲ್ಲಿ ಮುಂಗಡಗಳ ರಿಜಿಸ್ಟರ್‌ನ್ನು ನಿರ್ವಹಿಸಿರುವುದಿಲ್ಲ. ನಿಯಮಾನುಸಾರ ನಿರ್ವಹಿಸಲು ಸೂಚಿಸಿದೆ. 2017-18ನೇ ಸಾಲಿನಲ್ಲಿ ಯಾವುದೇ ವಹಿವಾಟು ಇರುವುದಿಲ್ಲ.

18. ಠೇವಣಿಗಳು :-

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತ್ತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 100ರ ಪ್ರಕಾರ ನಮೂನೆ 47ರಲ್ಲಿ ಠೇವಣಿ ವಹಿಯನ್ನು ನಿರ್ವಹಿಸಿರುವುದಿಲ್ಲ. ನಿಯಮಾನುಸಾರ ನಿರ್ವಹಿಸಲು ಸೂಚಿಸಿದೆ. 2017-18ನೇ ಸಾಲಿನಲ್ಲಿ ಎಫ್.ಎಸ್.ಡಿ ಮೂಲಕ ಯಾವುದೇ ಠೇವಣಿಗಳನ್ನು ಸ್ವೀಕರಿಸಿರುವುದಿಲ್ಲ.

19. ಸ್ವೀಕೃತಿಗಳ ಪರಿಶೀಲನೆ

19.1. ರಸೀದಿಗಳ ಪರಿಶೀಲನೆ :-

2017-18ನೇ ಸಾಲಿನಲ್ಲಿ ರಸೀದಿ ಪುಸ್ತಕಗಳು ದಾಸ್ತಾನು ವಹಿಯನ್ನು ಕರ್ನಾಟಕ ಪಂಚಾಯತ್ ರಾಜ್ ಲೆಕ್ಕ ಪತ್ರ (ಗ್ರಾಮ ಪಂಚಾಯಿತ್ತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 21ರ ಪ್ರಕಾರ ನಿಗದಿತ ನಮೂನೆ -5ರಲ್ಲಿ ದಾಸ್ತಾನು ಲೆಕ್ಕ ನಿರ್ವಹಿಸಿಲ್ಲ. ನಿಯಮಾನುಸಾರ ನಿರ್ವಹಿಸಲು ಸೂಚಿಸಿದೆ. 2017-18ನೇ ಸಾಲಿನಲ್ಲಿ ರಸೀದಿ ಪುಸ್ತಕಗಳ ದಾಸ್ತಾನು ಪರಿಶೀಲಿಸಲಾಗಿ ಅದರಲ್ಲಿನ ವ್ಯವಹಾರ ಕೆಳಕಂಡಂತಿರುತ್ತದೆ. ದಾಸ್ತಾನು ವಹಿಯ ಅಲಭ್ಯತೆಯಲ್ಲಿ ಬೇರೆ ರಸೀತಿ ಪುಸ್ತಕಗಳನ್ನು ಉಪಯೋಗಿಸಿದ್ದಲ್ಲಿ ಸಂಬಂಧಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು/ಕಾರ್ಯದರ್ಶಿಗಳೇ ಜವಾಬ್ದಾರರಾಗಬೇಕಾಗಿರುತ್ತದೆ. ಈ ಬಗ್ಗೆ ಸೂಕ್ತ ಆಡಳಿತಾತ್ಮಕ ತನಿಖೆ ಅಗತ್ಯವಾಗಿದೆ.

1.	01.04.2017ಕ್ಕೆ ಪ್ರಾರಂಭಿಕ ಶಿಲ್ಕು	-	
2.	2017-18 ಕ್ಕೆ ಸಾಲಿಗೆ ಹೊಸ ಖರೀದಿ / ಸ್ವೀಕೃತಿ	38	
3.	ಒಟ್ಟು ರಸೀದಿ ಪುಸ್ತಕಗಳು	38	
4.	2017-18 ಕ್ಕೆ ಸಾಲಿಗೆ ಉಪಯೋಗಿಸಿದ ರಸೀದಿ ಪುಸ್ತಕಗಳು	19	10680-01
5.	31.03.2018 ಕ್ಕೆ ಅಂತಿಮ ಶಿಲ್ಕು	19	10677-10679-03 10371-10375-05 10956-10965-11

19.2. ಪ್ರಸಕ್ತ ಸಾಲಿನಲ್ಲಿ ಹಿಂದಿನ ಸಾಲಿನ ಭಾಗಶಃ ಉಳಿದಿದ್ದ ಹಾಗೂ ಪೂರ್ಣವಾಗಿ ಉಪಯೋಗಿಸಿದ ರಸೀದಿ ಪುಸ್ತಕಗಳ ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ರಸೀದಿ ಪುಸ್ತಕದ ಸಂಖ್ಯೆ	ರಸೀದಿ ಸಂಖ್ಯೆಮತ್ತು ದಿನಾಂಕ		ಷರಾ
		ಇಂದ	ರವರೆಗೆ	
1.	69748	342351	342396/26-03-2018	26-03-2018

19.3. ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡಂತೆ ಭಾಗಶಃ ಪರಿಶೀಲಿಸಿದ್ದು ಸದರಿ ಪುಸ್ತಕಗಳನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರ್ಪಡಿಸಲು ಸೂಚಿಸಿದೆ.

ಕ್ರ.ಸಂ.	ರಸೀದಿ ಪುಸ್ತಕ ಸಂಖ್ಯೆ	ಉಪಯೋಗಿಸಿದ ಕೊನೆ ರಸೀದಿ ಸಂಖ್ಯೆ /ದಿನಾಂಕ
1	6848	342396/26-03-2018

ಕರ್ನಾಟಕ ಪಂಚಾಯತ ರಾಜ್ ಅಧಿನಿಯಮ 1993 ಪ್ರಕರಣ 199ಕ್ಕನುಗುಣವಾಗಿ ತೆರಿಗೆ ನಿರ್ಧಾರಣ ಪಟ್ಟಿ (ಅಸೆಸ್‌ಮೆಂಟ್ ಲಿಸ್ಟ್) ಯನ್ನು ನಿರ್ವಹಿಸಲಾಗಿಲ್ಲ.

ಕರ್ನಾಟಕ ಪಂಚಾಯತ ರಾಜ್ (ಆಯ-ವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006 ನಿಯಮ 29ರಂತೆ ಮ್ಯುಟೇಷನ್ ರಿಜಿಸ್ಟರ್ ನಮೂನೆ 10ರಲ್ಲಿ ನಿರ್ವಹಿಸಿಲ್ಲ.

20. ಗ್ರಾಮ ಪಂಚಾಯಿತಿಯ ತೆರಿಗೆಗಳ ವಸೂಲಿ ಮತ್ತು ನಿಧಿಗೆ ಜಮಾ ವಿವರದ ತಃಖ್ತೆ:

20.1 ದಿನವಹಿ ವಸೂಲಾತಿ ಪುಸ್ತಕದ ನಿರ್ವಹಣೆ :-

ಗ್ರಾಮ ಪಂಚಾಯಿತಿಯಲ್ಲಿ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 24ರಂತೆ ನಮೂನೆ 7ರಲ್ಲಿ ದಿನವಹಿ ವಸೂಲಾತಿ ವಹಿಯನ್ನು ನಿರ್ವಹಿಸದ್ದರೂ ಸಹಾ ವಸೂಲಿಸಿದ ಮೊತ್ತವನ್ನು ಸಂಬಂಧಿಸಿದ ಶೀರ್ಷಿಕೆಗಳನುಸಾರ ವಿಂಗಡಿಸಿ ಆಯಾ ಕಾಲಂಗಳಲ್ಲಿ ದಾಖಲಿಸದಿರುವುದರಿಂದ ಯಾವ ಶೀರ್ಷಿಕೆಯಡಿ ಎಷ್ಟು ಮೊತ್ತ ವಸೂಲಾಗಿದೆ ಎಂಬ ಸಂಪೂರ್ಣಮಾಹಿತಿ ಲಭ್ಯವಾಗುವುದಿಲ್ಲ. ಆಯಾ ಕಾಲಂಗಳಲ್ಲಿ ವಸೂಲಿ ಮೊತ್ತಗಳನ್ನು ತೆಗೆದುಕೊಳ್ಳಲು ಸೂಚಿಸಿದೆ.

20.2. ವಸೂಲಾತಿ ಹಾಗೂ ಜಮೆ:

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 19ರಂತೆ ತೆರಿಗೆಗಳ ವಸೂಲಾತಿಯ ವಿವರ ಹಾಗೂ ನಿಯಮ 25ರನ್ವಯ ವಸೂಲಾತಿಯಾದ ತೆರಿಗೆಗಳ ಬಾಬ್ತು ಗ್ರಾಮ ಪಂಚಾಯಿತಿ ನಿಧಿಗೆ ಜಮಾ ಮಾಡಿರುವ ವಿವರಗಳ ತಃಖ್ತೆ ಇಂತಿದೆ.

ಮಾಹೆಯ ವಿವರ	ಪಂಚಾಯಿತಿಯ ನಿಧಿ ಮೂಲಗಳಿಂದ ವಸೂಲಿಸಿದ ತೆರಿಗೆಯ ಮೊತ್ತ ರೂ.	2017-18ರಲ್ಲಿ ಮಾಹೆಯಲ್ಲಿ ಜಮಾ ಮೊತ್ತ ರೂ.	ವ್ಯತ್ಯಾಸದ ವಿವರ	
			ಹೆಚ್ಚು ಜಮಾ ರೂ.	ಕಡಿಮೆ ಜಮಾ ರೂ.
ಏಪ್ರಿಲ್ 2017	63124	87310	-	-
ಮೇ 2017	9395	3200	-	-
ಜೂನ್ 2017	88158	88129	-	-
ಜುಲೈ 2017	109232	105183	-	-
ಆಗಸ್ಟ್ 2017	91396	90725	-	-
ಸೆಪ್ಟೆಂಬರ್ 2017	23599	16762	-	-
ಆಕ್ಟೋಬರ್ 2017	117072	81181	-	-
ನವೆಂಬರ್ 2017	68160	57585	-	-
ಡಿಸೆಂಬರ್ 2017	115673	104374	-	-
ಜನವರಿ 2018	126358	50499	-	-
ಫೆಬ್ರವರಿ 2018	73438	91195	-	-
ಮಾರ್ಚ್ 2018	86133	104590	-	-
ಹಿಂದಿನ ಸಾಲಿನ ಕಡಿಮೆ ಇರುಸಾಲು ಮೊತ್ತ	0	0	-	-
ಒಟ್ಟು	971738	880733	-	-

ಕ್ರ ಸಂ.	ತೆರಿಗೆಗಳ ವಿವರ	01.04.17ಕ್ಕೆ ಪ್ರಾರಂಭಿಕ ಶಿಲ್ಕು	2017-18ಕ್ಕೆ ಬೇಡಿಕೆ	ಒಟ್ಟು ಮೊತ್ತ	ವರ್ಷದ ವಸೂಲಿ ಮೊತ್ತ	31.03.18ಕ್ಕೆ ಅಂತಿಮ ಶಿಲ್ಕು
1.	ಮನೆ ಕಂದಾಯ	263429	365000	628429	376126	252303
2.	ನೀರಿನ ತೆರಿಗೆ	666692	260000	926692	230000	696692
3.	ದೀಪದ ತೆರಿಗೆ	223235	135000	358235	116000	242235
4.	ಮಳಿಗೆ ಬಾಡಿಗೆ	–	–	–	–	–
5.	ಮಳಿಗೆ ಬಾಡಿಗೆ	–	–	–	–	–
6	ಪರವಾನಿಗೆ ಶುಲ್ಕ	–	72000	72000	68000	4000
7.	ಹರಾಜು	–	–	–	–	–
8.	ಇತರೆ	–	220918	220918	220918	–
	ಒಟ್ಟು	**1153356**	**1052918**	**2206274**	**1011044**	**1195230**

ಜಿ.ಪಿ.ಬಿ.ಎ.ಆರ್.ನಿಯಮ 20ರನ್ವಯ ನಮೂನೆ-3 ರಲ್ಲಿ ಸಾಮಾನ್ಯ ರಸೀದಿಯನ್ನು ಅಳವಡಿಸಿ ಜಾರಿಗೊಳಿಸಿದೆ. ಚೆಕ್/ಡಿ.ಡಿ.ಗಳ ವಹಿಯನ್ನು ನಿರ್ವಹಿಸಿ ನಮೂನೆ-3ಎ ನಲ್ಲಿ ತಾತ್ಕಾಲಿಕ ರಸೀದಿ ನೀಡಿರುವುದಿಲ್ಲ.

ಗ್ರಾಮ ಪಂಚಾಯಿತಿಯು ತೆರಿಗೆ ವಿಧಿಸಬೇಕಾದ ಎಲ್ಲಾ ನಿವೇಶನಗಳು ಮತ್ತು ಕಟ್ಟಡಗಳನ್ನು ತೆರಿಗೆ ವ್ಯಾಪ್ತಿಗೆ ತಂದಿರುವ ಬಗ್ಗೆ ಮಾಹಿತಿ ಒದಗಿಸಿರುವುದಿಲ್ಲ.

ಕರ್ನಾಟಕ ಪಂಚಾಯತ್ ರಾಜ್ ತೆರಿಗೆಗಳ ಅಧಿನಿಯಮ 1994ರ ನಿಯಮ 14 ರಂತೆ ಕಂದಾಯದ ದರಗಳನ್ನು ಪ್ರತಿ 4 ವರ್ಷಗಳಿಗೊಮ್ಮೆ ಪರಿಷ್ಕರಿಸಬೇಕಾಗಿದ್ದು, ಸದರಿ ಗ್ರಾಮ ಪಂಚಾಯತಿಯಲ್ಲಿ ಕಂದಾಯದ ದರಗಳನ್ನು ಪರಿಷ್ಕರಿಸಿರುವುದಿಲ್ಲ. ಆದ್ದರಿಂದ ಕೂಡಲೇ ಕ್ರಮ ಕೈಗೊಂಡು ಪರಿಷ್ಕರಿಸಿ ಗ್ರಾಮ ಪಂಚಾಯಿತಿಯ ಅದಾಯವನ್ನು ಹೆಚ್ಚಿಸಿಕೊಳ್ಳಲು ಸೂಚಿಸಿದೆ,

24. ತೆರಿಗೆ ವಸೂಲಿ ಪ್ರಗತಿ ಬಗ್ಗೆ:-

ವರದಿ ಸಲಿನ ಬೇಡಿಕೆಯೂ ಸೇರಿದಂತೆ ಪಟ್ಟು ರೂ. 3960441 ಗಳಷ್ಟು ತೆರಿಗೆ ಬಾಕಿ ಇದ್ದು, ಆಪ್ಯೆಕಿ ವರದಿ ಸಾಲಿನಲ್ಲಿ ರೂ 1786299 ಗಳನ್ನು ಮಾತ್ರ ವಸೂಲಿ ಮಾಡಲಾಗಿದೆ. ಆದ್ದರಿಂದ ಹೆಚ್ಚು ಆಸಕ್ತಿ ವಹಿಸಿ ಆಯಾ ವರ್ಷದ ತೆರಿಗೆಯನ್ನು ಆಯಾ ವರ್ಷದಲ್ಲೇ ಪೂರ್ಣವಾಗಿ ಉಪಯೋಗಿಸಿಕೊಳ್ಳಲು ಸೂಚಿಸಿದೆ.

25. ಪ್ರಸಕ್ತ ಸಾಲಿನಲ್ಲಿ ವಸೂಲಿಯಾದ ತೆರಿಗೆಗಳ ಮೇಲೆ ಉಪಕರಗಳನ್ನು ವಿಧಿಸಿ ಸರ್ಕಾರಕ್ಕೆ ಜಮಾ ಮಾಡಬೇಕಾದ ಉಪಕರಗಳ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ	ಉಪ ಕರದ ವಿವರ	ಚಾಲ್ತಿ ಸಾಲಿಗೆ ವಸೂಲಿ	ಶೇಕಡ 10ರಂತೆ ಗ್ರಾಮ ಪಂಚಾಯಿತಿ ಶುಲ್ಕ	ನಿವ್ವಳ ಉಪಕರ	01-4-17ಕ್ಕೆ ಪ್ರಾರಂಭಿಕ ಬಾಕಿ	ಒಟ್ಟು ಪಾವತಿಸ ಬೇಕಾದುದು	2017-18 ರಲ್ಲಿ ಪಾವತಿ	31-3-18 ಬಾಕಿ
1	ಆರೋಗ್ಯಕರ	42104	3358	30227	352973	383200	0	38320
2	ಶಿಕ್ಷಣ ಕರ	28069	2239	20151	235512	255663	0	25566
3	ಗ್ರಂಥಾಲಯ ಕರ	16841	1343	12091	132723	144814	0	14481
4	ಬಿಕ್ಷುಕರ ಕರ	8421	671	6046	55876	61922	0	6192
	ಒಟ್ಟು	95435	7611	68515	777084	845599	0	84559

ಮೇಲ್ಕಂಡಂತೆ 31-03-2018ಕ್ಕೆ ಬಾಕಿ ಇರುವ ಉಪಕರಗಳನ್ನು ಈ ಕೂಡಲೇ ಸರ್ಕಾರದ ಸಂಬಂಧಪಟ್ಟ ಶೀರ್ಷಿಕೆಗಳಿಗೆ ಜಮಾ ಮಾಡುವುದು. ಹಾಗೂ ಪ್ರಸಕ್ತ ಸಾಲಿನಲ್ಲಿ ವಸೂಲಿಯಾದ ಉಪಕರಗಳ ನಿವ್ವಳ ಮೊತ್ತ ರೂ. 68515.00ಗಳನ್ನು ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು/ಅಧ್ಯಕ್ಷರ ಜವಾಬ್ದಾರಿಯ ಮೇಲೆ ಆಕ್ಷೇಪಣೆಯಲ್ಲಿಡಲಾಗಿದೆ.

25.2 ವಿವಿಧ ಉಪಕರಗಳು ಮತ್ತು ತೆರಿಗೆಗಳ ಮೊತ್ತವನ್ನು ಗ್ರಾಮ ಪಂಚಾಯಿತಿಯ ಇತರೆ ಉದ್ದೇಶಗಳಿಗೆ ಬಳಸಿಕೊಂಡಿರುವ ಬಗ್ಗೆ.

ಈ ಗ್ರಾಮ ಪಂಚಾಯಿತಿಯ ನಿಧಿ 1ಮತ್ತು 2ರ ಅಖೈರು ಶಿಲ್ಕು ವರ್ಷ ಅಂತ್ಯಕ್ಕೆ ಕ್ರಮವಾಗಿ ರೂ. 1440407/- ಗಳ ಮತ್ತು ರೂ. 3898276/- ಒಟ್ಟಾರೆ ರೂ.3929772/-ಗಳು ಮಾತ್ರ ಬಾಕಿ ಇದ್ದು ಈ ಸಂಸ್ಥೆಯು ವರ್ಷ ಅಂತ್ಯಕ್ಕೆ ಪಾವತಿಸಬೇಕಾಗಿರುವ ವಿವಿಧ ಉಪಕರಗಳ ಮೊತ್ತ ರೂ. 845599/- ಮತ್ತು ವಿವಿಧ ತೆರಿಗೆಗಳ ಮೊತ್ತ ರೂ. 122371/- ಗಳಿದ್ದು, ಇದ್ದರಿಂದ ತೆರಿಗೆಗಳ ಮೇಲೆ ವಸೂಲಿಸಿದ ಉಪಕರಗಳನ್ನು ಮತ್ತು ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಲಾದ ವಿವಿಧ ತೆರಿಗೆಗಳನ್ನು ಸಂಬಂಧಿಸಿದ ಸರ್ಕಾರದ ಲೆಕ್ಕ ಶೀರ್ಷಿಕೆಗಳಿಗೆ ಜಮ ಮಾಡದೆ ಗ್ರಾಮ ಪಂಚಾಯಿತಿಯ ಇತರೆ ಉದ್ದೇಶಗಳಿಗೆ ಬಳಸಿಕೊಂಡಿರುವುದು ನಿಯಮ ಬಾಹಿರವವಾಗಿರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ಸಕ್ರಮ ಪ್ರಾಧಿಕಾರ ಅಗತ್ಯ ಕ್ರಮ ವಹಿಸಿ ಬಾಕಿ ಇರುವ ವಿವಿದ ಉಪಕರಗಳು ಮತ್ತು ತೆರಿಗೆಗಳನ್ನು ಕೂಡಲೇ ಪಾವತಿಸುವ ಬಗ್ಗೆ ಸೂಕ್ತ ನಿರ್ದೇಶನ ನೀಡುವುದು.

26. ಮ್ಯುಟೇಶನ್ ವಹಿಗಳನ್ನು ಹಾಜರುಪಡಿಸದಿರುವುದು ;-

2017-18 ನೇ ಸಾಲಿನಲ್ಲಿ ಮುಟೇಶನ್ ವಹಿಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಆಸ್ತಿಗಳು ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆಗೊಂಡ ಜಮೀನು/ಬಡಾವಣೆಗಳ ಖಾತೆ ಮಾಡಿರುವ ವಿವರ ನೊಂದಣಿಯಿಂದ ವರ್ಗಾವಣೆಗೊಂಡ ಖಾತೆಗಳ ವಿವರ ಮರಣ/ಪೌತಿ ಖಾತೆಗಳ ವಿವರಗಳ ಸಂಖ್ಯೆಗಳನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಈ ಖಾತ ವರ್ಗಾವಣೆ ಪ್ರಕರಣಗಳಲ್ಲಿ ನಿಯಮಬಾಹಿರವಾದ ಖಾತೆಗಳ ವರ್ಗಾವಣೆಯಾಗಿದ್ದಲ್ಲಿ ಸಂಬಂಧಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು/ಕಾರ್ಯದರ್ಶಿಗಳು ನೇರ ಹೊಣೆಗಾರರಾಗಿರುತ್ತಾರೆ. ಇನ್ನು ಮುಂದೆ ಯಾವುದೇ ಖಾತೆ ಬದಲಾವಣೆ ಮತ್ತು ಹೊಸದಾಗಿ ಖಾತೆ ನೊಂದಾಣಿ ಮಾಡಿದ ಸಂದರ್ಭದಲ್ಲಿ ಮುಟೇಶನ್ ವಹಿಯಲ್ಲಿ ದಾಖಲಿಸಿ ದೃಢೀಕರಿಸಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವ ಬಗ್ಗೆ ಸಕ್ಷಮ ಪ್ರಾಧಿಕಾರ ಅಗತ್ಯ ಕ್ರಮ ವಹಿಸುವುದು.

27. ಅಂಗಡಿ ಮಳಿಗೆಗಳ ಬಾಡಿಗೆಯ ಬೇಡಿಕೆ ವಸೂಲಿ ಹಾಗೂ ಬಾಕಿಯ ವಿವರ :-

ಸದರಿ ಸಾಲಿನಲ್ಲಿ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯ್ತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006 ನಿಯಮ 34ರ ಅನ್ವಯ ನಿಗಧಿತ ನಮೂನೆ 15ರಲ್ಲಿ ಆದಾಯ ಬರತಕ್ಕ ಆಸ್ತಿಗಳ ವಿವರ ಮತ್ತು ಆದಾಯ ವಸೂಲಾತಿ ವಿವರದ ರಿಜಿಸ್ಟರ್‌ನ್ನು ನಿಗಧಿತ ನಮೂನೆಯಲ್ಲಿ ನಿರ್ವಹಿಸಿಲ್ಲ. ನಿಯಮಾನುಸಾರ ನಿರ್ವಹಿಸಲು ಸೂಚಿಸಿದೆ. 2017-18ನೇ ಸಾಲಿನಲ್ಲಿ ಅಂಗಡಿ ಮಳಿಗೆಗಳ ತಗಾದೆ, ವಸೂಲಿ ಹಾಗೂ ಬಾಕಿ ವಿವರಗಳು ಕೆಳಕಂಡಂತಿರುತ್ತದೆ.

ಕ್ರ ಸಂ	ಬಾಡಿಗೆದಾರರ ಹೆಸರು	ಮುಂಗಡ	ನಿಗಧಿ ಪಡಿಸಿದ ಮಾಸಿಕ ಬಾಡಿಕೆ	01.04.17 ಕ್ಕೆ ಬಾಕಿ	2017-18ನೇ ಸಾಲಿಗೆ ತಗಾದೆ	ಒಟ್ಟು	2017-18ನೇ ಸಾಲಿಗೆ ವಸೂಲಿ	31-03-18ಕ್ಕೆ ಬಾಕಿ
1								
2	NIL							

ಅಂಗಡಿ ಮಳಿಗೆಗಳ ಕಡತಗಳನ್ನು ಪರಿಶೀಲಿಸಿದಾಗ ಕರಾರು ಒಪ್ಪಂದ ಮಾಡಿಕೊಳ್ಳದೆ, ಅಂಗಡಿ ಮಳಿಗೆಗಳನ್ನು ನೀಡಲಾಗಿರುತ್ತದೆ. ಕರಾರು ಒಪ್ಪಂದ ಮಾಡಿಕೊಂಡಿರುವ ಅಂಗಡಿ ಮಳಿಗೆಗಳಲ್ಲಿ ಸದರಿ ಒಪ್ಪಂದವನ್ನು ಪ್ರತಿ ವರ್ಷಕ್ಕೊಮ್ಮೆ ನವೀಕರಿಸಿರುವುದಿಲ್ಲ ಹಾಗೂ ಒಪ್ಪಂದದ ಷರತ್ತುಗಳನ್ವಯ ಬಾಡಿಗೆಯನ್ನು ಪರಿಷ್ಕರಿಸಿರುವುದಿಲ್ಲ. ಈ ಬಗ್ಗೆ ಸೂಕ್ತ ಕ್ರಮವಹಿಸಲು ಸೂಚಿಸಿದೆ.

28. ಹರಾಜು ಪ್ರಕರಣಗಳ ವಿವರ :-

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 34 ರನ್ವಯ ಗ್ರಾಮ ಪಂಚಾಯಿತಿಗೆ ಆದಾಯ ತರುವ ಆಸ್ತಿಪಾಸ್ತಿಗಳ ಕಂದಾಯ ವಸೂಲಾತಿ

ಹಕ್ಕನ್ನು ಹರಾಜು ಮೂಲಕ ಬಾಡಿಗೆಗೆ ಗುತ್ತಿಗೆದಾರರಿಗೆ ನೀಡಿದಲ್ಲಿ ಯಶಸ್ವಿ ಸವಾಲುದಾರರು ಮೂರು ತಿಂಗಳ ಆದಾಯದ ಭದ್ರತಾ ಠೇವಣಿ ನೀಡಬೇಕಾಗಿರುತ್ತದೆ. ಹಾಗೂ ನಮೂನೆ-15ರಲ್ಲಿ ಕಂದಾಯ ವಸೂಲಾತಿಗಾಗಿ ಬೇಡಿಕೆ ವಸೂಲಾತಿ ರಿಜಿಸ್ಟರನ್ನು ನಿರ್ವಹಿಸಬೇಕಾಗಿರುತ್ತದೆ. ಈ ರೀತಿ ನಿರ್ವಹಿಸಿದ ವಹಿಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ 2017-18ನೇ ಸಾಲಿನಲ್ಲಿ ವಿವಿಧ ಹರಾಜು ಪ್ರಕರಣಗಳಿದ್ದು ಜರುಗಿದ್ದು ಕಡತಗಳನ್ನು ಪರಿಶೀಲಿಸಲಾಗಿ ರಸೀದಿಗಳ ಮೂಲಕ ಸ್ವೀಕೃತಿಗೊಂಡ ಹರಾಜಿನ ಮೊತ್ತ ವಸೂಲಾತಿ ಮತ್ತು ಬಾಕಿ ವಿವರದ ಮಾಹಿತಿಗಳು ಈ ಕೆಳಕಂಡಂತಿದೆ.

ಕ್ರ.ಸಂ	ಹರಾಜಿನ ವಿವರ	ಬಿಡ್ಡುದಾರರ ಹೆಸರು	ಹರಾಜು ದಿನಾಂಕ	ರಸೀದಿ ಸಂಖ್ಯೆ ಮತ್ತು ದಿನಾಂಕ	ಹರಾಜಿನ ಮೊತ್ತ	ಸೆಸ್	ಒಟ್ಟು ರೂ	ಸೆಸ್. ವಸೂಲಿ ಸದಿರುವುದು
1								
2								
3	NIL							
4								
	ಒಟ್ಟು ರೂ							

29. ಪರವಾನಗಿ ಶುಲ್ಕದ ಬಗ್ಗೆ :-

29.1. ಕಟ್ಟಡ ಪರವಾನಗಿ ಶುಲ್ಕ:

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006 ರ ನಿಯಮ 35 ರನ್ವಯ ನಮೂನೆ-16ರಲ್ಲಿ ಪ್ರತಿಯೊಂದು ಶೀರ್ಷಿಕೆಯಡಿ ಲೈಸನ್ಸ್ ನೀಡಿಕೆಗಳ ದಾಖಲೆ ವಹಿಯನ್ನು ನಿರ್ವಹಿಸಬೇಕಾಗಿರುತ್ತದೆ. ಈ ಬಗ್ಗೆ ವಹಿ ನಿರ್ವಹಿಸಿರುವುದಿಲ್ಲ ಈ ದಾಖಲೆ/ವಹಿ ನಿರ್ವಹಣೆ ಮಾಡಲು ಕ್ರಮವಹಿಸುವಂತೆ ಸೂಚಿಸಿದೆ. ಲೆಕ್ಕಪರಿಶೋಧನೆಗೆ ಒದಗಿಸಿದ ಇತರೆ ದಾಖಲಾತಿಗಳು/ಮಾಹಿತಿ ಪ್ರಕಾರ 2017-18 ನೇ ಸಾಲಿನಲ್ಲಿ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿಯ ಪರವಾನಗಿಗಳ ಪ್ರಕರಣಗಳಿಂದ ಒಟ್ಟು ರೂ. /-ಶುಲ್ಕ ಖಾತೆಗೆ ಜಮೆಯಾಗಿರುತ್ತದೆ.

29.2. ವ್ಯಾಪಾರ ಪರವಾನಗಿ ಶುಲ್ಕದ ಬಗ್ಗೆ

ಮೇಲಿನಂತೆ ನಮೂನೆ-16 ರಲ್ಲಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿರುವ ಅಂಗಡಿಗಳು, ಬಾರ್ ಅಂಡ್ ರೆಸ್ಟೋರೆಂಟ್‌ಗಳು, ಖಾಸಗಿ ಕ್ಲಿನಿಕ್‌ಗಳು, ಹಿಟ್ಟಿಗೆ ಭಟ್ಟಿಗಳು, ಇಟ್ಟಿನ ಮತ್ತು ಭತ್ತದ ಗಿರಿಣಿಗಳು, ರೈಸ್ ಮಿಲ್‌ಗಳು, ಹೋಟೆಲ್‌ಗಳು, ಕೈಗಾರಿಕಾ ಶೆಡ್ಡುಗಳು ಮತ್ತು ಇತರೆ ವಾಹಿವಾಟು ಕುರಿತಂತೆ ಸ್ಥಳ ಪರಿಶೀಲನೆ ಮಾಡಿ ವಾರ್ಷಿಕವಾಗಿ ನವೀಕರಣೆ ಷರತ್ತಿಗೆ ಒಳಪಡಿಸಿ ಲೈಸನ್ಸ್ ನೀಡಬೇಕಿರುತ್ತದೆ ಹಾಗೂ ಅಂತಹ ವಿವರವನ್ನು 1993 ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮಗಳ ಪ್ರಕರಣ 64, 66, 67 ಮತ್ತು 68 ರಂತೆ ಪ್ರತ್ಯೇಕ ವಹಿಗಳಲ್ಲಿ ದಾಖಲಿಸಬೇಕಿರುತ್ತದೆ. ಅದರಂತೆ 2017-18ನೇ ಸಾಲಿನಲ್ಲಿ ವಿವರಗಳ ವಹಿ ನಿರ್ವಹಿಸಿದ ಮಹಿತಿ ಒದಗಿಸಿರುವುದಿಲ್ಲ. ಇನ್ನು ಮುಂದೆ ಕಡ್ಡಾಯವಾಗಿ ಸದರಿ ವಹಿಯನ್ನು ಕ್ರಮ ವಹಿಸುವಂತೆ ಸೂಚಿಸಿದೆ.

2017-18ನೇ ಸಾಲಿನ ಲೆಕ್ಕಪರಿಶೋಧನೆಗೆ ಒದಗಿಸಿರುವ ಇತೆರ ದಾಖಲಾತಿಗಳು/ಮಾಹಿತಿಗಳಂತೆ ಉದ್ದಿಮೆ ಪರವಾನಗಿಗಳ ಪ್ರಕರಣಗಳಿಂದ ಒಟ್ಟು ರೂ. ಶುಲ್ಕ ವಸೂಲಾತಿಯಾಗಿರುವುದು ಕಂಡು ಬಂದಿರುತ್ತದೆ.

30. ಜಾಹಿರಾತು ಶುಲ್ಕದ ಬಗ್ಗೆ :-

ಪಂಚಾಯತ್ ರಾಜ್ (ಜಾಹಿರಾತು ಮತ್ತು ಫಲಕಗಳ ಅಳವಡಿಕೆಯ ಮೇಲೆ ಗ್ರಾಮ ಪಂಚಾಯತಿಗಳ ನಿಯಂತ್ರಣ) (ಮಾದರಿ) ಉಪವಿಧಿಗಳು 2013 ರಂತೆ 2017-18ನೇ ಸಾಲಿನಲ್ಲಿ ಜಾಹಿರಾತು ಶುಲ್ಕಗಳನ್ನು ವಸೂಲಿಸಿರುವ ಬಗ್ಗೆ ವಹಿಯನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಒದಗಿಸಲಾಗಿಲ್ಲ ಈ ಬಗ್ಗೆ ಸೂಕ್ತ ಕ್ರಮ ಅಗತ್ಯವಾಗಿರುತ್ತದೆ.

31. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಶೇಕಡ 25% ಕ್ಷೇಮಾಭ್ಯುದಯ ಯೋಜನೆ :-

ಆಯಾ ವರ್ಗ-1 ತೆರಿಗೆಗಳ ಆದಾಯದ ಅಡಿಯಲ್ಲಿ ಹಾಗೂ 13/14ನೇ ಹಣಕಾಸು ಯೋಜನೆಯಡಿಯಲ್ಲಿ ಜಮೆಯಾಗಿರುವ ಮೊತ್ತದಲ್ಲಿ ನಿಯಮಗಳನ್ವಯ ಶೇ.25% ಹಣಕಾಯ್ದಿರಿಸಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರ ಕ್ಷೇಮಾಭಿವೃದ್ಧಿ ಸಲುವಾಗಿ ಕ್ರಿಯಾ ಯೋಜನೆಯ ಪ್ರಕಾರ ಖರ್ಚು ಮಾಡುವುದು ಅಗತ್ಯ, ಸದರಿ ಯೋಜನೆಗೆ ಸಂಬಂಧಿಸಿದಂತೆ ಪ್ರತ್ಯೇಕ ನಿಗ ವಹಿಯನ್ನು ನಿರ್ವಹಿಸಲು ಸೂಚಿಸಿದೆ.

3. ಖರೀದಿಸಿದ ಸಾಮಾಗ್ರಿಗಳ ಗುಣಮಟ್ಟ ಹೊಂದಿರುವ ಬಗ್ಗೆ ಪ್ರಮಾಣೀಕರಿಸಿರುವುದಿಲ್ಲ.
4. ಪಾವತಿ ನಂತರ ಬಿಲ್ಲುಗಳನ್ನು ವೋಚರ್ ಆಗಿ ಪರಿವರ್ತಿಸಿ ಸಂಖ್ಯೆ ನೀಡಿರುವುದಿಲ್ಲ.
5. ಕೆಲವು ಬಿಲ್ಲುಗಳ ಮೇಲೆ ಪಾಸ್ ಆರ್ಡರ್ ಸಹ ಹಾಕಿರುವುದಿಲ್ಲ.
6. ಖರೀದಿಸಿದ ಸಾಮಾಗ್ರಿಗಳನ್ನು ದಾಸ್ತಾನಿಗೆ ತೆಗೆದುಕೊಂಡಿರುವ ಬಗ್ಗೆ ನಮೂದಿಸಿ ದೃಢೀಕರಿಸಿರುವುದಿಲ್ಲ.
7. ಖರೀದಿಸಿದ ಸಾಮಾಗ್ರಿಗಳ ವಿತರಣೆ ಬಾಕಿ ಬಗ್ಗೆ ಸಮರ್ಪಕವಾಗಿ ದಿನಾಂಕವಾರು ವಿವರಗಳನ್ನು ದಾಖಲಿಸಿ ದೃಢೀಕರಿಸಿರುವುದಿಲ್ಲ.

ಮೇಲಿನ ನ್ಯೂನತೆಗಳು ಮರುಕಳಿಸದಂತೆ ಕ್ರಮ ವಹಿಸುವುದು ಅಗತ್ಯವಾಗಿರುತ್ತದೆ.

39.(3). ಪಂಪು ಮೋಟಾರು ದುರಸ್ತಿಯಲ್ಲಿ ಕಂಡುಬಂದ ನ್ಯೂನತೆಗಳು:-

ಲೆಕ್ಕ ತನಿಖೆಗೆ ಹಾಜರುಪಡಿಸಲಾದ ಪಂಪು ಮೋಟಾರ್ ದುರಸ್ತಿಯ ಬಿಲ್ಲುಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತವೆ.

1. ಕಿರುನೀರು ಯೋಜನೆ ದುರಸ್ತಿ ಕಾಮಗಾರಿಗಳು ತಾಂತ್ರಿಕ ಸ್ವರೂಪದ್ದಾಗಿದ್ದು, ಸಂಬಂಧಿಸಿದ ಅಭಿಯಂತರರಿಂದ ಅಂದಾಜು ಪಟ್ಟಿಗಳನ್ನು ನಿರ್ವಹಿಸಿ ತಯಾರಿಸಿ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ಪಡೆದುಕೊಂಡಿರುವುದಿಲ್ಲ.
2. ಸದರಿ ಪಂಚಾಯಿತಿಯಲ್ಲಿ ಪಂಪು ಮೋಟಾರು ದುರಸ್ತಿ ಮಾಡಿಸಿದ್ದು ಕೊಳವೆ ಬಾವಿಗಳಿಗೆ ಸಂಬಂಧಿಸಿದಂತೆ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಕೊಳವೆ ಬಾವಿಗಳ ಆಳ ಅಳವಡಿಸಿರುವ ಪಂಪು ಮೋಟಾರು ಮತ್ತು ಪೈಪ್ಗಳ ವಿವರದ ಲಾಗ್ ಪುಸ್ತಕವನ್ನು ನಿರ್ವಹಿಸಿ ಹೊಸ ಪಂಪು ಮೋಟಾರನ್ನು ಯಾವ್ಯಾವ ಸ್ಥಳಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಇದರ ಗ್ಯಾರಂಟಿ ಅವಧಿ ಎಲ್ಲಿಯವರೆಗಿದೆ ಎಂಬ ವಿವರಗಳನ್ನು ನಮೂದಿಸಬೇಕಾಗಿದ್ದು, ನಿರ್ವಹಿಸಿರುವುದಿಲ್ಲ ಹಾಗೂ ದುರಸ್ತಿಗೊಂಡಿರುವ ಪಂಪು ಮೋಟಾರು ಹಿಂದೆ ಯಾವಾಗ ಅಳವಡಿಸಲಾಗಿತ್ತು ಹಾಗೂ ದುರಸ್ತಿ ಪಡಿಸಲಾಗಿತ್ತು ಎಂಬ ವಿವರ ದಾಖಲಿಸಿಲ್ಲ ಕೆಟ್ಟಿರುವ ದಿನಾಂಕ ಮುರಸ್ತಿ ದಿನಾಂಕ ದುರಸ್ತಿ ಬಗ್ಗೆ ದೂರು, ಇನ್ನಿತರೆ ಮಾಹಿತಿಯನ್ನು ಲಾಗ್ ಪುಸ್ತಕದಲ್ಲಿ ನಮೂದಿಸಿ ದೃಢೀಕರಿಸಲು ಕ್ರಮ ವಹಿಸುವುದು.
3. ದುರಸ್ತಿ ನಂತರ ಅನುಪಯುಕ್ತ ಸಾಮಾಗ್ರಿಗಳನ್ನು ದಾಸ್ತಾನಿಗೆ ತೆಗೆದುಕೊಂಡು ವಿಲೇವಾರಿ ಮಾಡಬೇಕಾಗಿರುತ್ತದೆ. ಅಥವಾ ಪಂಪು ಮೋಟಾರ್ ದುರಸ್ಥಿ ನಂತರ ದುರಸ್ಥಿ ಸಂಸ್ಥೆಯವರು ನೀಡುವ ಬಿಲ್ಲಿನಲ್ಲಿ ಅನುಪಯುಕ್ತ ಸಾಮಾಗ್ರಿಗಳು ಮೊತ್ತವನ್ನು ಹಾಗೂ ವಾರ್ಷಿಕವಾಗಿ ರೂ.20,000/-ಗಳಿಗೂ ಮೀರಿದ ದುರಸ್ಥಿ ಬಿಲ್ಲಿನ ಮೊತ್ತದ ಪಾವತಿಗಳಿಗೆ ಆದಾಯ ತೆರಿಗೆಯನ್ನು ಕಟಾಯಿಸಿ ಬಿಲ್ಲನ್ನು ಪಾವತಿಸಬೇಕಾಗಿರುತ್ತದೆ. ಆದರೆ ಈ ಮೇಲಿನ ರೀತಿ ಕ್ರಮ ಕೈಗೊಳ್ಳದಿರುವುದು ಗ್ರಾಮಪಂಚಾಯಿತಿ ಸರ್ಕಾರಕ್ಕೆ ಬರಬೇಕಾದ ಆದಾಯ ತಪ್ಪಿದಂತಾಗಿದ್ದು, ಅನುಪಯುಕ್ತ ಸಾಮಾಗ್ರಿಗಳ ವಿಲೇವಾರಿಗೆ ಕ್ರಮವಹಿಸುವುದು.

ಭಾಗ -- 4

40. ಯೋಜನೆಗಳು :-

40.1 . 13ನೇ ಹಣಕಾಸು ಯೋಜನೆ ವೆಚ್ಚಗಳ ಬಗ್ಗೆ:

2017-18ನೇ ಸಾಲಿನ ಲೆಕ್ಕತನಿಖೆಗೆ ಒದಗಿಸಿದ ದಾಖಲಾತಿಗಳಂತೆ 14ನೇ ಹಣಕಾಸು ಯೋಜನೆಯಡಿ ನಿರ್ವಹಿಸಲಾಗಿರುವ ಆರ್ಥಿಕ ವ್ಯವಹಾರಗಳ ವಿವರಗಳು ಕೆಳಗಿನಂತಿದೆ.

01-04-2017ರ ಪ್ರಾರಂಭಿಕ ಶಿಲ್ಕು ರೂ.	114358
ಸ್ವೀಕೃತಿಗಳು ರೂ.	
ಅ) ಅನುದಾನ ರೂ.	2279
ಆ) ಖಾತೆಯ ಬಡ್ಡಿ ರೂ.	
ಒಟ್ಟು ರೂ.	116637
2017-18ರ ವೆಚ್ಚ ರೂ.	
31-03-2018ಕ್ಕೆ ಅಂತಿಮ ಶಿಲ್ಕು ರೂ.	116637
ಬ್ಯಾಂಕ್ ಖಾತೆಯ ಶಿಲ್ಕು ರೂ.	
ವ್ಯತ್ಯಾಸ ರೂ.	--

ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 91ರಂತೆ ನಮೂನೆ 39ರಲ್ಲಿ ಕಾಮಗಾರಿ ರಿಜಿಸ್ಟರು ನಿರ್ವಹಿಸಿ ತಪಾಸಣೆಗೆ ಹಾಜರ್ಪಡಿಸಿರುವುದಿಲ್ಲ.

4) ಕಾಮಗಾರಿ ಪೂರ್ಣಗೊಳಿಸಿರುವುದನ್ನು ದೃಢೀಕರಿಸಲು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 92ರಂತೆ ನಮೂನೆ 40ರಲ್ಲಿ ಕಾಮಗಾರಿ ಮುಕ್ತಾಯದ ವರದಿಯನ್ನು ನೀಡಿರುವುದಿಲ್ಲ.

5) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 81ರನ್ವಯ ಕಾಮಗಾರಿಗಳನ್ನು ಟೆಂಡರು/ತುಂಡು ಕಾಮಗಾರಿ ಕರಾರಿನ ಮೇಲೆ ಗುತ್ತಿಗೆದಾರರಿಗೆ ವಹಿಸುವಲ್ಲಿ ಸ್ಪರ್ಧಾತ್ಮಕ ಕಡಿಮೆ ದರ ನಿಗಧಿ ಪಡಿಸಿರುವುದನ್ನು ರುಜುವಾತು ಪಡಿಸುವ ಮತ್ತು ಕಾಮಗಾರಿಗಳ ನಿರ್ವಹಣೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಾವಳಿ 2000ರ ಪ್ರಕಾರ ನಿಯಮ ಪಾಲಿಸಿದ ಬಗ್ಗೆ ದಾಖಲೆಗಳನ್ನು ತಪಾಸಣೆಗೆ ಹಾಜರುಪಡಿಸಿರುವುದಿಲ್ಲ.

6) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 89ರಂತೆ ಗುತ್ತಿಗೆದಾರರಿಂದ ಪಡೆದ ಭದ್ರತಾ ಠೇವಣಿ ಪಡೆದಿರುವ ಬಗ್ಗೆ ಮಾಹಿತಿ ಒದಗಿಸಿರುವುದಿಲ್ಲ.

ಮೇಲ್ಕಂಡ ನ್ಯೂನತೆಗಳನ್ನು ಸರಿಪಡಿಸಿದ ಮಾಹಿತಿಯನ್ನು ಲೆಕ್ಕಪರಿಶೋಧನೆಯ ಗಮನಕ್ಕೆ ತರಲು ಸೂಚಿಸಿದೆ.

41. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005ರ 4ನೇ ಪ್ರಕರಣದಡಿ, ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ. ಗ್ರಾಅಪ/41/ರಾಗ್ರಾಉ/06 ದಿನಾಂಕ 1-2-2007 ರಲ್ಲಿ ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ರಾಮನಗರ ಜಿಲ್ಲೆಯಲ್ಲಿ ದಿನಾಂಕ 1-4-2008ರಿಂದ ಕಾಯ್ದೆಯನ್ವಯ ಅನುಷ್ಠಾನಗೊಳಿಸಲಾಗಿದೆ. ರಾಜ್ಯದ ಅಧಿಸೂಚಿತ ಜಿಲ್ಲೆಗಳಲ್ಲಿ ಸ್ವಯಂ ಪ್ರೇರಣೆಯಿಂದ ಅರ್ಜಿ ಸಲ್ಲಿಸುವ ಮೂಲಕ ಅಕುಶಲ ದೈಹಿಕ ಕೆಲಸ ಬಯಸುವ ಗ್ರಾಮೀಣ ಪ್ರದೇಶದ ವಯಸ್ಕ ಸದಸ್ಯರ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ಮಟ್ಟದಲ್ಲಿ ಕನಿಷ್ಠ 100 ದಿನಗಳ ಖಾತರಿ ಉದ್ಯೋಗವನ್ನು ಒದಗಿಸಿ ಅವರ ಜೀವನಕ್ಕೆ ಭದ್ರತೆ ಒದಗಿಸುವುದು ಹಾಗೂ ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸುವುದು ಮತ್ತು ಗ್ರಾಮೀಣ ಬಡವರ ಜೀವನೋಪಾಯದ ಸಂಪನ್ಮೂಲ ಆಧಾರಗಳನ್ನು ಬಲಪಡಿಸುವುದು ಮುಖ್ಯ ಉದ್ದೇಶವಾಗಿದೆ. ಸದರಿ ಅಧಿಸೂಚನೆಯ ಕಂಡಿಕೆ (19) ರಂತೆ ಗ್ರಾಮ ಪಂಚಾಯಿತಿಗಳಿಗೆ ಸರ್ಕಾರ ಬಿಡುಗಡೆ ಮಾಡುವ ಅನುದಾನವನ್ನು ನಿಯಮಾನುಸಾರ ಹಾಗೂ ಸಮರ್ಪಕವಾಗಿ ಬಳಕೆ ಮಾಡಿರುವುದರ ಬಗ್ಗೆ ಶಾಸನಬದ್ಧ ಅಧಿಕಾರಿಯಾಗಿ ಲೆಕ್ಕ ಪರಿಶೋಧನೆ ಕೈಗೊಳ್ಳಲಾಗಿದೆ.

ಸದರಿ ಯೋಜನೆಯಡಿ 2016-17ನೇ ಸಾಲಿನಲ್ಲಿ ಬಂದಿರುವ ಮತ್ತು ವೆಚ್ಚವಾಗಿರುವ ಅನುದಾನ ವಿವರವು ನಗದು ಪುಸ್ತಕದಲ್ಲಿ ನಿರ್ವಹಿಸಿರುವ ಮತ್ತು ನಿಧಿಯ ಬ್ಯಾಂಕ್ ಖಾತೆಯಲ್ಲಿ ದಾಖಲಿಸಿರುವ ಮಾಹಿತಿಗಳನ್ನಾಧರಿಸಿ ಆರ್ಥಿಕ ಪರಿಸ್ಥಿತಿಯ ವಿವರ ಈ ಕೆಳಕಂಡಂತಿದೆ.

1	ಪ್ರಾರಂಭಿಕ ಶಿಲ್ಕು ರೂ.	549
2	2017-18ನೇ ಸಾಲಿನಲ್ಲಿ ಜಮಾ ಅ) ಅನುದಾನ ಆ) ಬಡ್ಡಿ ರೂ.	8
	ಒಟ್ಟು ರೂ.	557
3	2017-18ನೇ ಸಾಲಿನಲ್ಲಿ ಆದ ವೆಚ್ಚ ರೂ.	557
4	31-3-2018ರ ಅಂತ್ಯಕ್ಕೆ ಅಂತಿಮ ಶಿಲ್ಕು ರೂ	--

ಮತ್ತು ರಿಜಿಸ್ಟರುಗಳನ್ನು ಸರ್ಕಾರಿ ಮುದ್ರಣಾಲಯವು ಮುದ್ರಿಸಿ ಸರಬರಾಜು ಮಾಡದಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅಡಿಯಲ್ಲಿನ ನಿಯಮಗಳ ಪ್ರಕಾರ ಕ್ರಮಕೈಗೊಳ್ಳತಕ್ಕದ್ದು. ಆದರೆ ಈ ರೀತಿ ಮಾಡದೆ ಜಿಲ್ಲಾ ಪಂಚಾಯತ್ ಅಥವಾ ತಾಲ್ಲೂಕು ಪಂಚಾಯಿತಿಯಿಂದಾಗಲೀ ಯಾವುದೇ ಆದೇಶವಿರುವ ಬಗ್ಗೆ ಮಾಹಿತಿ ಇರುವುದಿಲ್ಲ. ಹಾಗೂ ದೃಢೀಕರಣ ಮಾಡದಿರುವುದಿಲ್ಲ. ಅಳತೆ ಪುಸ್ತಕ ಪ್ರಮುಖ ದಾಖಲೆಯಾಗಿದ್ದು ಇದನ್ನು ಅನೇಕ ವರ್ಷಗಳವರೆಗೆ ಸಂರಕ್ಷಿಸಿಡಬೇಕಾಗಿರುತ್ತದೆ. ಇಟ್ಟಿದವರ ಬಗ್ಗೆ ಖಾಸಗಿಯಾಗಿ ಖರೀದಿಸಿದ ಉಪಯೋಗಿಸಿಕೊಂಡಿರುವುದರಿಂದ ದುರ್ಬಳಕೆ ಕಳೆಯುಪಿಕೆಯಾಗಿದ್ದರೂ ಸಹ ಲೆಕ್ಕಕ್ಕೆ ಸಿಗುವುದಿಲ್ಲ. ಈ ಹಿನ್ನೆಲೆಯಲ್ಲಿ ಮೇಲಿನಂತೆ ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ದೃಢೀಕೃತ ಅಳತೆ ಪುಸ್ತಕಗಳನ್ನೇ ಉಪಯೋಗಿಸುವ ಬಗ್ಗೆ ಹಾಗೂ ಈ ನಿಟ್ಟಿನಲ್ಲಿ ಕ್ರಮವಹಿಸುವ ಬಗ್ಗೆ ಸಕ್ಷಮ ಪ್ರಾಧಿಕಾರ ಸೂಕ್ತ ಕ್ರಮವಹಿಸುವುದು.

45. ರಾಜೀವ್ ಗಾಂಧಿ ಗ್ರಾಮೀಣ ವಸತಿ ಯೋಜನೆ:-

ಈ ಹಿಂದೆ ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ಮನೆ ನಿರ್ಮಿಸಿಕೊಳ್ಳಲು ಮತ್ತು ದುರಸ್ತಿಗೊಳಿಸಲು ಸಹಾಯಧನವನ್ನು ನೀಡುತ್ತಿದ್ದ ಯೋಜನೆಗಳನ್ನು ರಾಜೀವ್‌ಗಾಂಧಿ ಗ್ರಾಮೀಣ ವಸತಿ ಯೋಜನೆಯಡಿ ಮುಂದುವರೆಸಿರುವುದು ಕಂಡುಬಂದಿದೆ. ಸದರಿ ಯೋಜನೆಯಡಿ ಸ್ವಂತ ಜಾಗ ಇರುವಂತಹ ವಸತಿಹೀನ ಫಲಾನುಭವಿಗಳನ್ನು ಆಯ್ಕೆಮಾಡಿ ಗ್ರಾಮಪಂಚಾಯಿತಿ ನಡವಳಿ ಮೂಲಕ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದು ಪ್ರತಿಮನೆ ನಿರ್ಮಾಣಕ್ಕೆ ನೀಡಲಾಗುತ್ತಿದ್ದ ಸಹಾಯಧನವನ್ನು 2017-18ರಲ್ಲಿ ಹೆಚ್ಚಿಸಿ 4 ಕಂತುಗಳಲ್ಲಿ ವಸತಿ ನಿಗಮದಿಂದಲೇ ನೇರವಾಗಿ ಆನ್‌ಲೈನ್ ಮೂಲಕ ಫಲಾನುಭವಿಗಳಿಗೆ ನೀಡುತ್ತಿರುವುದು ಪರಿಶೀಲನೆಯಿಂದ ಕಂಡು ಬಂದಿರುತ್ತದೆ. ಹಿಂದಿನ ಸಾಲಿನ ವರದಿಯಲ್ಲಿನ ಮಾಹಿತಿಯಂತೆ ಹಣಕಾಸು ವಹಿವಾಟನ್ನು ಪ್ರತ್ಯೇಕ ಬ್ಯಾಂಕ್ ಖಾತೆಯಲ್ಲಿ ನಿರ್ವಹಿಸಲಾಗಿದ್ದು ಬ್ಯಾಂಕ್ ಖಾತೆಯನ್ನು ಮುಕ್ತಾಯಗೊಳಿಸದೇ ಮುಂದುವರಿಸಿದ್ದು 2017-18ನೇ ಸಾಲಿನ ಆರ್ಥಿಕ ಪರಿಸ್ಥಿತಿ ಘೋಷ್ವಾರೆ ಈ ಕೆಳಕಂಡಂತಿರುತ್ತದೆ.

01-04-2017ರ ಪ್ರಾರಂಭಿಕ ಶಿಲ್ಕು ರೂ.	
ಸ್ವೀಕೃತಿಗಳು ರೂ.	
ಅನುದಾನ ರೂ.	
ಖಾತೆಯ ಬಡ್ಡಿ ರೂ.	
ಒಟ್ಟು ರೂ.	
2017-18ರ ವೆಚ್ಚ ರೂ.	
31-03-2018ಕ್ಕೆ ಅಂತಿಮ ಶಿಲ್ಕು ರೂ.	
ಬ್ಯಾಂಕ್ ಖಾತೆಯ ಶಿಲ್ಕು ರೂ.	
ವ್ಯತ್ಯಾಸ ರೂ.	-

46. ಇತರೆ ಯೋಜನೆಗಳ ಕಡತಗಳನ್ನು ಕುರಿತು.

46.1. ಸಂಪೂರ್ಣ ಗ್ರಾಮ ನೈರ್ಮಲ್ಯ ಯೋಜನೆ:

ಸಂಪೂರ್ಣ ಸ್ವಚ್ಛತಾ ಆಂದೋಲನ ಯೋಜನೆಯು ಗ್ರಾಮ ನೈರ್ಮಲ್ಯದಿಂದ ಜನರ ಆರೋಗ್ಯ ವೃದ್ಧಿಪಡಿಸಿ ಜೀವನ ಮಟ್ಟ ಮತ್ತು ಸ್ವಚ್ಛತೆಯನ್ನು ಕಾಯ್ದುಕೊಳ್ಳಲು ವೈಯುಕ್ತಿಕ ಶೌಚಾಲಯ, ಅಂಗನವಾಡಿ ಮತ್ತು ಸರ್ಕಾರಿ ಶಾಲೆಗಳಲ್ಲಿ ಶೌಚಾಲಯಗಳ ನಿರ್ಮಾಣ ಮಾಡಿ ಹಳ್ಳಿಯ ಜನರ ಆರೋಗ್ಯ ಕಾಪಾಡುವ ಮತ್ತು ಗ್ರಾಮ ಸ್ವಚ್ಛತೆಯನ್ನು ಕಾಪಾಡುವ ಗುರಿಯಾಗಿದ್ದು ಈ ಪಂಚಾಯಿತಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಸರಿಸಿದ ವ್ಯವಸ್ಥೆಯ ವಿವರ ತಿಳಿದು ಬಂದಿಲ್ಲ.

46.2. ಸ್ವರ್ಣಜಯಂತಿ ಗ್ರಾಮ ಸ್ವರೋಜ್ಗಾರ್ ಯೋಜನೆ:-

ಸರ್ಕಾರದ ಅಧಿಸೂಚನೆ ಗ್ರಾಅಪಂ 367 ಜಿಪಸ 2002 ದಿನಾಂಕ 18-8-2003ರಲ್ಲಿ ಪಂಚಾಯತ್‌ರಾಜ್‌ಗಳ ಮೂಲಕ ಬಡತನದ ಕುಟುಂಬಗಳನ್ನು ಬಡತನ ರೇಖೆಯಿಂದ ಮೇಲೆತ್ತಿ ಅವರಿಗೆ ವರ್ಷಾನುಕ್ರಮೇಣದಲ್ಲಿ ಆದಾಯ ತರುವಂತೆ ಗ್ರಾಮೀಣ ಬಡತನವನ್ನು ಸ್ವಸಹಾಯ ಗುಂಪುಗಳಾಗಿ ಪರಿವರ್ತಿಸಿ ಮೂಲಭೂತ ಸೌಲಭ್ಯಗಳನ್ನು ಬಲಪಡಿಸುವುದು, ನಿರ್ಮಾಣ ಸಾಮರ್ಥ್ಯ ಹಾಗೂ ಆದಾಯ ತರುವಂತೆ ಸ್ವತ್ತನ್ನು ಅಭಿವೃದ್ಧಿಪಡಿಸಲು ತಂತ್ರಜ್ಞಾನ,

2. ನಗದು ಪುಸ್ತಕವನ್ನು ಬಳಸಲು ತೆಗೆದುಕೊಂಡಾಗ ಅದರಲ್ಲಿರುವ ಪುಟಗಳು ಸರಿಯಾಗಿವೆಯೇ ಎಂಬುದನ್ನು ಪರಿಶೀಲಿಸತಕ್ಕದ್ದು ಮತ್ತು ಹಾಗೆ ಪರಿಶೀಲಿಸಲಾಗಿದೆ. ಎಂಬುದಕ್ಕೆ ನಗದು ಪುಸ್ತಕದಲ್ಲಿ ಮೊದಲು ಪುಟದಲ್ಲಿ ಅದರ ಪುಟ ಸಂಖ್ಯೆಗಳನ್ನು ನಮೂದಿಸಿ ಕಾರ್ಯದರ್ಶಿಯು ದೃಢೀಕರಿಸತಕ್ಕದ್ದು.
3. ಪ್ರತಿ ದಿನವೂ ನಗದು ಪುಸ್ತಕವನ್ನು ಮುಕ್ತಾಯಗೊಳಿಸತಕ್ಕದ್ದು. ಈ ರೀತಿ ತಾಳೆ ಮಾಡಿದ ಪುಸ್ತಕದಲ್ಲಿ ನಗದು ಶಿಲ್ಕುಗಳ ಪ್ರತಿ ದಿನ ತಾಳೆಯಾಗತಕ್ಕದ್ದು. ಈ ರೀತಿ ತಾಳೆ ಮಾಡಿದ ವಿವರಗಳನ್ನು ನಗದು ಪುಸ್ತಕದಲ್ಲಿ ದಾಖಲಿಸಿ ಕಾರ್ಯದರ್ಶಿ ದೃಢೀಕರಿಸುವದು ಅವಶ್ಯಕವಾಗಿದೆ.
4. ದಿನದ ಅಂತಿಮ ನಗದು ಶಿಲ್ಕಿನಲ್ಲಿ ಇರತಕ್ಕ ವಿವರಗಳನ್ನು ಅಂದರೆ ಸಂಗ್ರಹವಾದ ಹಣವನ್ನು ನಿಗದಿತ ದಿನದೊಳಗಾಗಿ ಜಮಾ ಮಾಡದೇ ಇರುವುದು. ಬಟವಡೆಯಾಗದ ವೇತನ, ಮುಂಗಡ ಹಣದ ಶಿಲ್ಕು ಇತ್ಯಾದಿಗಳ ವಿವರಗಳನ್ನು ನಮೂದಿಸಿರುವದಿಲ್ಲ.
5. ಬ್ಯಾಂಕಿನಲ್ಲಿ ಬರುವ ಡೆಬಿಟ್ ಮತ್ತು ಕ್ರೆಡಿಟ್ ಚಿಟಿಗಳಿಗೆ ಅನುಗುಣವಾಗಿ ಬ್ಯಾಂಕ ಪಾಸ್ ಪುಸ್ತಕಗಳಲ್ಲಿರುವಂತೆ ಬ್ಯಾಂಕುಗಳು ವಿಧಿಸಿದ ಕಮಿಷನ್ ಬಾಬ್ತು ಮತ್ತು ಜಮೆ ಮಾಡಿದ ಬಡ್ಡಿ ಇತ್ಯಾದಿ ವಿವರಗಳನ್ನು ನಗದು ಪುಸ್ತಕದಲ್ಲಿ ನಮೂದಿಸತಕ್ಕದ್ದು ಬ್ಯಾಂಕಿನಿಂದ ಡೆಬಿಟ್ ಕ್ರೆಡಿಟ್ ಚೀಟಿಗಳನ್ನು ತಕ್ಷಣ ಪಡೆದುಕೊಂಡು ಅದನ್ನು ವೋಚರ ಆಗಿ ಪರಿಗಣಿಸಿ ನಗದು ಪುಸ್ತಕದಲ್ಲಿ ಖರ್ಚು ದಾಖಲಿಸಿರುವುದನ್ನು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಿದೆ.
6. 105 ನೇ ನಿಯಮದಡಿಯಲ್ಲಿ ಸೂಚಿಸಿರುವಂತೆ ಖಜಾನೆ / ಬ್ಯಾಂಕ್ ಹೊಂದಾಣಿಕೆ ಪತ್ರವನ್ನು ಪ್ರತಿ ತಿಂಗಳ ಕೊನೆಗೆ ಸಿದ್ಧಪಡಿಸಿ ಬ್ಯಾಂಕ್ / ಖಜಾನೆ ಶಿಲ್ಕನ್ನು ತಾಳೆ ಮಾಡಿ ನಗದು ಪುಸ್ತಕದಲ್ಲಿ ದಾಖಲಿಸಿರುವುದಿಲ್ಲ. ದಾಖಲಿಸಲು ಸೂಚಿಸಿದೆ.

10(1). ಸಮನ್ವಯೀಕರಣ :

ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರಗಳ) ನಿಯಮ 2006 ರ ನಿಯಮ 105 ರಂತ ನಗದು ಪುಸ್ತಕದ ಬ್ಯಾಂಕ್ ಶಿಲ್ಕಿನೊಂದಿಗೆ ಬ್ಯಾಂಕಿನ ಅಂತಿಮ ಶಿಲ್ಕು ತಾಳೆಯಾಗಬೇಕು ಇದನ್ನು ಗ್ರಾಮ ಪಂಚಾಯತಿ ಮಾಡದಿರುವದರಿಂದ ಪರಿಶೀಲಿಸುವುದು ಅಸಾಧ್ಯವಾಗಿದೆ. ಇದು ಅಮೂಲ್ಯ ದಾಖಲೆಯಾದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ಅಗತ್ಯ.

ಗ್ರಾಮ ಪಂಚಾಯತಿ ನಿಧಿಯ ದುರುಪಯೋಗ ಅಥವಾ ಅವ್ಯವಹಾರಗಳನ್ನು ಪತ್ತೆ ಹಚ್ಚಲು ಜಮಾ ಮತ್ತು ಖರ್ಚುಗಳ ತಪ್ಪು ವರ್ಗೀಕರಣವನ್ನು ಸರಿಪಡಿಸಲು ಪ್ರತಿ ತಿಂಗಳ ಕೊನೆಯಲ್ಲಿ ಖಜಾನೆ / ಬ್ಯಾಂಕಿನಲ್ಲಿರುವ ಶಿಲ್ಕುನೊಂದಿಗೆ ನಗದು ಪುಸ್ತಕದಲ್ಲಿನ ಶಿಲ್ಕನ್ನು ಹೊಂದಾಣಿಕೆ ಮಾಡಿಕೊಳ್ಳುವುದು.

10(2). ಸಾಮಾನ್ಯ ಲೆಡ್ಜರ್ ಹಾಗೂ ಜರ್ನಲ್ ಪುಸ್ತಕ ನಿರ್ವಹಣೆ :

ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006 ರ ನಿಯಮ 107 ರಂತೆ ಸಾಮಾನ್ಯ ಲೆಡ್ಜರ್ ನಿರ್ವಹಿಸುವುದು. ಜರ್ನಲ್ ಪುಸ್ತಕವನ್ನು ನಮೂನೆ 50 ರಲ್ಲಿ ನಿರ್ವಹಿಸತಕ್ಕದ್ದು. ನಮೂನೆ 51 ರಲ್ಲಿನ ಜರ್ನಲ್ ವೋಚರನ್ನು ತಯಾರಿಸಿ ಇದರ ಆಧಾರದ ಮೇಲೆ ಜರ್ನಲ್ ಪುಸ್ತಕದಲ್ಲಿ ನಮೂದುಗಳನ್ನು ದಾಖಲಿಸತಕ್ಕದ್ದು. ಎಲ್ಲಾ ಜರ್ನಲ್ ಹೊಂದಣಿಕೆಗಳನ್ನು ಗ್ರಾಮ ಪಂಚಾಯತಿ ಕಾರ್ಯದರ್ಶಿ ನಮೂದಿಸತಕ್ಕದ್ದು ಮತ್ತು ಜರ್ನಲ್ ಪುಸ್ತಕದಲ್ಲಿ ಪ್ರತಿಯೊಂದು ಬಾಬ್ತನ್ನು ನಮೂದಿಸಬೇಕಾಗಿದ್ದು ಹೆಚ್ಚಿನ ಪ್ರಕರಣಗಳಲ್ಲಿ ಜರ್ನಲ್ ವೋಚರಗಳನ್ನು ತಯಾರಿಸದೆ ಸಾಮಾನ್ಯ ಲೆಡ್ಜರ್‌ನಲ್ಲಿ ದಾಖಲಿಸಿರುವದನ್ನು ಗಮನಿಸಲಾಗಿದೆ. ನೇರವಾಗಿ ಲೆಡ್ಜರ್‌ಗಳ ಮೂಲಕ ಲೆಕ್ಕಕ್ಕೆ ಸೇರ್ಪಡೆಗೊಳಿಸಲಾಗಿದೆ.

ಜರ್ನಲ್ ವೋಚರಗಳಿಲ್ಲದೆ ಯಾವುದೇ ಕ್ರೆಡಿಟ್ ಅಥವಾ ಡೆಬಿಟನ್ನು ಲೆಡ್ಜರಗಳಿಗೆ ದಾಖಲಿಸುವದು ಕ್ರಮಬದ್ಧವಾಗಿರುವುದಿಲ್ಲ.

11. ಮಾಸಿಕ ಮತ್ತು ತ್ರೈಮಾಸಿಕ ಲೆಕ್ಕಪತ್ರಗಳು:-

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 108 ರ ಪ್ರಕಾರ ಕಾರ್ಯದರ್ಶಿಯು ಪ್ರತಿ ತಿಂಗಳ ಸ್ವೀಕೃತಿ ಮತ್ತು ಪಾ... ವಿವರಣಾ ಪಟ್ಟಿಯನ್ನು ನಮೂನೆ 53 ರಲ್ಲಿ ಹಾಗೂ ಪ್ರಾಯೋಗಿಕ ಆರ್ಥಿಕ ಸ್ಥಿತಿಗತಿ ಪಟ್ಟಿಯನ್ನು ನಮೂನೆ 54ರಲ್ಲಿ ಪ್ರತಿ ಮಾಹೆಯ 20ನೇ ತಾರೀಖಿನೊಳಗಾಗಿ ಗ್ರಾಮ ಪಂಚಾಯಿತಿ ಸಭೆಗೆ ಮಂಡಿಸಿ, ಅನುಮೋಧನೆ ಪಡೆದ ಪಟ್ಟಿಗಳನ್ನು ಜಿಲ್ಲಾ ಪಂಚಾಯಿತಿ ಹಾಗೂ (ಹಿರಿಯ ಉಪನಿರ್ದೇಶಕರು) ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಛೇರಿಗಳಿಗೆ ಪರಿಶೀಲನೆಗಾಗಿ ಸಲ್ಲಿಸಬೇಕಿರುತ್ತದೆ. ಈ ರೀತಿ ಮಾಸಿಕ ಮತ್ತು ತ್ರೈಮಾಸಿಕ ಲೆಕ್ಕಗಳನ್ನು ಸಕ್ಷಮ ಪ್ರಾಧಿಕಾರಗಳು ಪರಿಶೀಲನೆ ಮಾಡಿ ಕಂಡು ಬಂದಿರುವ ಲೋಪ-ದೋಷಗಳನ್ನು ಸರಿಪಡಿಸಿಕೊಳ್ಳುವಂತೆ ಮಾರ್ಗದರ್ಶನ ನೀಡುವ ಸಂಭವ ಮತ್ತು ಅವಕಾಶಗಳು ಇರುತ್ತದೆ. ಈವರೆವಿಗೂ ಮಾಸಿಕ ಮತ್ತು ತ್ರೈಮಾಸಿಕ ಲೆಕ್ಕಪತ್ರಗಳನ್ನು ಸಕ್ಷಮಪ್ರಾಧಿಕಾರಗಳಿಗೆ ಸಲ್ಲಿಸಿರುವುದಿಲ್ಲ ಇನ್ನುಮುಂದೆ ತಪ್ಪದೇ ನಿಗಧಿತ ದಿನಾಂಕದೊಳಗೆ ಪ್ರತಿ ತಿಂಗಳು ಮಾಸಿಕ ಮತ್ತು ತ್ರೈಮಾಸಿಕ ಲೆಕ್ಕಪತ್ರಗಳನ್ನು ಸಕ್ಷಮಪ್ರಾಧಿಕಾರಗಳಿಗೆ ಸಲ್ಲಿಸಲು ಕ್ರಮವಹಿಸಲು ಸೂಚಿಸಿದೆ.

12. ವಾರ್ಷಿಕ ಲೆಕ್ಕ ಪತ್ರಗಳು :

ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರಗಳು) ಗಳ ನಿಯಮಗಳು 2006 ನಿಯಮ 109 ರ ಪ್ರಕಾರ ತಯಾರಿಸಿ ನಿಯಮ 112 ರ ಪ್ರಕಾರ ಗ್ರಾಮ ಪಂಚಾಯತಿ ಪಿ.ಡಿ.ಓ ಈ ಕಛೇರಿಗೆ ಸಲ್ಲಿಸಿದ ಪ್ರಕಾರ ಈ ಕೆಳಗೆ ನಮೂದಿಸಿದ ನಮೂನೆಗಳ ಪಟ್ಟಿಗಳನ್ನು ತಯಾರಿಸಿ ಲೆಕ್ಕ ತನಿಖೆಗೆ ಹಾಜರುಪಡಿಸಿದೆ.

1	ಸ್ವೀಕೃತಿ ಮತ್ತು ಪಾವತಿ	ನಮೂನೆ ನಂ.	53
2	ಆದಾಯ ಮತ್ತು ವೆಚ್ಚ	-- ಸದರ --	55
3	ಸಮತೋಲನಾ ಪಟ್ಟಿ	-- ಸದರ --	56
4	ಟ್ರಾಯಲ್ ಬ್ಯಾಲನ್ಸ್	-- ಸದರ --	54

13. ಆಯವ್ಯಯದ ಅನುಮೋದನೆ ಕುರಿತು :

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 241ರನ್ವಯ ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 11 ಮತ್ತು 12ರ ಪ್ರಕಾರ 2016-17ನೇ ಸಾಲಿಗೆ ನಮೂನೆ 1 ಮತ್ತು ಅದರ ಉಪನಮೂನೆಗಳಲ್ಲಿ ಆಯವ್ಯಯದ ತಃಖ್ತೆಗಳನ್ನು ತಯಾರಿಸಿ ಫೆಬ್ರವರಿ 1ನೇ ತಾರೀಖಿನಿಂದ ಮಾರ್ಚ್ 10ನೇ ತಾರೀಖಿನೊಳಗೆ ಗ್ರಾಮಪಂಚಾಯತಿಯಲ್ಲಿ ಮಂಡಿಸಿ ಅನುಮೋದನೆ ಪಃಡೆದಿರುವ ಬಗ್ಗೆ ದಾಖಲೆಗಳನ್ನು ತಪಾಸಣೆಯ ಗಮನಕ್ಕೆ ತಂದಿರುತ್ತಾರೆ. ಗ್ರಾಮಸಭೆಯ ಅನುಮೋದನೆ ಪಡೆದಿರುವುದಾಗಿ ದಾಖಲಾತಿಗಳನ್ನು ತಪಾಸಣೆಗೆ ಒದಗಿಸಿರುತ್ತಾರೆ.

2016-17ನೇ ಸಾಲಿನ ಆಯ-ವ್ಯಯ ಪತ್ರಿಕೆಯನ್ನು ಲೆಕ್ಕ ತನಿಖೆಗೆ ಹಾಜರು ಪಡಿಸಿರುತ್ತಾರೆ	
ನಿರೀಕ್ಷಿತ ಆದಾಯ ರೂ. 1038231	ನಿರೀಕ್ಷಿತ ವೆಚ್ಚ ರೂ. 1076363
ವಾಸ್ತವಿಕ ಆದಾಯ ರೂ. 5475802	ವಾಸ್ತವಿಕ ವೆಚ್ಚ ರೂ. 3530891

ಅಲ್ಲದೇ, ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 15ರಂತೆ, ಆಯವ್ಯಯ ನಿಯಂತ್ರಣ ರಿಜಿಸ್ಟರನ್ನು ನಮೂನೆ 2ರಲ್ಲಿ ನಿರ್ವಹಿಸಿ ಆಯವ್ಯಯದಲ್ಲಿನ ವಾಸ್ತವಿಕ ಹಂಚಿಕೆಗಳನ್ನು ಮೀರದಂತೆ ವೆಚ್ಚಗಳನ್ನು ಭರಿಸಲು ಸೂಚಿಸಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ/2/ಎಎಫ್ ಎನ್(2)/2006/2008/2012 ದಿ: 15-05-2013ರಲ್ಲಿ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) (ತಿದ್ದುಪಡಿ) ಇಯಮಗಳ. 2013ರಲ್ಲಿ ನಿಯಮ 20 ಹಾಗೂ ನಮೂನೆ-1, 1-ಎ, 1-ಬಿ, 1-ಸಿ, 3, 3-ಎ, 49, 51, 52, 53, 55, 56, 57 ಗಳನ್ನು ಪರಿಷ್ಕರಿಸಿದ್ದು, ಅದರಂತೆ ಆಯವ್ಯಯ ಹಾಗೂ ಇತರೆ ನಮೂನೆಗಳಲ್ಲಿ ಲೆಕ್ಕಪತ್ರಗಳನ್ನು ಗ್ರಾಮಪಂಚಾಯಿತಿಯಲ್ಲಿ ತಪ್ಪದೆ ನಿರ್ವಹಿಸುವುದು.

೨೧. ಆಸ್ತಿ ಮತ್ತು ಹೊಣೆಗಾರಿಕೆಗಳ ವಿವರ:

ದಿನಾಂಕ: 31-3-2017ಕ್ಕೆ ವಿರುಪಾಕ್ಷಿಪುರ ಗ್ರಾಮ ಪಂಚಾಯಿತಿಯ ಲಭ್ಯವಿರುವ ಅಂಕಿ ಅಂಶಗಳ ಪ್ರಕಾರ ಆಸ್ತಿ & ಹೊಣೆಗಾರಿಕೆ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ಆರ್ಥಿಕ ಆಸ್ತಿಗಳ ವಿವರ	ಮೊತ್ತ ರೂ.	ಕ್ರ. ಸಂ.	ಹೊಣೆಗಾರಿಕೆಗಳ ವಿವರ	ಮೊತ್ತ ರೂ.
1	ಆಸ್ತಿಗಳು-ಸ್ವಂತ ನಿಧಿಯಿಂದ	1158356	1	ಉಪಕರಗಳ ಬಾಬ್ತು	776554
2	ಆಸ್ತಿಗಳ-ಯೋಜನೆಗಳ ನಿಧಿಯಿಂದ	ಲಭ್ಯವಿಲ್ಲ	2	ತೆರಿಗೆಗಳ ಬಾಬ್ತು	–
3	ಠೇವಣಿ/ಸಾಲ/ಮುಂಗಡ ಇ.ಎಂ.ಡಿ ಎಫ್ ಎಸ್.ಡಿ	2910363	3	ಆಡಿಟ್ ಶುಲ್ಕ	12000
4	ಬ್ಯಾಂಕ್ ಶಿಲ್ಕು		4	ಬಾಕಿಯಿರುವ ವೆಚ್ಚಗಳು	ಲಭ್ಯವಿಲ್ಲ
5	ಆಸ್ತಿಗಿಂತ ಹೊಣೆಗಾರಿಕೆ ಹೆಚ್ಚಿರುವುದು		5	ಠೇವಣಿಗಳು/ಮುಂಗಡ	–
	ಅಂಗಡಿಮಳಿಗೆ ಬಾಡಿಗೆ ಬಾಕಿ		6	ಸರ್ಕಾರಿ ತೆರಿಗೆಗಳ ಬಾಬ್ತು	148740
			7	ಹೊಣೆಗಾರಿಕೆಗಿಂತ ಆಸ್ತಿ ಹೆಚ್ಚಿರುವುದು	3131425
	ಒಟ್ಟು	**4068719**		ಒಟ್ಟು	**4068719**

೨೨. ತೆರಿಗೆಗಳ ಬೇಡಿಕೆ ವಸೂಲಿ ಮತ್ತು ಬಾಕಿಗಳ ವಿವರಗಳು:

ಲೆಕ್ಕ ಪತ್ರಗಳ ನಿಯಮ 2006 ರ ನಿಯಮ 27 ರ ಪ್ರಕಾರ ಆದಾಯ-ವಸೂಲಾತಿಗಳನ್ನು ಗಮನಿಸಲು ಮತ್ತು ದಾಖಲು ಮಾಡಲು ಗ್ರಾಮ ಪಂಚಾಯತಿಗಳು ಈ ಕೆಳಕಂಡ ರಿಜಿಸ್ಟರಗಳನ್ನು ನಿರ್ವಹಿಸಿ ಹಾಜರುಪಡಿಸಬೇಕಾಗಿರುತ್ತದೆ.

ಕ್ರಮ ಸಂಖ್ಯೆ 1 ರಿಂದ 10 ರ ರಿಜಿಸ್ಟರುಗಳ ವಿವರ :

1	ನಮೂನೆ 9 ರಲ್ಲಿ ತೆರಿಗೆ ನಿರ್ಧರಣ ರಿಜಿಸ್ಟರ್
2	ನಮೂನೆ 10 ರಲ್ಲಿ ಮ್ಯುಟೇಶನ್ (ತೆರಿಗೆ ಏರಿಕೆ ಅಥವಾ ಇಳಿಕೆ) ರಿಜಿಸ್ಟರ್
3	ನಮೂನೆ 11 ರಲ್ಲಿ ಭೂಮಿ ಮತ್ತು ಕಟ್ಟಡಗಳ ತೆರಿಗೆಗಳ ಬೇಡಿಕೆ ಮತ್ತು ವಸೂಲಾತಿ ರಿಜಿಸ್ಟರ್
4	ನಮೂನೆ 12 ರಲ್ಲಿ ವಾಹನಗಳ ಮೇಲಿನ ತೆರಿಗೆಗಳ ಬೇಡಿಕೆ ಮತ್ತು ವಸೂಲಾತಿ ರಿಜಿಸ್ಟರ್
5	ನಮೂನೆ 13 ರಲ್ಲಿ ಜಾಹಿರಾತು ಮೇಲಿನ ತೆರಿಗೆಗಳ ಬೇಡಿಕೆ ಮತ್ತು ವಸೂಲಾತಿ ರಿಜಿಸ್ಟರ್
6	ನಮೂನೆ 14 ರಲ್ಲಿ ನೀರಿನ ದರಗಳ ಬೇಡಿಕೆ ಮತ್ತು ವಸುಲಾತಿ ರಿಜಿಸ್ಟರ್
7	ನಮೂನೆ 15 ರಲ್ಲಿ ಆದಾಯ ತರವು ಆಸ್ತಿ-ಪಾಸ್ತಿಗಳ ರಜಿಸ್ಟರು ಮತ್ತು ಕಂದಾಯ ವಸೂಲಿ ದಾಖಲೆಗಳು.
8	ನಮೂನೆ 16 ರಲ್ಲಿ ಲೈಸನ್ಸ ನೀಡಿಕೆ ರಿಜಿಸ್ಟರ್ ಹಾಗೂ ಆದಾಯ ವಸೂಲಿ ದಾಖಲೆಗಳು.
9	ನಮೂನೆ 17 ರಲ್ಲಿ ಮನರಂಜನೆ ತೆರಿಗೆಗಳ ಬೇಡಿಕೆ ರಿಜಿಸ್ಟರ್
10	ನಮೂನೆ 18 ರಲ್ಲಿ ದನಗಳ ದೊಡ್ಡಿ ರಜಿಸ್ಟರ್

2016-17ನೇ ಸಾಲಿನಲ್ಲಿ ಈ ಮೇಲ್ಕಂಡ ಯಾವುದೇ ರಿಜಿಸ್ಟರನ್ನು ನಿಯಮ ರೀತ್ಯಾ ನಿರ್ವಹಿಸದೆ ಇರುವುದು ಕಂಡುಬಂದಿದೆ ಆದರು ಕೂಡ ಗ್ರಾಮ ಪಂಚಾಯಿತಿಯಲ್ಲಿ ನಿರ್ವಹಿಸಿರುವ ಬೇಡಿಕೆ ಪಟ್ಟಿಯನ್ನು ಲಭ್ಯವಿರುವ ಮಾಹಿತಿಗಳನ್ನು ಆಧರಿಸಿ ತಯಾರಿಸಲಾದ ಬೇಡಿಕೆ, ವಸೂಲಾತಿ ಮತ್ತು ಬಾಕಿ ವಿವರಗಳು ಇಂತಿದೆ.

ಸಂ	ತೆರಿಗೆಗಳ ವಿವರ	01-04-2016ಕ್ಕೆ ಪ್ರಾರಂಬಿಕ ಶಿಲ್ಕು ರೂ.	2016-17ಕ್ಕೆ ಬೇಡಿಕೆ ರೂ.	ಒಟ್ಟು ಮೊತ್ತ ರೂ.	ವರ್ಷದ ವಸೂಲಿ ಮೊತ್ತ ರೂ.	31-03-2017ಕ್ಕೆ ಅಂತಿಮ ಶಿಲ್ಕು ರೂ.
1	2	3	4	5	6	7
1	ನಿವೇಶನ ಕಂದಾಯ ಮನೆ ಕಂದಾಯ	143997	483000	626997	363568	263429
2	ದೀಪದ ಕಂದಾಯ	145093	200000	345093	116858	228235
3	ನೀರಿನ ಕಂದಾಯ	485607	650000	1135607	368915	666692
4	ಲೈಸನ್ಸ್	0	0	0	0	0
5	ಹರಾಜುಗಳು	0	0	0	0	0
6	ಇತರೆ	0	178571	178571	178571	0
	ಒಟ್ಟು	**774697**	**1511571**	**2286268**	**1027912**	**1158356**

೨೩. ತೆರಿಗೆ ವಸೂಲಿ ಪ್ರಗತಿ ಬಗ್ಗೆ :

ವರದಿ ಸಾಲಿನ ಬೇಡಿಕೆಯೂ ಸೇರಿದಂತೆ ಒಟ್ಟು ರೂ. **11,58,356/-** ಗಳಷ್ಟು ತೆರಿಗೆ ಬಾಕಿ ಇದ್ದು, ಆಪೈಕಿ ವರದಿ ಸಾಲಿನಲ್ಲಿ ರೂ. **10,27,912/-** ಗಳನ್ನು ಮಾತ್ರ ವಸೂಲು ಮಾಡಲಾಗಿದೆ, ಆದ್ದರಿಂದ ಹೆಚ್ಚು ಆಸಕ್ತಿ ವಹಿಸಿ ಆಯಾ ವರ್ಷದ ತೆರಿಗೆಯನ್ನು ಆಯಾ ವರ್ಷದಲ್ಲೇ ಪೂರ್ಣವಾಗಿ ವಸೂಲು ಮಾಡಲು ಮತ್ತು ಸದರಿ ಆದಾಯವನ್ನು ಗ್ರಾಮ ಪಂಚಾಯತಿಯ ಮೂಲಭೂತ ಸೌಕರ್ಯಕ್ಕಾಗಿ ಉಪಯೋಗಿಸಿಕೊಳ್ಳಲು ಸೂಚಿಸಿದೆ.

24. ಉಪಕರಗಳನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡದಿರುವುದು:

ಪ್ರಸಕ್ತ ಸಾಲಿನಲ್ಲಿ ವಸೂಲಿಯಾದ ತೆರಿಗೆಗಳ ಮೇಲೆ ಸರ್ಕಾರಕ್ಕೆ ಜಮಾ ಮಾಡಬೇಕಾದ ಉಪಕರಗಳ ವಿವರ ಈ ಕೆಳಕಂಡಂತೆ ಇರುತ್ತದೆ.

ವಿವರ	ಮನೆ/ನಿವೇಶನ ಕಂದಾಯ ಉಪಕರಗಳು				ಒಟ್ಟು ರೂ.
	ಆರೋಗ್ಯ ಕರ ರೂ.	ಶಿಕ್ಷಣ ಕರ ರೂ	ಗ್ರಂಥಾಲಯ ಕರ ರೂ.	ಬಿಕ್ಷುಕರ ಕರ ರೂ.	
ಪ್ರಸಕ್ತ	40695	27130	16278	8139	92242
ಕಳೆಯಿರಿ ಶೇ 10%	4069	2713	1627	813	9222
ಉಳಿಕೆ 90%	36626	24417	14651	7326	83030
01-04-2016ರಪ್ರಾರಂಭಿಕ ಬಾಕಿ	316347	211095	118072	48550	693524
ಒಟ್ಟು	**352973**	**235512**	**132723**	**55876**	**776554**
ಸರ್ಕಾರಕ್ಕೆ ಜಮಾ	0	0	0	0	0
31.3.17ಕ್ಕೆ ಅಂತ್ಯಕ್ಕೆ ಬಾಕಿ	**352973**	**235512**	**132723**	**55876**	**776554**

ದಿನಾಂಕ: 31-03-2017ರ ಅಂತ್ಯಕ್ಕೆ ಜಮಾ ಮಾಡದೇ ಉಳಿದಿರುವ ಉಪಕರಗಳ ಮೊತ್ತ ರೂ. **776554/-** ಗಳನ್ನು ಗ್ರಾಮ ಪಂಚಾಯಿತಿ ನಿಧಿಯಿಂದ ಡ್ರಾ ಮಾಡಿ ಸರ್ಕಾರದ ಆಯಾ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡಲು ಗ್ರಾಮ ಪಂಚಾಯಿತಿ ಆಡಳಿತ ವರ್ಗಕ್ಕೆ ಸೂಚಿಸಿದೆ. ಅಲ್ಲಿಯವರೆಗೂ ಪ್ರಸಕ್ತ ಸಾಲಿನ ಮೊತ್ತ ರೂ. **83030/-** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

೩೦.(೨). ಗ್ರಾಮ ಪಂಚಾಯಿತಿಯ ಅರ್ಹ ಆದಾಯದ ಶೇ.40 ಕ್ಕೆ ವೇತನ ಪಾವತಿಯನ್ನು ನಿಗಧಿಪಡಿಸಿರುವುದು:-

ಸರ್ಕಾರದ ಆದೇಶ ಗ್ರಾಅಪ/106/ವಿಇವಿಲ್/1990 ದಿನಾಂಕ:-10-1-1994 ಮತ್ತು ಸರ್ಕಾರದ ಸುತ್ತೋಲೆ ಗ್ರಾಅಪ230 ಗ್ರಾಪಂ. 2004 ದಿನಾಂಕ:-14-6-2004ರಂತೆ ಗ್ರಾಮ ಪಂಚಾಯಿತಿಯ ಸಿಬ್ಬಂದಿ ವೇತನವನ್ನು ಸರ್ಕಾರದ ಅನುದಾನ (ಪಂಚಾಯಿತ್ ರಾಜ್ ಅಧಿನಿಯಮ 1993ರ ಪ್ರಕರಣ 208ರಂತೆ) ದಿಂದ ಹಾಗೂ ಪಂಚಾಯಿತಿಯ ರಾಜಸ್ವಗಳಿಂದ ವಸೂಲಾದ ಮೊತ್ತದ ವಾರ್ಷಿಕ ಜಮೆಯ ಮೊತ್ತದ ಶೇ.40ಕ್ಕೆ ಮೀರದಂತೆ ಪಾವತಿಗೆ ನಿಗಧಿಪಡಿಸಿದ್ದು ತುಲನೆಯ ವಿವರ ಇಂತಿದೆ.

ಕ್ರ.ಸಂ.	ವಿವರಗಳು	ಮೊತ್ತ
1	2016-17ನೇ ಸಾಲಿನಲ್ಲಿ ತೆರಿಗೆಗಳಿಂದ ಮತ್ತು ಶಾಸನಬದ್ಧ ಅನುದಾನ ಸಿಬ್ಬಂದಿ ವೇತನ ಅನುದಾನ ಮೊತ್ತ	1361289
2	2016-17ನೇ ಸಾಲಿನಲ್ಲಿ ವೇತನಕ್ಕಾಗಿ ಭರಿಸಲಾದ ಮೊಬಲಗು	386000
3	ಶೇ.40ರಷ್ಟು ವೇತನಕ್ಕಾಗಿ ಭರಿಸಬೇಕಾದ ಮೊತ್ತ	544515
4.	ಹೆಚ್ಚುವರಿ ಮೊತ್ತ	

ಮೇಲ್ಕಂಡ ವಿವರಗಳಂತೆ ಸಿಬ್ಬಂದಿ ವೆಚ್ಚವು ಆದಾಯ ಮೂಲಗಳ ವಾರ್ಷಿಕ ಮೊತ್ತದ ಶೇ.40% ರಷ್ಟು ನಿಗಧಿತ ಮಿತಿ ಮೀರಿರುವುದರಿಂದ ಸರ್ಕಾರದ ನಿರ್ದೇಶನಗಳನ್ನು ಕಾಪಾಡಲು ಸ್ವಂತ ಆದಾಯದ ಮೂಲಗಳನ್ನು ಹೆಚ್ಚಿಸಲು ಹಾಗೂ ತೆರಿಗೆ ವಸೂಲಾತಿಯಲ್ಲಿ ಅಧಿಕ ಗುರಿ ಸಾಧನೆ ಕಾಯ್ದುಕೊಳ್ಳಲು ಆಡಳಿತ ವರ್ಗ ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

೩೦.(೩). ಸಿಬ್ಬಂದಿ ವಾರ್ಷಿಕ ತಃಖ್ತೆ ರವಾನೆ ಬಗ್ಗೆ:-

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಾವಳಿ 2006ರ ನಿಯಮ 57ರ ಪ್ರಕಾರ ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ಮಾಡುತ್ತಿರುವ ಪಿಂಚಣಿ ಪಡೆಯಲು ಅರ್ಹರಾದ ನೌಕರ ಇಲ್ಲವೇ ನಿಯೋಜಿತ ಸರ್ಕಾರಿ ನೌಕರರ ವಿವರವಾದ ಪಟ್ಟಿಯನ್ನು ನಮೂನೆ 22ರಲ್ಲಿ ಮಹಾಲೇಖಪಾಲಕರಿಗೆ ಮತ್ತು ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲಕ್ಕೆ ಹಾಗೂ ಜಿಲ್ಲಾಪಂಚಾಯಿತಿಗೆ ಪ್ರತಿವಾರ್ಷಿಕ ಮಾರ್ಚ್ ತಾರೀಖು 1 ರಲ್ಲಿ ಇದ್ದಂತೆ ತಯಾರಿಸಿ ಮೇ ತಿಂಗಳ 15ನೇ ತಾರೀಕಿನೊಳಗೆ ಸಲ್ಲಿಸುವಂತೆ ಸೂಚಿಸಿದೆ.

ಭಾಗ – 4

೩೧. ಯೋಜನೆಗಳು :-

೩೧.೧ . ೧೩ ನೇ ಹಣಕಾಸು ಯೋಜನೆ ವೆಚ್ಚಗಳ ಬಗ್ಗೆ:

2016-17 ನೇ ಸಾಲಿನ ಲೆಕ್ಕ ತನಿಖೆಗೆ ಒದಗಿಸಿದ ದಾಖಲಾತಿಗಳಂತೆ 13 ನೇ ಹಣಕಾಸು ಯೋಜನೆಯಡಿ ನಿರ್ವಹಿಸಲಾಗಿರುವ ಆರ್ಥಿಕ ವ್ಯವಹಾರಗಳ ವಿವರಗಳು ಕೆಳಗಿಂತಿದೆ.

13ನೇ ಹಣಕಾಸು ಯೋಜನೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಯು ಹೊಂದಿರುವ ಬ್ಯಾಂಕ್ ಖಾತೆಗೆ 2016-17 ನೇ ಸಾಲಿನಲ್ಲಿ ಹೊಂದಾಣಿಕೆಯಾಗಿರುವ ಅನುದಾನ **ರೂ. 22,554/-**ಗಳಲ್ಲಿ **49,671/-** ನಿರ್ವಹಿಸಿರುವ ವೆಚ್ಚಗಳ ವಿವರಗಳು ಕೆಳಗಿನಂತಿದೆ.

ಕ್ರ.ಸಂ	ವೆಚ್ಚದ ವಿವರಗಳು	ಮೊತ್ತ ರೂ.ಗಳಲ್ಲಿ
1	ನೀರು ನಿರ್ವಹಣೆ ಸಾಮಗ್ರಿ ಖರೀದಿ	0
2	ಪಂಪು ಮೋಟಾರ್ ಖರೀದಿ	0
3	ಕಾಮಗಾರಿ	46366
4	ಬ್ಯಾಟರಿ ಬಿಲ್	172
5	ರಾಜಧನ	2000
6	ಕೆ.ಎಸ್.ಟಿ.	1113
ಒಟ್ಟು ಮೊತ್ತ		**49651**

೩೧.೨ . 14 ನೇ ಹಣಕಾಸು ಯೋಜನೆ ವೆಚ್ಚಗಳ ಬಗ್ಗೆ:

2016-17 ನೇ ಸಾಲಿನ ಲೆಕ್ಕ ತನಿಖೆಗೆ ಒದಗಿಸಿದ ದಾಖಲಾತಿಗಳಂತೆ 14 ನೇ ಹಣಕಾ ಯೋಜನೆಯಡಿ ನಿರ್ವಹಿಸಲಾಗಿರುವ ಆರ್ಥಿಕ ವ್ಯವಹಾರಗಳ ವಿವರಗಳು ಕೆಳಗಿನಂತಿದೆ.

14ನೇ ಹಣಕಾಸು ಯೋಜನೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಯು ಹೊಂದಿರುವ ಬ್ಯಾಂಕ್ ಖಾತೆಗೆ 2016-17 ನೇ ಸಾಲಿನಲ್ಲಿ ಹೊಂದಾಣಿಕೆಯಾಗಿರುವ ಅನುದಾನ **ರೂ. 23,50,910/-** ಗಳಲ್ಲಿ ನಿರ್ವಹಿಸಿರುವ ವೆಚ್ಚ **ರೂ. 14,68,413/-**ಗಳ ವಿವರಗಳು ಕೆಳಗಿನಂತಿದೆ. 2016-17ರಲ್ಲಿ ದಿನಾಂಕ: 09-06-2016ರಲ್ಲಿ ರೂ. 590446/- ಹಾಗೂ ದಿನಾಂಕ: 29-11-2016ರಲ್ಲಿ ರೂ. 857446/-ಗಳಿಗೆ ಕ್ರಿಯಾ ಯೋಜನೆ ಅನುಮೋದನೆ ಪಡೆದಿರುವ ವಿವರ ಹಾಜರುಪಡಿಸಿದೆ.

ಕ್ರ.ಸಂ	ವೆಚ್ಚದ ವಿವರಗಳು	ಮೊತ್ತ ರೂ.ಗಳಲ್ಲಿ
1	ಕುಡಿಯುವ ನೀರು ನಿರ್ವಹಣೆ	784937
2	ಬೀದಿ ದೀಪ ಖರೀದಿ/ನಿರ್ವಹಣೆ	0
3	ಕುಡಿಯುವ ನೀರಿನ ಪಂಪು ಮೋಟಾರ್ ಖರೀದಿ	0
4	ಶೇ.10% ಆಡಳಿತ ವೆಚ್ಚ ಸಿ.ಸಿ.ಟಿ.ವಿ	34077
5	ಕುಡಿಯುವ ನೀರು ಸಾಮಾಗ್ರಿ ಖರೀದಿ	0
6	ವಿದ್ಯುತ್ ಸಾಮಾಗ್ರಿ ಖರೀದಿ	0
7	ಕಾಮಗಾರಿಗಳಿಗೆ ಪಾವತಿ	560279
8	ಎಸ್.ಸಿ./ಎಸ್.ಟಿ ಇತರೆ ವೆಚ್ಚ	0
9	ಜಿ.ಪಿ.ಡಿ.ಪಿ	20000
10	ಕಂಪ್ಯೂಟರ್ ಖರೀದಿ	63290
11	ಜೆ.ಆರ್	2110
12	ಕೆ.ಎಸ್.ಟಿ	3720
	ಒಟ್ಟು ಮೊತ್ತ	**1468413**

೩೨. 13/14ನೇ ಹಣಕಾಸು ಯೋಜನೆಯ ಅಡಿ ಗ್ರಾಮ ಪಂಚಾಯತಿಯಲ್ಲಿ ನಿರ್ವಹಿಸಿರುವ ಕಾಮಗಾರಿಗಳನ್ನು ಕುರಿತು:

2016-17 ನೇ ಸಾಲಿನಲ್ಲಿ 13/14ನೇ ಹಣಕಾಸು ಯೋಜನೆಗೆ ಒದಗಿಸಿದ ಅನುದಾನದಲ್ಲಿ ಗ್ರಾಮಪಂಚಾಯತಿಯಲ್ಲಿ ನಿರ್ವಹಿಸಿರುವ ಕಾಮಗಾರಿ ವೆಚ್ಚಗಳ ವಿವರಗಳನ್ನು **ಅನುಬಂಧ-4** ರಲ್ಲಿ ಲಗತ್ತಿಸಲಾಗಿದೆ. ದಾಖಲೆಗಳ ಪರಿಶೀಲನೆಯಿಂದ ಕಂಡುಬಂದ ನ್ಯೂನತೆಗಳು ಈ ಕೆಳಕಂಡಂತಿವೆ.

1. ಅನುಬಂಧದಲ್ಲಿ ವಿವರಿಸಿರುವ ಕಾಮಗಾರಿಗಳ ನಿರ್ವಹಣೆ ಕ್ರಿಯಾ ಯೋಜನೆಯ ಮೂಲಕ ಅನುಮೋದನೆ ಪಡೆದ ಬಗ್ಗೆ ಮಾಹಿತಿಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.
2. ಅಂದಾಜುಪಟ್ಟಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಪಡೆದ ಬಗ್ಗೆ ದೃಢೀಕರಣಗಳಿರುವುದಿಲ್ಲ.
3. ಒಮ್ಮೆ ಪಾವತಿಯಾಗಿರುವ ಬಿಲ್ಲುಗಳು ಮತ್ತೊಮ್ಮೆ ಪಾವತಿಯಾಗುವ ಸಂದರ್ಭಗಳನ್ನು ತಡೆಹಿಡಿಯಲು ಅವಕಾಶವಾಗುವಂತೆ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 91ರಂತೆ ನಮೂನೆ 39ರಲ್ಲಿ ಕಾಮಗಾರಿ ರಿಜಿಸ್ಟರು ನಿರ್ವಹಿಸಿ ತಪಾಸಣೆಗೆ ಹಾಜರ್ಪಡಿಸಿರುವುದಿಲ್ಲ.
4. ಕಾಮಗಾರಿ ಪೂರ್ಣಗೊಳಿಸಿರುವುದನ್ನು ದೃಢೀಕರಿಸಲು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 92ರಂತೆ ನಮೂನೆ 40ರಲ್ಲಿ ಕಾಮಗಾರಿ ಮುಕ್ತಾಯದ ವರದಿಯನ್ನು ನೀಡಿರುವುದಿಲ್ಲ.
5. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 81ರನ್ವಯ ಕಾಮಗಾರಿಗಳನ್ನು ಟೆಂಡರು / ತುಂಡು ಕಾಮಗಾರಿ

ಕರಾರಿನ ಮೇಲೆ ಗುತ್ತಿಗೆದಾರರಿಗೆ ವಹಿಸುವಲ್ಲಿ ಸ್ಪರ್ಧಾತ್ಮಕ ಕಡಿಮೆ ದರ ನಿಗಧಿ ಪಡಿಸಿರುವುದನ್ನು ರುಜುವಾತು ಪಡಿಸುವ ಮತ್ತು ಕಾಮಗಾರಿಗಳ ನಿರ್ವಹಣೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಾವಳಿ 2000ರ ಪ್ರಕಾರ ನಿಯಮ ಪಾಲಿಸಿದ ಬಗ್ಗೆ ದಾಖಲೆಗಳನ್ನು ತಪಾಸಣೆಗೆ ಹಾಜರುಪಡಿಸಿರುವುದಿಲ್ಲ.

6. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 89ರಂತೆ ಗುತ್ತಿಗೆದಾರರಿಂದ ಪಡೆದ ಭದ್ರತಾ ಠೇವಣಿ ಪಡೆದಿರುವ ಬಗ್ಗೆ ಮಾಹಿತಿ ಒದಗಿಸಿರುವುದಿಲ್ಲ.
7. ಕಾಮಗಾರಿಗಳಿಗೆ ಸಂಬಂಧಿಸಿದ ಅಳತೆ ಪುಸ್ತಕಗಳನ್ನು (ಎಂ.ಬಿ) ತನಿಖೆಗೆ ಒದಗಿಸಿರುವುದಿಲ್ಲವಾದ್ದರಿಂದ ಕಾಮಗಾರಿಯ ಅಳತೆಗಲು ಹಾಗು ಇತರೆ ಮಾಹಿತಿ ಒದದಿಸಲು ಸಾಧ್ಯವಾಗಿರುವುದಿಲ್ಲ.

ಮೇಲ್ಕಂಡ ನ್ಯೂನತೆಗಳನ್ನು ಸರಿಪಡಿಸಿದ ಮಾಹಿತಿಯನ್ನು ಲೆಕ್ಕಪರಿಶೋಧನೆಯ ಗಮನಕ್ಕೆ ತರಲು ಸೂಚಿಸಿದೆ.

ವೆಚ್ಚಗಳ ಪರಿಶೀಲನೆ

೩೩.(1) ಸಾದಿಲ್ವಾರು ವೆಚ್ಚಗಳು:-

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1994ರ ನಿಯಮ-3ರಲ್ಲಿ (ಗ್ರಾಮ ಪಂಚಾಯಿತಿ ನಿಧಿಗಳನ್ನು ಬಳಸುವುದು) ಆರ್ಥಿಕ ಅಧಿಕಾರದ ಪ್ರಕಾರ. ಹಾಗೂ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯ ಸುತ್ತೋಲೆ ಸಂಖ್ಯೆ:ಗ್ರಾಅಪ/117/ಜಿಪಸ/2002, ದಿನಾಂಕ : 08-08-2002ರ ಸುತ್ತೋಲೆಗೆ ಲಗತ್ತಿಸಿದ ಕೋಷ್ಟಕದ ಗ್ರಾಮ ಪಂಚಾಯತ ನಿಧಿಗಳನ್ನು ಬಳಸುವದು, ಗ್ರಾಮ ಪಂಚಾಯಿತಿ ನಿಧಿಯಿಂದ ವಹಿಸಬೇಕಾದ ವೆಚ್ಚಗಳಿಗೆ ಮಿತಿಯನ್ನು ನಿಧಿಸಲಾಗಿದ್ದ ಗ್ರಾಮ ಪಂಚಾಯಿತಿಯ ಅಧಿಕಾರ ವ್ಯಾಪ್ತಿಯನ್ನು ಮೀರಿ ವೆಚ್ಚ ಮಾಡಿರುವುದು ಹಾಗೂ ಹೆಚ್ಚುವರಿ ವೆಚ್ಚಕ್ಕೆ ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯಿತಿಗಳ ಪೂರ್ವ ಮಂಜೂರಾತಿ ಪಡೆಯದಿರುವುದು ಕೂಡಾ ಕಂಡುಬಂದಿರುತ್ತದೆ. ನಿಯಮಗಳ ಮಿತಿಯನ್ನು ಉಲ್ಲಂಘಿಸಿ ಖರ್ಚು ಮಾಡಿರುವುದಕ್ಕೆ ಸಂಬಂಧಪಟ್ಟ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯವರು ಸೂಕ್ತ ಸಮಜಾಷಿಯನ್ನು ಕೇಳಲಾಗಿದೆ ಹಾಗೂ ಹೆಚ್ಚುವರಿ ಮಾಡಲಾದ ಖರ್ಚಿಗೆ ಗ್ರಾಮ ಪಂಚಾಯಿತಿ ಹಾಗೂ ಸಕ್ಷಮ ಪ್ರಾಧಿಕಾರಗಳಿಂದ ಘಟನೋತ್ತರ ಮಂಜೂರಾತಿ ಪಡೆಯಲು ಸೂಚಿಸಿದೆ ಹಾಗೂ ಇನ್ನು ಮುಂದೆ ನಿಯಮಾವಳಿಗಳ ಅನ್ವಯ ವೆಚ್ಚ ಮಾಡಲು ಸೂಚಿಸಿದೆ.

ಈ ಕೆಳಕಂಡ ವಹಿಗಳನ್ನು ತಪ್ಪದೆ ನಿರ್ವಹಿಸಲು ತಿಳಿಸಿದೆ.

1) ಅಂಚೆ ವೆಚ್ಚಗಳು (ನಿಯಮ 64)
2) ದೂರವಾಣಿ (ನಿಯಮ 65)
3) ಲೇಖನ ಸಾಮಗ್ರಿ (ನಿಯಮ 66)
4) ಮುದ್ರಣ (ನಿಯಮ 66)
5) ಪೀಠೋಪಕರಣ ಅಥವಾ ಸಾಧನ ಸಾಮಗ್ರಿ (ನಿಯಮ 68)

೩೩.(೨) ವಿದ್ಯುತ್, ನಲ್ಲಿ ಸಾಮಗ್ರಿಗಳ ಖರೀದಿ ಮತ್ತು ಮೋಟಾರ್ ದುರಸ್ಥಿಯ ಬಗ್ಗೆ ನ್ಯೂನತೆಗಳು:

ಪ್ರಸಕ್ತ ಸಾಲಿನಲ್ಲಿ ಗ್ರಾಮ ಪಂಚಾಯಿತಿಯು ತನ್ನ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಾದಿಲ್ವಾರು ಬಿಲ್ಲುಗಳ ಮೂಲಕ ವೆಚ್ಚವನ್ನು ಭರಿಸಿರುತ್ತಾರೆ.

1. ಸಾಮಗ್ರಿಗಳ ಖರೀದಿಗೆ ಮುನ್ನ ಬೇಡಿಕೆ ಪಟ್ಟಿ ತಯಾರಿಸಿ ಗ್ರಾಮ ಪಂಚಾಯಿತಿಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆದ ವಿವರವಿಲ್ಲ.
2. ಹೊಸ ಸಾಮಗ್ರಿಗಳನ್ನು ಅಳವಡಿಸಿದಾಗ ದೊರೆತ ಹಳೆಯ ಸಾಮಗ್ರಿಗಳ ದಾಸ್ತಾನು ವಿವರ ನಿರ್ವಹಿಸಿ ಅನುಪಯುಕ್ತ ಸಾಮಗ್ರಿಗಳನ್ನು ನಿಯಮಾನುಸಾರ ಹರಾಜು ಮಾಡಿ ಬಂದ ಹಣವನ್ನು ಗ್ರಾಮ ಪಂಚಾಯಿತಿ ನಿಧಿಗೆ ಜಮಾ ಮಾಡಿದ ವಿವರ ನೀಡಿರುವುದಿಲ್ಲ.
3. ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಎಷ್ಟು ಬೀದಿ ದೀಪದ ವಿದ್ಯುತ್ ಕಂಬಗಳಿವೆ ಅದರಲ್ಲಿ ಅಳವಡಿಸಿರುವ ಬೀದಿ ದೀಪಗಳ ಉರಿಯುವ ಶಕ್ತಿ ಎಷ್ಟು ಮತ್ತು ಎಷ್ಟು ನೀರು ಸರಬರಾಜು ಸ್ಥಾವರಗಳಿವೆ ಎಷ್ಟು ಸಾರ್ವಜನಿಕ ನಲ್ಲಿಗಳಿವೆ ಎಂಬ ವಿವರ ನೀಡಿರುವುದಿಲ್ಲ.

4. ಖರೀದಿಸಿದ ಸಾಮಗ್ರಿಗಳನ್ನು ಗ್ರಾಮ ಪಂಚಾಯತ ಬಜೆಟ್ ನಿಯಮಗಳು 2006 ರ ನಿಯಮ 70 ರ ಪ್ರಕಾರ ಖರೀದಿ ಸಾಮಗ್ರಿಗಳ ಸ್ವೀಕೃತಿ ಮತ್ತು ನೀಡಿಕೆಗಳನ್ನು ನಮೂನೆ ನಂ. 32 ರಲ್ಲಿ ದಾಖಲಿಸುವುದು ಅಗತ್ಯ. ಆದರೆ. ಸಾಮಗ್ರಿಗಳ ದಾಸ್ತಾನು ಮತ್ತು ವಿತರಣೆ ವಹಿಯನ್ನು ಒಂದು ಸಾಮಾನ್ಯ ವಹಿಯಲ್ಲಿ ನಿರ್ವಹಿಸಿರುತ್ತಾರೆ. ಈ ವಹಿಯ ಪ್ರಕಾರ ಖರೀದಿಸಿದ ಸಾಮಗ್ರಿಗಳಲ್ಲಿ ವರ್ಷಾಂತ್ಯಕ್ಕೆ ಬಾಕಿ ಉಳಿದ ಸಾಮಗ್ರಿಗಳನ್ನು ಭೌತಿಕವಾಗಿ ಎಣಿಕೆ ಮಾಡಿ ಅಧ್ಯಕ್ಷರಿಂದ ದಾಸ್ತಾನು ವಹಿಯಲ್ಲಿ ದೃಢೀಕರಿಸಿರುವುದಿಲ್ಲ.
5. ಮೋಟಾರ್ ಮತ್ತು ಕೈಪಂಪು ದುರಸ್ಥಿಗೆ ಮುನ್ನ ಕೆಟ್ಟು ಹೋಗಿರುವ ಬಗ್ಗೆ ಸಂಬಂಧಿಸಿದ ಮೆಕ್ಯಾನಿಕ್ ಅಥವಾ ವಾಟರ್‌ಮೆನ್‌ನಿಂದಾಗಲಿ ಹಾಗೂ ಸಾರ್ವಜನಿಕರಿಂದಾಗಲಿ ಬಂದ ದೂರು ಇತರೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿಲ್ಲ.
6. ಪೈಪ್‌ಲೈನ್ ಒಡೆದು ಹೋದಾಗ ಆಯಾಯ ಗ್ರಾಮಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ವಾಟರ್‌ಮೆನ್‌ಗಳಿಂದ ಅಥವಾ ಸಾರ್ವಜನಿಕರಿಂದ ಬಂದ ದೂರುಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ.
7. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000 ರ ಅನ್ವಯ 1 ಲಕ್ಷಕ್ಕಿಂತ ಕಡಿಮೆ ಮೌಲ್ಯದ ಸಾಮಗ್ರಿಗಳ ಖರೀದಿಯನ್ನು ಈ ಹಿಂದಿನ ಸರಕಾರದ ನೀತಿ ನಿಯಮಗಳಂತೆ ಪ್ರಕ್ರಿಯ ಜರುಗಿಸಿ, ಖರೀದಿಸುವುದು ಅಗತ್ಯ. 1 ಲಕ್ಷ ರೂಪಾಯಿಗಿಂತ ಕಡಿಮೆ ಮೌಲ್ಯದ ಸಾಮಗ್ರಿಗಳ ಖರೀದಿಗೆ ಸರಕಾರದ ಆದೇಶ ಸಂಖ್ಯೆ : ಎಫ್‌ಡಿ9/ಪಿಸಿಎಲ್/2004(11), ದಿನಾಂಕ : 06-08-2005 ರ ಅನುಬಂಧದಲ್ಲಿ ನಿಗದಿಪಡಿಸಿರುವ ನಮೂನೆಗಳಾದ ಕೆ.ಕ್ಯೂ.-1, ಕೆ.ಕ್ಯೂ.-2ಗಳಲ್ಲಿ ಸ್ಪರ್ಧಾತ್ಮಕ ದರಪಟ್ಟಿ ಪಡೆದು ಕಡಿಮೆ ದರ ನಮೂದಿಸಿದ ಪೂರೈಕೆದಾರರಿಗೆ ಪೂರೈಕೆ ಆದೇಶ ನೀಡುವುದು ಅಗತ್ಯ. ಆದರೆ, ಸದರ ಗ್ರಾಮ ಪಂಚಾಯತಿಯಿಂದ ಖರೀದಿ ಪ್ರಕ್ರಿಯೆಯಲ್ಲಿ ಸರಕಾರದ ಯಾವ ನಿಯಮಗಳನ್ನು ಪಾಲಿಸಲಾಗಿಲ್ಲ. ಆ ಕ್ರಮ ಆಗಿರುವ ಬಗ್ಗೆ ದಾಖಲೆಗಳನ್ನು ಪಾಲಿಸಿರುವ ಬಗ್ಗೆ ಮಾಹಿತಿ ಒದಗಿಸಿಲ್ಲ
8. ಸಬಮರ್ಷಿಬಲ್ ಮೋಟಾರು ರಿಪೇರಿ ಬಿಲ್‌ಗಳನ್ನು ಪಾವತಿಸುವ ಸಮಯದಲ್ಲಿ ಬಿಲ್ ಮೊತ್ತದಲ್ಲಿ ಬಿಡಿ ಭಾಗಗಳಾದ ತಾಮ್ರದ ತಂತಿ ಮೌಲ್ಯದ ಮೊತ್ತವನ್ನು ಕಡಿತಗೊಳಿಸಿರುವುದಿಲ್ಲ. ಇದರಿಂದ ಫರ್ಮದವರಿಗೆ ಹೆಚ್ಚಿನ ಪಾವತಿಯಾಗಿರುತ್ತದೆ. ಇನ್ನು ಮುಂದೆ ಸಬಮರ್ಷಿಬಲ್ ಮೋಟಾರು ರಿಪೇರಿ ಬಿಲ್‌ಗಳನ್ನು ಪಾವತಿಸುವ ಸಮಯದಲ್ಲಿ ಬಿಡಿ ಭಾಗಗಳ (ತಾಮ್ರ) ಮೊತ್ತ ಸಂಬಂಧಿಸಿದ ಫರ್ಮದವರಿಂದ ಕಡಿತ ಗೊಳಿಸಲು ಸೂಚಿಸಿದೆ ತಪ್ಪಿದಲ್ಲಿ ಸಂಬಂಧಿಸಿದ ಸಿಬ್ಬಂಧಿವರ್ಗದವರಿಗೆ ವಸೂಲತಿಗೆ ಸೂಚಿಸಲಾಗುವುದು.

ಈ ಮೇಲಿನ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವಂತೆ ಹಾಗೂ ನಿಯಮಗಳನ್ನು ಅನುಸರಿಸಿ ನಿರ್ವಹಿಸುವಂತೆ ಹಿಂದಿನ ಸಾಲುಗಳ ಲೆಕ್ಕ ತನಿಖಾ ವರದಿಗಳಲ್ಲಿ ಸೂಚಿಸುತ್ತ ಬಂದಿದ್ದರೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಈ ಬಗ್ಗೆ ಸೂಕ್ತ ವಿವರಣೆ ನೀಡಲು ವರದಿಯು ಸೂಚಿಸಿದೆ.

೩೩.(೩) ಪಾವತಿ ಬಿಲ್ಲುಗಳ ಮೂಲದಲ್ಲಿ ತೆರಿಗೆ ಕಡಿತಗೊಳಿಸುವ ಬಗ್ಗೆ:-

ಗ್ರಾಮ ಪಂಚಾಯಿತಿ ವಿದ್ಯುತ್ ಸಾಮಗ್ರಿ/ ಕುಡಿಯುವ ನೀರು ಸರಬರಾಜು ಸಾಮಗ್ರಿಗಳು/ ಪಂಪ್‌ಸೆಟ್‌ಗಳು/ ಲೇಖನ ಸಾಮಗ್ರಿಗಳನ್ನು ಮತ್ತು ಇತ್ಯಾದಿ ಖರೀದಿಗಳ ಬಿಲ್ಲು ಪಾವತಿಸುವ ಸಂದರ್ಭದಲ್ಲಿ ಕರ್ನಾಟಕ ಮಾರಾಟ ತೆರಿಗೆ ಕಾಯಿದೆ ಹಾಗೂ ಭಾರತೀಯ ವರಮಾನ ತೆರಿಗೆ ಕಾಯಿದೆಗಳ ಪ್ರಕಾರ ಮೂಲದಲ್ಲಿ ಮಾರಾಟ ತೆರಿಗೆ ಹಾಗೂ ವರಮಾನ ತೆರಿಗೆ ಹಾಗೂ ವರಮಾನ ತೆರಿಗೆಯನ್ನು ಕಡಿತಗೊಳಿಸಿರುವುದಿಲ್ಲ ಆದ ಕಾರಣ ಈ ಬಗ್ಗೆ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯವರು ಕ್ರಮ ಕೈಗೊಂಡು 2016-17ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಯಿಂದ ಹಣ ಪಡೆದಿರುವ ಸಂಸ್ಥೆಗಳಿಂದ ತೆರಿಗೆ ಕಡಿತ ಮಾಡುವ ಬಗ್ಗೆ ಕ್ರಮ ವಹಿಸಲು ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯವರಿಗೆ ತಿಳಿಸಲಾಗಿದೆ.

೩೪. ಇಂದಿರಾ ಆವಾಸ್ ಯೋಜನೆ :-

ಗ್ರಾಮ ವಾಸಿ ಬಡಜನರಿಗೆ ವಸತಿ ಸೌಕರ್ಯಕ್ಕಾಗಿ ಸಹಾಯಧನದೊಡನೆ ಪ್ರೋತ್ಸಾಹಿಸಲು ಮತ್ತು ಗುಡಿಸಲು ರಹಿತ ಗ್ರಾಮಗಳಾಗಿ ಪರಿವರ್ತಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿಪಿ 14 ಐಐವೈ 99 ದಿನಾಂಕ 11-1-2000 ಮತ್ತು ದಿನಾಂಕ 5-5-2000ರ ಸರ್ಕಾರದ ಆದೇಶಸಂಖ್ಯೆ: ಗ್ರಾಅಪ 47 ಐಐವೈ 2000 ಗಳಲ್ಲಿ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯ ಕಡತಗಳನ್ನು ತನಿಖೆಗೆ ಹಾಜರುಪಡಿಸಿದ ಕಾರಣ ಪರಿಶೀಲಿಸಿರುವುದಿಲ್ಲ.

೩೫. ಇತರೆ ಯೋಜನೆಗಳ ಕಡತಗಳನ್ನು ಕುರಿತು.

(1)ನಿರ್ಮಲ ಭಾರತ ಅಭಿಯಾನ:

ದಿನಾಂಕ 01-04-2012 ರಿಂದ ಸಂಪೂರ್ಣ ಸ್ವಚ್ಛತಾ ಆಂದೋಲನ ಯೋಜನೆಯ ಹೆಸರನ್ನು **"ನಿರ್ಮಲ ಭಾರತ ಅಭಿಯಾನ"** ಎಂದು ಜಾರಿಗೆ ತರಲಾಗಿದೆ. ಅರ್ಹ ಫಲಾನುಭವಿಗಳನ್ನು ಗ್ರಾಮ ಪಂಚಾಯತ್ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು ಸದರಿ ಯೋಜನೆಯ ಮಾರ್ಗ ಸೂಚಿಗಳ ಪ್ರಕಾರ ಆಯ್ಕೆ ಮಾಡಿ ನಿಯಾಮನುಸಾರ ದಾಖಲಾತಿಗಳನ್ನು ಪಡೆದು ಪಾವತಿಗೆ ಕ್ರಮವಹಿಸುವುದು.

೩೫.(೨) .ರಾಜೀವ್ ಗಾಂಧಿ ಗ್ರಾಮೀಣ ವಸತಿ ಯೋಜನೆ:

ಈ ಹಿಂದೆ ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ಮನೆ ನಿರ್ಮಿಸಿಕೊಳ್ಳಲು ಮತ್ತು ದುರಸ್ತಿಗೊಳಿಸಲು ಸಹಾಯಧನವನ್ನು ನೀಡುತ್ತಿದ್ದ ಯೋಜನೆಗಳನ್ನು ರಾಜೀವ್‌ಗಾಂಧಿ ಗ್ರಾಮೀಣ ವಸತಿ ಯೋಜನೆಯಡಿ ಮುಂದುವರೆಸಿರುವುದು ಕಂಡುಬಂದಿದೆ. ಸದರಿ ಯೋಜನೆಯಡಿ ಸ್ವಂತ ಜಾಗ ಇರುವಂತಹ ವಸತಿಹೀನ ಫಲಾನುಭವಿಗಳನ್ನು ಆಯ್ಕೆಮಾಡಿ ಗ್ರಾಮಪಂಚಾಯಿತಿ ನಡವಳಿ ಮೂಲಕ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದು ಪ್ರತಿಮನೆ ನಿರ್ಮಾಣಕ್ಕೆ ನಿಗಧಿಪಡಿಸಿರುವಂತೆ ದಾಖಲಾತಿ ಪಡೆದು ಪಾವತಿಗೆ ಕ್ರಮವಹಿಸುವುದು.

೩೬. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005ರ 4ನೇ ಪ್ರಕರಣದಡಿ, ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ. ಗ್ರಾಅಪ/41/ರಾಗ್ರಾಉ/06 ದಿನಾಂಕ 1-2-2007 ರಲ್ಲಿ ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ರಾಮನಗರ ಜಿಲ್ಲೆಯಲ್ಲಿ ದಿನಾಂಕ 1-4-2008 ರಿಂದ ಕಾಯ್ದೆಯನ್ವಯ ಅನುಷ್ಠಾನಗೊಳಿಸಲಾಗಿದೆ. ರಾಜ್ಯದ ಅಧಿಸೂಚಿತ ಜಿಲ್ಲೆಗಳಲ್ಲಿ ಸ್ವಯಂ ಪ್ರೇರಣೆಯಿಂದ ಅರ್ಜಿ ಸಲ್ಲಿಸುವ ಮೂಲಕ ಅಕುಶಲ ದೈಹಿಕ ಕೆಲಸ ಬಯಸುವ ಗ್ರಾಮೀಣ ಪ್ರದೇಶದ ವಯಸ್ಕ ಸದಸ್ಯರ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ಮಟ್ಟದಲ್ಲಿ ಕನಿಷ್ಠ 100 ದಿನಗಳ ಖಾತರಿ ಉದ್ಯೋಗವನ್ನು ಒದಗಿಸಿ ಅವರ ಜೀವನಕ್ಕೆ ಭದ್ರತೆ ಒದಗಿಸುವುದು ಹಾಗೂ ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸುವುದು ಮತ್ತು ಗ್ರಾಮೀಣ ಬಡವರ ಜೀವನೋಪಾಯದ ಸಂಪನ್ಮೂಲ ಆಧಾರಗಳನ್ನು ಬಲಪಡಿಸುವುದು ಮುಖ್ಯ ಉದ್ದೇಶವಾಗಿದೆ. ಸದರಿ ಅಧಿಸೂಚನೆಯ ಕಂಡಿಕೆ (19) ರಂತೆ ಗ್ರಾಮ ಪಂಚಾಯಿತಿಗಳಿಗೆ ಸರ್ಕಾರ ಬಿಡುಗಡೆ ಮಾಡುವ ಅನುದಾನವನ್ನು ನಿಯಮಾನುಸಾರ ಹಾಗೂ ಸಮರ್ಪಕವಾಗಿ ಬಳಕೆ ಮಾಡಿರುವುದರ ಬಗ್ಗೆ ಶಾಸನಬದ್ಧ ಅಧಿಕಾರಿಯಾಗಿ ಲೆಕ್ಕ ಪರಿಶೋಧನೆ ಕೈಗೊಳ್ಳಲಾಗಿದೆ.

1	ಪ್ರಾರಂಭಿಕ ಶಿಲ್ಕು (ಆಡಳಿತ ಖಾತೆ)	17027
2	2016-17ನೇ ಸಾಲಿನಲ್ಲಿ ಜಮಾ ಅ) ಅನುದಾನ ಆ) ಬಡ್ಡಿ & ಇತರೆ	 0 580
	ಒಟ್ಟು	**17607**
3	2016-17ನೇ ಸಾಲಿನಲ್ಲಿ ಆದ ವೆಚ್ಚ	17059
4	31-3-2017ರ ಅಂತ್ಯಕ್ಕೆ ಅಂತಿಮ ಶಿಲ್ಕು	549

೩೬. ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಅಕುಶಲ-ಕಾರ್ಮಿಕರಿಗೆ ಇ.ಎಫ್.ಎಮ್.ಎಸ್ ಮುಖಾಂತರ ಸಂದಾಯ ಮಾಡಿದ ಮೊತ್ತಕ್ಕೆ ನಗದು ಪುಸ್ತಕವನ್ನು ನಿರ್ವಹಿಸುವ ಕುರಿತು

2016-17ನೇ ಸಾಲಿನ ಎಂ.ಐ.ಎಸ್. (Monitoring Information System) ನಲ್ಲಿ ದಾಖಲಿಸಿದ ಅಕುಶಲ ಕಾರ್ಮಿಕರ ಹಾಗೂ ಸಾಮಗ್ರಿ ವೆಚ್ಚದ ಕುರಿತಂತೆ ಪರಿಶೀಲಿಸಲಾಗಿದ್ದು, ಅಕುಶಲ ಕಾರ್ಮಿಕರ ಕೂಲಿಯನ್ನು ಅವರ ಬ್ಯಾಂಕ್ ಖಾತೆಗಳಿಗೆ ದಿನಾಂಕ:01-06-2012 ರಿಂದ ಜಾರಿಗೆ ಬಂದಿರುವಂತೆ ಅಕುಶಲ ಕಾರ್ಮಿಕರ ಕೂಲಿ & ಸಾಮಗ್ರಿ ವೆಚ್ಚದ ವಿವರವನ್ನು ವೇತನವನ್ನು ಅವರಿಗಳ ಬ್ಯಾಂಕ ಖಾತೆಗಳಿಗೆ ನೇರವಾಗಿ (Electronic Fund Management System) ಜಮೆ ಮಾಡಲಾಗುತ್ತಿದ್ದು, ಸದರಿ ಸಂದಾಯಗಳನ್ನು ಎಂ. ಐ. ಎಸ್. ನಲ್ಲಿ ಅಳವಡಿಸಲಾಗಿರುತ್ತದೆ. ಈ ಕುರಿತಂತೆ ಪರಿಶೀಲಿಸಲಾಗಿ ಗ್ರಾಮ ಪಂಚಾಯತಿಯು ನಗದು ವಹಿಯನ್ನು ಸಾಮನ್ಯ ವಹಿಯಲ್ಲಿ ಅಕುಶಲ ಕಾರ್ಮಿಕರ ಹಾಗೂ ಸಾಮಗ್ರಿ ವೆಚ್ಚದ ಸಂದಾಯ ಮಾಡಲಾದ ಸಂದಾಯಗಳನ್ನು ಪ್ರತ್ಯಕ ವಾಗಿ ನಗದು ವಹಿಯನ್ನು ನಿರ್ವಹಿಸಲಾಗಿದ್ದು ಒಂದು ಕಾಮಗಾರಿಗೆ ಸಂಬಂದಿಸಿದಂತೆ ಬಿಲ್ಲಿನಲ್ಲಿ ಶಾಸನಬದ್ದ ಕಡತಗಳು ವಿವರಣೆಯನ್ನು ದಾಖಿಸಿರುವುದಿಲ್ಲ ಹಾಗೂ ಮಾಹೆವಾರು ಘೋಷ್ಟರೆ ದಾಖಾಲಿಸಿರುವುದಿಲ್ಲಾ ಅದರು ಸಹ ದೂರೆತ ಮಾಹಿತಿಯಂತೆ (Throuse E.F.M.S. Payment) ಕಾರ್ಮಿಕರಿಗೆ ನೇರವಾಗಿ ಬ್ಯಾಂಕ ಖಾತೆಗಳಿಗೆ ಜಮೆ ಮಾಡಿದ ಸಂದಾಯಗಳ ವಿವರಗಳನ್ನು ಕುರಿತಂತೆ ವೆಚ್ಚವಾದ ಮೊತ್ತ ಈ ಕೆಳಕಂಡತಿದೆ.

ಬಿಡುಗಡೆಯಾದ ಮೊತ್ತ	ಸಂದಾಯವಾದ ಮೊತ್ತ
ಲಕ್ಷ	ಲಕ್ಷ

೩೭. ಯೋಜನೆಯ ಅನುಷ್ಠಾನದಲ್ಲಿನ ಪ್ರಮುಖ ನ್ಯೂನತೆಗಳು:

(1) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ :

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು, ಇದು ಕೇಂದ್ರ ಸರಕಾರದ ಅಧಿನಿಯಮ 2005 ಹಾಗೂ ರಾಜ್ಯ ಸರಕಾರದ ಅಧಿಸೂಚನೆ ಸಂಖ್ಯೆ : ಗ್ರಾಪಪಂ/41/ರಾಗ್ರಾಉ/06/ಬೆಂಗಳೂರು ದಿನಾಂಕ:01-02-2007 ರನ್ವಯ ಅಕುಶಲ ದೈಹಿಕ ಕೆಲಸ ಮಾಡಲು ಇಚ್ಛಿಸುವ ಗ್ರಾಮೀಣ ಪ್ರದೇಶದಲ್ಲಿನ ವಯಸ್ಕರರಿಗೆ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ 100 ದಿನಗಳ ಖಾತ್ರಿ ಉದ್ಯೋಗ ಒಗದಿಸುವದು ಈ ಯೋಜನೆ ಮುಖ್ಯ ಉದ್ದೇಶ. ಇದು ಕೇಂದ್ರ ಹಾಗೂ ರಾಜ್ಯ ಸರಕಾರದ 90:10 ರ ಅನುಪಾತದಲ್ಲಿ ಅನುದಾನವನ್ನು ಒದಗಿಸುವ ಮೂಲಕ ಪ್ರಾಯೋಜಿತ ಯೋಜನೆಯಾಗಿದೆ. ಸದರ ಯೋಜನೆಯಿಂದ ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸುವದು ಹಾಗೂ ಗ್ರಾಮೀಣ ಬಡಜನರ ಜೀವನೋಪಾಯದ ಸಂಪನ್ಮೂಲ ಆಧಾರದ ಬಲಪಡಿಸುವದು, ಈ ಯೋಜನೆಯ ಮುಖ್ಯ ಉದ್ದೇಶಗಳಾಗಿವೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಧಿನಿಯಮ 2005 ಪ್ರಕರಣ 13 ಹಾಗೂ ರಾಜ್ಯ ಸರಕಾರದ ಅಧಿಸೂಚನೆ ಸಂಖ್ಯೆ : ಗ್ರಾಪಪಂ/41/ರಾಗ್ರಾಉ/06/ಬೆಂಗಳೂರು ದಿನಾಂಕ : 01-02-2007 ರ ಖಂಡಿಕೆ 13 ರ ಪ್ರಕಾರ ಸದರ ಯೋಜನೆಯಡಿಯಲ್ಲಿ ಸ್ಷಕ್ಷಮ ಪ್ರಾಧಿಕಾರದಿಂದ ತಾಂತ್ರಿಕವಾಗಿ ಅನೂಮೋದನೆಗೊಂಡ ಗ್ರಾಮ ಸಭೆಯಲ್ಲಿ ಗುರ್ತಿಸಲಾದ ಹಾಗೂ ಗ್ರಾಮ ಪಂಚಾಯತದಿಂದ ಅನುಮೋದನೆಯಾದ, ತಾಲೂಕಾ ಪಂಚಾಯತ ಕಾರ್ಯಕ್ರಮ ಅಧಿಕಾರಿಯಿಂದ ಪರಿಶೀಲನೆ ನಂತರ ಕ್ರೋಢಿಕೃತಗೊಂಡ, ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿಗಳಿಂದ ಅಂತಿಮವಾಗಿ ಅನುಮೋದನೆಗೊಂಡ ಯೋಜನೆಗಳ ಪಟ್ಟಿ (Shelf of project) ಯಲ್ಲಿಯ ಕಾಮಗಾರಿಗಳನ್ನು ಮಾತ್ರ ಗ್ರಾಮ ಪಂಚಾಯತದಿಂದ ನಿರ್ವಹಿಸಬೇಕಾಗುತ್ತದೆ. ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿಗಳು ಈ ಎಲ್ಲ ಕಾರ್ಯಕ್ರಮಗಳಿ ಆಡಳಿತಾತ್ಮಕ ಅನುಮೋದನೆಯ ನೀಡಿ ಪಟ್ಟಿಯಲ್ಲಿಯ ಎಲ್ಲ ಕಾಮಗಾರಿಗಳಿಗೆ ಪ್ರತ್ಯೇಕವಾದ ಸಂಖ್ಯೆಗಳನ್ನು ನೀಡುವದು ಅಗತ್ಯ. ಮುಂದಿನ ವರ್ಷಕ್ಕೆ ಅನುಷ್ಠಾನಗೊಳ್ಳಬೇಕಾದ ಯೋಜನೆಗಳ ಪಟ್ಟಿಯನ್ನು ಸದರ ನಿಯಮಗಳನ್ವಯ ಹಿಂದಿನ ವರ್ಷದ ಡಿಸೆಂಬರ ಅಂತ್ಯದೊಳಗಾಗಿ ಅನುಮೋದನೆಯ ಪಡೆಯುವದು ಅಗತ್ಯ.

೨). ಯೋಜನೆಯ ಕಾಮಗಾರಿಗಳ ರಿಜಿಸ್ಟರ ಹಾಗೂ ಆಸ್ತಿ ರಿಜಿಸ್ಟರ ನಿರ್ವಹಣೆ:

ಈ ಯೋಜನೆಯ ಕೇಂದ್ರ ಸರಕಾರದ 2008 ರ ಮಾರ್ಗಸೂಚಿಗಳು 9.1 ಹಾಗೂ ರಾಜ್ಯ ಸರಕಾರದ ದಿನಾಂಕ : 01-02-2007 ರ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯ ಅಧಿಸೂಚನೆ ಖಂಡಿಕೆ 18 ರ ಪ್ರಕಾರ ಅನುಷ್ಠಾನ ಅಧಿಕಾರಿಗಳು / ಗ್ರಾಮ ಪಂಚಾಯತದಿಂದ ಯೋಜನೆಯಡಿಯಲ್ಲಿ ಕೈಕೊಂಡ ಎಲ್ಲ ಕಾಮಗಾರಿಗಳ ವಿವರವನ್ನು ನೀಡುವಂತಹ ರಜಿಸ್ಟರನ್ನು ಹಾಗೂ ಸೃಜನಗೊಂಡ ಆಸ್ತಿಯ ದಾಖಲೆಗಳನ್ನು ಕಾಮಗಾರಿ ಪೂರ್ಣಗೊಂಡ ಪ್ರಮಾಣ ಪತ್ರದೊಂದಿಗೆ ನಿಗದಿಪಡಿಸಿದ ನಮೂನೆಯಲ್ಲಿ ರಜಿಸ್ಟರ ನಿರ್ವಹಿಸುವದು ಅಗತ್ಯ.

೩) ಸಾಮಾಜಿಕ ಪರಿಶೋಧನೆ (Social Audit) :

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಧಿನಿಯಮ 2005 ಪ್ರಕರಣ 17 (2) ರ ಅನ್ವಯ ಹಾಗೂ ರಾಜ್ಯ ಸರಕಾರದ ಗ್ರಾಮೀಣ ಪಂಚಾಯತ ರಾಜ್ ಇಲಾಖೆಯ ದಿನಾಂಕ : 01-02-2007 ರ ಅಧಿಸೂಚನೆ ಖಂಡಿಕೆ 19 ರ ಪ್ರಕಾರ ಗ್ರಾಮ ಸಭೆಯಿಂದ ಈ ಯೋಜನೆ ಅಡಿಯಲ್ಲಿ ಬರುವ ಎಲ್ಲ ಕಾಮಗಾರಿಗಳ "ಸಾಮಾಜಿಕ ಪರಿಶೋಧನೆ" ಯನ್ನು ಅವಶ್ಯವಾದ ದಾಖಲಾತಿಗಳನ್ನು ಗ್ರಾಮ ಪಂಚಾಯ ಪಡೆದು ಪಾರದರ್ಶಕ ಹಾಗೂ ಜವಾಬ್ದಾರಿಯುತವಾಗಿ ನಿರ್ವಹಿಸುವದು ಅತಿ ಅವಶ್ಯಕವಾಗಿರುತ್ತದೆ. ಅಲ್ಲದೆ ಅದರ ವರದಿಯನ್ನು ಪಂಚಾಯತದಿಂದ ಅನುಮೋಧಿಸುವದು ಅಗತ್ಯ. ಅಲ್ಲದೇ 2005 ರ ಅಧಿನಿಯಮ ಪ್ರಕರಣ 5(ಡ) ಪ್ರಕಾರ ತಾಲೂಕಿನ ಯೋಜನಾ ಕಾರ್ಯಕ್ರಮ ಅಧಿಕಾರಿಗಳು ಸಾಮಾಜಿಕ ಪರಿಶೋಧನೆ ಕೆಲಸವು ಕ್ರಮವಾಗಿ ನಡೆಯುವಂತೆ ನೋಡಿಕೊಳ್ಳುವದು ಅವರ ಕರ್ತವ್ಯಗಳಲ್ಲಿ ಒಂದಾಗಿರುತ್ತದೆ.

4) ಜಾಗೃತಿ ಮತ್ತು ಗುಣನಿಯಂತ್ರಣ ತಂಡಗಳಿಂದ ಕಾಮಗಾರಿ ಪರಿಶೀಲನೆ :

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ 2008 ರ ಮಾರ್ಗ ಸೂಚಿ ಪ್ಯಾರಾ 10 ರ ಪ್ರಕಾರ ಹಾಗೂ ರಾಜ್ಯ ಸರಕಾರದ ಗ್ರಾಮೀಣ ಪಂಚಾಯತ ಇಲಾಖೆಯ ಅಧಿಸೂಚನೆಯ ದಿನಾಂಕ : 01-02-2007 ರ ಕಂಡಿಕೆ 20 ರ ಪ್ರಕಾರ ಈ ಯೋಜನೆಯನ್ನು ವ್ಯವಸ್ಥಿತವಾಗಿ ಅನುಷ್ಠಾನ ತರಲು ಯೋಜನೆಯ ಮೇಲ್ವಿಚರಣೆ ಮಾಡಲು ಸ್ವತಂತ್ರವಾದ" ಜಾಗೃತಿ ಮತ್ತು ಗುಣನಿಯಂತ್ರಣ" ತಂಡ ರಚಿಸಿ ಅದರಿಂದ ಎಲ್ಲ ಕಾಮಗಾರಿಗಳ ಮೇಲ್ವಚಾರಣೆ ಕೈಕೊಳ್ಳುವದು ಅಗತ್ಯ. ಅಥವಾ ಅಧಿಸೂಚನೆಯಲ್ಲಿ ಸೂಚಿಸಿದಂತೆ ಕರ್ನಾಟಕ ಗ್ರಾಮ ಪಂಚಾಯತ ಅಧಿನಿಯಮ 61(ಎ) ಅಡಿಯಲ್ಲಿ ಪ್ರತಿ ಗ್ರಾಮಕ್ಕೆ ರಚಿಸಲಾಗಿರುವ ಗ್ರಾಮೀಣ ನೀರು ಮತ್ತು ನೈರ್ಮಲ್ಯ ಸಮೀತಿ, ಈ ಯೋಜನೆಯಡಿಲ್ಲಿ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯಾಗಿ ಕೆಲಸ ನಿರ್ವಹಿಸತಕ್ಕದ್ದು ಎಂದು ನಿಯಮ ಇದೆ.

5) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅನುದಾನವನ್ನು ಉಪಯೋಗಿಸುವ ಕುರಿತು :

ಈ ಯೋಜನೆಯ ಕೇಂದ್ರ ಸರಕಾರದ 2008 ರ ಮಾರ್ಗಸೂಚಿ ಪ್ಯಾರಾ 8.5.5 ರ ಪ್ರಕಾರ ಹಾಗೂ ರಾಜ್ಯ ಸರಕಾರದ ದಿನಾಂಕ:01-02-2007 ರ ಅಂಶಗಳ ಪ್ರಕಾರ ಯೋಜನೆಗೆ ಬಿಡುಗೆಯಾದ ಅನುದಾನವನ್ನು ಯೋಜನಾ ಪಟ್ಟಿಯಲ್ಲಿ ಅನುಮೋದನೆಯಾದ ಕಾಮಗಾರಿಗಳಿಗೆ ಮಾತ್ರ ಹಾಗೂ ನಿಯಮಗಳಲ್ಲಿ ನಿಗದಿಪಡಿಸಿದ ಅಂಶಗಳಿಗೆ ಮಾತ್ರ ಪಾವತಿ ಮಾಡಬೇಕಾಗುತ್ತದೆ. ಅನುದಾನವನ್ನು ಬೇರೆ ಯೋಜನೆ ಕಾಮಗಾರಿಗಳಿಗೆ ಪಾವತಿ ಮಾಡಿದ್ದಲ್ಲಿ ಅಥವಾ ವರ್ಗಾವನೆ ಮಾಡಿದ್ದಲ್ಲಿ ಅದನ್ನು ದುರುಪಯೋಗ ಪ್ರಕರಣವೆಂದು ಪರಿಗಣಿಸಲು ಅವಕಾಶವಿರುತ್ತದೆ.

೬) ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ ಮಾಡುವುದು :

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ 2008 ರ ಮಾರ್ಗ ಸೂಚಿಗಳು ಪ್ಯಾರಾ 10.3 ರ ಪ್ರಕಾರ ಹಾಗೂ ರಾಜ್ಯ ಸರಕಾರದ ಗ್ರಾಮೀಣ ಹಾಗೂ ಪಂಚಾಯತ ರಾಜ್ ಇಲಾಖೆಯ ದಿನಾಂಕ: 01-02-2007 ರ ಅಧಿಸೂಚನೆಯ ಖಂಡಿಕೆಯ 22 ರ ಪ್ರಕಾರ ಹಾಗೂ ಸದರ ಇಲಾಖೆಯ ದಿನಾಂಕ: 28-03-2009 ರ ಅನಧಿಕೃತ ಟಿಪ್ಪಣಿಯಲ್ಲಿ ನೀಡಿದ ಮಾರ್ಗಸೂಚಿಗಳ ಪ್ರಕಾರ, ಈ ಯೋಜನೆಯಡಿಯಲ್ಲಿ ಅನುಷ್ಠಾನಗೊಳ್ಳುವ ಕಾಮಗಾರಿಗಳಲ್ಲಿ 100% ಕಾಮಗಾರಿಗಳನ್ನು ತಾಲೂಕಾ ಮಟ್ಟದ ಅಧಿಕಾರಿಗಳನ್ನು, ಕನಿಷ್ಠ 10% ಕಾಮಗಾರಿಗಳನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು, 2% ಕಾಮಗಾರಿಗಳನ್ನು ರಾಜ್ಯ ಮಟ್ಟದ ಅಧಿಕಾರಿಗಳು ತಪಾಸಣೆ ಮಾಡುವದು ಅಗತ್ಯವಾಗಿರುತ್ತದೆ. ತಾಲ್ಲೂಕು ಮಟ್ಟದ ಅಧಿಕಾರಿಗಳು 100% ತಪಾಸಣೆಯ ದೃಢೀಕರಣ ನಂತರವೇ ಗ್ರಾಮ ಪಂಚಾಯತದಿಂದ ಯೋಜನೆಯ ಬಿಲ್ಲುಗಳನ್ನು ಪಾವತಿಸುವದು ಅಗತ್ಯ.

7) ಕಾಮಗಾರಿಗಳಲ್ಲಿ ಅಕುಶಲ ಕೂಲಿ ಹಾಗೂ ಸಾಮಗ್ರಿ ವೆಚ್ಚ ಪ್ರಮಾಣ ನಿರ್ವಹಣೆ ಕುರಿತು :

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯ ಯೋಜನೆ ಕೇಂದ್ರ ಸರಕಾರದ 2013 ರ ಮಾರ್ಗ ಸೂಚಿಕೆಗಳು ಖಂಡಿಕೆ 6.2 ಹಾಗೂ 8.4 ಹಾಗೂ ಅಧಿನಿಯಮ 2005 ಷೆಡ್ಯೂಲ I ರ ಪ್ರಕಾರ ಕಾಮಗಾರಿಗಳು ಕಡ್ಡಾಯವಾಗಿ 60% ಅಕುಶಲ ಕೂಲಿ ಹಾಗೂ 40% ಸಾಮಗ್ರಿ ವೆಚ್ಚಗಳನ್ನು ಒಳಗೊಂಡಿರುವದು ಅವಶ್ಯ ಯಾವುದೇ ಕಾರಣಕ್ಕೂ ಕೂಲಿಯ 60% ಪ್ರಮಾಣವು ಕಡಿಮೆಯಾಗ ಕೂಡದು. ಗ್ರಾಮೀಣ ಭಾಗದ ಜನರಿಗೆ ಅಕುಶಲ ಕೂಲಿ ಒದಗಿಸುವದೇ ಈ ಯೋಜನೆಯ ಮುಖ್ಯ ಉದ್ದೇಶ. ಅದಕ್ಕಾಗಿ ನಿಯಮಗಳನ್ವಯ ಈ ಪ್ರಮಾಣಗಳನ್ನು ನಿರ್ವಹಿಸುವದು ಅವಶ್ಯವಾಗಿದೆ.

8) ಸಾಮಗ್ರಿಗಳ ವೆಚ್ಚದ ಬಿಲ್ಲಿನಲ್ಲಿ ಖರೀದಿಸಿದ ಸಾಮಗ್ರಿಗಳಿಗೆ ಉಪಯೋಗ ಪಟ್ಟಿ (Consumption Statement) ಪಟ್ಟಿ ಲಗತ್ತಿಸುವುದು :

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಧಿನಿಯಮ 2005 ರ ಪ್ರಕರಣ 16(8) ಸೆಡ್ಯೂಲ-I(14) ರ ಖಂಡಿಕೆ ಪ್ರಕಾರ ಯೋಜನೆಯಡಿಯಲ್ಲಿ ಅನುಷ್ಠಾನಗೊಳ್ಳುವ ಎಲ್ಲ ಕಾಮಗಾರಿಗಳು ತಾಂತ್ರಿಕವಾಗಿ, ತಾಂತ್ರಿಕ ಮಟ್ಟ, ಅಳತೆಗಳು, ಗುಣ, ಪ್ರಮಾಣಗಳನ್ನು ನಿಯಮಗಳನ್ವಯ ವ್ಯವಸ್ಥಿತವಾಗಿ ಹೊಂದಿರುವುದು ಅಗತ್ಯ. ಸದರ ಯೋಜನೆಯ ಎಲ್ಲ ಕಾಮಗಾರಿಗಳ ಎಲ್ಲ ಅಳತೆಗಳಿಗೆ ಸೂಕ್ತ ಪ್ರಾಧಿಕಾರದಿಂದ ನಿಗದಿಪಡಿಸಿದ ಪ್ರಮಾಣದಲ್ಲಿ ಚೆಕ್ಕ ಮೆಜಮೆಂಟ್ ರುಜು ಅಳತೆ ಪುಸ್ತಕಗಳಲ್ಲಿ ನಮೂದಿಸುವುದು ಅಗತ್ಯ. ಪರಿಶೀಲನಾ ರುಜು ಇಲ್ಲದೆ ಬಿಲ್ಲು ಪಾವತಿಸುವದು ನಿಯಮ ಬಾಹಿರವಾಗಿರುತ್ತದೆ.

ಯೋಜನೆಯ ಅಡಿಯಲ್ಲಿ ನಿರ್ವಹಿಸಿದ ಕಾಮಗಾರಿಗಳ ಸಾಮಗ್ರಿಗಳ ಬಿಲ್ಲನ್ನು ಪಾವತಿಸುವಾಗ ಖರೀದಿಸಿದ ಸಾಮಗ್ರಿಗಳಾದ ಕಲ್ಲು, ಮೆಟಲ್, ಮುರ್ರಮ್, ಸಿಮೆಂಟ್, ಇಟ್ಟಂಗಿ ಮುಂತಾದ ಸಾಮಗ್ರಿಗಳಿಗೆ ಖರೀದಿಸಿದ ಒಟ್ಟು ಪ್ರಮಾಣಕ್ಕೆ ತಕ್ಕಂತೆ ಕಾಮಗಾರಿಯ ವಿವಿಧ ಐಟಂಗಳಲ್ಲಿ ಸಾಮಗ್ರಿ ಉಪಯೋಗಿಸಿದ ಕುರಿತು, ಉಪಯೋಗ ಪಟ್ಟಿಯನ್ನು ತಾಂತ್ರಿಕ(ಕಾನ್ಸ್ಟಟಂಟ್) ಆಧಾರದ ಮೇಲೆ ತಯಾರಿಸಿ ಬಿಲ್ಲಿಗೆ ಲಗತ್ತಿಸುವದು ಅಗತ್ಯ. ಈ ಪಟ್ಟಿಯ ತಯಾರಿಕೆ ಇಲ್ಲದೇ ಖರೀದಿಸಿದ ಎಲ್ಲ ಸಾಮಗ್ರಿಗಳು ಪೂರ್ಣ ಪ್ರಮಾಣದಲ್ಲಿ ಕಾಮಗಾರಿಗೆ ಉಪಯೋಗ ಆದ ಬಗ್ಗೆ ಹಾಗೂ ಉಳಿತಾಯ ಆದ ಬಗ್ಗೆ ಲೆಕ್ಕ ತನಿಖೆಯಲ್ಲಿ ಕಂಡು ಹಿಡಿಯಲು ಸಾಧ್ಯವಾಗುವದಿಲ್ಲ. ಆದುದರಿಂದ ಸಾಮಗ್ರಿಗಳು ಉಪಯೋಗ ಪಟ್ಟಿ ಲಗತ್ತಿಸುವುದು ಅಗತ್ಯ.

ಸದರಿ ಗ್ರಾಮ ಪಂಚಾಯಿತಿಯ ಸನ್ 2016-17ನೇ ಸಾಲಿನಲ್ಲಿ ನಿರ್ವಹಿಸಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಸಾಮಗ್ರಿಗಳ ವೆಚ್ಚಕ್ಕೆ ಸಂಬಂಗಿಸಿದಂತೆ, ಸಾಮಗ್ರಿ ಉಪಯೋಗದ ಪಟ್ಟಿಯನ್ನು ಲಗತ್ತಿಸಿರುವುದಿಲ್ಲ. ಇದರಿಂದ ಸಾಮಗ್ರಿಗಳ ಸಂಪೂರ್ಣ ಉಪಯೋಗದ ಕುರಿತು ಲೆಕ್ಕ ತನಿಖೆಯಲ್ಲಿ ಕಂಡು ಹಿಡಿಯಲು ಸಾಧ್ಯವಾಗಿರುವುದಿಲ್ಲವೆಂಬ ಅಂಶವನ್ನು ಗಮನಕ್ಕೆ ತರಲಾಗಿದೆ.

9) ಕಾಮಗಾರಿಗಳ ಸಾಮಗ್ರಿ ವೆಚ್ಚಗಳ ಬಿಲ್ಲಿನ ಪಾವತಿಯಲ್ಲಿ ಆದಾಯ ತರಿಗೆ, ಮಾರಾಟ ತೆರಿಗೆ ಹಾಗೂ ರಾಜಧನ ಕಟಾವಣೆ ಬಗ್ಗೆ :

ಈ ಯೋಜನೆಯಡಿಯಲ್ಲಿ ಅನುಷ್ಠಾನಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಕಾಮಗಾರಿಗಳ ವೆಚ್ಚದ ಬಿಲ್ಲನ್ನು ಪರಿಶೀಲಿಸಿದಾಗ ಸದರ ಕಾಮಗಾರಿಗಳು ಸಿವಿಲ್ ಕಾಮಗಾರಿಗಳಾಗಿದ್ದು, ಅವುಗಳಲ್ಲಿಲ ಕಲ್ಲು, ಮೆಟಲ್, ಸೈಜುಗಲ್ಲು, ಮುರ್ರಮ್, ಸಿಮೆಂಟ್, ಇಟ್ಟಂಗಿ ಮುಂತಾದ ಸಾಮಗ್ರಿಗಳನ್ನು ಖರೀದಿಸಿ ಪಾವತಿ ಮಾಡಿದ್ದು ಇದೆ. ಈ ಪಾವತಿಯ ಮೇಲೆ ಆದಾಯ ತೆರಿಗೆ, ಮಾರಾಟ ತೆರಿಗೆ, ಹಾಗೂ ಸಾಮಗ್ರಿಗಳ ಪ್ರಮಾಣ ತಕ್ಕಂತೆ ರಾಜಧನ ಕಟಾವನೆಯನ್ನು ಮಾಡುವದು ಅವಶ್ಯಕವಾಗಿರುತ್ತದೆ. ಸದರ ಯೋಜನೆಯ ಕೇಂದ್ರ ಸರಕಾರದ 2005 ಅಧಿನಿಯಮ ಹಾಗೂ ರಾಜ್ಯ ಸರಕಾರದ 1-2-2007 ರ ಅಧಿಸೂಚನೆ ಹಾಗೂ ಕಾಲಾಕಾಲಕ್ಕೆ ಪರಿಷ್ಕೃತಗೊಂಡ ನಿಯಮಗಳಲ್ಲಿ ಆದಾಯ ತೆರಿಗೆ, ಮಾರಾಟ ತೆರಿಗೆ, ರಾಜಧನ ಕಟಾವನೆಗೆ ಯಾವುದೆ ವಿನಾಯತಿ(exemption) ನೀಡಿದ ಅಂಶಗಳು ಕಂಡುಬರುವುದಿಲ್ಲ. ಆದುದರಿಂದ ಇವುಗಳನ್ನು ಕಟಾಯಿಸಿ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಕಮೆ ಮಾಡುವುದು ಅಗತ್ಯ.

೩೮. ಆದಾಯ ತೆರಿಗೆ ಮಾರಾಟ ತೆರಿಗೆ ರಾಜಧನಗಳ ಕಟಾವಣೆ-ಜಮೆ ಕುರಿತು:-

2016-17ನೇ ಸಾಲಿನಲ್ಲಿ ಪಾವತಿಸಿರುವ ವಿವಿಧ ಖರೀದಿ / ಸೇವೆಗಾಗಿ ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕ ಪಂಚಾಯಿತಿಗಳು) ನಿಯಮಗಳು 2006ರ ನಿಯಮ 88(1) ರಂತೆ ಬಿಲ್ಲುಗಳಿಂದ ಹಾಗೂ ವಿವಿಧ ನಿಧಿಗಳ ಕಾಮಗಾರಿ ಬಿಲ್ಲುಗಳಿಂದ ಕಟಾಯಿಸಿರುವ ಕಡಿಮೆ ಕಟಾಯಿಸಿರುವ ಹಾಗೂ ಕಟಾಯಿಸಿ ಸಂಬಂಧಿಸಿದ ಲೆಕ್ಕಶೀರ್ಷಿಕೆಗಳಿಗೆ ಜಮಾ ಮಾಡಿರುವ ಹಾಗೂ ಬಾಕಿ ಇರುವ ಆದಾಯ ತೆರಿಗೆ, ಮಾರಾಟ ತೆರಿಗೆ ಹಾಗೂ ರಾಜಧನ ವಿವರಗಳು ಇಂತಿವೆ.

ವಿವಿಧ ಯೋಜನೆಗಳಡಿ ಬಾಕಿ ಇರುವ ಸರ್ಕಾರಿ ತೆರಿಗೆಗಳ ವಿವರ	1-4-2016ರ ಪ್ರಾರಂಭಿಕ ಶುಲ್ಕ	2016-17ರಲ್ಲಿ ಕಟಾಯಿಸಿರುವುದು	ಒಟ್ಟು (ಅಂಕಣ 2+3)	ಸಂಬಂಧಿಸಿದ ಲೆಕ್ಕಶೀರ್ಷಿಕೆಗೆ ಜಮೆ ಮಾಡಿದ ಮೊತ್ತ	31.3.2017 ಬಾಕಿ ಮೊತ್ತ (ಅಂಕಣ 4-5)	ಷರಾ
1	2	3	4	5	6	
ವರ್ಗ-1/13ನೇ,14ನೇ ಹಣಕಾಸು						
1) ಆದಾಯ ತೆರಿಗೆ	11119	12359	23478	4110	19368	8249
2) ಮಾರಾಟ ತೆರಿಗೆ	9616	23096	32712	4833	27879	4933
3) ರಾಜಧನ	6138	9987	16125	0	16125	13265
4) ಕಾರ್ಮಿಕರ ನಿಧಿ	6060	1360	7420	0	7420	
5) ಗುತ್ತಿಗೆದಾರರ ಭವಿಷ್ಯ ನಿಧಿ	4360	0	4360	0	4360	
ಎಸ್.ಜಿ.ಆರ್.ವೈ.						
1) ಆದಾಯ ತೆರಿಗೆ	6494	0	6494	0	6494	
2) ಮಾರಾಟ ತೆರಿಗೆ	1194	0	1194	0	1194	
3) ರಾಜಧನ	2669	0	2669	0	2669	
ಗ್ರಾಮ ಸ್ವರಾಜ್ ಯೋಜನೆ						
1) ಆದಾಯ ತೆರಿಗೆ	6675	0	6675	0	6675	
2) ಮಾರಾಟ ತೆರಿಗೆ	11868	0	11868	0	11868	
3) ರಾಜಧನ	3466	0	3466	0	3466	
ನರೇಗಾ						
1) ಆದಾಯ ತೆರಿಗೆ	14513	0	14513	0	14513	
2) ಮಾರಾಟ ತೆರಿಗೆ	20915	0	20915	0	20915	
3) ರಾಜಧನ	5794	0	5794	0	5794	
ಒಟ್ಟು	**110881**	**46802**	**157683**	**8943**	**148740**	

ಈ ಬಾಕಿ ಇರುವ **ರೂ. 1,48,740/-** ತೆರಿಗೆ ಬಾಕಿಯನ್ನು ಸರ್ಕಾರಕ್ಕೆ ಪಾವತಿಸಿ ಲೆಕ್ಕ ತನಿಖೆಗೆ ಮಾಹಿತಿ ನೀಡುವುದು. ಅಲ್ಲಿಯವರೆಗೆ ಪ್ರಸಕ್ತ ಸಾಲಿನ ಬಾಬ್ತು **ರೂ. 37,859/-**ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

೩೯. ವಹಿಗಳ ನಿರ್ವಹಣೆ ಬಗ್ಗೆ.

1) ಆಸ್ತಿ ವಹಿ ಬಗ್ಗೆ :

ಸರ್ಕಾರಿ ಸುತ್ತೋಲೆ ಸಂಖ್ಯೆ ಆರ್.ಡಿ.ಪಿ 125 ಜೆ.ಆರ್.ವೈ.93 ಲೆಕ್ಕ - ದಿ 13-07-1993 ರಂತೆ (ಕೈಪಿಡಿ ನಿಯಮ 74) ಕಾಮಗಾರಿಗಳಿಂದ ಸೃಷ್ಟಿಯಾದ ಸ್ಥಿರ ಆಸ್ತಿಗಳಿಗೆ ಸಂಬಂಧಿಸಿದಂತೆ ನಿಗದಿತ ನಮೂನೆಯಲ್ಲಿ ವಿವರ ನಿರ್ವಹಿಸಬೇಕಾಗಿರುತ್ತದೆ. ಸದರಿಯನ್ವಯ ಗ್ರಾಮ ಪಂಚಾಯಿತಿ ಆಯವ್ಯಯ ಮತ್ತು ಲೆಕ್ಕಪತ್ರಗಳ ನಿಯಮಗಳು 2006ರ ನಿಯಮ 69ರ ಪ್ರಕಾರ ಈ ಕೆಳಕಂಡ ಆಸ್ತಿಗಳ ಬಗ್ಗೆ ವಹಿ ನಿರ್ವಹಿಸುವಂತೆ ಹಾಗೂ ಪ್ರತಿ ವರ್ಷವು ಲೆಕ್ಕತನಿಖಾ ತಂಡದ ಪರಿಶೀಲನೆಗೆ ಅದನ್ನು ಹಾಜರುಪಡಿಸುವಂತೆ ಸೂಚಿಸಿದೆ.

1. ನಮೂನೆ-29ರಲ್ಲಿ ಪೀಠೋಪಕರಣ ಯಂತ್ರೋಪಕರಣ ಹಾಗೂ ಇತರೆ ಸಾಮಗ್ರಿಗಳ ದಾಸ್ತಾನು ವಹಿ (ಚರಾಸ್ತಿಗಳು)
2. ನಮೂನೆ-30ರಲ್ಲಿ ಭೂ ದಾಖಲೆಗಳ ವಹಿ (ಸ್ತಿರಾಸ್ತಿಗಳು)
   ನಮೂನೆ-31 ರಲ್ಲಿ ಸ್ಥಿರಾಸ್ತಿಗಳಾದ ಕಟ್ಟಡಗಳು, ರಸ್ತೆಗಳು,
   ಸೇತುವೆಗಳು, ಅಡಿಗಾಲುವೆಗಳು ಇತ್ಯಾದಿಯಾಗಿ ವಹಿ.

ಈ ಮೇಲಿನ 4 ವಿವಿಧ ಪ್ರಮುಖ ವಹಿಗಳನ್ನು ತಪ್ಪದೆ ತೆರೆದು ಪಾಲಿಸುವುದು.

೨) ಕೂಲಿಕಾರರ ಪಟ್ಟಿ:

2006ರ ಲೆಕ್ಕಪತ್ರಗಳ ನಿಯಮ 87 ರಂತೆ ನಮೂನೆ 38ರಲ್ಲಿ ಕಾಮಗಾರಿವಾರು ಕೂಲಿಕಾರರ ಪಟ್ಟಿಯನ್ನು ನಿರ್ವಹಿಸಿರುತ್ತಾರೆ. ಅದರೆ ಸದರಿ ಪಟ್ಟಿಯನ್ನು ಸಕ್ಷಮ ಪ್ರಾಧಿಕಾರದಿಂದ ಪ್ರಮಾಣೀಕೃತಗೊಂಡಿರುವುದಿಲ್ಲ ಹಾಗೂ ಕಾಮಗಾರಿ ಇಂಜಿನಿಯರ್ ದಿನವಹಿ ಹಾಜರಾತಿಗೆ ಧೃಢೀಕರಿಸುವುದಿಲ್ಲ ಮತ್ತು ಗ್ರಾ.ಪಂ.ಅಧ್ಯಕ್ಷರಿಂದ ಚೆಕ್ ಸಹಿ ಪಡೆದಿರುವುದಿಲ್ಲ ಇನ್ನು ಮುಂದಾದರು ಕ್ರಮವಹಿಸಲು ಲೆಕ್ಕ ತನಿಖೆಯು ಆಗ್ರಹಪಡಿಸುತ್ತದೆ.

೩) ಕರ ನಿರ್ಧರಣಾ ವಹಿ:

ಸದರಿ ವಹಿಯನ್ನು ನಿರ್ವಹಿಸಿರುವುದಿಲ್ಲ 2006ರ ಗ್ರಾಮ ಪಂಚಾಯ್ತಿ (ಲೆಕ್ಕ ಪತ್ರ) ನಿಯಮ 28 ಮತ್ತು 29ರ ಸೂಚನೆಗಳಂತೆ ನಮೂನೆ-9 ಮತ್ತು 10ರಲ್ಲಿ ನಿರ್ವಹಿಸಬೇಕಿರುತ್ತದೆ. ಗ್ರಾ.ಪಂ.ಗಳಲ್ಲಿ ಕಂದಾಯವನ್ನು ವಾರ್ಷಿಕ ಬಾಡಿಗೆ ಮೌಲ್ಯದ ಆಧಾರದ ಮೇಲೆ ಶೇ 10 ರಷ್ಟು ನಿಗಧಿಪಡಿಸಬೇಕು. ಅದ್ದರಿಂದ ಕರನಿರ್ಧರಣಾ ವಹಿಯಲ್ಲಿ ಪ್ರತಿ ಸ್ವತ್ತಿನ ಅಳತೆ ಹಾಗೂ ವಾರ್ಷಿಕ ಬಾಡಿಗೆ ಮೌಲ್ಯವನ್ನು ನಮೂದಿಸಿ ಲೆಕ್ಕ ತನಿಖೆಗೆ ಹಾಜರುಪಡಿಸಲು ಸೂಚಿಸಿದೆ.

4) ಕಾಮಗಾರಿಗಳ ಅಂದಾಜು ವಹಿ:

ಕರ್ನಾಟಕ ಗ್ರಾಮ ಪಂಚಾಯ್ತಿ (ಲೆಕ್ಕ ಪತ್ರ) ನಿಯಮ 79 ನಮೂನೆ 35ರಲ್ಲಿ ನಿರ್ವಹಿಸಬೇಕಿರುತ್ತದೆ. ಈ ಬಗ್ಗೆ ನಿರ್ವಹಿಸಿ ಮುಂದಿನ ಸಾಲಿನ ತನಿಖಾ ತಂಡಕ್ಕೆ ಹಾಜರು ಪಡಿಸಲು ಸೂಚಿಸಿದೆ.ಹಾಗು ನಿಯಮ 85 ರಂತೆ ಪಾಲಿಸಲಾಗುವ ಅಳತೆಪುಸ್ತಕವನ್ನು (ನಮೂನೆ-37) ನಿರ್ವಹಿಸುವಲ್ಲಿ ಅಲ್ಲಿನ ಹನ್ನೊಂದು ವಿಧವಾದ ಸೂಚನೆಗಳನ್ನು ತಪ್ಪದೆ ಪಾಲಿಸತಕ್ಕದ್ದು.

5) ಜಾಹಿರಾತು ಬೇಡಿಕೆ ಮತ್ತು ವಸೂಲಿ ವಹಿ ನಿರ್ವಹಣೆ ಬಗ್ಗೆ:-

ಕರ್ನಾಟಕ ಪಂಚಾಯಿತ್ ರಾಜ್ (ಗ್ರಾಮ ಪಂಚಾಯತ್ ಲೆಕ್ಕ ಪತ್ರಗಳು ಮತ್ತು ಬಜೆಟ್) ನಿಯಮಗಳು 2006ರ ಅಧಿನಿಯಮ 199ನೇ ಪ್ರಕರಣಕ್ಕೆ ಅನುಗುಣವಾಗಿ ಜಾಹಿರಾತಿನ ಮೇಲೆ ತೆರಿಗೆ ವಿಧಿಸಲು ಗ್ರಾಮ ಪಂಚಾಯಿತಿಗೆ ಅಧಿಕಾರವಿರುತ್ತದೆ. ಆದರೆ ಗ್ರಾಮ ಪಂಚಾಯಿತಿಯು ಜಾಹಿರಾತು ತೆರಿಗೆ ವಸೂಲಿ ಮಾಡದೆ ಗ್ರಾಮ ಪಂಚಾಯಿತಿಗೆ ಬರುವ ಆದಾಯ ನಷ್ಟವಾಗಿರುತ್ತದೆ. ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯವರು ಇನ್ನು ಮುಂದೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯಾವ ಜಾಹಿರಾತು ಪ್ರಕಟಗೊಳ್ಳದಂತೆ ಖಚಿತಪಡಿಸಲು ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯವರು ಜಾಹಿರಾತು ಫಲಕಗಳಿಗೆ ವಿಶಿಷ್ಟ ಸಂಖ್ಯೆಯನ್ನು ನೀಡತಕ್ಕದ್ದು, ಮತ್ತು ಹಾಗೆ ತೆರಿಗೆ ವಿಧಿಸಲಾದ ಪ್ರತಿ ಜಾಹಿರಾತಿಗೂ ಮುಂಗಡವಾಗಿ ಹಣ ವಸೂಲು ಮಾಡತಕ್ಕದ್ದು ಹಾಗೂ ಜಾಹಿರಾತು ತೆರಿಗೆ ವಸೂಲಿಯ ಮೇಲೆ ನಿಗಾವಹಿಸಲು ನಮೂನೆ-13ರಲ್ಲಿ ಗ್ರಾಮ ಪಂಚಾಯತ್ ನಿರ್ವಹಣೆಯಲ್ಲಿರುವ ಜಾಹಿರಾತಿನ ಬೇಡಿಕೆ ಮತ್ತು ವಸೂಲಿ ವಹಿಯನ್ನು ಇಡತಕ್ಕದ್ದು ಮತ್ತು ಸಕಾಲಿಕ ತೆರಿಗೆಗಳ ವಸೂಲಾತಿಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯವರು ವಹಿಯನ್ನು ಕಾಲಕಾಲಕ್ಕ ಪರಿಶೀಲಿಸತಕ್ಕದ್ದು ಮತ್ತು ದೃಢೀಕರಿಸತಕ್ಕದ್ದು.

6) ಹೊಸಕಟ್ಟಡಗಳಿಗೆ ತೆರಿಗೆ ನಿರ್ಧರಣದ ಬಗ್ಗೆ:-

ಗ್ರಾಮ ಪಂಚಾಯಿತಿಯು ಹೊಸ ಕಟ್ಟಡಗಳಿಗೆ ಕರ್ನಾಟಕ ಪಂಚಾಯಿತ್ ರಾಜ್ (ಗ್ರಾಮ ಪಂಚಾಯತ್ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 29ರ ಪ್ರಕಾರ ಹೊಸಕಟ್ಟಡಗಳಿಗೆ ಕರ ನಿರ್ಧರಣವನ್ನು ಮ್ಯುಟೇಷನ್ ರಿಜಿಸ್ಟರ್‌ನಲ್ಲಿ ಬೇಡಿಕೆ ಮತ್ತು ವಸೂಲಿಯ ರಿಜಿಸ್ಟರ್‌ನ್ನು ನಿರ್ವಹಿಸಿ ಲೆಕ್ಕ ಪರಿಶೋಧನೆ ಹಾಜರುಪಡಿಸಿರುವುದಿಲ್ಲ ಈ ಬಗ್ಗೆ ಸೂಕ್ತ ವಿವರಣೆ ನೀಡಲು ಸೂಚಿಸಿದೆ.

7) ವಿದ್ಯುತ್ ಶುಲ್ಕ ಪಾವತಿ ಬಗ್ಗೆ ನಿಗಾ ವಹಿ ನಿರ್ವಹಿಸದಿರುವುದು:-

ಪ್ರಸ್ತುತ ಸಾಲಿನಲ್ಲಿ ಗ್ರಾಮ ಪಂಚಾಯಿತಿಗೆ ವಿದ್ಯುತ್ ಶುಲ್ಕದ ಬಾಬ್ತುಗಳನ್ನು ಕರ್ನಾಟಕ ವಿದ್ಯುತ್ ಮಂಡಳಿಗೆ ಸರ್ಕಾರದಿಂದ ನೇರವಾಗಿ ಶಾಸನಬದ್ಧ ಅನುದಾನದಲ್ಲಿ ಕಟಾಯಿಸಿ ಹೊಂದಾಣಿಕೆಯಗುತ್ತಿರುವುದು ಕಂಡುಬಂದಿದೆ. ಆದರೆ ಈ ಬಗ್ಗೆ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯವರು ವಿದ್ಯುತ್ ಶುಲ್ಕ ಪಾವತಿಯ ಬಗ್ಗೆ ಒಂದು ನಿಗಾವಹಿಯನ್ನು ನಿರ್ವಹಿಸಿ ಮೀಟರ್ ರೀಡಿಂಗ್ ಅನ್ವಯ ಬೇಡಿಕೆ ಮತ್ತು ಪಾವತಿಯ ಬಗ್ಗೆ ಎಚ್ಚರವಹಿಸಲು ಸೂಚಿಸಿದೆ.

8) ಖರೀದಿಗಳ ದಾಖಲೆ ಮತ್ತು ವಹಿ:

ಕರ್ನಾಟಕ ಗ್ರಾಮ ಪಂಚಾಯ್ತಿ (ಲೆಕ್ಕ ಪತ್ರ) ನಿಯಮ 63 ರಂತೆ ನಮೂನೆ 28ರಲ್ಲಿ ಪಂಚಾಯಿತಿ ವತಿಯಿಂದ ಖರೀದಿ ಮಾಡಿದ ವಸ್ತುಗಳ ಹಾಗು ಬೀದಿದೀಪ ದಾಖಲೆ ಮತ್ತು ವಹಿ ನಿರ್ವಹಿಸಿ ಹಾಜರುಪಡಿಸಿರುವುದಿಲ್ಲ. ಕೂಡಲೆ ಕ್ರಮಕೈಗೊಳ್ಳಲು ಸೂಚಿಸಿದೆ. ಇದು ಮುಖ್ಯ ದಾಖಲೆಯಾಗಿದ್ದು, ಇದರ ಗೈರು ಹಾಜರಿಯಲ್ಲಿ ಖರೀದಿಗಳು, ಅದರ ಬಳಕೆ ಹಾಗೂ ಉಳಿಕೆಗಳ ಪರಿಶೀಲನೆ ಹಾಗು ಖಚಿತ ಅಭಿಪ್ರಾಯ ನೀಡಿಕೆಗೆ ಅಡ್ಡಿಯುಂಟಾಗಿರುತ್ತದೆ.

9) ಸಾಮಾಗ್ರಿಗಳ ದಾಸ್ತಾನು ಸತ್ಯಾಪನೆ ಮಾಡದಿರುವುದು:

2006ರ ಕರ್ನಾಟಕ ಗ್ರಾಮ ಪಂಚಾಯ್ತಿಗಳ (ಆಯವ್ಯಯ ಮತ್ತು ಲೆಕ್ಕಪತ್ರ) ನಿಯಮಗಳಲ್ಲಿನ ನಿಯಮ 66 ಮತ್ತು 70 ರಂತೆ ವರ್ಷಾಂತ್ಯಕ್ಕೆ ಅಧ್ಯಕ್ಷರು ಸಾಮಗ್ರಿಗಳ ದಾಸ್ತಾನನ್ನು ಭೌತಿಕ ಶಿಲ್ಕುನೊಂದಿಗೆ ತಾಳೆ ಮಾಡಿದ ಬಗ್ಗೆ ವಹಿಯಲ್ಲಿ ದಾಖಲಿಸಿ ದೃಢೀಕರಿಸಬೇಕಾಗಿರುತ್ತದೆ. ಅದರೆ ಸದರಿ ನಿಯಮದಂತೆ ಕ್ರಮ ಕೈಗೊಂಡಿರುವುದಿಲ್ಲ ಕೂಡಲೆ ಕ್ರಮಕೈಗೊಂಡು ದಾಸ್ತಾನು ಸತ್ಯಾಪನೆ ಮಾಡಲು ಸೂಚಿಸಿದೆ. 2016-17ನೇ ಸಾಲಿನಲ್ಲಿ ದಾಸ್ತಾನು ಮತ್ತು ವಿತರಣೆ ದಾಖಲಾತಿ ನಿರ್ವಹಿಸಿ ಹಾಜರುಪಡಿಸಿರುವುದಿಲ್ಲ.

10) ವಿತ್ತ ನಿರೂಪಣಾ ಪಟ್ಟಿ ತಯಾರಿಸಿಲ್ಲ :

ಕರ್ನಾಟಕ ಪಂಚಾಯತ ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರಗಳು) 2006 ರ ನಿಯಮ 108 (3) ರಂತೆ ಪ್ರಾಯೋಗಿತ ಆರ್ಥಿಕ ಸ್ಥಿತಿ ಪಟ್ಟಿಯನ್ನು ತಯಾರಿಸಿ ಸಲ್ಲಿಸಬೇಕಾಗಿದ್ದು ನಗದು ಪುಸ್ತಕದ ಮತ್ತು ಲೆಡ್ಜರಗಳಲ್ಲಿನ ಎಲ್ಲಾ ಲೆಕ್ಕಗಳ ಅಂತಿಮ ಶಿಲ್ಕುಗಲ ತಃಖ್ತೆ ನಮೂನೆ 54 ರಲ್ಲಿ ಇರತಕ್ಕದ್ದು. ದಾಖಲಿಸಲಾದ ಖರ್ಚು ಹಾಗೂ ಜಮೆಗಳ (Debits and credit) ಸಮನ್ವಯತೆಯನ್ನು ಆರ್ಥಿಕ ಸ್ಥಿತಿ ಪಟ್ಟಿಯು ನಿರ್ಧರಿಸತಕ್ಕದ್ದು ಮತ್ತು ಆದಾಯ ಹಾಗೂ ವೆಚ್ಚಗಳ ವಿವರಣಾ ಪಟ್ಟಿ ಸಮತೋಲನಾ ಪಟ್ಟಿ ಮತ್ತು ಸ್ವೀಕೃತಿ ಮತ್ತು ಪಾವತಿಗಳ ವಿವರಣಾ ಪಟ್ಟಿಗಳಂತಹ ಆರ್ಥಿಕ ಸ್ಥಿತಿ ಪಟ್ಟಿಯನ್ನು ಆಧಾರಿಸಿ ವಿತ್ತ ನಿರೂಪಣಾ ಪಟ್ಟಿಗಳನ್ನು ಸಿದ್ದ ಪಡಿಸಬೇಕಾಗಿದ್ದು ವಿತ್ತ ನಿರೂಪಣಾ ಪಟ್ಟಿಯನ್ನು ಸಿದ್ದ ಪಡಿಸಿ ಲೆಕ್ಕ ಪರಿಶೋಧನೆಗೆ ಹಾಜರಪಡಿಸುವುದು.

11) ಮಹತ್ವದ ರಿಜಿಸ್ಟರ ನಿರ್ವಹಣೆ:

ಸನ್ 2016-17ನೇ ಸಾಲಿನಲ್ಲಿ ಕರ್ನಾಟಕ ಪಂಚಾಯತ ರಾಜ್ (ಗ್ರಾಮ ಪಂಚಯತಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು-2006 ರ ನಿಯಮಗಳನ್ವಯ ಈ ಕೆಳಗೆ ತೋರಿಸಿದಂತಹ ಅತೀ ಮಹತ್ವದ ರಜಿಸ್ಟರಗಳನ್ನು ನಿರ್ವಹಿಸಿ ತನಿಖೆಗೆ ಹಾಜರುಪಡಿಸಲು ಸೂಚಿಸಿದೆ.

ಅ. ನಂ.	ನಿರ್ವಹಿಸಲಾರದ ರಜಿಸ್ಟರ್‌ಗಳ ವಿವರ	ನಿಯಮ	ನಮೂನೆ	ಷರಾ
1	ಚೆಕ್ ನೀಡಿಕೆಯ ರಿಜಿಸ್ಟರ್	49	21	
2	ಸಿಬ್ಬಂದಿ ಶಾಖೆಯ ಸ್ಕೇಲ ರಿಜಿಸ್ಟರ್	58	23	
3	ಚರಾಸ್ತಿಗಳ ರಿಜಿಸ್ಟರ್	69	29	
4	ಭೂ ದಾಖಲಾತಿ ರಿಜಿಸ್ಟರ್	69	30	
5	ಸ್ಥಿರಾಸ್ತಿಗಳ ರಿಜಿಸ್ಟರ್(ಭೂಮಿ ಹೊರತುಪಡಿಸಿ)	69	31	
6	ಕಾಮಗಾರಿಗಳ ಎಷ್ಟಿಮೇಟ ರಿಜಿಸ್ಟರ್	79	35	
7	ವರ್ಕ ರಿಜಿಸ್ಟರ್	91	39	
8	ಮುಂಗಡ ರಿಜಿಸ್ಟರ್	98	44	
9	ಅನುದಾನಗಳ ರಿಜಿಸ್ಟರ್	99	45	
10	ಠೇವಣಿಗಳು, ಠೇವಣಿಗಳ ಮರುಪಾವತಿ ಮತ್ತು ವ್ಯಪಗತ ಠೇವಣಿಗಳು	100	47	
11	ಸಂಚಯಿತ ಆದಾಯದ ವಿವರಣಾ ಪಟ್ಟಿ	102	48	

12. ಸ್ವೀಕೃತಿ ಮತ್ತು ಪಾವತಿ ಲೆಕ್ಕ :

ಕರ್ನಾಟಕ ಪಂಚಾಯತ ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006 ರ ನಿಯಮ 109(2) ರಂತೆ ಸ್ವೀಕೃತಿ ಮತ್ತು ಪಾವತಿ ಲೆಕ್ಕಗಳನ್ನು ನಮೂನೆ 53 ರಲ್ಲಿ ನಗದು ಮತ್ತು ಲೆಡ್ಜರ ಪುಸ್ತಕಗಳಲ್ಲಿನ ದಾಖಲೆಗಳನ್ನಾಧರಿಸಿ ತಯಾರಿಸ ಬೇಕಾಗಿದ್ದು ವರ್ಷದ ಆದಾಯದ ವಿವಿಧ ಮೂಲಗಳಿಂದ ಸ್ವೀಕರಿಸಲಾದ ವಾಸ್ತವಿಕ ನಗದು ಆದಾಯ ಮತ್ತು ನಗದು ಪಾವತಿಗಳು ಇದರಲ್ಲಿ ಪ್ರತಿಫಲಕವಾಗಿರುತ್ತದೆ. ಇದನ್ನು ಕ್ರಮಬದ್ದವಾಗಿ ನಿಯಮ ಪಾಲಿಸಿ ನಿರ್ವಹಿಸಿ ಲೆಕ್ಕ ಪರಿಶೋಧನೆಗೆ ಹಾಜರಪಡಿಸುವುದು.

13. ಆದಾಯ ಮತ್ತು ವೆಚ್ಚಗಳ ವಿವರಣಾ ಪಟ್ಟಿ :

ಕರ್ನಾಟಕ ಪಂಚಾಯತ ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006 ರ ನಿಯಮ 109(3) ರಂತೆ ಮತ್ತು ವೆಚ್ಚಗಳ ವಿವರಣಾ ಪಟ್ಟಿಯು (ನಮೂನೆ-55) ಗ್ರಾಮ ಪಂಚಯತಿಯ ನಿರ್ದಿಷ್ಟ ಅವಧಿಯ ಹಣಕಾಸು ನಿರ್ವಹಣೆಯನ್ನು ಪ್ರತಿಬಿಂಬಿಸತಕ್ಕದ್ದು. ಹಾಗೂ ವೆಚ್ಚಕ್ಕಿಂತ ಮಿಗಿಲಾಗಿರುವ ಆದಾಯವನ್ನು (ಮಿಗುತಾಯ) ಅಥವಾ ಅದರ ಉಲ್ಟಾಸ್ಥಿತಿಯನ್ನು (ಕೊರತೆ) ತೋರಿಸತಕ್ಕದ್ದು.

1. ಆ ವರ್ಷದಲ್ಲಿ ವಾಸ್ತವವಾಗಿ ಸ್ವೀಕೃತವಾದ ಅಥವಾ ಸ್ವೀಕೃತವಾಗಿಲ್ಲದ ಎಲ್ಲಾ ಅರ್ಜಿತ ಆದಾಯವನ್ನು ಮತ್ತು ವಾಸ್ತಾವವಾಗಿ ಪಾವತಿಸಲಾದ ಅಥವಾ ಪಾವತಿಸಲಾಗಿಲ್ಲದ ಎಲ್ಲಾ ವೆಚ್ಚಗಳನ್ನು ಆದಾಯ ಮತ್ತು ವೆಚ್ಚಗಳ ವಿವರಣಾ ಪಟ್ಟಿಯು ಒಳಗೊಳ್ಳತಕ್ಕದ್ದು
2. ಆದಾಯ ಮತ್ತು ವೆಚ್ಚಗಳ ಪಟ್ಟಿಯನ್ನು ಪ್ರಾಯೋಗಿಕ ಆರ್ಥಿಕ ಸ್ಥಿತಿ ಪಟ್ಟಿ (Trial Balance) ಯನ್ನಾಧರಿಸಿ ತಯಾರಿಸತಕ್ಕದ್ದು. ಈ ಆರ್ಥಿಕ ಸ್ಥಿತಿ ಪಟ್ಟಿಯಿಂದ ಆದಾಯ ಮತ್ತು ವೆಚ್ಚಗಳ ವಿವಿಧ ಶೀರ್ಷಿಕೆಗಳನ್ನು ಆದಾಯ ಮತ್ತು ವೆಚ್ಚದ ವಿವರಣಾ ಪಟ್ಟಿಯಲ್ಲಿ ದಾಖಲಿಸಿ ಸಲ್ಲಿಸುವುದು.

14. ಸಮತೋಲನಾ ಪಟ್ಟಿ :

ಕರ್ನಾಟಕ ಪಂಚಾಯತ ರಾಜ್ (ಆಯವ್ಯಯ ಮತ್ತು ಲೆಕ್ಕ ತ್ರಗಳು) ನಿಯಮಗಳು 2006 ರ ನಿಯಮ 109(4) ರಂತೆ ಸಮತೋಲನಾ ಪಟ್ಟಿಯನ್ನು ನಮೂನೆ 56 ರಲ್ಲಿ ಸಿದ್ದಪಡಿಸಿ ಸಲ್ಲಿಸಿದ ಗ್ರಾಮ ಪಂಚಾಯತಿಯ ನಿರ್ದಿಷ್ಟ ದಿನಾಂಕದಂದು ಇರುವ ಹಣಕಾಸು ಪರಿಸ್ಥಿತಿಯನ್ನು ಅದು ಪ್ರತಿಫಲಿಸತಕ್ಕದ್ದು. ಅದರಿಂದಾಗಿ ನಿಗದಿತ ದಿನಾಂಕದಂದು ಪಂಚಾಯತಿಯ ಒಟ್ಟು ಆಸ್ತಿಗಳು, ಋಣಗಳು ಮತ್ತು ಮೀಸಲು ನಿದಿಗಳ ವಿವರಗಳನ್ನು ತಿಳಿಯಲು ಸಾಧ್ಯವಾಗಿರುತ್ತದೆ. ಸಮತೋಲನಾ ಪಟ್ಟಿಯಲ್ಲಿನ ಆಸ್ತಿ ಮತ್ತು ಹೊಣೆಗಾರಿಕೆಗಳ ವಿವಿಧ ಅಂಶಗಳ ವಿವರಗಳನ್ನು ನಮೂನೆ-57 ರಲ್ಲಿ ಪ್ರತ್ಯೇಕ ಶೆಡ್ಯೂಲಿನಲ್ಲಿ ನೀಡತಕ್ಕದ್ದು. ಮತ್ತು ಈ ಅನುಸೂಚಿಗಳನ್ನು ಸಮತೋಲನಾ ಪಟ್ಟಿಗೆ ಲಗತ್ತಿಸಿರತಕ್ಕದ್ದು.

1. ಸಮತೋಲನಾ ಪಟ್ಟಿಯನ್ನು ಸಹಾ ಪ್ರಯೋಗಿಕವಾಗಿ ಆರ್ಥಿಕ ಸ್ಥಿತಿ ಪಟ್ಟಿಯನ್ನಾಧರಿಸಿ ತಯಾರಿಸತಕ್ಕದ್ದು. ಆಸ್ತಿಗಳು, ಋಣಗಳು ಮತ್ತು ಮೀಸಲು ಶೀರ್ಷಿಕೆಗಳ ವಿವರಗಳನ್ನು ಪ್ರಾಯೋಗಿಕ ಆರ್ಥಿಕ ಸ್ಥಿತಿ ಪಟ್ಟಿಯಿಂದ ಪಡೆದು ನಿಯಮ 108(3) ರಲ್ಲಿ ತಿಳಿಸಿರುವಂತೆ, ಸಮತೋಲನಾ ಪಟ್ಟಿಯಲ್ಲಿ ತೋರಿಸತಕ್ಕದ್ದು. ಸಮತೋಲನಾ ಪಟ್ಟಿಯ ಇಬ್ಬದಿಯ ವಿವರಗಳು ಸಮನ್ವಯಗೊಂಡು ಸಮಾನಗೊಳ್ಳತಕ್ಕದು.
2. ಇದರೊಟ್ಟಿಗೆ ಲೆಕ್ಕ ನಿರ್ವಹಣೆಯಲ್ಲಿ ಅನುಸರಿಸಿದ ಮಹತ್ವದ ಕಾರ್ಯನೀತಿಗಳು, ಮೌಲ್ಯ ಮಾಪನಾ ಹಾಗೂ ಬಹಿರಂಗ ಪಡಿಸಲಾದ ವಿವರಗಳ ಬಗ್ಗೆ ಒಂದು ಟಿಪ್ಪಣಿಯನ್ನು ಸಿದ್ಧಪಡಿಸತಕ್ಕದ್ದು.

ಮೇಲೆ ತಿಳಿಸಿದಂತೆ ಸಿದ್ದ ಪಡಿಸಲಾದ ವಿತ್ತ ನಿರೂಪಣಾ ಪಟ್ಟಿಗಳನ್ನು ಮತ್ತು ಲೆಕ್ಕ ನಿರ್ವಹಣೆ ಕುರಿತು ಪಟ್ಟಿಯನ್ನು ಅಧಿನಿಯಮದ 243 ನೇ ಪ್ರಕರಣದ ಉಪ-ಪ್ರಕರಣ (30 ರ ಮೇರೆಗೆ ಜೂನ 30 ನೇ ತಾರೀಖಿನೊಳಗೆ ತಯಾರಿಸಿ ಗ್ರಾಮ ಪಂಚಾಯತಿಯ ಮುಖ್ಯ ಲೆಕ್ಕಾಧಿಕಾರಿಗೆ ಮತ್ತು ಸಂಬಂಧಿಸಿದ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲದ ಸಹಾಯಕ ನಿಯಂತ್ರಕರಿಗೆ ಕಳುಹಿಸುವುದು ಅವಶ್ಯಕವಾಗಿರುತ್ತದೆ. ಇದನ್ನು ತಪ್ಪದೆ ಪಾಲಿಸಲು ಲೆಕ್ಕ ಪರಿಶೋಧನೆಯು ಸೂಚಿಸುತ್ತದೆ.

15. ಆರಂಭಿಕ ಶಿಲ್ಕು ಪಟ್ಟಿ ಸಲ್ಲಿಸಿರುವುದಿಲ್ಲ :

ಕರ್ನಾಟಕ ಪಂಚಾಯತ ರಾಜ್ (ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 110 ರಂತೆ ಆರಂಭಿಕ ಶಿಲ್ಕು ಪಟ್ಟಿಯನ್ನು ತಯಾರಿಸಿ ಲೆಕ್ಕ ಪರಿಶೋಧನೆಗೆ ಸಲ್ಲಿಸುವುದು.

ಆರಂಭಿಕ ಶಿಲ್ಕು ಪಟ್ಟಿ (Opening Balance Sheet)

1. ಗ್ರಾಮ ಪಂಚಾಯತಿಗಳಲ್ಲಿ ಜೋಡಿ ದಾಖಲೆ ಸಂಚಯನ ಲೆಕ್ಕ ಪತ್ರ ಪದ್ಧತಿಯನ್ನು ಜಾರಿಗೊಳಿಸುತ್ತಿರುವುದರಿಂದ, ದಿನಾಂಕ : 01-04-2007 ಕ್ಕೆ ಇದ್ದಂತಹ ಎಲ್ಲಾ ಆಸ್ತಿ ಮತ್ತು ಋಣಗಳ ಆರಂಭಿಕ ಶಿಲ್ಕು ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.
2. ದಿನಾಂಕ: 01-04-2007 ರಂದು ಇದ್ದಂತಹ ಗ್ರಾಮ ಪಂಚಾಯತಿಯ ಎಲ್ಲಾ ಆಸ್ತಿಗಳ ಪಟ್ಟಿಯನ್ನು ಜಿಲ್ಲಾ ಪಂಚಾಯತಿಯು ನಿಗದಿತ ನಮೂನೆ-57 ರಲ್ಲಿ ಸಿದ್ದಪಡಿಸಿ ಗ್ರಾಮ ಪಂಚಾಯತಿ ಇಂಜಿನಿಯರವರ ನೆರವಿನೊಂದಿಗೆ ಜಿಲ್ಲಾ ಪಂಚಾಯತಿಯು ನಿಗದಿ ಪಡಿಸಿದ ಮೌಲ್ಯ ನಿಷ್ಕರ್ಷೆತತ್ವಗಳಿಗೆ ಅನುಗುಣವಾಗಿ ಬೆಲೆ ಕಟ್ಟತಕ್ಕದ್ದು. ಆಸ್ತಿಗಳ ಪಟ್ಟಿಯನ್ನು ಸಿದ್ಧಪಡಿಸಿದ ನಂತರ ಭೌತಿಕ ಪರಿಶೀಲನೆಯನ್ನು ಮಾಡತಕ್ಕದ್ದು. ಸ್ಥಿರಾಸ್ತಿಗಳಿಗೆ ಮಾತ್ರ ಮೌಲ್ಯ ಮಾಪನ ತತ್ವಗಳನ್ನು ಅನುಸರಿಸತಕ್ಕದ್ದು.
3. ಸ್ಥಿರಾಸ್ತಿಗಳ ಮೇಲೆ ಸವಕಳಿಯನ್ನು ಜಿಲ್ಲಾ ಪಂಚಾಯತಿಯಲ್ಲಿ ಅನುಸರಿಸುವಂತೆ ರಿಟನ್ ಡೌನ ವ್ಯಾಲ್ಯು ಅಥವಾ ಸ್ಟ್ರೈಟ್‌ಲೈನ್ ವಿಧಾನ ಅನುಸರಿಸಿ ನೀಡತಕ್ಕದ್ದು.
4. ದಿನಾಂಕ: 01-04-2007 ರಂದು ಇದ್ದಂತಹ ಆಸ್ತಿಗಳ ಪಟ್ಟಿ ಸಿದ್ಧಪಡಿಸುವುದು. ಮತ್ತು ಮೌಲ್ಯ ಮಾಪನ ಮಾಡುವ ಪ್ರಕ್ರಿಯೆಯನ್ನು ಈ ನಿಯಮಾವಳಿ ಜಾರಿಗೆ ಬಂದ ಮೂರು ತಿಂಗಳೊಳಗಾಗಿ ಪೂರ್ಣಗೊಳಿಸತಕ್ಕದ್ದು.
5. ದಿನಾಂಕ: 30-3-2007 ರಂದು ಇದ್ದಂತಹ ಚಾಲ್ತಿ ಆಸ್ತಿಗಳಾದಂತಹ ಹೂಡಿಕೆಗಳು ನಗದು / ಬ್ಯಾಂಕ / ಖಜಾನೆ ಶಿಲ್ಕುಗಳ ಪಟ್ಟಿಯನ್ನು ಕಾರ್ಯದರ್ಶಿಯು ತಯಾರಿಸತಕ್ಕದ್ದು. ಅಲ್ಲದೆ ನೌಕರರು / ಸರಬರಾಜುದಾರರು / ಗುತ್ತಿಗೆದಾರರಿಂದ ಬಾಕಿ ಇರುವ ಸಾಲ ಮತ್ತು ಮುಂಗಡಗಳು, ವಿವಿಧ ಆದಾಯ ಶೀರ್ಷಿಕೆಗಳ ಅಡಿಯಲ್ಲಿ ಪ್ರಾಪ್ತವಾಗತಕ್ಕ ಆದಾಯಗಳನ್ನು (ತೆರಿಗೆ, ಬಾಡಿಗೆ, ನೀರುದರಗಳು) ಹಾಗೂ ಅನುದಾನ / ವಿಶೇಷ ನಿದಿಗಳು ಇತ್ಯಾದಿ) ಸಿದ್ಧಪಡಿಸತಕ್ಕದ್ದು.
6. ಮೇಲೆ ತಿಳಿಸಿರುವಂತೆ ದಿನಾಂಕ: 01-04-2007 ರಂದು ಇರುವ ವಿವಿಧ ಆಸ್ತಿ ಮತ್ತು ಹೊಣೆಗಾರಿಕೆಗಳ ಆರಂಭಿಕ ಶಿಲ್ಕಿನ ವಿವರಗಳನ್ನು 2016-17ನೇ ಸಾಲಿನ ಆರಂಭಿಕ ಶಿಲ್ಕಾಗಿ ಅಳವಡಿಸಿಕೊಳ್ಳಲು ಕಾರ್ಯದರ್ಶಿಯು ಗ್ರಾಮ ಪಂಚಾಯತಿಯ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸತಕ್ಕದ್ದು ಮತ್ತು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸುವುದು ಅವಶ್ಯವಾಗಿತ್ತು. ಇದನ್ನು ಈ ವರದಿ ಸಾಲಿಗೆ ಮಾಡದಿರುವುದರಿಂದ 2016-17ನೇ ಸಾಲಿಗೆ ಅವಶ್ಯಕವಾಗಿ ಮೇಲೆ ತಿಳಿಸಿದಂತೆ ತಯಾರಿಸಿ ದೃಢೀಕರಿಸಿ ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರಪಡಿಸಲು ಲೆಕ್ಕ ಪರಿಶೋಧನೆಯು ಸೂಚಿಸುತ್ತದೆ.

40. ಲೆಕ್ಕತನಿಖಾ ಶುಲ್ಕ ಪಾವತಿಸುವ ಕುರಿತು:

ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಸೂಚನೆ ಸಂಖ್ಯೆ:ಗ್ರಾ.ಅಪ.:73 ಜಿಪಸ:2004, ದಿನಾಂಕ : 09-11-2005ರಲ್ಲಿ 1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 311ನೇ ಪ್ರಕರಣದ ಮೂಲಕ 1995 ರ ಕರ್ನಾಟಕ ಗ್ರಾಮ ಪಂಚಾಯಿತಿಗಳ (ಲೆಕ್ಕ ಪತ್ರಗಳು ಆಯವ್ಯಯ) ನಿಯಮಗಳಲ್ಲಿನ ನಿಯಮ-42ಬಿ ಯಂತೆ " ಗ್ರಾಮ ಪಂಚಾಯಿತಿಗಳ ವಾರ್ಷಿಕ ವಹಿವಾಟು ಕುರಿತು ಮಾಡಿದ ಲೆಕ್ಕ ತಪಾಸಣೆಗೆ ವಿಧಿಸಲಾಗುವ ಲೆಕ್ಕ ತನಿಖಾ ಶುಲ್ಕ **ರೂ. 12,000/-**ಗಳ ಮೊತ್ತವನ್ನು ಸರ್ಕಾರದ ಪರವಾಗಿ ಹಿರಿಯ ಉಪ ನಿರ್ದೇಶಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ರಾಮನಗರ. ಇವರಿಗೆ ಸಂದಾಯವಾಗುವಂತೆ ಚೆಕ್ ಅಥವಾ ಡಿ.ಡಿ ಮೂಲಕ ಪಾವತಿಸಲು ಸೂಚಿಸಿದೆ.

ಸದರಿ ಆದೇಶದನ್ವಯ 2004-05ನೇ ಸಾಲಿನಿಂದ ಲೆಕ್ಕತನಿಖಾ ಶುಲ್ಕದ ವಿವರ ಈ ಕೆಳಕಂಡಂತೆ ಇರುತ್ತದೆ ಹಾಗು ಇದನ್ನು ಕೆಳಗೆ ನಮೂದಿಸಿರುವ ಲೆಕ್ಕ ಶೀರ್ಷಿಕೆಯಡಿ ಶೀಘ್ರವಾಗಿ ಪಾವತಿಸಲು ಲೆಕ್ಕ ಲೆಕ್ಕಪರಿಶೋಧನೆಯಲ್ಲಿ ತಿಳಿಸಿದೆ.

01-04-2015ಕ್ಕೆ ಪ್ರಾರಂಭಿಕ ಶುಲ್ಕ ರೂ.	11000
2015-16ರ ಪ್ರಸ್ತುತ ವರ್ಷದ ಶುಲ್ಕ ರೂ.	1000
ಒಟ್ಟು ರೂ.	**12000**
2015-16ರ ಪ್ರಸಕ್ತ ವರ್ಷದಲ್ಲಿ ಪಾವತಿ	--
31-03-2016ರ ಅಂತಿಮ ಶಿಲ್ಕು	12000

<u>ಲೆಕ್ಕ ಶೀರ್ಷಿಕೆ</u>

0070 – ಆಡಳಿತ ಸೇವೆಗಳು
060 – ಇತರೇ ಸೇವೆಗಳು
110 – ಸರ್ಕಾರಿ ಲೆಕ್ಕಪರಿಶೋಧನಾ ಶುಲ್ಕ
001 – ಲೆಕ್ಕ ಪರಿಶೋಧನಾ ಶುಲ್ಕ.

41. ಸಾಮಾನ್ಯ ಅಭಿಪ್ರಾಯ:

1) ಜೋಡಿ ನಮೂದು ಲೆಕ್ಕ ಪದ್ಧತಿಯಡಿ ಗ್ರಾಮ ಪಂಚಾಯಿತಿಗಳ ಲೆಕ್ಕಪತ್ರಗಳನ್ನು ಸೂಕ್ತ ವಹಿಗಳಲ್ಲಿ ನಿರ್ವಹಣೆ ಮಾಡದಿರುವುದರಿಂದ, ಲೆಕ್ಕ ಪತ್ರಗಳ ಮಾಹಿತಿಗಳನ್ನು ದೃಢೀಕರಿಸಲು ಕಷ್ಟಕರವಾಗಿದೆ. ಪ್ರಯುಕ್ತ 2006ರ ಗ್ರಾಮ ಲೆಕ್ಕ ಪತ್ರಗಳು ಮತ್ತು ಆಯ-ವ್ಯಯ ನಿಯಮಗಳ ಪ್ರಕಾರ ನಿಗಧಿತ ನಮೂನೆಗಳಲ್ಲಿ ನಿರ್ವಹಿಸಲು ಕ್ರಮಕೈಗೊಳ್ಳಬೇಕಿರುತ್ತದೆ.
2) ಸರ್ಕಾರದ ಲೆಕ್ಕಶೀರ್ಷಿಕೆಗಳಿಗೆ ಜಮಾ ಮಾಡಬೇಕಾದ ತೆರಿಗೆಗಳು/ಉಪಕರಗಳು ಮತ್ತು ಲೆಕ್ಕ ತನಿಖಾ ಶುಲ್ಕಗಳನ್ನು ಆಯಾ ಮಾಹೆ ವರ್ಷಗಳಲ್ಲಿಯೆ ಜಮಾ ಮಾಡಲು ಕ್ರಮವಹಿಸಬೇಕಿರುತ್ತದೆ. ಸಿಬ್ಬಂದಿ ಸಂಬಳ ಹಾಗೂ ಅಧ್ಯಕ್ಷ, ಉಪಾಧ್ಯಕ್ಷರ ಸಂಬಳ ಪಾವತಿಗೆ ಸರಿಯಾಗಿ ಧೃಢೀಕರಣ ಪಡೆಯಬೇಕಾಗಿರುತ್ತದೆ.
3) ಸಾಮಾಜಿಕ ಲೆಕ್ಕ ಪರಿಶೋಧನಾ ಧೃಢೀಕೃತ ವರದಿಯನ್ನು ಸಹ ಲೆಕ್ಕಪರಿಶೋಧನಾ ವರ್ತುಲದ ಲೆಕ್ಕ ಪರಿಶೋಧನಾ ತಂಡಕ್ಕೆ ಒದಗಿಸಿರುವುದಿಲ್ಲ.
4) ವಿವಿಧ ಯೋಜನೆಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ಸಮರ್ಪಕವಾದ ಮಾಹಿತಿಗಳನ್ನು ಒದಗಿಸದೆ ಇರುವ ಕಾರಣಗಳಿಂದಾಗಿ, ವೆಚ್ಚಗಳ ಸತ್ಯಾಪನೆ ಬಗ್ಗೆ ಲೆಕ್ಕ ಪರಿಶೋಧನೆಯ ಧೃಢೀಕರಣ ಸಾಧ್ಯವಾಗುತ್ತಿಲ್ಲ. ಅಲ್ಲದೆ ಈ ರೀತಿಯಾಗಿ ದಾಖಲೆಗಳನ್ನು/ಮಾಹಿತಿಗಳನ್ನು ಒದಗಿಸದೆ ಇರುವುದು ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/29/ಲೆಪಬಿ/2006/ದಿನಾಂಕ:18/4/2007 ರಲ್ಲಿ ವಿಧಿಸಿರುವ ಅಂಶಗಳನ್ನು ವಿರುದ್ಧವಾಗಿದೆ ಎಂದು ಅಭಿಪ್ರಾಯಪಡಲಾಗಿದೆ.

5) ಸಾಮಾಗ್ರಿಗಳ ಖರೀದಿ ಪ್ರಕ್ರಿಯೆಯಲ್ಲಿ ಪಾರದರ್ಶಕ ನಿಯಮ 2000ರ ನಿಯಮಾವಳಿಗಳನ್ನು ಪೂರ್ಣ ಪ್ರಮಾಣದಲ್ಲಿ ಪಾಲಿಸಿರುವುದಿಲ್ಲ.
6) ಪಂಚತಂತ್ರ ಯೋಜನೆಯಡಿಯಲ್ಲಿ ಲೆಕ್ಕ ಪತ್ರಗಳನ್ನು ನಿರ್ವಹಿಸಿರುವುದು ಕಂಡುಬರುತ್ತಿಲ್ಲ.
7) ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯದ ಸುತ್ತೋಲೆ ಗ್ರಾಅಪ/160ಎಎಫ್ಎನ್/2013, ದಿನಾಂಕ: 27.3.2013ರಲ್ಲಿ ನೀಡಿರುವ ಸೂಚನೆಯನ್ನು ಸರಿಯಾಗಿ ಅಳವಡಿಸಿಕೊಂಡಿರುವುದಿಲ್ಲ. ಅದನ್ನು ಅಳವಡಿಸಿ ಜಾರಿಗೊಳಿಸುವುದು.
8) ಲೆಕ್ಕ ಪತ್ರಗಳ ನಿರ್ವಹಣೆಯಲ್ಲಿ ಸುಧಾರಣೆ ಅಗತ್ಯವಿದೆ.
9) ಹಣ ವರ್ಗಾವಣೆ / ಖಾತೆ ನೊಂದಾಣಿ ಬಗೆಗಿನ ಯಾವುದೇ ಕಡತಗಳನ್ನು ತನಿಖೆಗೆ ಹಾಜರುಪಡಿಸಿರುವುದಿಲ್ಲ.

ಹಿರಿಯ ಉಪನಿರ್ದೇಶಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ
ರಾಮನಗರ.

ಭಾಗ-2

ಹಿಂದಿನ ಲೆಕ್ಕಪರಿಶೋಧನಾ ವರದಿಗಳ ಅನುಸರಣಾ ವಿವರ

7. ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳ ವಿವರ:

